- ಓಂ -

- ಶ್ರಿಯೈ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

ಇರಂಡಾವದಾಯಿರಂ

ಪೆರಿಯ ತಿರುಮೊಳಿ

ತಿರುಮಂಙ್ಗೈಆಳ್ವಾರ್

ಹತ್ತನೆಯ ದಶಕ

ಎರಡನೆಯ ಸಾವಿರ

ತಮಿಳು ಮೂಲ, ಕನ್ನಡದಲ್ಲಿ ಪ್ರತಿಪದಾರ್ಥ ತಾತ್ಪರ್ಯ ಮತ್ತು ವಿವರಣೆಯೊಂದಿಗೆ

ಸಂಪುಟ - 7

ಭಾಗ - 10

Garani Srinivasan

ವಿಷಯ ಸೂಚಿ

ಸಂಖ್ಯೆ	ವಿಷಯ		ಪಾಶುರ	ಪುಟ
1.	ಒಂದನೇಯ ತಿರುಮೊಳಿ	ಒರು ನಲ್ ಸುಟ್ರಮ್	10	1
2.	ಎರಡನೇಯ "	ಇರಕ್ಕಮಿನ್ರಿ	10	16
3.	ಮೂರನೇಯ "	ವಿಶ್ತುವನ್ ಆಹೋವಮ್	10	38
4	ನಾಲ್ಕನೇಯ "	ಕನ್ನಮುಲರ್ ಕುಲಿಲ್	10	54
5	ಐದನೇಯ "	ಪ್ರಾಜ್ಞೋದ್ಭಯಾಯ್ ಸೈ	10	70
6.	ಆರನೇಯ "	ಎಜ್ಞಾನ ಮಿದೋಪ್ಪಿದೋಲೆ	10	84
7.	ಏಳನೇಯ "	ಮೂನಮು ದ್ವೈತ್ತ್ವಜ್ಞಲ್	14	106
8.	ಎಂಟನೇಯ "	ಕಾದಲಾರ್ ಕರಿಪ್ಪೆ	10	133
9.	ಒಂಬತ್ತನೇಯ "	ಪುಳ್ಳುರುವಾಗಿ	10	144
10.	ಹತ್ತನೇಯ "	ತಿರುತ್ತಾಯ್	10	165-176
		ಜುಮಾ	104.	

27.12.78

— ಶ್ರೀಃ — (1) — ಶ್ರೀಯೈ ನಮಃ —

ಪೆರಿಯ ತಿರುಮೊೞಿ – ಹತ್ತನೆಯ ದಶಕ – ಮೊದಲ ತಿರುಮೊೞಿ

பெரிய திருமொழி – பத்தாம் பத்து – முதல் திருமொழி

1. ಒರು ನಲ್ ಶುಟ್ರಮ್ – ஒருநல் சுற்றம்

1. ஒருநல் சுற்றம் எனக்குயிர் ஒண்பொருள்,
வருநல் தொல்கதி ஆகிய மைந்தனை,
நெருநல் கண்டது நீர்மலை, இன்றுபோய்க்
கருநெல்சூழ் கண்ணமங்கையுள் காண்டுமே.

ಒರು ನಲ್ ಶುಟ್ರಮ್ ಎನಕ್ಕುಯಿರ್ ಒಣ್ ಪೊರುಳ್,
ವರು ನಲ್ ತೊಲ್ ಗದಿ ಆಗಿಯ ಮೈಂದನೈ,
ನೆರು ನಲ್ ಕಣ್ಡದು ನೀರ್ ಮಲೈ, ಇನ್ರು ಪೋಯ್
ಕ್ಕರು ನೆಲ್ ಶೂೞ್ ಕಣ್ಣಮಂಗೈಯುಳ್ ಕಾಣ್ಡುಮೇ.

ಒರು ஒரு = ಕೊನೆಯಿಲ್ಲದ, ನಲ್ நல் = ಬಹಳ ಒಳ್ಳೆಯ, ಶುಟ್ರಮ್ சுற்றம் = ಬಂಧುವನ್ನು, ಎನಕ್ಕು எனக்கு = ನನಗೆ, ಉಯಿರ್ உயிர் = ಪ್ರಾಣವಾದವನನ್ನು, ಒಣ್ ஒண் = ಬೆಲೆಕಟ್ಟಲಾಗದಂಥ, ಪೊರುಳ್ பொருள் = ವಸ್ತುವಾಗಿಯೂ, ವರು வரு = ಬರಬಹುದಾದ, (ಬರುವುದಾದ), ತೊಲ್ தொல் = ಪುರಾತನವಾದ (ಸಹಜವಾದ), ನಲ್ நல் = ಒಳ್ಳೆಯ, ಗದಿ கதி = ಮಾರ್ಗವಾಗಿಯೂ, ಆಗಿ ஆகி = ಆಗಿ, ಅಮೈಂದನೈ அமைந்தனை = ಕೂಡಿಕೊಂಡಿರುವವನನ್ನು, ನೆರು ನಲ್ நெருநல் = ನಿನ್ನೆಯ ದಿನ, ಕಣ್ಡದು கண்டது = ದರ್ಶನ ಮಾಡಿದ್ದು, ನೀರ್ ಮಲೈ நீர்மலை = ತಿರುನೀರ್ ಮಲೈ ಕ್ಷೇತ್ರದಲ್ಲಿ, ಇನ್ರು இன்று = ಇಂದು, ಪೋಯ್ போய் = ಹೋಗಿ, ಕರು ನೆಲ್ கருநெல் = ಪಕ್ವಬಂದಿರುವ (ಕಪ್ಪಾಗಿರುವ) ಬತ್ತದ ಗದ್ದೆಗಳಿಂದ, ಶೂೞ್ சூழ் = ಸುತ್ತುವರಿದಿರುವ, ಕಣ್ಣಮಂಗೈಯುಳ್ கண்ணமங்கையுள் = ತಿರುಕ್ಕಣ್ಣಮಂಗೈ ಕ್ಷೇತ್ರದಲ್ಲಿ, ಕಾಣ್ಡುಮೇ காண்டுமே = ಕಂಡು ಸೇವಿಸೋಣ.

ಕೊನೆಯಿಲ್ಲದ ಬಹಳ ಒಳ್ಳೆಯ ಬಂಧುವನ್ನು, ನನ್ನ ಪ್ರಾಣಸ್ವರೂಪಿಯನ್ನು (ನನಗೆ ಪ್ರಾಣವಾದವನನ್ನು), ಬೆಲೆಕಟ್ಟಲಾಗದಂಥ ವಸ್ತುವಾಗಿಯೂ ಮುಂದೆ ಬರಬಹುದಾದ ಪುರಾತನವಾದ ಸಹಜ ಮಾರ್ಗವಾಗಿಯೂ ಕೂಡಿರುವವನನ್ನು ನಿನ್ನೆಯ ದಿನ ದರ್ಶನ ಮಾಡಿದ್ದು ತಿರುನೀರ್ ಮಲೈ ಕ್ಷೇತ್ರದಲ್ಲಿ. ಇಂದು, ಹೋಗಿ, ಪಕ್ವಬಂದಿರುವ ಬತ್ತದ ಗದ್ದೆಗಳಿಂದ ಸುತ್ತುವರಿದಿರುವ ತಿರುಕ್ಕಣ್ಣಮಂಗೈ ಕ್ಷೇತ್ರದಲ್ಲಿ ಕಂಡು ಸೇವಿಸೋಣ. (1)

"ನನ್ನ ಕೊನೆಯಿಲ್ಲದ ಒಳ್ಳೆಯ ಬಂಧು" — ಬಂಧುಗಳನ್ನು ರಕ್ತಸಂಬಂಧಿಗಳು, ಶ್ರೇಷ್ಠ ಬಂಧುಗಳು, ಉತ್ತಮ ಬಂಧುಗಳು, ಕೆಳದರ್ಜೆಯ ಬಂಧುಗಳು ಎಂದು

Garani Srinivasan

ವಿಂಗಡಿಸಿಕೊಳ್ಳಬಹುದು. ತಂದೆ, ತಾಯಿ, ಗಂಡ, ಹೆಂಡತಿ, ಮಕ್ಕಳು, ಒಡಹುಟ್ಟುಗಳು ರಕ್ತಸಂಬಂಧಿಗಳು – ಇವರು ಹತ್ತಿರದ ಬಂಧುಗಳು. ಗೆಳೆಯ, ಗುರು ಇವರು ಶ್ರೇಷ್ಠ ಬಂಧುಗಳು. ಒಡೆಯ, ರಕ್ಷಕ ಇವರು ಉತ್ತಮ ಬಂಧುಗಳು. ಸೇವಕ, ಮಿತ್ರ ಇತರ ವಿಚಾರದವರು ಕೆಳದರ್ಜೆಯ ಬಂಧುಗಳು. ಹೀಗೆ, ಬಾಂಧವ್ಯವನ್ನು ಕುರಿತು ಹೇಳಬಹುದಾದರೂ ಇವರೆಲ್ಲರೂ ಎಲ್ಲ ಸಮಯಗಳಲ್ಲೂ ~~ಒದಗಿ ಬರುತ್ತಾರೆ~~ ಒದಗುವವರಲ್ಲ, ರಕ್ಷಿಸುವವರಲ್ಲ, ಕಷ್ಟದಿಂದ ಬಿಡಿಸುವವರಲ್ಲ ಎಂಬುದನ್ನು ಪುರಾಣ ಇತಿಹಾಸಗಳಲ್ಲಿ ನಿದರ್ಶನಗಳಿವೆ. ಒಳ್ಳೆಯದು, ಕೆಟ್ಟದ್ದು ಎನ್ನದೆ ಹಿತವನ್ನು ಕೋರುತ್ತಾ, ಎಚ್ಚರಿಕೆ ಕೊಡುತ್ತಾ ಒಡನಾಡಿಗಳಾಗಿ ಒತ್ತಾಸೆ ಕೊಡುವವರು ಮೇಲೆ ಹೇಳಿದವರಲ್ಲಿಯಾರೂ ಇಲ್ಲವೆನ್ನಬಹುದು.

ಇನ್ನು, ಸೂರ್ಯ ಚಂದ್ರರು, ದೇವೇಂದ್ರ, ಬ್ರಹ್ಮ, ಶಿವ – ಇವರು ನಮಗೆ 'ಬಂಧು'ಗಳಾಗಬಹುದಲ್ಲ! ಇವರನ್ನು ಭಜಿಸಿ, ಪೂಜಿಸಿ, ತೃಪ್ತಿಪಡಿಸಿ, ಮೆಚ್ಚಿಸಿಕೊಂಡರಾಯಿತು, ಎಂದರೆ ಇವರೂ ಸಹ ಅಷ್ಟು ಸ್ವತಂತ್ರರಲ್ಲ. ಸ್ವತಂತ್ರವಾಗಿ ವರ್ತಿಸಲು ಇವರಿಗೆ ಅವಕಾಶವಿದ್ದರೂ ಸಹ ಇವರ ನಡತೆ ಕಾರ್ಯಗಳು ಸೀಮಿತವಾದವು. ಎಲ್ಲೆಯನ್ನು ಮೀರಿ ನಡೆದರೆ ಇವರಿಗೂ ಕಷ್ಟ ತಪ್ಪದು.

ಆದ್ದರಿಂದ, ಎಲ್ಲರಿಗಿಂತಲೂ ಶ್ರೇಷ್ಠನೆನಿಸಿದ ಸಾಟಿಯಿಲ್ಲದ 'ಬಂಧು' ಎಂದರೆ, ಸರ್ವೇಶ್ವರನಾದ ಭಗವಂತನೇ. ಅವನೇ ಎಲ್ಲಕ್ಕೂ ಆದಿ. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನು. ಬ್ರಹ್ಮನಿಂದ ಹಿಡಿದು ಎಲ್ಲ ಚೇತನಾಚೇತನಗಳ ನಿಯಾಮಕನು, ರಕ್ಷಕನು. ಒಳ್ಳೆಯದನ್ನು ಮಾಡುವವನು. ಭಗವಂತನೇ ನಿಜವಾಗಿಯೂ 'ಸಾಟಿಯಿಲ್ಲದ ಒಳ್ಳೆಯ ಬಂಧು'.

"ನನ್ನ ಪ್ರಾಣ ..." – ತಾನು ಸೃಷ್ಟಿಸಿದ ಎಲ್ಲ ಚೇತನಗಳಿಗೂ 'ಪ್ರಾಣ'ವಾಗಿರುವವನು ಭಗವಂತನೇ. ಪ್ರಾಣವಿಲ್ಲದ ದೇಹ ಕೆಲಸಕ್ಕೆ ಬಾರದ್ದು. ಜೀವಿಗಳ ಆತ್ಮಕ್ಕೆ ಆತ್ಮನಾಗಿ, ಅದರ ಅಂತರಂಗದಲ್ಲಿ ನೆಲಸಿ, ಅದನ್ನು ನಿರ್ವಹಿಸುವುದಕ್ಕೆ 'ಪರಮಾತ್ಮ' ಅವನು.

"ಬೆಲೆಕಟ್ಟಲಾಗದ ವಸ್ತು" – ಸೃಷ್ಟಿಯಲ್ಲಿರುವ ಎಲ್ಲ ವಸ್ತುಗಳಿಗೂ ಅವುಗಳ ಗುಣ, ಸ್ವಭಾವ, ಉಪಯೋಗಗಳಿಗೆ ತಕ್ಕಂತೆ ಬೆಲೆಯನ್ನು ಕಟ್ಟುತ್ತಾರೆ. ಸೃಷ್ಟಿಗೆ ಅತೀತನಾಗಿ, ಅನಾದಿಯಾಗಿ, ಅನಂತನಾಗಿರುವ 'ಭಗವಂತನೆಂಬ ವಸ್ತು (ನಿಜವಸ್ತು)ವಿಗೆ ಬೆಲೆಯನ್ನು ಕಟ್ಟುವುದಕ್ಕೆ ಸಾಧ್ಯವೇ ಇಲ್ಲ. ಸಕಲ ಕಲ್ಯಾಣಗುಣಸಂಪನ್ನನು ಸ್ವಾಮಿ. ಆಶ್ರಿತವತ್ಸಲನು. ಕರುಣಾಸಾಗರನು. ದುಷ್ಟನಿಗ್ರಹ, ಶಿಷ್ಟಾನುಗ್ರಹದಲ್ಲಿಯೂ ತೊಡಗಿರುವವನು. ಎಲ್ಲ ಪ್ರಾಣಿಗಳಿಗೂ ಎಲ್ಲ ಕಾಲಕ್ಕೂ ಒದಗತಕ್ಕವನು.

Garani Srinivasan

ಸಂಸಾರವೆಂಬ ಭಯ ಸಂಕಟಗಳಿಂದ ತಪ್ಪಿಸುವವನು. ಶಾಶ್ವತಾನಂದವನ್ನು ನೀಡುವವನು. ಹೀಗೆ ಹೇಳಿ ಮುಗಿಸಲಾರದಷ್ಟು ಸದ್ಗುಣ, ಸತ್ಸ್ವಭಾವ, ಸದುಪಯೋಗವುಳ್ಳ ಭಗವಂತನಿಗೆ ಬೆಲೆಯನ್ನು ಕಟ್ಟುವುದಾದರೂ ಹೇಗೆ?

ಆಳ್ವಾರರು ಹೇಳುತ್ತಾರೆ: ನನಗೆ ಬಹಳ ಒಳ್ಳೆಯ, ಸಾಟಿಯೇ ಇಲ್ಲದ, ಬಂಧು ಎಂದರೆ ಭಗವಂತನೇ. ಅವನೇ ನನ್ನ ಆತ್ಮದ ಆತ್ಮ; ನನ್ನ ಪ್ರಾಣದ ಪ್ರಾಣ. ಬೆಲೆಕಟ್ಟಲಾಗದ ನಿಜವಸ್ತುವು. ಅವನನ್ನು ಪ್ರೀತಿಸಿರುವ ನನಗೆ ಮುಂದೆ ಬರಬೇಕಾದ ಅಮೂಲ್ಯ ವಸ್ತುವಾದ ಆತ್ಮೋದ್ಧಾರವನ್ನು ತೋರುವ ಗತಿಯೂ, 'ಗುರು'ವೂ ಅವನೇ. ಸ್ವಾಮಿಯ ದಿವ್ಯ ಮಂಗಳ ವಿಗ್ರಹವನ್ನು ನಾನು ನಿನ್ನೆಯ ದಿನ ತಿರುನೀರ್‌ಮಲೈ ಕ್ಷೇತ್ರದಲ್ಲಿ ಕಣ್ಣಾರ ಕಂಡು ನಲಿದೆ. ಇಂದು, ತಿರುತ್ತಣ್ಕಾ [illegible] ಕ್ಷೇತ್ರದಲ್ಲಿ ಸ್ವಾಮಿಯನ್ನು ಕಂಡು ನಮಸ್ಕರಿಸೋಣ.

2. பொன்னை மாமணியை அணியார்ந்ததோர் மின்னை,
வேங்கடத்துச்சியிற் கண்டு போய்,
என்னையாளுடை யீசனை யெம்பிரான் றன்னை,
யாம் சென்று காண்டும் தண்காவிலே.

ಪೊನ್ನೈ ಮಾಮಣಿಯೈ ಅಣಿಯಾರ್ನ್ದದೋರ್ ಮಿನ್ನೈ,
ವೇಙ್ಗಡತ್ತುಚ್ಚಿಯಿಱ್ ಕಣ್ಡು ಪೋಯ್,
ಎನ್ನೈಯಾಳುಡೈಯೀಶನ್ನೈಯೆಮ್ಬಿರಾನ್ದನ್ನೈ,
ಯಾಮ್ ಶೆನ್ಱು ಕಾಣ್ಡುಮ್ ತಣ್ ಕಾವಿಲೇ.

ಪೊನ್ನೈ பொன்னை = ಅತಿಶಯವಾದ ಸೌಂದರ್ಯವುಳ್ಳವನನ್ನು (ಚಿನ್ನದಂಥವನನ್ನು), ಮಾಮಣಿಯೈ மாமணியை = ಶ್ರೇಷ್ಠವಾದ ರತ್ನವನ್ನು, ಅಣಿ ಆರ್ನ್ದದು அணியார்ந்த = ಶೋಭೆ ತುಂಬಿರುವ, ಓರ್ ஓர் = ಅದ್ಭುತವಾದ, ಮಿನ್ನೈ மின்னை = ಮಿಂಚನ್ನು, ವೇಙ್ಗಡತ್ತು வேங்கடத்து = ವೆಂಕಟಾಚಲದ, ಉಚ್ಚಿಯಿಲ್ உச்சியில் = ಶಿಖರದಲ್ಲಿ, ಕಣ್ಡು கண்டு = (ನಿನ್ನೆಯ ದಿನ) ಕಂಡು ಬಳಿಕ, ಪೋಯ್ போய் = ಅಲ್ಲಿಂದ ಹೊರಟು, ಎನ್ನೈ என்னை = ನನ್ನನ್ನು, ಆಳ್ ಉಡೈ ஆள் உடை = ಪಾದಸೇವಕನನ್ನಾಗಿ ಉಳ್ಳ, ಈಶನ್ನೈ ஈசனை = ಸರ್ವೇಶ್ವರನನ್ನು (ಒಡೆಯನನ್ನು), ಎಮ್ಬಿರಾನ್ ತನ್ನೈ எம்பிரான் தன்னை = ನನ್ನ ಸ್ವಾಮಿಯನ್ನು, ಯಾಮ್ யாம் = ನಾನು, ಶೆನ್ಱು சென்று = ಹೋಗಿ, ಕಾಣ್ಡುಮ್ காண்டும் = (ಇಂದು) ಕಾಣ ಹೋಗುವುದು, ತಣ್ಕಾವಿಲೇ தண்காவிலே = ತಿರುತ್ತಣ್ಕಾವಿ ಎಂಬ ಕ್ಷೇತ್ರದಲ್ಲಿಯೇ.

ಅತಿಶಯವಾದ ಸೌಂದರ್ಯವುಳ್ಳ ಚಿನ್ನದಂಥವನನ್ನು, ಶ್ರೇಷ್ಠವಾದ ರತ್ನವನ್ನು, ಶೋಭೆ ತುಂಬಿದ ಅದ್ಭುತವಾದ ಮಿಂಚನ್ನು, ವೆಂಕಟಾಚಲದ ಶಿಖರದಲ್ಲಿ (ನಿನ್ನೆಯ ದಿನ) ಕಂಡು ಬಳಿಕ ಅಲ್ಲಿಂದ ಹೊರಟು, ನನ್ನನ್ನು ಪಾದಸೇವಕನನ್ನಾಗಿ ಉಳ್ಳ ಒಡೆಯನನ್ನು (ಸರ್ವೇ

ಶ್ವರನನ್ನು), ನನ್ನ ಸ್ವಾಮಿಯನ್ನು, ನಾನು ನೋಡಿ (ಇಂದು) ಕಾಣುವುದು ತಿರುತ್ತಣ್ಕಾವಿ (2)
ಕ್ಷೇತ್ರದಲ್ಲಿಯೇ.

ಲೋಹಗಳಲ್ಲಿ ಚಿನ್ನವು ಶ್ರೇಷ್ಠವಾದದ್ದು. ಪರಿಶುದ್ಧವಾದದ್ದು. ಬೇರೆ ವಸ್ತುಗಳ ಸಂಪರ್ಕದಲ್ಲಿದ್ದರೂ ಅದು ತನ್ನ ಹೊಳಪನ್ನು ಬಣ್ಣವನ್ನು ಕೆಡಿಸಿಕೊಳ್ಳುವುದಿಲ್ಲ. ರತ್ನವು ಪ್ರಕಾಶಮಾನವಾದ ವಸ್ತು. ಅದರಿಂದ, ರತ್ನವು ಬೆಲೆಬಾಳುವುದಾಯೂ ಆಕರ್ಷಕವಾಗಿಯೂ ಇರುವ ವಸ್ತು. ಮಿಂಚು (ಕ್ಷಣಿಕವಾದದ್ದಾದರೂ) ಕಣ್ಣು ಕೋರೈಸುವ ಪ್ರಕಾಶದಿಂದ, ಅದರ ಅತಿ ವೇಗದ ಚಲನೆಯಿಂದ, ಬಳ್ಳಿಯಂತೆ ವಕ್ರ ವಿಧವಿಧವಾಗಿ ಚಲಿಸುವುದರಿಂದ ಅದು ದರ್ಶನೀಯವಾಯಿತು. ಭಗವಂತನನ್ನು ಚಿನ್ನದಂಥವನು, ರತ್ನದಂಥವನು, ಮಿಂಚಿನಂಥವನು ಎಂದು ವರ್ಣಿಸಲಾಗಿದೆ. ಚಿನ್ನದ ಶುದ್ಧತೆಯೂ, ರತ್ನದ ಆಕರ್ಷಕವಾದ ಹೊಳಪೂ, ಮಿಂಚಿನ ಶೋಭೆಗೂ — ಎಲ್ಲದಕ್ಕೂ ಮಿಗಿಲು ದೀಪ್ತಿ ಭಗವಂತನಲ್ಲಿದೆ. ಅವನೇ ಎಲ್ಲ ಜೀವಿಗಳಿಗೂ ಒಡೆಯನು – ನಿಯಾಮಕನು, ನಿರ್ವಾಹಕನು.

ಆಳ್ವಾರರು ಹೇಳುತ್ತಾರೆ: "ನನ್ನ ಒಡೆಯನಾದ, ಸ್ವಾಮಿಯನ್ನು ತಿರುವೆಂಕಟಾಚಲದ ಶಿಖರದಲ್ಲಿ ನಿನ್ನೆಯು ದಿನ ನಾನು ಕಂಡು, ಸೇವಿಸಿದೆ. ಅವನನ್ನೇ ತಿರುತ್ತಣ್ಕಾವಿ ಕ್ಷೇತ್ರದಲ್ಲಿ ಇಂದು ಸಂದರ್ಶಿಸಿ, ದರ್ಶಿಸುತ್ತೇನೆ.

3. வேலையாலிலைப் பள்ளி விரும்பிய,
பாலையாரமுதத்தினைப் பைந்துழாய்,
மாலையாலியில் கண்டு மகிழ்ந்து போய்,
ஞாலமுன்னியைக் காண்டும் நாங்கூரிலே.

ವೇಲೈಯಾಲಿಲೈ ಪ್ಪಳ್ಳಿ ವಿರುಮ್ಬಿಯ,
ಪಾಲೈಯಾರಮುದತ್ತಿನೈ ಪ್ಪೈನ್ದುಳಾಯ್,
ಮಾಲೈಯಾಲಿಯಿಲ್ ಕ್ಕಣ್ಡು ಮಹಿಳ್ನ್ದು ಪೋಯ್,
ಞಾಲಮುನ್ನಿಯೈ ಕ್ಕಾಣ್ಡುಮ್ ನಾಙ್ಗೂರಿಲೇ.

ವೇಲೈ வேலை = ಕಡಲಲ್ಲಿ, ಆಲ್ ಇಲೈ ஆலிலை = ಆಲದ ಎಲೆಯ ಮೇಲೆ, ಪಳ್ಳಿ பள்ளி = ಪವಡಿಸಿ, ವಿರುಮ್ಬಿಯ விரும்பிய = ದರ್ಶಿಸಿದವನನ್ನು, ಪಾಲೈಯಾರ್ பாலையார் = ಬಾಲೆಯರ, ಅಮುದತ್ತಿನೈ அமுதத்தினை = ಅಮೃತಸ್ವರೂಪನನ್ನು, ಪೈ பை = ಸುಂದರವಾದ, ತ್ತುಳಾಯ್ துழாய் = ತುಳಸಿಯನ್ನು ಧರಿಸಿದ, ಮಾಲೈ மாலை = ಸರ್ವೇಶ್ವರನನ್ನು, ಆಲಿಯಿಲ್ ஆலியில் = ತಿರುವಾಲಿ ಕ್ಷೇತ್ರದಲ್ಲಿ, ಕಣ್ಡು கண்டு = ನೋಡಿ, ಮಹಿಳ್ನ್ದು மகிழ்ந்து = ಆನಂದಪಟ್ಟು, ಪೋಯ್ போய் = ಹೋಗಿ, ಞಾಲಮ್ ஞாலம் = ಜಗತ್ತನ್ನು ಕಾಯಲು, ಉನ್ನಿಯೈ உன்னியை = ಚಿಂತಿಸತಕ್ಕವನನ್ನು, ಕಾಣ್ಡುಮ್ காண்டும் = ಕಾಣ ಹೋಗುವುದು, ನಾಙ್ಗೂರಿಲೇ நாங்கூரிலே = ತಿರುನಾಂಗೂರಿನಲ್ಲಿ.

ಕಡಲಲ್ಲಿ ಆಲದೆಲೆಯ ಮೇಲೆ ಪವಡಿಸಿ ದರ್ಶನವಿತ್ತವನನ್ನು, ಬಾಲೆ
ಯರ ಅಮೃತಸ್ವರೂಪನನ್ನು, ಸುಂದರವಾದ ತುಳಸಿಯನ್ನು ಧರಿಸಿರುವ
ದೇವೇಶ್ವರನನ್ನು (ನಿನ್ನೆಯದಿನ) ತಿರುವಾಲಿ ಕ್ಷೇತ್ರದಲ್ಲಿ ಕಂಡು ಆನಂದಿಸಿ
ದ ತಿರುವಾಯ್, ಹೋಗಿ, ಜಗತ್ತನ್ನು ಕುರಿತು ಚಿಂತಿಸುವವನನ್ನು ತಿರು (3)
ನಾಂಗಾರಿನಲ್ಲಿ ಇಂದು ಕಾಣಬಯಸುತ್ತೇನೆ.

ಮಹಾಪ್ರಳಯದ ಬಳಿಕ ಎಲ್ಲೆಲ್ಲೂ ಜಲವೇ ಆದಾಗ, ಭಗವಂತನು
ಆ ಅತಿವಿಶಾಲವಾದ ಕಡಲಲ್ಲಿ, ಆಲದೆಲೆಯ ಮೇಲೆ ಪುಟ್ಟ ಮಗುವಾಗಿ
ಪವಡಿಸಿ, ಕಲ್ಪಗಳ ಕಾಲ, ಯೋಗನಿದ್ರೆಯಲ್ಲಿ, ಆನಂದಿಸುತ್ತಾನೆ. ಸ್ವಾಮಿ
ಯು ಶ್ರೀಕೃಷ್ಣನಾಗಿ ಅವತರಿಸಿದಾಗ, ಅವನ ದಿವ್ಯ ಸುಂದರ ರೂಪವನ್ನು
ಚಿತ್ತಾಕರ್ಷಕವಾದ ವೇಣುಗಾನವನ್ನು ಮೋಹಿತರಾಗಿ, ತಮ್ಮ ದೇಹಸ್ವವನ್ನು
ತ್ಯಜಿಸಿ, ಅವನೊಡಗೂಡಿ ದರ್ಶಿಸಿದವರು ಗೋಪಬಾಲೆಯರು. ದೇವಕೀ
ನಲ್ಲಿ ಅಮೃತ ದೇಹದಾನಿಯ ಆ ಗೋಪಬಾಲೆಯರಿಗೆ ಶ್ರೀಕೃಷ್ಣ
ಸುಂದರವಾದ ಪರಿಮಳಿಸುವ ತುಳಸಿಯ ಹಾರವನ್ನು ಸ್ವಾಮಿಯು ಆಕ
ಯಿಂದ ಧರಿಸಿದ್ದಾನೆ. ತಾನು ವ್ಯಾಪಿಸಿದ, ರಕ್ಷಿಸಬೇಕಾದ ಜಗತ್ತನ್ನು ಕುರಿತು ಸ್ವಾಮಿಯ
ಎಡೆಬಿಡದೆ ಚಿಂತಿಸುತ್ತಿದ್ದಾನೆ.

ಆಳ್ವಾರರು ಹೇಳುತ್ತಾರೆ: ದೇವೇಶ್ವರನಾದ ನನ್ನ ಸ್ವಾಮಿಯನ್ನು
ನಿನ್ನೆಯ ದಿನ ತಿರುವಾಲಿ ಕ್ಷೇತ್ರದಲ್ಲಿ ಕಂಡೆ. ಆನಂದಿಸಿದೆ. ಇಂದು,
ಅವನನ್ನು ತಿರುನಾಂಗಾರಿನಲ್ಲಿ ನಾನು ಕಾಣಬೇಕೆಂಬ ಹಂಬಲ ಉಂಟಾಗಿದೆ.

4. துளக்கமில் சுடரை அவுணனுடல்
பிளக்கும் மைந்தனைப் பேரில் வணங்கிப் போய்,
அளப்பிலாரமுதை அமரர்க்கருள்
விளக்கினை, சென்று வெள்ளறைக் காண்டுமே.

ತುಳಕ್ಕಮಿಲ್ ಶುಡರೈ ಅವುಣನುಡಲ್
ಪಿಳಕ್ಕುಮ್ ಮೈನ್ದನೈಪ್ ಪೇರಿಲ್ ವಣಙ್ಗಿಪ್ ಪೋಯ್,
ಅಳಪ್ಪಿಲಾರಮುದೈ ಅಮರರ್ಕ್ಕರುಳ್
ವಿಳಕ್ಕಿನೈ, ಶೆನ್ರು ವೆಳ್ಳರೈಕ್ ಕಾಣ್ಡುಮೇ.

ತುಳಕ್ಕಮ್ ಇಲ್ துளக்கம் இல் = ಅಲುಗಾಟವಿಲ್ಲದ (ನಿಶ್ಚಲವಾದ), ಶುಡರೈ
சுடரை = ಜ್ಯೋತಿಯನ್ನು, ಅವುಣನ್ அவுணன் = ಅಸುರನ, ಉಡಲ್ உடல் =
ಒಡಲನ್ನು, ಪಿಳಕ್ಕುಮ್ பிளக்கும் = ಸೀಳುವ, ಮೈನ್ದನೈ மைந்தனை
= ಸ್ವಾಮಿಯನ್ನು, ಪೇರಿಲ್ பேரில் = ತಿರುಪ್ಪೇರ್ ಕ್ಷೇತ್ರದಲ್ಲಿ, ವಣಙ್ಗಿ வணங்
கி = ಎರಗಿ, ಪೋಯ್ போய் = ಹೋಗಿ, ಅಳಪ್ಪು ಇಲ್ அளப்பு இல் = ಅಳೆ
ಯಲಾಗದ, ಆರ್ ஆர் = ಸುಂದರವಾದ, (ಪರಿಪೂರ್ಣವಾದ), ಅಮುದೈ அமுதை =
ಅಮೃತವನ್ನು, ಅಮರರ್ಕ್ಕು அமரர்க்கு = ಅಮರರಿಗೆ, ಅರುಳ್ அருள் =
ಕೃಪೆದೋರುವ, ವಿಳಕ್ಕಿನೈ விளக்கினை = ಪರಂಜ್ಯೋತಿಯನ್ನು, ಶೆನ್ರು
சென்று = ಹೋಗಿ, ವೆಳ್ಳರೈ வெள்ளறை = ತಿರುವೆಳ್ಳರೈ ಕ್ಷೇತ್ರದಲ್ಲಿ,
ಕಾಣ್ಡುಮೇ காண்டுமே = ನೋಡುವವನಿದ್ದೇನೆ.

ನಿಶ್ಚಲವಾದ ಜ್ಯೋತಿಯನ್ನು, ಅಸುರನ ಒಡಲನ್ನು ಸೀಳಿದಾತನ ಸಾಮರ್ಥ್ಯವನ್ನು, ತಿರುವ್ವೆಲ್ ಕ್ಷೇತ್ರದಲ್ಲಿ ಕಂಡು ಬಳಿಕ, ಆ ಬಳಿಕ ಹೋಗಿ, ಅಳೆಯಲಾಗದಷ್ಟು ಸಮೃದ್ಧಿಯಾದ ಅಮೃತವನ್ನು, ಅಮರರಿಗೆ ಕೃಪೆಮಾಡುವ ಪರಂ ಜ್ಯೋತಿಯನ್ನು, (4)
ತಿರುವೆಳ್ಳರೈ ಕ್ಷೇತ್ರದಲ್ಲಿ ನೋಡುತ್ತೇನೆ.

ಭಗವಂತನನ್ನು ಅಲುಗಾಟವೇ ಇಲ್ಲದ ನಿಶ್ಚಲವಾದ ಜ್ಯೋತಿಸ್ವರೂಪನೆಂದು ವರ್ಣಿಸುತ್ತಾರೆ.

"ಅಸುರನ ಒಡಲನ್ನು ಸೀಳಿದ ಸಾಮರ್ಥ್ಯ" — ಇದು ಹಿರಣ್ಯಕಶಿಪುವಿನ ವಿಷಯ. ಭಕ್ತ ಬಾಲಕನಾದ ಪ್ರಹ್ಲಾದನಿಗೆ ಅವನ ತಂದೆಯಾದ ಆದ ದುಷ್ಟ ಹಿರಣ್ಯಕಶಿಪು ಕೊಡುತ್ತಿದ್ದ ಚಿತ್ರಹಿಂಸೆಗೆ ಮರುಗಿ, ಭಗವಂತನು 'ನರ-ಸಿಂಹ'ನಾಗಿ ಅವತರಿಸಿ, ತನ್ನ ಕೈ ಉಗುರುಗಳಿಂದಲೇ ಹಿರಣ್ಯಕಶಿಪುವನ್ನು ಸೀಳಿಹಾಕಿದ ವಿಷಯ ಇದು.

ಭಗವಂತನ ರೂಪ ಸೌಂದರ್ಯವನ್ನು, ಗುಣಸ್ವಭಾವಗಳನ್ನು ಎಷ್ಟು ಬಗೆಯಲ್ಲಿ ಅನುಭವಿಸಿದರೂ ತೀರದ ತೃಪ್ತಿಯಾಗದೆ ಇರುವುದರಿಂದ, "ಅಳೆಯಲಾರದಷ್ಟು ಸಮೃದ್ಧಿಯಾದ ಅಮೃತ" ಎಂದು ವರ್ಣಿಸಲಾಗಿದೆ. ಸ್ವಾಮಿಗೆ "ಆರಾವಮುದು" ಎಂಬ ಹೆಸರಿದೆಯಷ್ಟೆ.

ಅಮರರು ಎಂಬವರು ಹುಟ್ಟು-ಸಾವುಗಳನ್ನು ಜಯಿಸಿರುವ ನಿತ್ಯಸೂರಿಗಳು. ಅವರ ನೆಲೆ ಪರಮಪದದಲ್ಲಿ. ಪರಮಪದನಾಥನನ್ನು ಸ್ವಾಮಿಯ ತಿರುವಡಿಗಳ ನಿತ್ಯಕೈಂಕರ್ಯವನ್ನು ದಯೆನೀಡಿರುವವನು ಕೃಪಾಸಾಗರನಾದ ಭಗವಂತನೇ.

ಆಳ್ವಾರರು ಹೇಳುತ್ತಾರೆ: ಪರಂಜ್ಯೋತಿಸ್ವರೂಪನಾದ ಸ್ವಾಮಿಯನ್ನು ನಾನು ನಿನ್ನೆಯದಿನ ತಿರುವ್ವೆಲ್ ಕ್ಷೇತ್ರದಲ್ಲಿ ಕಂಡು, ಭಕ್ತಿವಿನಯಗಳಿಂದ ಅವನ ತಿರುವಡಿಗಳೆರಗಿದೆ. ~~ಇಂದು~~, ಅಲ್ಲಿಂದ ಹೊರಟು, ಇಂದು, ~~ಆ ಸ್ವಾಮಿಯನ್ನು~~ ತಿರುವೆಳ್ಳರೈ ಕ್ಷೇತ್ರಕ್ಕೆ ಹೋಗಿ, ಆ ಸ್ವಾಮಿಯನ್ನು ನೋಡುವವನಿದ್ದೇನೆ.

5. சுடலையில் சுடுநீறன் அமர்ந்ததோர்,
நடலை தீர்த்தவனை நறையூர்க்கண்டு, என்
உடலையுள் புகுந்து உள்ளமுருக்கியுண்,
விடலையைச் சென்று காண்டும் மெய்யத்துளே.

ಸುಡಲೈಯಿಲ್ ಸುಡುನೀರನ್ ಅಮರ್ನ್ದದೋರ್,
ನಡಲೈ ತೀರ್ತ್ತವನೈ ನರೈಯೂರ್ಕ್ಕಂಡು, ಎನ್
ಉಡಲೈಯುಳ್ ಪುಗುನ್ದು ಉಳ್ಳಮುರುಕ್ಕಿಯುಣ್,
ವಿಡಲೈಯೈಚ್ಚೆನ್ರು ಕಾಣ್ಡುಮ್ ಮೆಯ್ಯತ್ತುಳೇ.

ಶುಡಲೈಯಿಲ್ சுடலையில் = ಸುಡುಗಾಡಿನಲ್ಲಿ, ಶುಡು ನೀಱನ್
சு(டு) நீறன் = ಸುಟ್ಟ ಬೂದಿಯನ್ನು (ವಿಭೂತಿಯನ್ನು) ಧರಿಸಿರುವವನಿಗೆ,
ಅಮರ್ನ್ದದು அமர்ந்தது = ಒದಗಿಬಂದ, ಓರ್ ನಡಲೈ ஓர் நடலை =
ಅಪಾರವಾದ ಸಂಕಟವನ್ನು, ತೀರ್ತ್ತವನೈ தீர்த்தவனை = ತೀರಿಸಿದ
ವನನ್ನು, ನಱೈಯೂರ್ நறையூர் = ತಿರುನರೈಯೂರಿನಲ್ಲಿ, ಕಣ್ಡು
கண்டு = ದರ್ಶನ ಮಾಡಿಕೊಂಡೆ, ಎನ್ என் = ನನ್ನ, ಉಡಲೈಯುಳ್
உடலையுள் = ದೇಹದೊಳಗೆ, ಪುಗುನ್ದು புகுந்து = ಪ್ರವೇಶಿಸಿ,
ಉಳ್ಳಮ್ உள்ளம் = ಅಂತರಂಗವನ್ನು, ಉರುಕ್ಕಿ உருக்கி = ಕರಗಿಸಿ,
ಉಣ್ உண் = ಉಣ್ಣುತ್ತಿರುವ, ವಿಡಲೈಯೈ விடலையை = ನಿತ್ಯಯೌ
ವನ ಸುಂದರನನ್ನು, ಶೆನ್ಱು சென்று = ಹೋಗಿ, ಕಾಣ್ಡುಮ್ காண
டும் = ಕಾಣ ಹೋಗುವುದು, ಮೆಯ್ಯತ್ತುಳ್ಳೇ மெய்யத்துளே =
ತಿರುಮೆಯ್ಯಕ್ಷೇತ್ರದಲ್ಲಿಯೇ.

ಸುಡುಗಾಡಿನಲ್ಲಿ, ಸುಟ್ಟ ಬೂದಿಯನ್ನು (ವಿಭೂತಿಯನ್ನು) ಧರಿಸಿ
ದವನಿಗೆ ಒದಗಿಬಂದ ಅಪಾರವಾದ ಸಂಕಟವನ್ನು ತೀರಿಸಿದವನನ್ನು,
ತಿರುನರೈಯೂರಿನಲ್ಲಿ ನಿನ್ನೆ ದರ್ಶನ ಮಾಡಿಕೊಂಡೆ. ನನ್ನ ದೇಹದೊಳಕ್ಕೆ
ಪ್ರವೇಶಿಸಿ, ನನ್ನ ಅಂತರಂಗವನ್ನು ಕರಗಿಸಿ ಉಣ್ಣುತ್ತಿರುವ ನಿತ್ಯಯೌವನ ಸುಂದ
ರನನ್ನು (~~ಸುಂದರ~~ (ಸುಂದರಯುವಕನನ್ನು) ಇಂದು ಹೋಗಿ ಕಾಣುವುದು (5)
ತಿರುಮೆಯ್ಯಕ್ಷೇತ್ರದಲ್ಲಿಯೇ.

ಸುಡುಗಾಡಿನಲ್ಲಿ ಜೀವಿಸುತ್ತಾ, ಅಲ್ಲಿಯ ಸುಟ್ಟ ಬೂದಿಯನ್ನು ಮೈಗೆ
ಲ್ಲ ಬಳಿದುಕೊಂಡು, ಬ್ರಹ್ಮಹತ್ಯಾದೋಷದಿಂದ ಸಂಕಟಪಡುತ್ತಾ, ಅಲೆದಾ
ಡುತ್ತಾ ಇದ್ದವನು ರುದ್ರನು. ತನ್ನ ಕೈಗೆ ಅಂಟಿಕೊಂಡಿದ್ದ ಬ್ರಹ್ಮಕಪಾಲವನ್ನು
ಕಳಚಿಹಾಕುವುದಕ್ಕಾಗಿ, ಅಲೆದಲೆದ ಸಂಕಟದಿಂದ ಪಾರುಮಾಡಿದವನು
ಭಗವಂತನೇ.

ಭಕ್ತನ ಮನಸ್ಸಿನಲ್ಲಿ ಹೊಕ್ಕು, ಅದನ್ನು ಶುದ್ಧಗೊಳಿಸಿ, ಭಕ್ತಿ
ಪ್ರೇಮಗಳಿಂದ ತುಂಬಿಸಿ, ತನ್ನ ವಿಷಯದಲ್ಲಿ ಕರಗುವಂತೆ ಮಾಡಿ, ಅದನ್ನು
ತನ್ನ ವಶಪಡಿಸಿಕೊಂಡು ತಾನೇ ಅನುಭವಿಸುವವನು ಭಗವಂತನೇ. ಮುಗ್ಧೆ
ಯೂ ಸುಂದರಿಯೂ ಆದ ನವಯುವತಿಯ ಮನವನ್ನು ಒಲಿಸಿಕೊಳ್ಳುವ
ಸುಂದರಯುವಕನ ಹಾಗೆ.

ಆಳ್ವಾರರು ಹೇಳುತ್ತಾರೆ: ಆಶ್ರಿತರ ಸಂಕಟಗಳನ್ನು ಹರಿ
ಸುವ ಸ್ವಾಮಿಯನ್ನು ತಿರುನರೈಯೂರಿನಲ್ಲಿ ನಿನ್ನೆಯ ದಿನ ನಾನು ದರ್ಶನ
ಮಾಡಿಕೊಂಡೆ. ನನ್ನ ಅಂತರಂಗದಲ್ಲಿಯೇ ನೆಲಸಿ, ಅದನ್ನಾಳುವ ಸ್ವಾಮಿ
ಯನ್ನು, ಇಂದು, ನಾನು ಕಾಣ ಹೋಗುವುದು ತಿರುಮೆಯ್ಯಕ್ಷೇತ್ರದಲ್ಲಿ.

Garani Srinivasan

6. வானவாரமுதம் தந்த வள்ளலை,
தேனை நீள்வயல் சேறையிற் கண்டுபோய்,
ஆனை வாட்டி யருளும் அமரர்தம்
கோனை, யாம்குடந்தைச் சென்று காண்டுமே.

ವಾನವಾರಮುದಮ್ ತನ್ದ ವಳ್ಳಲೈ,
ತೇನೈ ನೀಳ್ ವಯಲ್ ಶೇಱೈಯಿಱ್ ಕಣ್ಡು ಪೋಯ್,
ಆನೈ ವಾಟ್ಟಿ ಯರುಳುಮ್ ಅಮರರ್ ತಮ್
ಕೋನೈ, ಯಾಮ್ ಕುಡನ್ದೈಚ್ಚೆನ್ಱು ಕಾಣ್ಡುಮೇ.

ವಾನವರ್ வானவார் = ದೇವತೆಗಳಿಗೆ, ಅಮುದಮ್ அமுதம் = ಅಮೃತವನ್ನು, ತನ್ದ தந்த = ಒದಗಿಸಿಕೊಟ್ಟ, ವಳ್ಳಲೈ வள்ளலை = ಪರಮ ಉದಾರಿಯನ್ನು, ತೇನೈ தேனை = ಜೇನಿನಂಥವನನ್ನು, ನೀಳ್ ವಯಲ್ நீள் வயல் = ಉದ್ದನಾದ ಗದ್ದೆ ಬಯಲುಗಳ, ಶೇಱೈಯಿಲ್ சேறையில் = ತಿರುಚ್ಚೇಱೈ ಕ್ಷೇತ್ರದಲ್ಲಿ, ಕಣ್ಡು கண்டு = ದರ್ಶನಮಾಡಿಕೊಂಡು, ಪೋಯ್ போய் = ಹೋಗಿ, ಆನೈ (ಆನೈ = ದನವರುಗಳನ್ನು) ஆனை = ಪಿತ್ತನ್ನು, ವಾಟ್ಟಿ வாட்டி = ನಾಶಪಡಿಸಿ, ಅರುಳುಮ್ அருளும் = ಕೃಪೆತೋರುವ, ಅಮರರ್ ತಮ್ அமரர்தம் = ಅಮರರ, ಕೋನೈ கோனை = ಒಡೆಯನನ್ನು, ಯಾಮ್ யாம் = ನಾನು, ಕುಡನ್ದೈ குடந்தை = ತಿರುಕ್ಕುಡನ್ದೈ ಕ್ಷೇತ್ರ (ಕುಂಭಕೋಣ)ಕ್ಕೆ, ಶೆನ್ಱು சென்று = ಹೋಗಿ, ಕಾಣ್ಡುಮೇ காண்டுமே = ನೋಡಹೋಗುತ್ತೇನೆ.

ದೇವತೆಗಳಿಗೆ ಅಮೃತವನ್ನು ಒದಗಿಸಿಕೊಟ್ಟ ಪರಮ ಉದಾರಿಯನ್ನು, ಜೇನಿನಂಥವನನ್ನು, ಉದ್ದನಾದ ಗದ್ದೆಬಯಲುಗಳ ತಿರುಚ್ಚೇಱೈ ಕ್ಷೇತ್ರದಲ್ಲಿ ದರ್ಶನಮಾಡಿಕೊಂಡು, ಹೋಗಿ, ಪಿತ್ತನ್ನು ನಾಶಪಡಿಸಿ, ದನವರುಗಳನ್ನು ಕಾಪಾಡಿದ ಅಮರರ ಒಡೆಯನನ್ನು, ನಾನು ತಿರುಕ್ಕುಡನ್ದೈ ಕ್ಷೇತ್ರಕ್ಕೆ ಹೋಗಿ ನೋಡಹೋಗುತ್ತೇನೆ. (6)

ದಾನವರಿಂದ ಆ ಮೇಲಿಂದ ಮೇಲೆ ಒದಗುವ ಎಡೆಬಿಡದ ಬಾಧೆಯಿಂದ ಅವರ ದಾಯಾದಿಗಳೇ ಆದ ದೇವತೆಗಳನ್ನು ತಪ್ಪಿಸುವುದಕ್ಕಾಗಿ ಭಗವಂತನು ದೇವದಾನವರು ಕೂಡಿಕೊಂಡು ಸಮುದ್ರಮಥನ ಮಾಡಬೇಕೆಂಬ ಉಪಾಯವನ್ನು ಸೂಚಿಸಿದನು. ಅದರಿಂದ ಉದಿಸುವ 'ಅಮೃತ'ವನ್ನು ಕುಡಿಯುವುದರಿಂದ ಅವರೆಲ್ಲರೂ 'ಅಮರ'ರಾಗುತ್ತಾರೆಂದು ಆಶ್ವಾಸಿಸಿದನು. ಸಮುದ್ರಮಥನಕ್ಕೆ ಎಲ್ಲ ಸಲಕರಣೆಗಳನ್ನೂ ಒದಗಿಸಿಕೊಟ್ಟು ಸೂಚನೆಯನ್ನು ಕೊಟ್ಟನು. ಸಮುದ್ರಮಥನದಲ್ಲಿ ಕಡೆಗೋಲಾಗಿದ್ದ ಮಂದರ-ಪರ್ವತ

ಕಡಲಲ್ಲಿ ಮುಳುಗದಂತೆ ಮಾಡಲು, ಭಗವಂತನು ಕೂರ್ಮ ರೂಪನಾಗಿ ಅವತರಿಸಿ, ಪರ್ವತದ ತಳದಲ್ಲಿ ನಿಂತು, ಅದನ್ನು ಎತ್ತಿ ಹಿಡಿದು, ಸಮುದ್ರಮಥನವು ಸುಗಮವಾಗಿ ನಡೆಯುವಂತೆ ಮಾಡಿದನು. ಅಮೃತವು ಉದಿಸಿತು. ದೇವತೆಗಳೂ ದಾನವರೂ ನಾನು ಮುಂದು ತಾನು ಮುಂದು ಎಂದು ಅದಕ್ಕಾಗಿ ಹೋರಾಡಿದರು. ಆಗ ಭಗವಂತನು ಮೋಹಿನಿ ರೂಪವನ್ನು ಧರಿಸಿ, ಅವರಿಗೆ ಅಮೃತವನ್ನು ಹಂಚುವುದಾಗಿ ಹೇಳಿ, ದೇವತೆಗಳಿಗೆ ಮಾತ್ರವೇ ಆ ಅಮೃತವು ಸಿಗುವಂತೆ ಮಾಡಿದನು. ದಾನವರಿಂದ ಅವರಿಗೆ ಭಯವಿಲ್ಲವಾಯಿತು. ಹೀಗೆ ಭಗವಂತನು ಪರಮ ಉದಾರಿಯಾದವನು.

'ಎತ್ತನ್ನು ನಾಶಪಡಿಸಿದವನು' — ಭಗವಂತನು ಬಾಲಕೃಷ್ಣನಾಗಿ ಅವತರಿಸಿದನು. ದನಕರುಗಳನ್ನು ಮೇಯಿಸಲು ನಂದಗೋಕುಲದ ಇತರ ಗೋವಳ ಬಾಲಕರ ~~[illegible]~~ ಜೊತೆಯಲ್ಲಿ ಕಾಡಿಗೆ ಹೋಗುತ್ತಿದ್ದನು. ಒಂದು ದಿನ, ದನಕರುಗಳ ಮಂದೆಯಲ್ಲಿ ಒಂದು ಗೂಳಿಯು ಹೊಸದಾಗಿ ಬಂದು ಸೇರಿಕೊಂಡಿರುವುದು ಕೃಷ್ಣನ ಕಣ್ಣಿಗೆ ಬಿತ್ತು. ಅದು ಇತರ ದನಗಳಂತೆ ಹುಲ್ಲನ್ನು ಮೇಯದೆ, ಕೃಷ್ಣನನ್ನೇ ದುರುಗುಟ್ಟಿ ನೋಡುತ್ತಾ, ಕಾಲುಗಳಿಂದ ನೆಲವನ್ನು ಕೆರೆಯುತ್ತಾ, ಬುಸುಗುಟ್ಟುತ್ತಾ ಅವನ ಮೇಲೆ ಬೀಳಲು ನುಗ್ಗಿ ಬಂತು. ಕೃಷ್ಣನು ಅದರ ಕೊಂಬುಗಳನ್ನು ಹಿಡಿದು, ಆಡಿಸಿ, ಕುಟ್ಟಿ, ಹಣ್ಣಾಗಿ ಕೊಂದು ಹಾಕಿದನು. ಇದು ವೃಷಭಾಸುರವಧೆಯ ಕತೆ.

"ದನಕರುಗಳನ್ನು ಕಾಪಾಡಿದವನು" — ನಂದಗೋಕುಲವನ್ನೇ ನಿರ್ನಾಮ ಮಾಡಿಬಿಡುವೆನೆಂಬ ದೇವೇಂದ್ರನ ಕಡುಕೋಪದ ಪರಿಣಾಮವಾದ ಬಿರುಮಳೆಯನ್ನು ತಡೆಯಲು ಬಾಲಕೃಷ್ಣನು ಗೋವರ್ಧನಗಿರಿಯನ್ನೇ ಕೊಡೆಯಂತೆ ಎತ್ತಿ ಹಿಡಿದು, ಅದರಡಿಯಲ್ಲಿ ಗೋವುಗಳನ್ನು, ಗೋವಳರನ್ನು ರಕ್ಷಿಸಿದ ಕತೆ ಇದು. ಭಗವಂತನು ಪರಮೋಪಕಾರಿ.

ಆಳ್ವಾರರು ಹೇಳುತ್ತಾರೆ: ದೇವತೆಗಳಿಂದ ಗೋವುಗಳವರೆಗೆ ಎಲ್ಲ ಆಶ್ರಿತರನ್ನು ರಕ್ಷಿಸುವ (ರಕ್ಷಿಸಿದ) ಸ್ವಾಮಿಯನ್ನು ನಿನ್ನೆಯ ದಿನ ನಾನು ತಿರುಕ್ಕೋವಲೂರ್ ಕ್ಷೇತ್ರದಲ್ಲಿ ದರ್ಶನ ಮಾಡಿದೆ. ಆ ಸ್ವಾಮಿಯನ್ನೇ ಇಂದು ತಿರುವೆಕ್ಕಾ ದಲ್ಲಿ ನೋಡ ~~[illegible]~~ ಹೋಗುತ್ತೇನೆ.

7. கூந்தலார் மகிழ் கோவலனாய், வெண்ணெய்
மாந்தழுந்தையில் ~~[illegible]~~ கண்டு மகிழ்ந்து போய்,
பாந்தட் பாழியில் பள்ளி விரும்பிய,
வேந்தனைச் சென்று காண்டும் வெஃ காவுளே.

ಕೂನ್ದಲಾರ್ ಮಹಿಳ್ ಕೋವಲನಾಯ್, ವೆಣ್ಣೆಯ್

(ಕಣ್ಣು) (10)

ಮೂನ್ದಳುನ್ದೈಯಿಲ್ ಮಂಡಲೂನ್ದು ಪೋಯ್,
ಪಾನ್ದಟ್ಟೂಳಿಯಿಲ್ ಪಳ್ಳಿವಿರುಮ್ಬಿಯ,
ವೇನ್ದನ್ದೈ ಚ್ಚೆನ್ರು ಕಾಣ್ಬಮ ವೇದ್ಕಾವುಳೇ.

ಕೂನ್ದಲಾರ್ கூந்தலார் = ಸುಂದರವಾದ ಕೇಶಗಳುಳ್ಳವರು, ಮಂಡಲೂ மகிழ் = ಹರ್ಷಿಸುವಂಥ, ಕೋವಲನ್ ಆಯ್ கோவலன் ஆய் = ಗೋವಳನಾಗಿ, ವೆಣ್ಣೆಯ್ வெண்ணெய் = ಬೆಣ್ಣೆಯನ್ನು, ಮಾನ್ದ மாந்த = ಉಂಡು ಅನುಭವಿಸುವುದನ್ನು. ಅಳುನ್ದೈಯಿಲ್ அழுந்தையில் = ತಿರುವಳುನ್ದೂರ್ ಕ್ಷೇತ್ರದಲ್ಲಿ, ಕಣ್ಡು கண்டு = ದರ್ಶನ ಮಾಡಿ, ಮಂಡಲೂನ್ದು மகிழ்ந்து = ಹರ್ಷಿಸಿ, ಪೋಯ್ போய் = ಹೋಗಿ, ಪಾನ್ದಳ್ பாந்தள் = ಸರ್ಪದ, ಪಾಳಿಯಿಲ್ பாழியில் = ಹಾಸಿಗೆಯಲ್ಲಿ, ಪಳ್ಳಿ ~~[illegible]~~ ಪಳ್ಳಿ = ಮಲಗಿ, ವಿರುಮ್ಬಿಯ விரும்பிய = ಆಶಿಸಿದ (ಹರ್ಷಿಸಿದ), ವೇನ್ದನ್ದೈ வேந்தனை = ದೇವೇಶ್ವರನನ್ನು, ಶೆನ್ರು சென்று = ಹೋಗಿ, ಕಾಣ್ಬಮ காண்டும் = ನೋಡುತ್ತೇವೆ, ವೇದ್ಕಾವುಳೇ வெஃகாவுளே = ತಿರುವೇದ್ಕಾವಿ ಕ್ಷೇತ್ರದಲ್ಲಿಯೇ.

ಸುಂದರವಾದ ಕೇಶಗಳುಳ್ಳವರು ಹರ್ಷಿಸುವಂಥ ಗೋವಳನಾಗಿ, ಬೆಣ್ಣೆಯನ್ನುಂಡು ಅನುಭವಿಸುವುದನ್ನು ತಿರುವಳುನ್ದೂರ್ ಕ್ಷೇತ್ರದಲ್ಲಿ ದರ್ಶನ ಪಡೆದು, ಬಳಿಕ, ಸರ್ಪದ ಹಾಸಿಗೆಯಲ್ಲಿ ಮಲಗಿ ಆಶಿಸಿದ (ಹರ್ಷಿಸಿದ) ದೇವೇಶ್ವರನನ್ನು ಹೋಗಿ ತಿರುವೇದ್ಕಾವಿ ಕ್ಷೇತ್ರದಲ್ಲಿ ಕಾಣ ಹೋಗುತ್ತೇನೆ. (7)

ಸುಂದರವಾದ ಕೇಶಗಳುಳ್ಳವರು ಗೋಪಿಯರು. ಅವರ ಕಣ್ಮಣಿಯಾಗಿ ಮೆರೆದವನು ಶ್ರೀಕೃಷ್ಣನು. ಅವನು ಗೋವಳಬಾಲಕನಾಗಿ ಅವರು ಕೇಳದೆ ಗೋಪಿಯ ಮನೆಗಳಲ್ಲಿ ಯಾವ ಮಾಯದಿಂದಲೋ ~~[illegible]~~ ಭಗವಂತನೇ ಕಳ್ಳ ಬೆಣ್ಣೆಯನ್ನುಂಡು ಹರ್ಷಿಸಿದನು. ಶಯನನಾಗಿ ಯೋಗನಿದ್ದೆಯನ್ನು ಅನುಭವಿಸಲು ಆಶಿಸಿ, ಹರ್ಷಿಸಿದನು.

ಆಳ್ವಾರರು ಹೇಳುತ್ತಾರೆ: ನಿನ್ನೆಯ ದಿನ ನಾನು ತಿರುವಳುನ್ದೂರಿನಲ್ಲಿ ಆತ್ಮಾಮಿಯ ದರ್ಶನ ಪಡೆದು ಹರ್ಷಿಸಿದೆ. ಇಂದು ತಿರುವೇದ್ಕಾವಿಯಲ್ಲಿ ಸ್ವಾಮಿಯನ್ನು ಕಾಣ ಹೋಗುತ್ತೇನೆ.

8. பத்தராவியைப்பான் மதியை, அணிக்

தொத்தை மாலிருஞ்சோலைத் தொழுதுபோய்,

முத்தினை மணியை மணிமாணிக்க

வித்தினை, சென்று விண்ணகர்க் காண்டுமே.

ಪತ್ತರಾವಿಯೈ ಪ್ಪಾನ್ ಮದಿಯೈ, ಅಣಿ
ತ್ತೊತ್ತೈ ಮಾಲಿರುಂಜೋಲೈತ್ತೊ ಳುದು ಪೋಯ್,
ಮುತ್ತಿನೈ ಮಣಿಯೈ ಮಣಿ ಮಾಣಿಕ್ಕ
ವಿತ್ತಿನೈ, ಶೆನ್ರು ವಿಣ್ಣಗರ್ ಕ್ಕಾಣ್ಡುಮೇ.

ಪತ್ತರ ಪತ್ತர் = ಭಕ್ತರ, ಆವಿಯೈ ஆவியை = ಪ್ರಾಣವನ್ನು,
ಪಾಲ್ ಮದಿಯೈ பால் மதியை = ಹಾಲುಚಂದ್ರನನ್ನು (ಪೂರ್ಣಚಂ
ದ್ರನನ್ನು), ಅಣಿ ತೊತ್ತೈ அணி தொத்தை = ಸುಂದರವಾದ ಹಾರ
ವನ್ನು, ಮಾಲಿರುಂಜೋಲೈ மாலிருஞ்சோலை = ತಿರುಮಾಲಿರುಂ
ಜೋಲೈ ಕ್ಷೇತ್ರದಲ್ಲಿ, ತೊಳುದು தொழுது = ನಮಸ್ಕರಿಸಿ,
ಪೋಯ್ போய் = ಹೋಗಿ, ಮುತ್ತಿನೈ முத்தினை = ಮುತ್ತಿನಂ
ಥವನನ್ನು, ಮಣಿಯೈ மணியை = ನೀಲಮಣಿಯಂಥವನನ್ನು,
ಮಣಿ ಮಾಣಿಕ್ಕ ಮಣಿ மாணிக்கம் = ಶ್ರೇಷ್ಠವಾದ ಮಾಣಿ
ಕ್ಯವನ್ನು, ವಿತ್ತಿನೈ வித்தினை = ಜಗತ್ಕಾರಣನನ್ನು, ಶೆನ್ರು
சென்று = ಹೋಗಿ, ವಿಣ್ಣಗರ್ விண்ணகர் = ತಿರುವಿಣ್ಣಗರ್
ಕ್ಷೇತ್ರದಲ್ಲಿ, ಕಾಣ್ಡುಮೇ காண்டுமே = ಕಂಡಿದ್ದೇನೆ.

ಭಕ್ತರ ಪ್ರಾಣವನ್ನು, ಹಾಲುಚಂದ್ರನನ್ನು, ಸುಂದರವಾದ ಹಾರವನ್ನು,
ತಿರುಮಾಲಿರುಂಜೋಲೈ ಕ್ಷೇತ್ರದಲ್ಲಿ ನಮಸ್ಕರಿಸಿ ಹೋಗಿ, ಮುತ್ತಿ
ನಂಥವನನ್ನು, ನೀಲಮಣಿಯಂಥವನನ್ನು, ಶ್ರೇಷ್ಠವಾದ ಮಾಣಿ
ಕ್ಯವನ್ನು, ಜಗತ್ಕಾರಣನನ್ನು, ಹೋಗಿ ತಿರುವಿಣ್ಣಗರ್ ಕ್ಷೇತ್ರದಲ್ಲಿ (8)
ಕಂಡಿದ್ದೇನೆ.

ಭಕ್ತರಿಗೆ ಭಗವಂತನೇ ಪ್ರಾಣವಾಗಿರುವನೋ, ಭಕ್ತರನ್ನೇ ತನ್ನ
ಪ್ರಾಣವಾಗಿ ಉಳ್ಳವನೋ? ಎರಡೂ ಒಪ್ಪುತ್ತ ಮಾತೇ! ಭಕ್ತರಲ್ಲಿ ಭಗ
ವಂತನಿಗೆ ಬಹಳ ವಾತ್ಸಲ್ಯ. ತನ್ನ ಪ್ರಾಣಕ್ಕೇ ಅವರು ಸಮನೆಂದು ಭಾವನೆ.

ಹಾಲು ಚಂದ್ರ – ಎಂದರೆ, ಕಳಂಕರಹಿತನಾದ ದಯಾಳು ತಳ
ಳಂದ ಹೊಳೆಯುವ ಪೂರ್ಣಚಂದ್ರ. ಆಹ್ಲಾದಕರನಾದವನು. ಹಾಗೆಯೇ
ಭಗವಂತ. ಕಾಂತಿಯುಳ್ಳ ಅಪೂರ್ವ ಸೌಂದರ್ಯದಿಂದಲೂ, ತೇಜಸ್ಸಿನಿಂ
ದಲೂ ಹೊಳೆಯುತ್ತಾ, ಎಲ್ಲರ ಮನದಲ್ಲಿಯೂ ಆನಂದವನ್ನು ಉಕ್ಕಿಸು
ತ್ತಿರುವವನು, ಸ್ವಾಮಿ.

ಮುತ್ತು, ಇಂದ್ರನೀಲಮಣಿ, ರತ್ನಗಳು – ಬಹಳ ಬೆಲೆಬಾ
ಳುವ ವಸ್ತುಗಳು. ಅವುಗಳ ಅಂದದಿಂದಲೂ ಹೊಳಪಿನಿಂದಲೂ ಮೆರೆಯು
ತ್ತವೆ. ಭಗವಂತನನ್ನು ಇವುಗಳ ಒಂದೊಂದಕ್ಕೂ ಹೋಲಿಸಿ ವರ್ಣಿ
ಸಲಾಗಿದೆ. ಎಲ್ಲಕ್ಕೂ ಆದಿಯಾಗಿ, ಜಗತ್ಕಾರಣನಾಗಿ, ಸೃಷ್ಟಿಗೆ ಬೀಜವಾಗಿ

ಇರುವ ಪ್ರಾವೀಣ್ಯವನ್ನು, ಅವನ ದೃಷ್ಟಿಯಲ್ಲಿ ಯಾವ ವಸ್ತುವಿಗೆ ಸಾಟಿ ಯೆನ್ನೋಣ? ಯಾ ಪದಾರ್ಥಕ್ಕೆ ಹೋಲಿಸಬೇಕೋಣ?

ಆಳ್ವಾರರು ಹೇಳುತ್ತಾರೆ: ವರ್ಣಿಸಿ ವಿವರಿಸಲು ಸಾಧ್ಯವಿಲ್ಲದಷ್ಟು ಸುಂದರಾಕರ್ಷಕವಾದ, ಭಕ್ತರನ್ನೇ ತನ್ನ ಪ್ರಾಣವನ್ನಾಗಿ ಭಾವಿಸಿರುವ, ಪರಮೋಪಕಾರಿಯಾದ ಭಗವಂತನನ್ನು ನಾನು ನಿನ್ನೆಯ ದಿನ ತಿರುಮಾಲಿರುಂಜೋಲೈ ಕ್ಷೇತ್ರದಲ್ಲಿ ನಮಸ್ಕರಿಸಿದೆ. ಇಂದು, ಜನಸ್ತೋಮವಾದ ಆ ಪ್ರಾವೀಣ್ಯವನ್ನು ತಿರುಮಣ್ಣಾದರ್ ಕ್ಷೇತ್ರದಲ್ಲಿ ದರ್ಶನ ಮಾಡಿಕೊಳ್ಳುತ್ತಿದ್ದೇನೆ.

1. ~~[illegible]~~

கம்பமா களிறஞ்சிக் கலங்க, ஓர்
கொம்பு கொண்ட குறை கழற் கூத்தனை,
கொம்புலாம் பொழில் கோட்டியூர்க் கண்டு போய்,
நம்பனைச் சென்று காண்டும் நாவாயுளே.

ಕಮ್ಬಮಾ ಕಳಿಱಂಜಿಕ್ಕಲಙ್ಗ, ಓರ್
ಕೊಮ್ಬು ಕೊಣ್ಡ ಕುಱೈಕಳಲ್ ಕೂತ್ತನೈ,
ಕೊಮ್ಬುಲಾಮ್ ಪೊಳಿಲ್ ಕೋಟ್ಟಿಯೂರ್ಕ್ಕಣ್ಡು ಪೋಯ್,
ನಮ್ಬನೈಚ್ಚೆನ್ಱು ಕಾಣ್ಡುಮ್ ನಾವಾಯುಳೇ.

ಕಮ್ಬಮ್ கம்பம் = ನಡುಕವನ್ನು ತರುವ, ಮಾ மா = ಬಲುದೊಡ್ಡ, ಕಳಿಱು களிறு = ಆನೆಯು, ಅಂಜಿ அஞ்சி = ಭಯಪಟ್ಟು, ಕಲಙ್ಗ கலங்க = ದಿಗ್ಭ್ರಮೆಗೊಂಡಂತೆ, ಓರ್ ஓர் = (ಅದರ) ಒಂದು, ಕೊಮ್ಬು கொம்பு = ದಂತವನ್ನು, ಕೊಣ್ಡ கொண்ட = ಮುರಿದುಹಾಕಿದವನನ್ನು, ಕುಱೈ ಕಳಲ್ குறை கழல் = ಸದ್ದು ಮಾಡುವ ಕಾಲಂದುಗೆಗಳನ್ನು ಧರಿಸಿದವನನ್ನು, ಕೂತ್ತನೈ கூத்தனை = ಚಿತ್ರವಿಚಿತ್ರವಾಗಿ ನರ್ತಿಸುವವನನ್ನು, ಕೊಮ್ಬು கொம்பு = ಕೊಂಬೆಗಳು, ಉಲಾಮ್ உலாம் = ದಟ್ಟ ಬೆಳೆದಿರುವ, ಪೊಳಿಲ್ பொழில் = ತೋಪುಗಳ, ಕೋಟ್ಟಿಯೂರ್ கோட்டியூர் = ತಿರುಕ್ಕೋಟ್ಟಿಯೂರಿನಲ್ಲಿ. ಕಣ್ಡು கண்டு = ದರ್ಶನ ಪಡೆದು, ಪೋಯ್ போய் = ಹೋಗಿ, ನಮ್ಬನೈ நம்பனை = ನಂಬತಕ್ಕ (ನಂಬಬೇಕಾದ)ವನನ್ನು, ಚೆನ್ಱು சென்று = ಹೋಗಿ, ಕಾಣ್ಡುಮ್ காண்டும் = ಕಾಣಲಿರುವೆವು, ನಾವಾಯುಳೇ நாவாயுளே = ತಿರುನಾವಾ ಕ್ಷೇತ್ರದಲ್ಲಿಯೇ.

ನಡುಕವನ್ನುಂಟುಮಾಡುವ (ಭಯಂಕರವಾದ) ಬಲುದೊಡ್ಡ ಆನೆಯು ಭಯಪಟ್ಟು ದಿಗ್ಭ್ರಮೆಗೊಂಡಂತೆ ಅದರ ಒಂದು ದಂತವನ್ನು ಮುರಿದುಹಾಕಿದವನನ್ನು, ಸದ್ದುಮಾ

ದುವ ಕಾಲಂದುಗೆಗಳನ್ನು ಧರಿಸಿರುವವನನ್ನು, ಚಿತ್ರವಿಚಿತ್ರವಾಗಿ ನರ್ತಿಸುವವನನ್ನು, ಕೊಂಬೆಗಳು ಹರಡಿ ಬೆಳೆಯುತ್ತಿರುವ ತೋಪುಗಳುಳ್ಳ ತಿರುಕ್ಕೋಟ್ಟಿಯೂರಿನಲ್ಲಿ ದರ್ಶನ ಪಡೆದು, ಹೋಗಿ, ನಂಬಿಕಸ್ಥ (ನಂಬಬೇಕಾದ)ವನನ್ನು ಹೋಗಿ ಕಾಣ (9)
ಬರುವುದು ತಿರುನಾವಾ ಕ್ಷೇತ್ರದಲ್ಲಿ.

ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದ್ದಾಗ, ಅವನಿಗೆ ಶತ್ರುವಾದ ಕಂಸನಿಂದ ಪ್ರೇರಿತವಾದ ಆನೆಯೊಂದರಿಂದ, ಬಾಲಕೃಷ್ಣನನ್ನು ಮಥುರಾಪುರಿಯ ಬಾಗಿಲಲ್ಲೇ ಕುಳ್ಳಿಸಿ ಕೊಲ್ಲಿಸುವ ದಂಭವು ನಡೆಯಿತು. ಆ ಕ್ರೂರ ಕೆಲಸಕ್ಕಾಗಿಯೇ ಕಾದುನಿಂತಿದ್ದ ಬಲಿಷ್ಠವೂ ಭಯಂಕರವೂ ಆದ ಕುವಲಯಾಪೀಡವೆಂಬ ಬಲು ದೊಡ್ಡ ಆನೆಯನ್ನು ಶ್ರೀಕೃಷ್ಣನು (ಬಾಲಕೃಷ್ಣನು) ಎದುರಿಸಿ, ಅದರ ಒಂದು ದಂತವನ್ನು ಮುರಿದು ಕೊಂಡು ಅದರಿಂದಲೇ ಅದನ್ನು ಮುಗಿಸಿಬಿಟ್ಟದ್ದು ಇಲ್ಲಿಯ ಕಥೆ.

ಭಗವಂತನ ಕಾಲಿನಲ್ಲಿ ವೀರಲಾಂಛನವಾದ ಕಾಲಂದುಗೆ ಇದೆಯಂತೆ. ಅದು ಸದ್ದು ಮಾಡಿದರೆ, ಎದುರಾಳಿಯ ಎದೆ ನಡುಗಿ ಹೋಗುವುದಂತೆ. ಇದು ನಿಜವೆಂಬುದು

ಶ್ರೀಕೃಷ್ಣಾವತಾರದಲ್ಲಿ ನಡೆಸಿದ ನರ್ತನವನ್ನು ಎನಿಸುತ್ತದೆ. ಕಾಳಿಯನ ಹೆಡೆಯ ಮೇಲೆ ಸ್ವಾಮಿಯು (ಬಾಲಕೃಷ್ಣನು) ನರ್ತಿಸಿದ ಬಗೆಬಗೆಯ ರೀತಿಯನ್ನು ದೇವತೆಗಳೆಲ್ಲರೂ ಕಂಡು, ನಲಿದು, ಹೊಗಳಿದರು. ಗೋಪಿಯರೊಡನೆ ಕೂಡಿ ರಾಸಕ್ರೀಡೆಯಾಡಿದಾಗ ಬಾಲಕೃಷ್ಣನ ಕುಣಿತವು ಪ್ರಸಿದ್ಧಿಯು ಪಡೆದದ್ದು.

ಆತ್ಮೋದ್ಧಾರಕ್ಕಾಗಿ ಭಗವಂತನನ್ನು ನಂಬಲೇಬೇಕು. 'ನಂಬಿದವರ ಕೈಬಿಡೆನು' ಎಂಬುದು ಸ್ವಾಮಿಯ ದೃಢ ನಿರ್ಧಾರ. ಆದ್ದರಿಂದ ಭಗವಂತನು ನಂಬಿಕಸ್ಥನು, ನಂಬಬೇಕಾದವನು.

ಆಳ್ವಾರರು ಹೇಳುತ್ತಾರೆ! ಪರಮ ಸಮರ್ಥನೂ, ಅಪ್ರಮೇಯ ವೀರನೂ, ನಂಬಲೇಬೇಕಾದವನೂ ಆದ ಸ್ವಾಮಿಯನ್ನು ನಿನ್ನೆಯ ದಿನ ನಾನು ತಿರುಕ್ಕೋಟ್ಟಿಯೂರಿನಲ್ಲಿ ಕಂಡೆ. ಇಂದು ತಿರುನಾವಾ ಕ್ಷೇತ್ರದಲ್ಲಿ ಕಾಣಲಿದ್ದೇನೆ.

10. பெற்றமாளியைப் பேரில் மணாளனை,
கற்றநூல் கலிகன்றியுரைசெய்த,
சொற்றிறமிவை சொல்லிய தொண்டர்கட்கு,
அற்றமில்லை அண்டமவர்க்காட்சியே.

ಪೆಟ್ರಮಾಳಿಯೈ ಪ್ಪೇರಿಲ್ ಮಣಾಳನೈ,
ಕಟ್ರನೂಲ್ ಕಲಿಕನ್ರಿಯುರೈಶೆಯ್ದ,
ಶೊಲ್ ತಿರಮಿವೈ ಶೊಲ್ಲಿಯ ತೊಂಡರ್ಕಟ್ಕು,
ಅಟ್ರಮಿಲ್ಲೈ ಅಣ್ಡಮವರ್ಕ್ಕಾಟ್ಚಿಯೇ.

ಪೆಟ್ರಮ್ பெற்றம் = ಗೋವುಗಳನ್ನು, ಆಳಿಯೈ ஆளியை = ಆಳುವವನನ್ನು, ಪೇರಿಲ್ பேரில் = ತಿರುಪ್ಪೇರ್ ಕ್ಷೇತ್ರದಲ್ಲಿ ನೆಲಸಿರುವ, ಮಣಾಳನೈ மணாளனை = ಸ್ವಾಮಿಯನ್ನು, ಕಟ್ರನೂಲ್ கற்றநூல் = ವೇದ

ಶಾಸ್ತ್ರಗಳನ್ನು ಕಲಿತ, ಕಲಿಕನ್ರಿ கலிகன்றி = ಕಲಿಧ್ವಂಸಿಯು, ಉರೈಶೆಯ್ದ உரைசெய்த = ಹಾಡಿ ಹೇಳಿದ, ಶೊಲ್ சொல் = ಮಾತಿನ, ಕಿರಾಮ கிராமம் = ರಾಗವನ್ನು (ಧಾಟಿಯನ್ನು), ಕುರಿತ, ಇವ್ವೈ இவை = ಇವುಗಳನ್ನು, ಶೊಲ್ಲುಯ சொல்லிய = ಹೇಳುವ, ತೊಣ್ಡರ್ಕಟ್ಕು தொண்டர்கட்கு = ಭಕ್ತರಿಗೆ, ಅಟ್ರಮ್ அற்றம் = ಅಳಿವು (ಎಂಬುದು), ಇಲ್ಲೈ இல்லை = ಇಲ್ಲ, ಅಣ್ಡಮ್ அண்டம் = ಜಗತ್ತು, ಅವರ್ಕ್ಕು அவர்க்கு = ಅವರಿಗೆ, ಆಟ್ಚಿಯೇ ஆட்சியே = ಆಳ್ವಿಕೆಯೇ (ಉಂಟಾಗುತ್ತದೆ).

ಗೋವುಗಳನ್ನು ಆಳುವವನನ್ನು, ತಿರುಪ್ಪೇರ್ ಕ್ಷೇತ್ರದಲ್ಲಿ ನೆಲಸಿರುವ ಸ್ವಾಮಿಯನ್ನು, ವೇದಶಾಸ್ತ್ರಗಳನ್ನು ಕಲಿತ ಕಲಿಧ್ವಂಸಿಯು ರಚಿಸಿ ಹಾಡಿದ ಮಾತಿನ ಧಾಟಿಯನ್ನು ಕುರಿತ ಇವುಗಳನ್ನು (ಈ ಪಾಶುರಗಳನ್ನು) ಹೇಳುವ ಭಕ್ತರಿಗೆ ಅಳಿವೆಂಬುದೇ ಇಲ್ಲ. ಅವರಿಗೆ ಜಗತ್ತಿನ ಆಳ್ವಿಕೆ (10)
ಯೇ ಲಭಿಸುತ್ತದೆ.

ಈ ತಿರುಮಾಲೆ ಇತರ ತಿರುಮೊಳಿಗಳಂತಲ್ಲ. ಒಂದೊಂದು ಪುಣ್ಯ ಕ್ಷೇತ್ರಕ್ಕೆ, ಅದರ ವರ್ಣನೆಗೆ, ಅಲ್ಲಿ ನೆಲಸಿರುವ ಭಗವಂತನ ವರ್ಣನೆಗೆ ಮೀಸಲಾಗಿತ್ತು. ಇದರಲ್ಲಿ ಒಂದೊಂದು ಪಾಶುರದಲ್ಲಿಯೂ ಎರಡೆರಡು ಪುಣ್ಯಕ್ಷೇತ್ರಗಳ ಹೆಸರು ಬಂದಿತಾದರೆ. ಭಗವಂತನ ಗುಣಕಥನದ ಜೊತೆಗೆ ಈ ಪುಣ್ಯಕ್ಷೇತ್ರಗಳ ಹೆಸರನ್ನು ಹೇಳಲಾಗಿದೆ. "ನಿನ್ನೆಯ ದಿನ ಇಂಥ ಒಂದು ಕ್ಷೇತ್ರದಲ್ಲಿ ಸ್ವಾಮಿಯನ್ನು ಕಂಡೆ. ಇಂದು, ಇಂಥ ಇನ್ನೊಂದು ಕ್ಷೇತ್ರದಲ್ಲಿ ಅವನನ್ನೇ (ಬೇರೆ ರೀತಿಯಲ್ಲಿ, ಬೇರೆ ಹೆಸರಿನಲ್ಲಿ, ಬೇರೆಗಾನದಲ್ಲಿ) ಕಾಣುತ್ತೇನೆ" — ಎಂಬುದು ತಿರುಮಾಲೆಯ ಒಂದೊಂದು ಪಾಶುರದ ಪಲ್ಲವಿಯಾಗಿದೆ. ಭಗವಂತನ ವಿವರಣೆಯಲ್ಲಿ ಸುಂದರವಾದವನ್ನು ಕೆಲವನ್ನು ಇಲ್ಲಿ ನಿದರ್ಶನಕ್ಕಾಗಿ ನೀಡಬಹುದು ಎನಿಸುತ್ತದೆ. "ಭಗವಂತನು ನಾಟಿಯಿಲ್ಲದ ಆತ್ಮೀಯ ಬಂಧು. ಅವನು ನಮ್ಮ ಪ್ರಾಣದ ಪ್ರಾಣ, ಆತ್ಮದ ಆತ್ಮ. ಅವನು ಬೆಳಕಿಲ್ಲದ ನಿಜವಸ್ತು, ಪರಂಜ್ಯೋತಿ ಸ್ವರೂಪನು. ಪರಿಶುದ್ಧನು, ಪವಿತ್ರನು. ಅದ್ಭುತನು. ಆಶ್ರಿತರ ಸಂಕಟವನ್ನು ದಹಿಸುವವನು. ಅನುಪಮ ಸುಂದರ. ಪರಮ ಉದಾರ. . . . ." ಇತ್ಯಾದಿ ಯಾವ ಕ್ಷೇತ್ರಕ್ಕೆ ಹೋದರೂ, ಯಾವ ರೂಪದಿಂದ ಯಾವ ಹೆಸರಿನಿಂದ ಸ್ವಾಮಿಯನ್ನು ಪೂಜಿಸಲಿ, ಎಲ್ಲವೂ ಒಬ್ಬನೇ ಆಗಿರುವ ಸರ್ವೇಶ್ವರನಿಗೆ ಅನ್ವಯವಾಗುತ್ತವೆ. ಅವನು ಎಲ್ಲ ಭಕ್ತರಿಗಾಗಿ ಉದಾರನಾಗಿ ಬೇರೆಬೇರೆ ಕ್ಷೇತ್ರಗಳಲ್ಲಿ ನೆಲಸಿದ್ದಾನೆ. ಅವನ ತಿರುವಡಿಗಳನ್ನು ಆಶ್ರಯಿಸುವುದರಿಂದಲೇ ಉದ್ಧಾರವಾಗುವುದು.

ತಿರುಮಾಲೆಯ ಕಡೆಯ ಪಾಶುರವಾದ ಇದರಲ್ಲಿ ಭಕ್ತರ ಉದ್ಧಾರವನ್ನು ಕುರಿತು ಸುಲಭವಾದ ಒಂದು ಮಾರ್ಗವನ್ನು ಹೇಳಲಾಗಿದೆ.

GaneshSrinivasan

ಹೇಳಿರುವವನು ಕಲಿಯನ್ನು ಜಯಿಸಿರುವವನು – ಕಲಿಧ್ವಂಸಿ. ಏಕೆಂದರೆ, ಕಲಿಯುಗದ ಎಲ್ಲ ಬಗೆಯ ದುರ್ವ್ಯಾಪಾರಗಳನ್ನು ಕಂಡುಕೊಂಡು, ಅವುಗಳನ್ನು ಜಯಿಸುವ ಉತ್ತಮವೂ ಸರಳವೂ ಆದ ಮಾರ್ಗವನ್ನು ತೋರಿಸಿದ ಶ್ರೇಷ್ಠನು.

ಕಲಿಯನು 'ವೇದಶಾಸ್ತ್ರವನ್ನು ಕಲಿತವನು' ಎಂದು ರೀತಿಯಲ್ಲಿ ಹೇಳಲಾಗದು. ವಾಸ್ತವವಾಗಿ, ಅವನು ವೇದಶಾಸ್ತ್ರಗಳನ್ನು ಅಭ್ಯಾಸ ಮಾಡಿದವನಲ್ಲ. ಭಗವಂತನಿಂದಲೇ ನೇರವಾಗಿ ತಿರುಮಂತ್ರದ ಉಪದೇಶವನ್ನು ಪಡೆದವನು, ಅಷ್ಟೇ. ಬಳಿಕ, ದೇಶದಲ್ಲಿ ಅರ್ಚಾಮೂರ್ತಿಯು ನೆಲಸಿರುವ ಎಲ್ಲ ದಿವ್ಯಕ್ಷೇತ್ರಗಳನ್ನೂ ಬಿಡದೆ ಸಂದರ್ಶಿಸಿ, ಅಲ್ಲಿನ ಮಹಿಮೆಯ ಗುಣಗಾನ ಮಾಡಿ, ತಿರುವಡಿಗಳನ್ನು ಪೂಜಿಸಿ, ಉದ್ಧಾರಗೊಂಡವನು. ಅವನ ಮಾತುಗಳೆಲ್ಲವೂ ಸಾರವತ್ತಾಗಿ, ವೇದಶಾಸ್ತ್ರಗಳ ಸಾರವಾದವೇ ಆಗಿವೆ.

ತಾನು ಹೇಗೆ ಈ ಜನ್ಮದಲ್ಲಿಯೇ ಭಾಗ್ಯವಶಾತ್ ಉದ್ಧಾರಮಾರ್ಗವನ್ನು ಕಂಡುಕೊಂಡನೋ ಅದನ್ನು ಕಲಿಯನು ಮುಚ್ಚಿಡದೆ, ಎಲ್ಲ ಭಕ್ತರ ಉದ್ಧಾರಕ್ಕೋಸ್ಕರ ಲಂಬ ೩೦ ಯಾ ಕೆಯಿಂದ ಪಾಶುರಗಳ ಮೂಲಕ ತನ್ನ ಮಾರ್ಗವನ್ನು ಬಿಚ್ಚಿ ಹೇಳಿದನು. ಅದೇ ಪಾಶುರಗಳ ಧಾಟಿ.

ಕಲಿಯನಂತೆ ಸುಲಭವೂ ಸರಳವೂ ಆದ ಉಜ್ಜೀವನ ಮಾರ್ಗವನ್ನು ವಿಸ್ತಾರವಾಗಿ ವೇದಶಾಸ್ತ್ರಗಳನ್ನು ಓದಿದ ತಿಳಿದವರು ತಿಳಿದುಬಲ್ಲರೇ ಎಂಬುದು ವಿವಾದಾರ್ಹ. ಈ ಪಾಶುರಗಳನ್ನು ಕಲಿತು, ಹಾಡಿ, ಅಭ್ಯಾಸ ಮಾಡಿದವರಿಗೆ "ಅಳಿವೇ ಇಲ್ಲ" ಎನ್ನಲಾಗದು. ಅವರು ಅಮರರಾಗುವುದು ವಾಸ್ತವ ಎಂದುಕೊಳ್ಳೋಣ. ಅಲ್ಲದೆ, ಅವರಿಗೆ "ಅಂಡದ ಆಳ್ವಿಕೆಯೂ" ಎಂದೂ ಹೇಳಲಾಗದು. 'ಅಂಡ' ಎಂಬುದಕ್ಕೆ "ಈ ಲೋಕ (ಭೂಲೋಕ), ಜಗತ್ತು, ಬ್ರಹ್ಮಾಂಡ" ಎಂದು ಅರ್ಥ ಬರುತ್ತದೆ. ಪಾಶುರಗಳನ್ನು ಅನುಷ್ಠಾನ ಮಾಡಿದವರು 'ಈ ಲೋಕದ ನಾಯಕರು', 'ಜಗತ್ತಿನ ಒಡೆಯರೋ, 'ಬ್ರಹ್ಮಾಂಡದ ನಾಯಕರೋ', ಅಥವಾ ಇವೆಲ್ಲದರ ಆಚೆಯಿರುವ ಪರಮಪದದ ನಾಯಕರೋ? ಇದೊಂದು ಬಗೆಯ ದ ವಿಷಯ. ಅಮರರಾದ ಬಳಿಕ ಅವರ ನೆಲೆಯಾದ ಪರಮಪದ ಅಲ್ಲಿ ಅವರು ಇತರ ಅನೇಕಾನೇಕ ಪ್ರಾಪ್ತಿಯಾಗುವುದು, ದಿಟ. ಅಮರರಿಗೆ ಒಡೆಯರಾಗಬಲ್ಲರೇ? ಅದು, ~~[illegible]~~ ಪರಮಪದನಿವಾಸಿತನಾದ ಭಗವಂತನಿಗೆ ಬಿಡಲಾಗುತ್ತದೆಯೇ? — ಹೀಗಿದೆ ಇದರ ಫಲಶ್ರುತಿ!

ಅಡಿಯನಡೆ: அடிவரவு: ಒರು ನಿ(ந), ಪೊನ್ பொன், ಮೇಲ್ವ செவில, ಕುಳತ್ತುವ துளக்கம், ಕುಡಲ್ಕ சுடலை. ವಾನ್ வாண், ಕೊನ್ದಲ் கூந்தல், ಮಾತ್ರ பக்தர், ಕಪ್ಪುವ கம்பம், ಕೀಳ್ವ பெற்றம், (ಇರಕ್ಕ இரக்கம்)

1/1/79.

2.1.79

— ಶ್ರೀಃ — (16) — ಶ್ರೀಯೈ ನಮಃ —

ಪೆರಿಯ ತಿರುಮೊಳಿ – ಪತ್ತನೆಯ ಪತ್ತ – ಎರಡನೆಯ ತಿರುಮೊಳಿ.

பெரிய திருமொழி – பத்தாம் பத்து – இரண்டாந்திருமொழி

2. ಇರಕ್ಕಮಿನ್ರಿ – இரக்கமின்றி.

1. இரக்கமின்றி யெங்கோன் செய்த தீமை
இம்மையே யெமக்கெய்திற்றுக் காணீர்,
பரக்கயாமின்றுரைத்தென்? இராவணன் பட்டனன்
இனியாவர்க்குரைக்கோம்?,
குரக்கு நாயகர்காள்! இளங்கோவே!
கோலவல்வில்லி ராமபிரானே!,
அரக்கராடழைப்பாரில்லை நாங்கள்
அஞ்சினோம் தடம்பொங்கத்தம்பொங்கோ.

ಇರಕ್ಕಮಿನ್ರಿ ಯೆಂಗೋನ್ ಶೆಯ್ದ ತೀಮೈ
ಇಮ್ಮೈಯೇ ಯೆಮಕ್ಕೆಯ್ದಿಟ್ರುಕ್ಕಾಣೀರ್,
ಪರಕ್ಕಯಾಮಿನ್ರುರೈತ್ತೆನ್? ಇರಾವಣನ್ ಪಟ್ಟನನ್
ಇನಿಯಾವರ್ಕ್ಕುರೈಕ್ಕೋಮ?
ಕುರಕ್ಕು ನಾಯಕರ್ಗಾಳ್! ಇಳಂಗೋವೇ!
ಕೋಲವಲ್ವಿಲ್ಲಿ ರಾಮಬಿರಾನೇ!
ಅರಕ್ಕರಾಡಳೈಪ್ಪಾರಿಲ್ಲೈ ನಾಂಗಳ್
ಅಂಜಿನೋಮ ತಡಮ ಪೊಂಗತ್ತಮ ಪೊಂಗೋ.

ಇರಕ್ಕಮ ಇನ್ರಿ இரக்கம் இன்றி = ಕರುಣೆ (ದಯೆ) ಯಿಲ್ಲದೆ,
ಎಮ ಕೋನ್ எம் கோன் = ನಮ್ಮ ಒಡೆಯನು, ಶೆಯ್ದ செய்த =
ಮಾಡಿದ, ತೀಮೈ தீமை = ಕೇಡು, ಇಮ್ಮೈಯೇ இம்மையே =
ಇದೇ ಜೀವನದಲ್ಲಿಯೇ, ಎಮಕ್ಕು எமக்கு = ನಮಗೆ, ಎಯ್ದಿಟ್ರುಕಾಣೀ
ರ್ எய்திற்று காணீர் = ಲಭಿಸಿತು ಕಂಡಿರಾ?, ಪರಕ್ಕ பரக்க =
ವಿವರವಾಗಿ, ಯಾಮ யாம் = ನಾನು, ಇನ್ರು இன்று = ಇಂದು
(ಈಗ), ಉರೈತ್ತು உரைத்து = ಹೇಳಿ, ಎನ್ என் = ಏನು ಫಲ?,
ಇರಾವಣನ್ இராவணன் = ರಾವಣನು, ಪಟ್ಟನನ್ பட்டனன் =
ನಾಶಹೊಂದಿದನು, ಇನಿ இனி = ಇನ್ನು, ಯಾವರ್ಕ್ಕು யாவர்க்கு =
ಯಾರಿಗೆ, ಉರೈಕ್ಕೋಮ உரைக்கோம் = ಹೇಳಿಕೊಳ್ಳುವೆವು?
ಕುರಕ್ಕು ನಾಯಕರ್ಗಾಳ್ குரக்கு நாயகர்காள் = ವಾನರನಾಯಕ
ರೇ, ಇಳಮ ಕೋವೇ இளம் கோவே = ಎಳೆಯ ದೊರೆಯೇ,
(ಯುವರಾಜನೇ), ಕೋಲಮ ಕோலம் = ಸುಂದರವಾದ, ವಲ್ ವல் =
ಬಲಿಷ್ಠವಾದ, ವಿಲ್ಲಿ வில்லி = ಬಿಲ್ಲುಗಾರನಾದ, ರಾಮಬಿರಾನೇ ராமபிரா

Garani Srinivasan

னோ = ಶ್ರೀರಾಮನೇ, ಅರಕ್ಕರ್ அரக்கர் = ರಾಕ್ಷಸರನ್ನು. ಆಡ ஆட = ಆಟಕ್ಕೆ (ಯುದ್ಧಕ್ಕೆ). ಅೞೈಪ್ಪಾರ್ அழைப்பார் = ಕರೆಯುವವರು, ಇಲ್ಲೈ இல்லை = ಇಲ್ಲವಾಯಿತು, ನಾಙ್ಗಳ್ நாங்கள் = ನಾವು, ಅಂಜಿನೋಮ್ அஞ்சினோம் = ಅಂಜಿಕೊಂಡಿದ್ದೇವೆ, ಕಡಮುಮ್ கூடம் = ಉರಿಯು (ಅಗ್ನಿಕುಂಡವು), ಪೊಙ್ಗತ್ತುಮ್ ಪೊಙ್ಗಿಡೇ பொங்கத்துமம் பொங்குகோ = ಹೆಚ್ಚಿದಷ್ಟೂ ಹೆಚ್ಚಲಿ! (ಉಕ್ಕಿ ಉಕ್ಕಿ ಪ್ರಜ್ವಲಿಸಲಿ)

ಕರುಣೆ, ಕನಿಕರಗಳಿಲ್ಲದ ನಮ್ಮ ಒಡೆಯನು ಮಾಡಿದ ಕೆಡಕು ಇದಲ್ಲವೆ, ನದಲ್ಲಿಯೇ ನಮಗೆ ಉಚ್ಚಿಸಿತು ಕಂಡಿರಾ? ಅದನ್ನೆಲ್ಲಾ ವಿವರವಾಗಿ ಇಲ್ಲಿ ಹೇಳಿ ಫಲವೇನು? ರಾವಣನು ನಾಶವಾದನು. ನಾವಿನ್ನು ಯಾರಲ್ಲಿ ಹೇಳಿಕೊಳ್ಳೋಣ? ವಾನರನಾಯಕರೇ, ಯುವರಾಜನೇ (ಎಳೆಯ ದೊರೆಯೇ), ಸುಂದರನಾದ ಬಲಿಷ್ಠನಾದ ಬಿಲ್ಲುಗಾರನಾದ ಶ್ರೀರಾಮನೇ, ರಾಕ್ಷಸರನ್ನು ಆಟಕ್ಕೆ (ಯುದ್ಧಕ್ಕೆ) ಕರೆಯುವವರು ಇಲ್ಲವಾಯಿತು. ನಾವು ಅಂಜಿಕೊಂಡಿದ್ದೇವೆ. ಉರಿಯು ಹೆಚ್ಚಲಿ ಹೆಚ್ಚಲಿ! ((ಅಗ್ನಿಕುಂಡವು ಉರಿಯಲಿ ಉರಿಯಲಿ)). (1)

ತಿರುಮಂಗೈ ಆಳ್ವಾರರಿಗೆ 'ಕವಿ' ಎಂಬುದೊಂದು ಬಿರುದು. ಅದಕ್ಕೆ ಒಂದು ನಿದರ್ಶನವೋ ಎಂಬಂತೆ ಈ ಪಾಶುರವಿದೆ. ಓದುತ್ತಿರುವಾಗಲೇ ಕರುಣೆ ಕನಿಕರಗಳನ್ನು ಹೊಮ್ಮಿಸುತ್ತದೆ. ವಿಷಯ ಪಾಡಲೇ ಎಲ್ಲರಿಗೂ ತಿಳಿದದ್ದೇ — ರಾವಣವಧೆ, ರಾಮವಿಜಯ. ಅದನ್ನು ಹೇಳಿರುವುದೋ ಎಷ್ಟು ಸೊಗಸಾಗಿ! ಎಷ್ಟು ಗಾಢವಾದ ಧರ್ಮಾರ್ಥಪೂರ್ಣದ ವಿಷಯವನ್ನು ಎಷ್ಟು ಸರಳ ಸಂಗ್ರಹವಾಗಿ ಇಲ್ಲಿ ಹೇಳಲಾಗಿದೆ! ಎಂಥ ಸುಂದರ ಸಾಹಿತ್ಯವಿದು!

ಬಹಳ ಉತ್ಕಟವಾದ ಪುಣ್ಯಪಾಪಗಳು ಇಲ್ಲಿಯೇ ತಮ್ಮ ಫಲವನ್ನು ಕೊಡುತ್ತವೆ — ಎಂಬುದು ಶಾಸ್ತ್ರವಚನ. ಈ ಮಾತಿನ ಸತ್ಯಾಂಶ ರಾವಣನಿಗೆ ತಪ್ಪದೆ ಅನ್ವಯಿಸುವುದು. ವಂಶದಲ್ಲಿ ಒಬ್ಬ ಹಿರಿಯಾಳು ಮಾಡಿದ ಪಾಪಕ್ಕೆ ಅವನ ವಂಶವೇ ಈಡಾಗಿ ಸಂಕಟಪಡಬೇಕಾಗುತ್ತದೆ ಎಂದು ತಿಳಿದವರ ಮಾತು. ರಾವಣನ ಪಾಪಕ್ಕೆ ರಾಕ್ಷಸವಂಶವೇ ನರಳಿ ನಾಶವಾಯಿತಷ್ಟೆ.

ಕರುಣೆ ಕನಿಕರಗಳಿಲ್ಲದೆ, ರಾವಣನು ಮಾಡಿದ ಒಂದು ಕೆಡಕಿನ ಫಲವಾಗಿ, ಅವನು ನಾಶವಾದ. ಅವನ ಜೊತೆಯಲ್ಲಿ ಅನೇಕಾನೇಕ ರಾಕ್ಷಸರೂ ಮಡಿದರು. ಎಷ್ಟೋ ಮಂದಿ ನಿರಪರಾಧಿಗಳು, ಏನೂ ಅರಿಯದ ಹೆಂಗಸರು ಮಕ್ಕಳು ಮುದುಕರು ಉಳಿದುಕೊಂಡರು. ಅವರು ಮಾಡಿದ್ದೇನು? ಅವರಿಗೇಕೆ ಈ ದುರ್ಗತಿ? ಈ ಸಂಕಟ? ಅವರ ಒಡೆಯನನ್ನು ಕಳೆದುಕೊಂಡರು. ಈಗ ಅವರ ಸಂಕಟವನ್ನು ಯಾರಲ್ಲಿ ಹೇಳಿಕೊಳ್ಳುವರು?

Garani Srinivasan

ಹೋಲಿಸು. ನೋರದಿರುವ ಅವರಿಗೆ ಈಗ ಶತ್ರು ವಿಷದ ~~...~~ ವಿಜಯಗಳಾ
ದ ನಾಯಕರೇ ಬೇಕೆ. ಅವರನ್ನೇ ಮರೆಹೊಗಬೇಕು! ಶತ್ರುಗಳಾದ
ರೇನು? ಅವರು ಧರ್ಮಿಷ್ಠರಲ್ಲವೇ? ನ್ಯಾಯ ನೀತಿಗಳನ್ನು ಬಿಟ್ಟ
ಅವರು ಹೋಲುವವರಲ್ಲವೆಂದು ಅವರ ಯುದ್ಧಕಾಲದ ನಡತೆಯಿಂದಲೇ
ತಿಳಿಯಲಿಲ್ಲವೇ? ತಮ್ಮ ರಾಜನ ತಮ್ಮನಾದ ವಿಭೀಷಣನ ಹಾಗೆ
ನೀವೂ ~~...~~ ಶ್ರೀರಾಮನನ್ನು ಮರೆಹೊಕ್ಕು ರಕ್ಷಣೆಯನ್ನು ಬೇಡುವ
ಬೇಡಿರಿ. ಇಲ್ಲವಾದರೆ, ಕಮನಿರುವ ಅಂಜಿಕೆಯಿಂದ ತಮ್ಮನ್ನು
ಬಿಡಿಸುವವರು ~~...~~ ಬೇರೆ ಯಾರಿದ್ದಾರೆ? — ಹೀಗೆಂದೆ, ಅಳಿದುಳಿದ
ರಾಕ್ಷಸರ ಮನಸ್ಸಿನ ಒಳ-ಸಂಕಟ.

ಆ ರಾಕ್ಷಸರಿಗೆ ಇರುವ ಚಪಲವೊಂದನ್ನು ಇಲ್ಲಿ ಸೂಚಿಸಲಾಗಿದೆ.
"ನಮ್ಮನ್ನು ಆಹ್ವಕ್ಕೆ (ಯುದ್ಧಕ್ಕೆ) ಕರೆಯುವವರು ಇಲ್ಲವಾಯಿತು" — ರಾಕ್ಷ
ಸರಿಗೆ ತಮ್ಮ ಜನಗಳೊಡನೆ ಕಲೆತು ಆನಂದವಾಗಿ ಕುಣಿದಾಡಿ ಕಾಲಕಳೆ
ಯಬೇಕೆಂಬುದು ಒಂದು ಚಪಲ. ಅವರು ಯುದ್ಧಪ್ರಿಯರು.
~~ಯುದ್ಧಕ್ಕೆ~~ ಯಾರಮೇಲಾದರೂ ಕಾಲುಕೆರೆದು ಯುದ್ಧಕ್ಕೆ ಹೋಗಬೇಕೆ
ಎಂಬುದೊಂದು ಭ್ರಾಂತಿ. ಬೆಂಬಲಿಗರನ್ನು ಕಳೆದುಕೊಂಡು,
ಅಸಹಾಯಕರಾಗಿ, ಅಂಜುಬುರುಕರಾಗಿ ಬಾಳಬೇಕಾಯಿತಲ್ಲಾ! ಎಂ
ಬ ಸಂಕಟವನ್ನು ಇಲ್ಲಿ ತೋರಿಸಲಾಗಿದೆ.

"ಎಳ್ಳಿಯಾ ದೋಗರೆಯಲೆ — இளங்கோவே" — ಎಂಬುದು,
ವಾನರ ಯುವರಾಜನಾದ ಅಂಗದನಿಗೆ ಅನ್ವಯವೂ, ಶ್ರೀರಾಮನ
ತಮ್ಮನಾದ ಲಕ್ಷ್ಮಣನಿಗೆ ಅನ್ವಯವೂ, ತಿಳಿಯದಾಗಿದೆ.

"ಕಡವಾ ಪ್ಯಾಟ್ಟುತ್ತವಾ ಪ್ಯಾಟ್ಟಗ್ಗೆ — குடம் பொங்குக்க
ம் பொங்கோ" — ಇದನ್ನು ಶ್ರೀರಾಮನ ಪರವಾಗಿಯೂ ರಾಕ್ಷಸ
ರ ಪರವಾಗಿಯೂ ವಿವರಿಸಬಹುದೆನಿಸುತ್ತದೆ. "ಒಂವೆಯುಂ ದಿಕ್ಕಿಲ
ದಿಕ್ಕಿಲ!" — ಶ್ರೀರಾಮನು ನಡೆಸಿದ ಧರ್ಮೋದ್ಧಾರ ಕಾರ್ಯಕ್ಕೆ ಒಬ್ಬರೇ
ಯಲ್ಲದಂತೆ (ಅನ್ಯ) ಒಬ್ಬಂಟಿಗನೇ ಹೋಗಲಿ. ರಾಕ್ಷಸರಾಜನಾದ ರಾವಣನು ದಿಕ್ಕಿ
ನಡೆಸಿ ಹೊತ್ತಿಸಿದ "ಅಗ್ನಿಕುಂಡವು ಉರಿಯಲಿ ಉರಿಯಲಿ, ಬ್ರಹ್ಮಪದ!" —
ಎಲ್ಲಬಗೆಯ ಅಧರ್ಮವೂ ಕೆಡಕೂ ಅದರಲ್ಲಿ ಆಹುತಿಯಾಗಿ ಬಿದ್ದು
ದುಷ್ಟು ಬೂದಿಯಾಗಲಿ.

2. பத்துநீண்முடியுமவற்றிரட்டிப்
பாழித்தோளும்படைத்தவன் செல்வம்,
சித்தம்மங்கையர்பால் வைத்துக்கெட்டான்
செய்வதொன்றறியா வடியோங்கள்,
ஒத்ததோளிரண்டு(ம் ஒரு)முடியும்
ஒருவர் தந்திறத்தோமன்றி வாழ்ந்தோம்,

Garani Srinivasan

அத்தனெம் பெருமான, எம்மைக் கைகாவலேல்
அஞ்சினேந் தடம் பொங்கத்தம் பொங்கோ.

ಪತ್ತು ನೀಣ್ಮುಡಿಯುಮವತ್ರಿರಟ್ಟಿ
ತ್ತೋಳ್ ಕಳುಮ್ ಪಡೈತ್ತವನ್ ಶೆಲ್ವಮುಂ,
ಶಿತ್ತಮುಂ ಮಙ್ಗೈಯರ್ ಪಾಲ್ ವೈತ್ತುಕ್ಕೆಟ್ಟಾನ್
ಶೆಯ್ದದನ್ರಿ ಅಡಿಯೋಂಗಳ್,
ಒತ್ತ ತೋಳಿರಣ್ಡುಂ ಒರು ಮುಡಿಯುಮ್
ಒರುವರ್ ತನ್ದಿರಶೀರ್ ಮನ್ರಿ ವಾೞ್ನ್ದೋಮ್,
ಅತ್ತನೆಮ್ಬೆರುಮಾನ್, ಎಮ್ಮೈಕ್ಕೊಲ್ಲೇಲ್
ಅಂಜಿನೇನ್ದಡಮ್ ಪೊಙ್ಗತ್ತಮ್ ಪೊಙ್ಗೋ.

ಪತ್ತು ನೀಳ್ ಮುಡಿಯುಮ್ பத்து நீள் முடியும் = ಹತ್ತು ಎತ್ತರವಾದ ಕಿರೀಟಗಳನ್ನೂ, ಅವತ್ರು அவற்று = ಅವುಗಳ, ಇರಟ್ಟಿ இரட்டி = ಎರಡರಷ್ಟು, ಪಾೞಿ பாழி = ಬಲಿಷ್ಠವಾದ, ತೋಳ್ಕಳುಮ್ தோளும் = ತೋಳುಗಳನ್ನೂ, ಪಡೈತ್ತವನ್ படைத்தவன் = ಪಡೆದವನು, (ಅವನ), ಶೆಲ್ವಮುಮ್ செல்வம் = ಸಂಪತ್ತನ್ನೂ, ಶಿತ್ತಮುಮ್ சித்தம் = ಮನಸ್ಸನ್ನೂ, ಮಙ್ಗೈಯರ್ ಪಾಲ್ மங்கையர் பால் = ಸ್ತ್ರೀಯರಲ್ಲಿ, ವೈತ್ತು வைத்து = ಇಟ್ಟು, ಕೆಟ್ಟಾನ್ கெட்டான் = ಕೆಟ್ಟುಹೋದನು, ಶೆಯ್ವದು செய்வது = ಮಾಡಬೇಕಾದದ್ದು, ಒನ್ರುಂ ஒன்று = ಒಂದನ್ನೂ, ಅಱಿಯಾ அறியா = ಅರಿಯದವರಾದ, ಅಡಿಯೋಙ್ಗಳ್ அடியோங்கள் = ನಾವುಗಳು (ಪಾದಸೇವಕರಾದ ನಾವು), ಒತ್ತ ஒத்த = ಒಪ್ಪುವಂಥ, ತೋಳ್ ಇರಣ್ಡುಮ್ தோள் இரண்டும் = ಎರಡು ತೋಳುಗಳನ್ನೂ, ಒರು ಮುಡಿಯುಮ್ ஒரு முடியும் = ಒಂದು ಕಿರೀಟವನ್ನೂ, ಉಳ್ಳವರಾದ, ಒರುವರ್ (ತಮ್) ஒருவர் தம் = ಎರಡನೆಯಿಲ್ಲದವರಾದ ಶಮ್ಭು, ಶಿವಶೀರೆಮ್ சீறக்கோம் = ಕಡೆ... ಅನ್ರಿ அன்றி = ಅಲ್ಲದವರಾಗಿ, ವಾೞ್ನ್ದೋಮ್ வாழ்ந்தோம் = (ಇದುವರೆಗೆ) ಬಾಳಿದೆವು, ಅತ್ತ அத்த = ~~ತಂದೆ~~ ತಂದೆಯೇ, ಎಮ್ಬೆರುಮಾನ್ எம்பெருமான் = ಸ್ವಾಮಿಯೇ, ಎಮ್ಮೈ எம்மை = ನಮ್ಮನ್ನು, ಕೊಲ್ಲೇಲ್ காவலேல் = ಕೊಲ್ಲಬೇಡ, ಅಂಜಿನೇಮ್ அஞ்சினேம் = ಭಯಪಟ್ಟಿದ್ದೇವೆ, ತಡಮ್ ಪೊಙ್ಗತ್ತಮ್ ಪೊಙ್ಗೋ தடம் பொங்கத்தம் பொங்கோ = ಬಂದೆಯು ಬೆಳೆಯಲಿ ಬೆಳೆಯಲಿ (ಹೆಚ್ಚಲಿ, ಹೆಚ್ಚಲಿ)!

ಹತ್ತು ಎತ್ತರವಾದ ಕಿರೀಟಗಳನ್ನು ಅವುಗಳ ಎರಡರಷ್ಟು ಬಲಿಷ್ಠವಾದ ತೋಳುಗಳನ್ನು ಪಡೆದವನು ಅವನ ಸಂಪತ್ತನ್ನೂ ಮನಸ್ಸನ್ನೂ ಸ್ತ್ರೀಯರಲ್ಲಿಟ್ಟು ಕೆಟ್ಟು ಹೋದನು. ಮಾತ ಕೇಳದ್ದು ಒಂದನ್ನೂ ಅರಿಯದವರಾದ (ಸಾದಾ ಸೇವಕರಾದ) ನಾವುಗಳು, ಒಪ್ಪುವಂತ ಎರಡು ತೋಳುಗಳನ್ನು ಒಂದು ಕಿರೀಟವನ್ನು ಉಳ್ಳವರಾದ ಸಾಟಿಯಿಲ್ಲದವರಾದ ತಮ್ಮ ಕಡೆಯವರಲ್ಲದವರಾಗಿ (ಇರುವರಿಗೆ) ಬಾಳಿದೆವು. ತಂದೆಯೇ, ಸ್ವಾಮಿಯೇ, ನಮ್ಮನ್ನು ಕೊಲ್ಲಬೇಡ. ಭಯ ೨
ಪಟ್ಟಿದ್ದೇವೆ. (ನಿನ್ನ) ಹೊರತು ಯಾವ ದಿಕ್ಕಿಲ್ಲ, ದಿಕ್ಕಿಲ್ಲ!

ರಾವಣನ ವಧೆಯಾದ ಬಳಿಕ, ಲಂಕೆಯಲ್ಲಿ ಉಳಿದ ರಾಕ್ಷಸರು ವಿಜಯಿಯಾದ ಶ್ರೀರಾಮನಲ್ಲಿ ಬಿನ್ನವಿಸಿ ಕೊಳ್ಳುತ್ತಿದ್ದಾರೆ: ಸ್ವಾಮಿ, ನಮ್ಮ ಒಡೆಯನಾಗಿದ್ದ ರಾವಣನಿಗೆ ಒಂದಲ್ಲ, ಹತ್ತು ತಲೆಗಳು. ಅವುಗಳನ್ನಲಂಕರಿಸಿದ ಉನ್ನತವಾದ ರತ್ನಮಯವಾದ ಕಿರೀಟಗಳು. ಪರಾಕ್ರಮಪೂರ್ಣವಾದ ಇಪ್ಪತ್ತು ತೋಳುಗಳು. ನಮ್ಮ ಒಡೆಯನು ದಿಕ್ಕೆಲ್ಲ ಐಶ್ವರ್ಯ ಸಂಪನ್ನನು. ವಿಪುಲವಾದ ಕೀರ್ತಿವಂತ. ಮೂರು ಲೋಕದ ನಾಯಕ ಅವನೇ ಎಂದು ನಾವೆಲ್ಲ ನಂಬಿದ್ದೆವು. ಆದರೆ, ರಾವಣನು ಸ್ತ್ರೀಯರಲ್ಲಿ ಮನಸ್ಸಿಟ್ಟ ವಿಷಯ ಲಂಪಟನಾದ. ಇದರಿಂದ, ಅವನ ಕೀರ್ತಿಯೂ ಹಾಳಾಯಿತು. ಐಶ್ವರ್ಯವೂ ನಾಶವಾಯಿತು. ಅವನೂ ಸತ್ತ! ಅವನನ್ನೇ ಆಶ್ರಯಿಸಿ ಊಳಿಗ ಮಾಡುತ್ತಿದ್ದ ನಮ್ಮ ಗತಿ? ಏನು ಮಾಡಬೇಕು? ಯಾರನ್ನು ಸೇರಬೇಕು? ಇದನ್ನರಿಯದೆ ನಾವು ಕಂಗೆಟ್ಟೆವು. ಒಡೆಯನಿಲ್ಲದವರಾಗಿ ನಾವು ಭಯಪಟ್ಟಿದ್ದೇವೆ. ಸ್ವಾಮಿ, ನೀವು ಸಾಟಿಯಿಲ್ಲದವರು. ದಿವ್ಯ ಸುಂದರ ದೇಹವುಳ್ಳವರು. ನಿಮಗೆ ಒಂದೇ ಒಂದು ಅನರ್ಘ್ಯವಾದ ಕಿರೀಟ. ಅದಕ್ಕೆ ಒಪ್ಪುವಂತ ಎರಡು ತೋಳುಗಳು. ನಿಮ್ಮನ್ನು ರಾವಣನೊಡನೆ ಹೋಲಿಸಬಹುದೇ? ನೀವು ಸತ್ಯಪರಾಕ್ರಮಿಗಳು, ಕರುಣೆಯುಳ್ಳವರು. ಆಶ್ರಿತರಕ್ಷಕರು. ನಾವು ನಿಮ್ಮ ಕಡೆಯವರೇ ಆಗಿದ್ದರೆ? ನಿಮ್ಮನ್ನು ಆಶ್ರಯಿಸಿದ್ದರೆ? ಆಗ, ನಮಗೆ ಎಷ್ಟು ಒಳ್ಳೆಯದಿತ್ತು? ಇದನ್ನು ಯೋಚಿಸುತ್ತಿರುವ ನಮ್ಮನ್ನು ನೀವು ನಿಮ್ಮ ಶತ್ರುಗಳೆಂದು ದಯಮಾಡಿ ಕೊಲ್ಲಬೇಡಿ. ನಿಮ್ಮ ಹೊರತು ಬೇರೆ ಬೇರೆ ದಿಕ್ಕಿಲ್ಲ!

3. தண்டகாரணியம்புகுந்தன்று
   தையலைத்தகவிலியெங்கோமான்,
கொண்டுபோந்துகெட்டானெமக்கிங்கோர்
   குற்றமில்லைகொல்லேல்குலவேந்தே,
பெண்டிராற்கெடுமிக்குடிதன்னைப்
   பேசுகின்றதென்? தாசரதீ!, உன்
அண்டவாணற்கப்பதே செய்தாய்
   அஞ்சினோந்தடம்பொங்கத்தம்பொங்கோ

ತಣ್ಡಕಾರಣಿಯಮ್ ಪುಕುನ್ದನ್ಱು
ತೈಯಲೈತ್ ತಕವಿಲಿ ಯೆಙ್ಗೋಮಾನ್,
ಕೊಣ್ಡು ಪೋನ್ದು ಕೆಟ್ಟಾನ್ ಎಮಕ್ಕಿಙ್ಗೋರ್
ಕುಱ್ಱಮಿಲ್ಲೈ ಕೊಲ್ಲೇಲ್ ಕುಲವೇನ್ದೇ,
ಪೆಣ್ಡಿರಾಲ್ ಕೆಡುಮಿಕ್ಕುಡಿ ತನ್ನೈ
ಪೇಶುಕಿನ್ಱದೆನ್? ದಾಶರತೀ, ಉನ್
ಅಣ್ಡವಾಣರುಕಪ್ಪದೇ ಶೆಯ್ದಾಯ್
ಅಂಜಿನೋಮ್ ತಡಮ್ ಪೊಙ್ಗತ್ತಮ್ ಪೊಙ್ಗೋ.

ತಣ್ಡಕಾರಣಿಯಮ್ தண்டகாரணியம் = ದಂಡಕಾರಣ್ಯವನ್ನು, ಅನ್ಱು அன்று = ಅಂದು, ಪುಕುನ್ದು புகுந்து = ಪ್ರವೇಶಿಸಿ, ತೈಯಲೈ தையலை = ಪರಮಸುಂದರಿಯನ್ನು, ತಕವಿಲಿ தகவிலி = ನಿಷ್ಠುರನಾದ, ಎಮ್ ಕೋಮಾನ್ எம் கோமான் = ನಮ್ಮ ಸ್ವಾಮಿಯು, ಕೊಣ್ಡು ಪೋನ್ದು கொண்டு போந்து = ಅಪಹರಿಸಿಕೊಂಡು ಬಂದು, ಕೆಟ್ಟಾನ್ கெட்டான் = ಕೆಟ್ಟುಹೋದನು, ಎಮಕ್ಕು எமக்கு = ನಮಗೆ, ಇಙ್ಗು இங்கு = ಈ ವಿಷಯದಲ್ಲಿ, ಓರ್ ಕುಱ್ಱಮ್ ஓர் குற்றம் = ಯಾವುದು ತಪ್ಪು, ಇಲ್ಲೈ இல்லை = ಇಲ್ಲ, ಕೊಲ್ಲೇಲ್ கொல்லேல் = ಕೊಲ್ಲಬೇಡ, ಕುಲಮ್ குலம் = ಪರಮಶ್ರೇಷ್ಠನಾದ, ವೇನ್ದೇ வேந்தே = ಸ್ವಾಮಿ, ಪೆಣ್ಡಿರಾಲ್ பெண்டிரால் = ಹೆಂಗಸರಿಂದ, ಕೆಡುಮ್ கெடும் = ಕೆಡುವಂಥ, ಇಕ್ಕುಡಿ ತನ್ನೈ இ-குடி தன்னை = ಈ ವಂಶವನ್ನು ಕುರಿತು, ಪೇಶುಕಿನ್ಱದು ಎನ್ பேசுகின்றது என் = ~~ಹೇಳುವುದು~~ ಹೇಳಬೇಕಾದ್ದು ಏನಿದೆ?, ದಾಶರತೀ தாசரதீ = ದಾಶರಥೀ, ಉನ್ ಅಣ್ಡವಾಣರ್ உன் அண்டவாணர் = ನಿನ್ನ ದೇವತೆಗಳು, ಉಕಪ್ಪದೇ ಶೆಯ್ದಾಯ್ உகப்பதே செய்தாய் = ಹರ್ಷಿಸುವಂತದ್ದನ್ನೇ ಮಾಡಿದ್ದೀಯೆ, ಅಂಜಿನೋಮ್ அஞ்சினோம் = ಭಯಪಟ್ಟಿದ್ದೇವೆ (ಭಯ ಪಟ್ಟಿದ್ದೇವೆ), ತಡಮ್ ಪೊಙ್ಗತ್ತಮ್ ಪೊಙ್ಗೋ தடம் பொங்கத்தம் பொங்கோ = (ನಿನ್ನ) ಜಯವು ಬೆಳಗಲಿ ಬೆಳಗಲಿ.

ಅಂದು ದಂಡಕಾರಣ್ಯವನ್ನು ಪ್ರವೇಶಿಸಿ, ನಿಷ್ಠುರನಾದ ನಮ್ಮ ಒಡೆಯನು ಪರಮಸುಂದರಿಯನ್ನು ಎತ್ತಿಕೊಂಡು ಬಂದು ಕೆಟ್ಟುಹೋದನು. ಈ ವಿಷಯದಲ್ಲಿ ನಮ್ಮ ತಪ್ಪೇನೂ ಇಲ್ಲ. ಕೊಲ್ಲಬೇಡ, ಪರಮಶ್ರೇಷ್ಠನಾದ ಒಡೆಯನೇ. ಹೆಂಗಸರಿಂದ ಕೆಡುವಂಥ ಈ ವಂಶವನ್ನು ಕುರಿತು ಹೇಳಬೇಕಾದ್ದು ಏನಿದೆ? ದಾಶರಥೀ, ನಿನ್ನ ದೇವತೆಗಳು ಹರ್ಷಿಸುವಂಥದ್ದನ್ನೇ ಮಾಡಿದ್ದೀ. ನಾವು ಭಯಪಟ್ಟಿದ್ದೇವೆ. ನಿನ್ನ ಜಯವು ಬೆಳಗಲಿ ಬೆಳಗಲಿ

©Garani Srinivasan

ಲಂಕೆಯ ರಾಕ್ಷಸರು ಶ್ರೀರಾಮನಲ್ಲಿ ಹೇಳಿಕೊಳ್ಳುತ್ತಾರೆ: ಸ್ವಾಮೀ, ಈ ರಾಕ್ಷಸರಕುಲವೇ ಹೆಂಗಸರ ಕಾರಣದಿಂದ ನಾಶವಾಯಿತು. ಈ ವಿಷಯದಲ್ಲಿ ಹೇಳಿಕೊಳ್ಳುವಂಥದ್ದು ಏನು ಕಾರಣ? ನಮ್ಮ ಒಡೆಯನಾಗಿದ್ದ ರಾವಣನು ದಂಡಕಾರಣ್ಯವನ್ನು ಪ್ರವೇಶಿಸಿದನು. ಪಂಚವಟಿಯಲ್ಲಿ ಶ್ರೀರಾಮ ಸೌಂದರ್ಯವನ್ನು ಕಂಡು ಭ್ರಮಿಸಿದನು. ಅವಳನ್ನು ನೋಡಿದಂದಿನಿಂದ ಕಾಮತಪ್ತ ಕಂಡು ಲಂಕೆಯಲ್ಲಿ ಸೆರೆಯಿಟ್ಟನು. ಇದೇ ಅವನ ನಾಶಕ್ಕೆ ಕಾರಣವಾಯಿತು. ತಾನು ಮಾಡಿದ ತಪ್ಪಿಗಾಗಿ ರಾವಣನು ಮಡಿದದ್ದು ಸರಿಯೇ. ಆದರೆ, ನಾವು ತಪ್ಪಿತಸ್ಥರೇ ಅಲ್ಲವಲ್ಲ! ದೊಡ್ಡವನೊಬ್ಬನು ಮಾಡಿದ ತಪ್ಪಿಗೆ ಏನೂ ಅರಿಯದವರಾದ ನಮಗೆಲ್ಲ ಶಿಕ್ಷೆಯೇ? ಸ್ವಾಮೀ, ಶ್ರೀರಾಮ ಶ್ರೇಷ್ಠವಾದ ವಂಶದವನೇ, ದಶರಥ ಚಕ್ರವರ್ತಿಯ ಮಗನೇ, ನಿನಗೆ ಇಷ್ಟರಾದ ದೇವತೆಗಳೆಲ್ಲರೂ ಹರ್ಷಿಸುವಂಥ ಕಾರ್ಯವನ್ನೇ ಮಾಡಿದ್ದೀ. ನಾವು ಅಂಜಿದ್ದೇವೆ. ನಮ್ಮನ್ನು ಕೊಲ್ಲಬೇಡ. ನಮಗೆ ಅಭಯವನ್ನು ನೀಡು. ನಿನ್ನ ಹಿರಿಮೆ ಬೆಳೆಯುತ್ತಲೇ ಹೋಗಲಿ.

4. எஞ்சலில் இலங்கைக்கிறை எங்கோன்
தன்னை முன் பணிந்து எங்கள் கண்முகப்பே,
நஞ்சு தான் அரக்கர் குடிக்கென்று
நங்கையை அவன் தம்பியே சொன்னான்,
விஞ்சை வானவர் வேண்டிற்றே பட்டோம்
வேரிவார் பொழில் மாமயிலன்ன,
அஞ்சலோதியைக் கொண்டு நடமின்
அஞ்சினோம் தடம் பொங்கத்தம் பொங்கோ

ಎಂಜಲಿಲ್ ಇಲಙ್ಗೈಕ್ಕಿಱೈ ಎಙ್ಗೋನ್
ತನ್ನೈ ಮುನ್ ಪಣಿನ್ದು ಎಙ್ಗಳ್ ಕಣ್ ಮುಹಪ್ಪೇ,
ನಂಜುತಾನರಕ್ಕರ್ ಕುಡಿಕ್ಕೆನ್ಱು
ನಙ್ಗೈಯೈ ಅವನ್ ತಮ್ಬಿಯೇ ಶೊನ್ನಾನ್,
ವಿಂಜೈ ವಾನವರ್ ವೇಣ್ಡಿಱ್ಱೇ ಪಟ್ಟೋಮ್
ವೇರಿವಾರ್ ಪೊಳಿಲ್ ಮಾಮಯಿಲನ್ನ,
ಅಂಜಲೋದಿಯೈಕ್ಕೊಣ್ಡು ನಡಮಿನ್
ಅಂಜಿನೋಂ ತಡಮ್ ಪೊಙ್ಗತ್ತಮ್ ಪೊಙ್ಗೋ.

ಎಂಜಲ್ ಇಲ್ எஞ்சலில் = ಕೊರತೆಯೆಂಬುದೇ ಇಲ್ಲದ, ಇಲಙ್ಗೈಕ್ಕು இலங்கைக்கு = ಲಂಕೆಗೆ, ಇಱೈ இறை = ಒಡೆಯನಾದ, ಎಮ್ ಕೋನ್ ತನ್ನೈ எம் கோன் தன்னை = ನಮ್ಮ ಒಡೆಯನ, ಮುನ್ முன் = ಮುಂದೆ, ಪಣಿನ್ದು பணிந்து = ಅಡ್ಡಬಿದ್ದು, ಎಙ್ಗಳ್ எங்கள் = ನಮ್ಮ, ಕಣ್ ಮುಹಪ್ಪೇ கண் முகப்பே = ಕಣ್ಣಮುಂದೆಯೇ. ನಂಜುತಾನ್ நஞ்சு தான் = ವಿಷವೇ, ಅರಕ್ಕರ್ ಕುಡಿಕ್ಕು அரக்கர் குடிக்கு =

Garani Srinivasan

ರಾಕ್ಷಸರ ವಂಶಕ್ಕೆ, ಎನಲುಂ ನಾಣ್ರು = ಎಂದು, ನಙ್ಗೈಯ್ತ ನ್ರಂಕಾಕಾಯ
= ಸಾಧ್ವೀಮಣಿಯನ್ನು ಕುರಿತು, ಅವನ್ ತಮ್ಬಿಯುಮ್ ಅವಣ್ ಕುಮ್ಬಿಡೆ =
ಅವನ ತಮ್ಮನೇ, ಶೊನ್ನಾನ್ சொன்(ன)ன் = ಹೇಳಿದನು. ವಿಂಜ್ಜೈವಾನ
ವರ್ விஞ்ஞை வாணவர் = ವಿದ್ಯಾಧರರೇ ಮೊದಲಾದ ದೇವತೆಗಳು,
ವೇಣ್ಡತ್ತೇ வெண்டிற்றோ = ಕೋರಿದ್ದನ್ನೆಲ್ಲಾ, ಪಟ್ಟೋಮ
பட்டோம் = ಅನುಭವಿಸಿದೆವು, ವೇಲಿ வாரி = ಮಧು, ಪರಿಮಳ
ಗಳಿಂದ, வார் வார் = ತುಂಬಿರುವ, ಪೂಬುಲ್ பொழில் = ತೋಪು
ಗಳ, ವೂ ಮಯಿಲ್ ಅನ್ನ மாமயில் அண்ணா = ದೊಡ್ಡ (ಸುಂದರ)
ನವಿಲನಂತೆ, ಅಂಜು ಅಲ್ அஞ்சு அல் = ಪಂಚಗುಣಗಳುಳ್ಳ,
ಶಿದಿಯ್ತ್ರ தாஞ்ஞையை = ಕಲಗಾದಲನವಳನ್ನು, ಕೊಣ್ಡು கொண்டு =
ಕರೆದುಕೊಂಡು, ನಡಯಿನ್ நடமின் = ಹೋಗಿರಿ, ಅಂಜನೋಮ
அஞ்சினோம் = ಭಯ ಪಟ್ಟಿದ್ದೇವೆ, ತದಮು ಪೊಜ್ಞತ್ತಮು ಪೊಜ್ಜೋ
குடம் பொங்கக்குதம் பொங்கோ = (ನಿನ್ನ) ಹಿರಿಮೆಯು ಬೆಳೆ
ಯಲಿ, ಬೆಳೆಯಲಿ.

ಕೊರತೆಯೆಂಬುದೇ ಇಲ್ಲದ ಲಂಕೆಗೆ ಒಡೆಯನಾದ ನಮ್ಮೊಡೆಯನ ಮುಂದೆ ಅಡ್ಡಬಿದ್ದು, ನಮ್ಮ ಕಣ್ಣ ಮುಂದೆಯೇ. ಈ ರಾಕ್ಷಸವಂಶಕ್ಕೆ ಇವಳು ನಾಶಕ ವಿಷವೇ ಎಂದು ಸಾಧ್ವೀಮಣಿಯನ್ನು ಕುರಿತು ಅವನ ತಮ್ಮನೇ ಹೇಳಿದನು. ವಿದ್ಯಾಧರರೇ ಮೊದಲಾದ ದೇವತೆಗಳು ಕೋರಿದ್ದನ್ನೆಲ್ಲಾ ಅನುಭವಿಸಿದೆವು. ಮಧು ಪರಿಮಳಗಳಿಂದ ತುಂಬಿರುವ ತೋಪುಗಳ ಸುಂದರವಾದ ದೊಡ್ಡ ನವಿಲನಂತೆ, ಪಂಚಗುಣಗಳುಳ್ಳ ಕಲಗಾದಲನವಳನ್ನು ಕರೆದುಕೊಂಡು ಹೋಗಿರಿ. ಭಯ ಪಟ್ಟಿದ್ದೇವೆ. (4)
(ನಿಮ್ಮ) ಹಿರಿಮೆಯು ಬೆಳೆಯಲಿ, ಬೆಳೆಯಲಿ.

ಲಂಕೆಯ ರಾಕ್ಷಸರು ಶ್ರೀರಾಮನಲ್ಲಿ ಹೇಳಿಕೊಳ್ಳುತ್ತಾರೆ: ಸ್ವಾಮಿ, ನಮ್ಮ ಲಂಕೆಯು ಅಷ್ಟೈಶ್ವರ್ಯ ಸಂಪತ್ತಿನಿಂದ ಕೂಡಿತ್ತು. ಅಲ್ಲಿ ಯಾವ ವಿಧವಾದ ಕೊರತೆಗೂ ಅವಕಾಶವಿರಲಿಲ್ಲ. ಆದರೆ ನಿಮ್ಮ ರಾಣಿ ಮೇಲೆ ಯುಕ್ತದ ನಮ್ಮ ಲಂಕೆಗೆ ಒಡೆಯನೇ ನಮ್ಮ ಒಡೆಯನಾದ ರಾವಣನು. ಒಂದು ದಿನ, ಘೋರ ಯುದ್ಧಕ್ಕೆ ತೊಡಗುವುದಕ್ಕೆ ಮುಂಚೆ, ತುಂಬಿದ ಅವನ ಒಡ್ಡೋಲಗದಲ್ಲಿ ಅವನ ತಮ್ಮನಾದ ವಿಭೀಷಣನು ಬಂದನು. ನಮ್ಮೆಲ್ಲರೆದುರಿಗೆ, ನಮ್ಮ ಕಣ್ಣ ಮುಂದೆಯೇ, ಅವನು ತನ್ನ ಅಣ್ಣನಿಗೆ ಅಡ್ಡಬಿದ್ದನು. ಕೈಮುಗಿದು ಬೇಡಿದನು: "ಅಣ್ಣಾ, ನೀನು ಅಪಹರಿಸಿಕೊಂಡು ಬಂದಿರುವ ಈ ಸಾಧ್ವೀಮಣಿಯೇ ನಮ್ಮ ರಾಕ್ಷಸ ಕುಲಕ್ಕೆ ಮೃತ್ಯುವಾದವಳು. ಮರ್ಯಾದೆಯಿಂದ ಇವಳನ್ನು ಕರೆದೊಯ್ದು ಶ್ರೀರಾಮನಿಗೆ ಒಪ್ಪಿಸಿಬಿಡು. ನಿನಗೂ, ನಮಗೂ, ಈ ಲಂಕೆಗೂ,

Garani Srinivasan

ನಮ್ಮ ಕುಲಕ್ಕೆ ಕ್ಷೇಮವಾಗುತ್ತದೆ. ಹಾಗೆ ಮಾಡದೆ ಹೋದೆಯೋ! ಇದಿರು ಲಂಕೆಗೇ ನಾಶವನ್ನು ತಂದು ಕೊಂಡೆಯೋ!" ರಾವಣನೇನು ಅವನ ಮಾತಿಗೆ ಒಪ್ಪಿ ಹಾಕಿದನೇ? ಮದದಿಂದ ನವಿಭೀಷಣನ ಯುದ್ಧಕ್ಕೆ ನಿಂತನು. ಅದರಿಂದ ಆದದ್ದೇನು? ಕುಂಭಕರ್ಣ? ರಾಮನು ಅವನನ್ನು ಕೊಂದು ಹಾಕಿದನು. ಲಂಕೆಯೂ ಹಾಳಾಯಿತು. ನಮ್ಮ ವಂಶವೂ ಹಾಳಾಯಿತು. ವಿದ್ಯಾಧರರೇ ಮೊದಲಾದ ದೇವತೆಗಳೆಲ್ಲರೂ ಕೂಡ ದ್ದು ಅದನ್ನೇ. ನಾವು ಬಿಡುವ ... ದಿಂದ ಅವರೆಲ್ಲ ಆನಂದವಾಯಿತಲ್ಲ! ಸ್ವಾಮಿ, ನಿಮ್ಮ ಧಿಮಂತಿಕೆಯಾದ, ವಿರಮದಿಂದಲೂ ದ, ಹಾಸ್ಯವಾಣಿಯಾದ ಕಾಂತೆಯನ್ನು ಕರೆದುಕೊಂಡು ಹೋಗಿ ವನದಲ್ಲಿ ಮರೆದು ನಲಿಯುವ ದೃಶ್ಯ ನೋಡುವ ನವಿಲುಗಳಂತೆ ಆಕೆ ನಲಿಯಲಿ. ನಾವೆಲ್ಲ ಭಯಪಡುತ್ತಿದ್ದೇವೆ. ನಮಗೆ ಅಭಯವನ್ನಿತ್ತು, ನಮ್ಮನ್ನು ಕೈಬಿಡದೆ ಕಾಪಾಡಿ. ನಿಮ್ಮ ಹಂಸೆಯೂ ಬೆಳ್ಳಯುತ್ತಾ ಹೋಗಲಿ ಎಂದು ಹಾರೈಸುತ್ತೇವೆ.

5. செம்பொன் நீண்முடி யெங்கிராவணன்
சீதையென்பதோர் தெய்வம் கொணர்ந்து,
வம்புலாங்கடிகாவிற் சிறைவைத்ததே
குற்றமாயிற்றுக் காணீர்,
கும்பனோடு நிகும்பனும் பட்டான்
கூற்றம் மானிடமாய் வந்து தோன்றி,
அம்பினாலெம்மைக் கொன்றிடுகின்றது
அஞ்சினோம் தடம் பொங்கத்தம் பொங்கோ.

ಶೆಮ್ಬೊನ್ ನೀಣ್ಮುಡಿ ಯೆಙ್ಗಿರಾವಣನ್
ಶೀತೈಯೆನ್ಬದೋರ್ ದೆಯ್ವಮ್ ಕೊಣರ್ನ್ದು,
ವಮ್ಬುಲಾಙ್ಗಡಿಕಾವಿರ್ ಶಿರೈವೈತ್ತದೇ
ಕುರ್ರಮಾಯಿರ್ರುಕ್ಕಾಣೀರ್,
ಕುಮ್ಬನೋಡು ನಿಕುಮ್ಬನುಮ್ ಪಟ್ಟಾನ್
ಕೂರ್ರಮ್ ಮಾನಿಡಮಾಯ್ ವನ್ದು ತೋನ್ರಿ,
ಅಮ್ಬಿನಾಲೆಮ್ಮೈ ಕೊನ್ರಿಡುಕಿನ್ರದು
ಅಞ್ಜಿನೋಮ್ ತಡಮ್ ಪೊಙ್ಗತ್ತಮ್ ಪೊಙ್ಗೋ.

Garani Srinivasan

ಶೆಮ್ ಪೊನ್ செம்பொன் = ಕೆಂಪು ಚಿನ್ನದ, ನೀಳ್ ಮುಡಿ
நீள் முடி = ಉನ್ನತ ಕಿರೀಟವನ್ನು ಧರಿಸಿದ, ಎಙ್ಗಳ್ நாங்கள் =
ನಮ್ಮ, ಇರಾವಣನ್ இராவணன் = ರಾವಣಾಸುರನು, ಶೀತೆ
ಎನ್ಬದು சீதை என்பது = ಸೀತೆ ಎಂಬ, ಉರು ಇಲ್ = ರೂಪ
ವಿಲ್ಲದ (ಅದೃಶ್ಯವಾದ), ದೆಯ್ವಮ್ தெய்வம் = ದೇವತೆಯ
ನ್ನು, ಕೊಣರ್ನ್ದು கொணர்ந்து = (ಅಪಹರಿಸಿ) ತಂದು, ವಮ್ಬು
வம்பு = ಪರಿಮಳವು, ಉಲಾವು உலாம் = ಹರಡಿರುವ, ಕಡಿ
கடி = ಸುಂದರವಾದ, ಕಾವಿಲ್ காவில் = ವನದಲ್ಲಿ, ಶಿಱೈ ವೈತ್ತ
ದೇ சிறை வைத்ததே = ಸೆರೆಯಿಟ್ಟದ್ದೇ, ಕುಱ್ರಮ್ ಆಯಿ
ಟ್ರು குற்றம் ஆயிற்று = ಅಪರಾಧವಾಯಿತು, ಕಾಣ್ಡೀರ್ கா
ணீர் = ಕಂಡಿರಾ, ಕುಮ್ಬನೋಡು ನಿಕುಮ್ಬನುಮ್ கும்பனொ
டு நிகும்பனும் = ಕುಂಭನೂ, ನಿಕುಂಭನೂ, ಪಟ್ಟಾನ್ பட்டா
ன் = ಸಾವನ್ನಪ್ಪಿದನು, ಕೂಱ್ರಮ್ கூற்றம் = ಮೃತ್ಯುವು,
ಮಾನಿಡಮ್ ಆಯ್ மானிடம் ஆய் = ಮನುಷ್ಯನಾಗಿ, ವನ್ದ
ವನ್ದು வந்து = ಬಂದು, ತೋನ್ಱಿ தோன்றி = ಪ್ರತ್ಯಕ್ಷನಾಗಿ,
ಅಮ್ಬಿನಾಲ್ அம்பினால் = ಬಾಣಗಳಿಂದ, ಎಮ್ಮೈ எம்மை = ನ
ಮ್ಮನ್ನು, ಕೊನ್ಱು ಇದುಕಿನ್ಱದು கொன்று இடுகின்
றது = ಕೊಂದಿಡುತ್ತಿದೆ, ಅಞ್ಜಿನೋಮ್ அஞ்சினோம் = ಭಯ
ಪಟ್ಟಿದ್ದೇವೆ, ಶದಮ್ ಪೊಙ್ಗಿಲ್ ಪೊಙ್ಗೋ கடம் பொங்கு
கக்கும் பொங்கோ = ಅಂಗಾಂಗವು ಬೆಳ್ಳೆಯಾಲ, ಬೆಳ್ಳೆಯಾಲ.

ಕೆಂಪು ಚಿನ್ನದ ಉನ್ನತ ಕಿರೀಟವನ್ನು ಧರಿಸಿದ ನಮ್ಮ (ಒಡೆಯನಾದ) ರಾವಣಾಸುರನು ಸೀತೆ ಎಂಬ ಅದೃಶ್ಯವಾದ ದೇವತೆಯನ್ನು (ಅಪಹರಿಸಿ) ತಂದು, ಪರಿಮಳ ತುಂಬಿದ ಸುಂದರವಾದ ವನದಲ್ಲಿ ಸೆರೆಯಿಟ್ಟದ್ದೇ ಅಪರಾಧವಾಯಿತು ಕಂಡಿರಾ? ಕುಂಭನೂ ನಿಕುಂಭನೂ ಸತ್ತರು. ಮೃತ್ಯುವು ಮನುಷ್ಯನಾಗಿ ಬಂದು ಪ್ರತ್ಯಕ್ಷನಾಗಿ, ತನ್ನ ಅಂಬುಗಳಿಂದ ನಮ್ಮನ್ನು ಕೊಂದಿಡುತ್ತಿದೆ. ನಾವು ಭಯಪಟ್ಟಿದ್ದೇವೆ. (ನನ್ನ) ಅಂಗಾಂಗವು ಬೆಳ್ಳೆಯಾಲ (5)
ಬೆಳ್ಳೆಯಾಲ!

ಲಂಕೆಯಲ್ಲಿ ಉಳಿದ ರಾಕ್ಷಸರು ಶ್ರೀರಾಮನಲ್ಲಿ ಹೇಳಿಕೊಳ್ಳುತ್ತಾರೆ: ಸ್ವಾಮಿ, ನಮ್ಮ ಒಡೆಯನಾದ ರಾವಣನಿಗೆ ~~[illegible]~~ ಮೇಲಿಟ್ಟು ಬಂದಿ ಶಿಕ್ಷೆಯಿದು. ಮೂರು ಲೋಕದ ಒಡೆಯನೆಂದು ಅವನು ಅತ್ಯುನ್ನತವಾದ

ಕಿರೀಟವನ್ನು ಧರಿಸಿದ್ದವನು ಅವನು. ಸೀತೆ ಎಂಬ ನಾಟಿಯಿಲ್ಲದ ದೇವತೆಯನ್ನು ಅಪಹರಿಸಿ ತಂದ. ಆಕೆಯನ್ನು ಬಿಡಿಸಲ್ಲತಂಬದ ಸುಂದರವಾದ ಅಶೋಕವನದಲ್ಲಿ ಸೆರೆಯಿಟ್ಟ. ಇದೇ ಅವನ ಮಹಾಪರಾಧ! ಇದರಿಂದ, ಅವನು ಮಾತ್ರವಲ್ಲ, ಅವನನ್ನು ನಚ್ಚಿಕೊಂಡಿದ್ದ ಕುಂಭ, ನಿಕುಂಭ ಮುಂತಾದ ರಾಕ್ಷಸವೀರರೆಲ್ಲರೂ ಮಡಿದರು. ಮೃತ್ಯುವೇ ಮನುಷ್ಯರೂಪವನ್ನು ತಳೆಯಿತು. ಲಂಕೆಯಲ್ಲಿ ಪ್ರತ್ಯಕ್ಷವಾಯಿತು. ತನ್ನ ಅಂಬುಗಳಿಂದಲೇ ರಾಕ್ಷಸಕುಲವನ್ನು ನಿರ್ನಾಮಗೊಳಿಸಿತು. ಸ್ವಾಮಿ, ನಾವು ಬಂದಿದ್ದೇವೆ. ನಮಗೆ ಅಭಯವನ್ನು ನೀಡು. ನಿನ್ನ ಹೆಂಡತಿಯು ಬೆಚ್ಚಿಲಿ, ಹುಚ್ಚಿ.

"ಮೃತ್ಯುವು ಮನುಷ್ಯನಾಗಿ ಬಂದು, ಪ್ರತ್ಯಕ್ಷನಾಗಿ — கூற்றம் மாணிடமாய் வந்து தோன்றி" — ರಾವಣನು ಬ್ರಹ್ಮಾದಿಗಳಿಂದ ಪಡೆದ ವರಗಳಲ್ಲಿ, ಅವನಿಗೆ ದೇವಾಸುರರು, ಯಕ್ಷರಾಕ್ಷಸರುಗಳು, ಯಾರಿಂದಲೂ ತನಗೆ ಮರಣ ಬರಬಾರದೆಂಬ ವರ. ಮನುಷ್ಯನೆಂಬವನೆಷ್ಟು ಗಾತ್ರದವನು! ಹುಲ್ಲುಕಡ್ಡಿಗೆ ಸಮನಾದ್ದಾನೆ! ಅವನಿಂದಲೂ ತನಗೆ ಮರಣ ಬೇಡವೆನ್ನುವುದೇ? ಕೇಳಬೇಕೆ ಯಾ ದುರಹಂಕಾರದ ಪ್ರವೃತ್ತಿಯಿಂದ, 'ನನಗೆ ಮನುಷ್ಯನಿಂದಲೂ ಮರಣ ಬಾರದು' ಎನ್ನಲಿಲ್ಲ. ಆದ್ದರಿಂದ, ಮೃತ್ಯುವು ಮನುಷ್ಯರೂಪವನ್ನು ಅಳವಡಿಸಿಕೊಂಡಿತು. ಎಷ್ಟೇ ಸುಭದ್ರವಾದದ್ದಾದರೂ ಲಂಕೆಯನ್ನು ಹೊಕ್ಕಿತು. ಅವನನ್ನು ಯುದ್ಧರಂಗಕ್ಕೆ ಳೆಯಿತು. (ಸಾಮಾನ್ಯವಾದ) ಅಂಬುಗಳಿಂದಲೇ ಅವನ ತಲೆಗಳನ್ನೂ ತೋಳುಗಳನ್ನೂ ಚೆಂಡಾಡಿತು. ಮೃತ್ಯುವನ್ನು ಜಯಿಸಲು ಸಾಧ್ಯವೇ? ಹೇಗೆ ಬರುವುದೋ ಯಾವ ಘಳಿಗೆಗೆ ಬರುವುದೋ ಹೇಳಲು ಸಾಧ್ಯವೇ? ಮೃತ್ಯುವೂ ನಿನ್ನ ಹತ್ತಿರ ಬರದಂತಿರಲು ಉಪಾಯವೇ ಭಗವಂತನ ತಿರುವಡಿಗಳ ಆಶ್ರಯ ಮಾತ್ರ! ಅವನಲ್ಲಿ ಶರಣಾಗತಿ!

6. ஓதமா கடலைக் கடந்தேறி
உயர்கொள் மாக்கடிகாவையிறுத்து,
காதல் மக்களுஞ் சுற்றமுங்கொன்று
கடியிலங்கை மலங்கவெரித்து,
தூதுவந்த குரங்குக்கே உங்கள்
தோன்றல் தேவியை விட்டுக்கொடாதே,

ஆதர் நின்று படுகின்ற தன்றோ!
அஞ்சினேந் தடம் பொங்கு கத்தம் பொங்கோ

ಓದಮಾ ಕಡಲ್ ಕಡನ್ದೇಱಿ
ಉಯರ್ ಕೊಳ್ ಮಾಕ್ಕಡಿ ಕಾವೈಯಿಱುತ್ತು,
ಕಾದಲ್ ಮಕ್ಕಳುಮ್ ಶುಱ್ಱಮುಮ್ ಕೊನ್ಱು
ಕಡಿಯಿಲಙ್ಗೈ ಮಲಙ್ಗ ವೆರಿತ್ತು,
ತೂದು ವನ್ದ ಕುರಙ್ಗುಕ್ಕೇ ಉಙ್ಗಳ್
ತೋನ್ಱಲ್ ದೇವಿಯೈ ವಿಟ್ಟು ಕ್ಕೊಡಾದೇ,
ಆದರ್ ನಿನ್ಱು ಪಡುಗಿನ್ಱದನ್ಱೋ!
ಅಂಜಿನೇನ್ದಡಮಾ ಪೊಙ್ಗುತ್ತಮ್ ಪೊಙ್ಗೇ.

ಓದಮ ஓதம் = ಅಲೆಗಳು ತುಂಬಿದ, ಮಾ மா = ದೊಡ್ಡ, ಕಡಲೈ கடலை = ಕಡಲನ್ನು, ಕಡನ್ದು கடந்து = ದಾಟಿ, ಏಱಿ ஏறி = ಕೋಟೆಗಳನ್ನೇಱಿ, ಉಯರ್ಕೊಳ್ உயர்கொள் = ಉನ್ನತವಾದ, ಮಾ மா = ದೊಡ್ಡ, ಕಡಿ கடி = ಪರಿಮಳ ತುಂಬಿದ, ಕಾವ್ ಕಾವை = ~~[illegible]~~ ವನವನ್ನು, ಇಱುತ್ತು இறுத்து = ಮುರಿದು ಹಾಳುಮಾಡಿ, ಕಾದಲ್ காதல் = (ರಾವಣನ) ಪ್ರೀತಿಯ, ~~ಮಕ್ಕಳೈ மக்களை~~ = ಮಕ್ಕಳುಮ್ மக்களும் = ಮಕ್ಕಳನ್ನು, ಶುಱ್ಱಮುಮ್ சுற்றமும் = ಬಂಧುಗಳನ್ನು, ಕೊನ್ಱು கொன்று = ಕೊಂದು, ಕಡಿ கடி = ಸುಂದರವಾದ, ಇಲಙ್ಗೈ இலங்கை = ಲಂಕೆಯು, ಮಲಙ್ಗ மலங்க = (ನಡುಗುವಂತೆ) ನಾಶವಾಗುವಂತೆ, ಎರಿತ್ತು எரித்து = ಉರಿಸಿ, ತೂದು ವನ್ದ தூது வந்த = (ರಾಮ) ದೂತನಾಗಿ ಬಂದ, ಕುರಙ್ಗುಕ್ಕೇ குரங்குக்கே = ವಾನರನಿಗೇ, ಉಙ್ಗಳ್ உங்கள் = ನಿಮ್ಮ, ತೋನ್ಱಲ್ தோன்றல் = ಒಡೆಯನ (ಸ್ವಾಮಿಯ), ದೇವಿಯೈ தேவியை = ದೇವಿಯನ್ನು, ವಿಟ್ಟು ಕ್ಕೊಡಾದೇ விட்டுக்கொடாதே = ಬಿಟ್ಟುಕೊಡದೆ, ಆದರ್ ನಿನ್ಱು ஆதர் நின்று = ಅವಿವೇಕದಿಂದ ~~[illegible]~~, ಪಡುಗಿನ್ಱದು படுகின்றது = ಅನುಭವಿಸುತ್ತಿರುವುದು. ಅನ್ಱೋ அன்றோ = ಅಲ್ಲವೇ, ಅಂಜಿನೇಮ್ அஞ்சினேம் = ಭಯಪಟ್ಟಿದ್ದೇವೆ, ತಡಮಾ ಪೊಙ್ಗುತ್ತಮ್ ಪೊಙ್ಗೇ = (ನಿಮ್ಮ) ವಂಶವು ಬೆಳೆಯಲಿ ಬೆಳೆಯಲಿ.

ಅಲೆಗಳು ತುಂಬಿದ ದೊಡ್ಡ ಕಡಲನ್ನು ದಾಟಿ, ಕೋಟೆಗಳನ್ನೇರಿ, ಉನ್ನತವಾದ (ಮರಗಳುಳ್ಳ) ದೊಡ್ಡ ಪರಿಮಳ ತುಂಬಿದ ವನವನ್ನು ಮುರಿದು ಹಾಳುಮಾಡಿ ರಾವಣನ ಪ್ರೀತಿಯ ಮಕ್ಕಳನ್ನು ಬಂಧುಗಳನ್ನು ಕೊಂದು ಸುಂದರವಾದ ಲಂಕೆಯು ನಡುಗುವಂತೆ (ನಾಶವಾಗುವಂತೆ) ಉರಿಸಿದ, ರಾಮದೂತನಾಗಿ ಬಂದ ವಾನರನಿಗೇ ನಿಮ್ಮ ಸ್ವಾಮಿಯ ದೇವಿಯನ್ನು ಬಿಟ್ಟುಕೊಡದೆ, ಅವಿವೇಕದಿಂದ ಅನುಭವಿಸುತ್ತಿರುವುದು, ಅಲ್ಲವೇ! ಭಯಪಟ್ಟಿದ್ದೇವೆ. (ನಿಮ್ಮ) ವಂಶವು ಬೆಳೆಯಲಿ, ಬೆಳೆಯಲಿ.

ಲಂಕೆಯ ರಾಕ್ಷಸರು ಶ್ರೀರಾಮನಲ್ಲಿ ಬೇಡಿಕೊಳ್ಳುತ್ತಾರೆ: ಸ್ವಾಮಿ, ನಿಮ್ಮ ದೂತನಾಗಿ ಲಂಕೆಗೆ ಬಂದವನು ಒಬ್ಬ ವಾನರ! ಅಲೆಗಳಿಂದ ತುಂಬಿದ ಬಲು ದೊಡ್ಡ ಕಡಲನ್ನು ಅವನು ಹಾರಿ, ದಾಟಿದನು. ಕೋಟೆ ಕೊತ್ತಲಗಳಿಂದ ಸುಭದ್ರವಾದ ಲಂಕೆಯನ್ನು ಪ್ರವೇಶಿಸಿದನು. ಸೀತಾದೇವಿಯನ್ನು ಹುಡುಕುತ್ತಾ, ಅಶೋಕವನದಲ್ಲಿ ಕುಳಿತಿದ್ದ ಆಕೆಯನ್ನು ಕಂಡನು. ಆಕೆಗೆ ಶ್ರೀರಾಮನ ಮುದ್ರೆಯುಂಗುರವನ್ನಿತ್ತು, ತನ್ನ ಪರಿಚಯ ಮಾಡಿಕೊಟ್ಟೂ, ತಾನು ಶ್ರೀರಾಮದೂತನೇ ಎಂದು ನಂಬಿಕೆ ಕೊಟ್ಟನು. ಅನಂತರ, ತನ್ನ ಶೌರ್ಯವನ್ನು ಮೆರೆಸುವುದಕ್ಕಾಗಿ, ರಾವಣನಿಗೆ ಪ್ರಿಯವಾದ ಸುಂದರವಾದ ಅಶೋಕವನವನ್ನು ಮುಂದುಹಾಳು ಮಾಡಿದನು. ಅವನ ಸದ್ದಲವನ್ನು ಕೇಳಿದು, ಆ ವಾನರನನ್ನು ಹಿಡಿದು ತರಲು ರಾವಣನ ಆಜ್ಞೆಯಾಯಿತು. ಸಾಮಾನ್ಯ ರಾಕ್ಷಸಯೋಧರಿಂದ ಆ ಕೆಲಸ ಸಾಗಲಿಲ್ಲ. ರಾವಣನ ಪ್ರೀತಿಯ ಮಗನಾದ ಅಕ್ಷಯಕುಮಾರನೂ ಮತ್ತು ಇತರ ಬಂಧುಗಳೂ ದೊಡ್ಡ ಸೈನ್ಯದೊಂದಿಗೆ ಹೋಗಿ, ಅವನಿಂದಲೇ ಎಲ್ಲರೂ ಮಡಿದರು (ಹತರಾದರು). ಬಳಿಕ, ಇಂದ್ರಜಿತುವೇ ಅವನನ್ನು ಎದುರಿಸಿ, ಮಹಾವೀರಾಗ್ರಣಿಯೆಂದು ತಿಳಿದು, ಅವನನ್ನು ಬ್ರಹ್ಮಾಸ್ತ್ರದಿಂದ ಕಟ್ಟಿಹಾಕಿ, ರಾವಣನ ಮುಂದೆ ಕರೆದೊಯ್ದನು. ಒಡ್ಡೋಲಗದಲ್ಲಿ, ಆ ವಾನರನು ರಾವಣನಿಗೆ ತಾನು ಅಪಹರಿಸಿಕೊಂಡ ಸೀತೆಯನ್ನು ಬಿಟ್ಟುಕೊಟ್ಟು ರಾಮನಿಗೆ ಶರಣಾಗಬೇಕೆಂದೂ, ಇಲ್ಲವಾದರೆ, ಅವನಿಗೆ ಮೃತ್ಯು ತಪ್ಪುವುದಿಲ್ಲವೆಂದೂ ಬುದ್ಧಿ ಹೇಳಿದನು. ರಾವಣನಿಗೆ ಕೋಪ ಬಂತು. ಕಪಿಯ ಬಾಲಕ್ಕೆ ಬೆಂಕಿ ಹಚ್ಚಿರೆಂದು ಆಜ್ಞೆ ಮಾಡಿದನು. ಆ ಬಾಲದ ಬೆಂಕಿಯಿಂದಲೇ ಇಡಿಯ ~~[illegible]~~ ಲಂಕೆಯನ್ನು ಸುಟ್ಟು ನಾಶ ಮಾಡಿದ ಬಳಿಕ, ಶ್ರೀರಾಮನಲ್ಲಿಗೆ ಶುಭವಾರ್ತೆಯೊಡನೆ ಹಿಂತಿರುಗಿದನು. ಸ್ವಾಮಿ, ~~[illegible]~~ ರಾವಣನು ವಾನರನ ಮಾತನ್ನು ಕೇಳ್ದಂತೆ ನಡೆದುಕೊಳ್ಳಲಿಲ್ಲ. ಅದರಿಂದಲೇ ಇಷ್ಟು ಅನರ್ಥವಾಯಿತು. ಅಯ್ಯೋ! ನಾವು ಹೆದರಿದ್ದೇವೆ ಸ್ವಾಮಿ. ನಿಮ್ಮ ಅಭಯದಿಂದ ನಮ್ಮನ್ನು ರಕ್ಷಿಸಿ.

7. தாழமின்றிமுந்நீரையஞ்ஞான்று
தகைந்ததே கண்டு வஞ்சிநுண் மருங்குல்,
மாழைமான் மடநோக்கியை விட்டு
வாழகில்லா மதியின் மனத்தானை,
ஏழையையிலங்கைக்கிறை தன்னை
யெங்களையொழியக் கொலையவனை,
சூழுமாநினை மாமணி வண்ணா!
சொலவினோந்தடம் பொங்கத்தம் பொங்கோ

Garani Srinivasan

ತಾೞಿಮಿನ್ ಅೞಿ ಮುನ್ನೀರೈ ಯ ಇಱಾಇಱಾನ್ ಉಯಿ

ಕಡೈನ್ದದೇ ಕಣ್ಣು ಪಂಜ ನುಣ್ಣೋ ಮರುಙ್ಗುಲ್,

ಮೂಲತ್ತ್ ಮಾನ್ ಮಡ ನೋಕ್ಕಿಯ್ತ್ತ ವಿಟ್ಟು

ವಾೞ ಹಲ್ಲಾ ಮದಿಯಿನ್ ಮನತ್ತಾನೈ,

ಇಲಙ್ಕೈಯ್ತ್ತ ಉಂಲಙ್ಕೈಕ್ಕ ಇಱ್ಱ ಕನ್ನೆ

ಯಿಙ್ಗಳ್ಳೈ ಯೆಟಾಲೀಯ ಕೊಲ್ಲ್ತೈ ಯಾವನ್ನೈ,

ಶೂಱು ಮಾನಿಱ್ತ್ತ ಮಾ ಮಣಿವಣ್ಣಾ!

ಶೆಲ್ಲಿನೋಽನ್ಡವಾ ಪೊಙ್ಗತ್ತ ಮಾ ಪೊಙ್ಗೋೞ.

ತಾೞಿಮಾ ಇನ್ಱಿ தாழம் இன்றி = ಯಾವ ಅಡಚಣೆಯೂ ಇಲ್ಲದಂತೆ, ಮುನ್ನೀರೈ முந்நீரை = ಸಮುದ್ರವನ್ನು, ಅಱ್ಱಾಇಱಾನ್ ಉಯಿ அருத்தாணு = ಅಂದು, ಕಡೈನ್ದದೇ குணக்கடலை = ಕಡೆದವನಾ, ಪಂಜ ಉಣ್ ಕ್ಷೇತವೆ ಕಟ್ಟಿದ್ದನ್ನೇ, ಕಣ್ಣು கண்டு = ಕಂಡವನಾ, ಮರುಙ್ಗುಲ್ சி = ಬದಿಕನಂತೆ, ನುಣ್ಣೋ நுண் = ಸೂಕ್ಷ್ಮವಾದ, ಮರುಙ್ಗುಲ್ மருங்குல் = ನಡುವಿನ, ಮೂಲತ್ತ್ மாயாணு = ಮುಗ್ಧವಾದ (ಸೊಂಟ ನಿರಾಕರಾದ್ಧಿಯಾದ), ಮಾನ್ மான் = ಜಿಂಕೆಯ, ಮಡ ನೋಕ್ಕಿ மடநோக்கு ನಿಷ್ಕಪಟವನ್ನು ಬೀರುವ ನೋಟ ಪುಳ್ಳೆಯವಳನ್ನು, ವಿಟ್ಟು விட்டு ಕೈಯು = ಬಾಳಲಾರನಲ್ಲಾ ಎಂಬ = ಬಿಟ್ಟು, [illegible] ವಾೞ ಹಲ್ಲಾ வாழகில்லா = ಬಾಳಲಾರೆನಲ್ಲಾ ಎಂಬ ಮದಿ ಇಲ್ ಮತಿ இல = ಬುದ್ಧಿಯಿಲ್ಲದ, ಮನತ್ತಾನ್ನೈ மனத்தானை = ವಿವೇಕವಿಲ್ಲದವನನ್ನು, ಮನಸ್ಸುಳ್ಳವನನ್ನು, ಇಲಙ್ಕೈಯ್ತ್ತ ராமாயணு = ಇಲಙ್ಕೈಕ್ಕ ಇಱ್ಱ ಕನ್ನೆ இலங்கைக்கு இறை தனை = ಲಂಕೆಯ ಒಡೆಯನನ್ನು, ಎಙ್ಗಳ್ ಒಲಿಯು ராவணன் ஒழிய = ಕೊಲೆಮಾಡಿದ, ಅವನ್ನೆ ಅ ನಮ್ಮನ್ನು ಬಿಟ್ಟು, ಕೊಲ್ಲ್ತೈ ரகாடு = ಕೊಲೆಮಾಡಿದ, ಅವನನ್ನು, ಶೂಱುಮಾ ಆ குழும் = ಸುತ್ತುವರಿದಿರುವಂ ವಿಟ್ = ಅವನನ್ನು, ಶೂಱುಮಾ மா மணிவண்ண ಶೆ, ನಿನ್ನ ರ್ರಿ ಶಿಕೆ = ಶಿಕೆ, ಮಾ ಮಣಿವಣ್ಣಾ = ದಿವ್ಯವಾದ ಇಂದ್ರನೀಲ ಮಣಿಯ ಬಣ್ಣದವನೇ, ಶೆಲ್ಲಿನೋಽಮಾ ரசாலவி கேம் = ಪ್ರಾರ್ಥಿಸುತ್ತೇವೆ (ಕೇಳಿಕೊಳ್ಳುತ್ತೇವೆ), ಕಡಮಾ ಪೊಙ್ಗತ್ತ ಮಾ ಪೊಙ್ಗೋೞ கடம் பொங்கத்தம் பொங்கோ = (ನಿನ್ನ) ಹಂಮೆಯು ಬೆಳೆಯಲಿ, ಬೆಳೆಯಲಿ.

ಯಾವ ಅಡ್ಡಿಯೂ ಇಲ್ಲದಂತೆ, ಅಂದು, ಸಮುದ್ರಕ್ಕೆ ಸೇತುವೆ ಕಟ್ಟಿದ್ದನ್ನು ಕಂಡವನಾ, ಚಿತ್ರದಂತೆ ಸೂಕ್ಷ್ಮವಾದ ನಡುವುಳ್ಳ, ನಿರಪರಾಧಿಯಾದ ಜಿಂಕೆಯ ಕಪಟವಿಲ್ಲದ ನೋಟವುಳ್ಳವಳನ್ನು ಬಿಟ್ಟು [illegible]. ಬಾಳಲಾರೆನಲ್ಲಾ ಎಂಬ ಬುದ್ಧಿಹೀನ ಮನದವನನ್ನು, ವಿವೇಕ

ವಿಲ್ಲದವನನ್ನು, ಲಂಕೆಯ ಒಡೆಯನನ್ನು, ನಮ್ಮನ್ನು ಮಾತ್ರವೇ ಬಿಟ್ಟು ಕೊಲೆ ಮಾಡಿದವನನ್ನು ನಿಶ್ಚಿಂತವಾಗಿರುವಂತೆ ಇಲ್ಲಿ, ದಿವ್ಯವಾದ ಇಂದ್ರನೀಲ ಮಣಿಯ ಬಣ್ಣದವನೇ, ಹೇಳಿಕೊಳ್ಳುತ್ತೇವೆ. ನಿನ್ನ ಅಂದವೆಯು ಬೆಳೆಯಲಿ, ಬೆಳೆಯಲಿ. (7)

ಲಂಕೆಯ ರಾಕ್ಷಸರು ಶ್ರೀರಾಮನನ್ನು ಬೇಡಿಕೊಳ್ಳುತ್ತಿದ್ದಾರೆ: ಸ್ವಾಮಿಯವರೇ, ಅಂದು ದಿವ್ಯವಾದ ಇಂದ್ರನೀಲ ಮಣಿಯ ಬಣ್ಣದ ನೀವು ಕಡೆಯಿಲ್ಲದಂತೆ ಸಮುದ್ರಕ್ಕೆ ಸೇತುವೆ ಕಟ್ಟಿದಿರಲ್ಲ! ಅಂದೇ, ಚಿತ್ರದ ಹಾಗೆ ಶ್ರೇಷ್ಠವಾದ ಬಳುಕುವ ನಡುವುಳ್ಳವಳೂ, ಅಪರಾಧವನ್ನೇ ಅರಿಯದ ಜಿಂಕೆಯ ಕಪಟವಿಲ್ಲದ ನೋಟವುಳ್ಳವಳೂ ಆದ ಸೀತಾದೇವಿಯನ್ನು ನಿಮಗೆ ತಂದು ಒಪ್ಪಿಸಿ ಬಿಡಬಾರದಾಗಿತ್ತೇ? ಆ ಪರಮ ಸುಂದರಿಯನ್ನು ಬಿಟ್ಟು ಬಾಳಲಾರೆನಲ್ಲಾ ಎಂಬ ಬುದ್ಧಿಹೀನ ಮನಸ್ಸಿನವನೂ, ವಿವೇಕವಿಲ್ಲದ ಕಾರ್ಯವನ್ನು ಮಾಡಿದವನೂ, ಲಂಕೆಯ ಒಡೆಯನೂ ಆದ ರಾವಣನನ್ನು ಅವನ ಅನುಯಾಯಿಗಳನೇಕರನ್ನು ಕೊಂದು ಹಾಕಿದಿರಲ್ಲ! ನಾವೆಲ್ಲ ಈ ಕೊಲೆಗಾರನನ್ನೇ ಎಂದುಕೊಳ್ಳಿಯೆಂ. ನಿಶ್ಚಿಂತವಾಗಿದ್ದೇವೆ. ಅಂದು ನಮ್ಮನ್ನೇಕೆ ಕೊಲೆ ಮಾಡಿಬಿಡಲಿಲ್ಲ? ನಾವು ಭಯಪಟ್ಟಿ ವಶೇ ಉಳಿದಿದೆ? ಇದನ್ನು ಈಗ ಕೇಳುತ್ತಿದ್ದೇವೆ. ನಾವು ಭಯಪಟ್ಟಿದ್ದೇವೆ. ನಮಗೆ ಅಭಯವನ್ನಿತ್ತು ರಕ್ಷಿಸಿ. ನಿಮ್ಮ ಅಂದವು ಇನ್ನು ಹೆಚ್ಚು ಹೆಚ್ಚಾಗಿ ಬೆಳೆಯುತ್ತಾ ಹೋಗಲಿ.

8. மணங்கொண்டேறும் மண்டோதரிமுதலா
அங்கையற்கண்ணினார் களிருப்ப,
துணங்கொள் மென்முலை நோக்கமொழிந்து
துஞ்சமே சிலதாபதரென்று,
புனங்கொள் மென்மயிலச் சிறைக்கைத்த
புன்மையாளன் நெருஞ்சிற் புகவைத்த,
அணங்கனன்ன திண்டோளெம் ராமற்கு
அஞ்சினேந்தடம் பொங்கத்தம் பொங்கோ

ಮಣಙ್ಕೊಣ್ಡೇರುಮ್ ಮಣ್ಡೋದರಿ ಮುದಲಾ
ಅಙ್ಗೈಯರ್ಕಣ್ಣಿನಾರ್ ಕಳಿರುಪ್ಪ,
ತುಣಙ್ಗೊಳ್ ಮೆನ್ ಮುಲೈ ನೋಕ್ಕಮೊಳಿನ್ದು
ತುಞ್ಜಮೇ ಶಿಲದಾಪದರೆನ್ರು,
ಪುನಙ್ಗೊಳ್ ಮೆನ್ ಮಯಿಲ್ಚ್ ಚಿರೈಕ್ಕೈತ್ತ
ಪುನ್ಮೈಯಾಳನ್ ನೆಞ್ಜಿಲ್ ಪುಹವೈತ್ತ,
ಅಣಙ್ಗನನ್ನ ತಿಣ್ಡೋಳೆಮ್ ರಾಮರ್ಕು
ಅಞ್ಜಿನೋಮ್ ತಡಮ್ ಪೊಙ್ಗತ್ತಮ್ ಪೊಙ್ಗೋ.

Garani Srinivasan

ಮನಮಾ ಕೊಣ್ಡು மணம் காண்டு = ಮನಃಪೂರ್ವಕವಾಗಿ, ವಿಜು
ಮಾ ஏறும் = ಉನ್ನತಸ್ಥಾನಕ್ಕೆ ಏರುವಂಥ, ಮಣ್ಡೋದರಿ ಮುದಲಾ
மண்டோதரி முதலா = ಮಂಡೋದರಿಯಂಥ ಮೊದಲಾದ, ಅಮ
அம் = ಸುಂದರವಾದ, ಕಯಲ್ ಕಣ್ಣಿನಾರ್ಗಳ್ கயல் கண்ணார்கள் =
ಮೀನಿನಂತೆ ಕಣ್ಣುಳ್ಳವರು, ಇರುಪ್ಪ இருப்ப = ಇರಲಾಗಿ, ಕನಮಾ
ಕೋಳ್ குணம் கொண் = ಚಂದನವನ್ನು ಲೇಪಿಸಿರುವ, ಮೆಲ್ ಮುಲೈ
மெல் முலை = ಕೋಮಲವಾದ ಮೊಲೆಗಳುಳ್ಳ, ನೋಕ್ಕಮಾ ಉಲು
ನ್ದು நோக்கம் ஒழிந்து = ಚಂಚಲದ ನೋಟಗಳಿಲ್ಲದ, ಕಂಜ
ಮೇ தஞ்சமே = ನಿಜವಾಗಿಯೂ, ಶಿಲ ತಾಪದರ್ சில தாபதர் =
ಕೆಲವರು ತಾಪಸಿಯರು ಇರುವಂತೆ, ಎನ್ಱು என்று = ಎಂದು, ಪೊನ್
ಮಾ ಕೇಳ್ புனம் கொண் = ಬೆಟ್ಟದ ತಪ್ಪಲಿನಲ್ಲಿರುವ, ಮಯಿಲ್ ಮಯಿ
ಲ್ಪೆ மெய் மயிற் = ಸುಂದರವಾದ ನವಿಲನ್ನು, ಶಿಱೈವೈತ್ತ சிறை
வைத்த = ಸೆರೆ ಮಾಡಿದ, ಪುನ್ಮೈತ್ತ ಆಳನ್ புன்மை ஆளன் =
ನೀಚನಾದವನ, ನೆಂಜಲ್ நெஞ்சில் = ಮನಸ್ಸಿನಲ್ಲಿ, ಪುದ புக
= ಪ್ರವೇಶಿಸುವಂತೆ, ಎಯ್ದ எய்த = ಬಾಣಪ್ರಯೋಗ ಮಾಡಿದ,
ಅನಙನ್ ಅನ್ನ அனங்கன் அன்ன = ಮನ್ಮಥನಂತೆ ಇರುವ,
ತಿಣ್ ತೋಳ್ திண் தோள் = ಬಲಿಷ್ಠವಾದ ತೋಳುಗಳ, ಎಮ
நாம் = ನಮ್ಮ, ಇರಾಮನುಕ್ಕು இராமற்கு = ಶ್ರೀರಾಮನಿಗೆ,
ಅಂಜಿನೋಮ அஞ்சினோம் = ಭಯಪಟ್ಟಿದ್ದೇವೆ, ಕಡಮ
ಪೊಙ್ಗತ್ತಮ ಪೊಙ್ಗೋ தடம் பொங்கத்தம் பொங்கோ =
ಮಂಗಳವು ಬೆಳೆಯಲಿ, ಬೆಳೆಯಲಿ.

ಮನಃಪೂರ್ವಕವಾಗಿ ಉನ್ನತಸ್ಥಾನಕ್ಕೆ ಏರುವಂಥ ಮಂಡೋದರಿಯೇ ಮೊದಲಾದ ಸುಂದರವಾದ ಮೀನಿನಂತೆ ಕಣ್ಣುಗಳುಳ್ಳವರು ಕೋಮಲೆಯರು ಚಂಚಲದ ನೋಟಗಳಿಲ್ಲದ, ನಿಜವಾಗಿ ಇರುವಾಗ, ಚಂದನವನ್ನು ಲೇಪಿಸಿರುವ, ತಾಪಸಿಯರಾಗಿರುವ, ಬೆಟ್ಟದ ತಪ್ಪಲಿನಲ್ಲಿರುವ ಸುಂದರವಾದ ನವಿಲನ್ನು ಸೆರೆಮಾಡಿದ ನೀಚನಾದವನ ಮನಸ್ಸಿನಲ್ಲಿ ಹೊಕ್ಕುವಂತೆ ಬಾಣಪ್ರಯೋಗ ಮಾಡಿದ ಮನ್ಮಥನಂತಿರುವ, ಬಲಿಷ್ಠವಾದ ತೋಳುಗಳುಳ್ಳ ನಮ್ಮ ಶ್ರೀರಾಮನಿಗೆ ಭಯಪಟ್ಟಿದ್ದೇವೆ. ಮಂಗಳವು ಬೆಳೆಯಲಿ, ಬೆಳೆಯಲಿ.

ರಾಕ್ಷಸರು ಶ್ರೀರಾಮನಲ್ಲಿ ಹೇಳಿಕೊಳ್ಳುತ್ತಾರೆ: ಸ್ವಾಮಿ, ನಮ್ಮ ಒಡೆಯನಾದ ರಾವಣನಿಗೆ ಮಂಡೋದರಿಯಂಥ ಅನೇಕ ಮಂದಿ ಪತ್ನಿಯರು. ಅವರಲ್ಲಿ ಒಬ್ಬೊಬ್ಬಳೂ ಶುದ್ಧ ಶೀಲವಂತೆ. ಪತಿವ್ರತೆ. ಉನ್ನತ ಕೀರ್ತಿಯುಳ್ಳವಳು. ಸುಂದರಿ. ಆದರೂ, ಸುಂದರಿಯಾದರೂ ತಾಪಸಿಯರಂತೆ ವಿರಕ್ತೆಯರು, ಕಣ್ಣುಗಳಲ್ಲಿ ಚಪಲವಿಲ್ಲದವಳಾಗಿ, ಅಧೋವದನೆಯಾಗಿರುವ ಸುಶೀಲೆ

Gerani Srinivasan

ಮಿಯಲ್ಲಿ ಮೊರೆಹೊಕ್ಕುವುದೇ? ಬೆಟ್ಟದ ತಪ್ಪಲಿನಲ್ಲಿ ಸ್ವಚ್ಛಂದವಾಗಿ ನಲಿದಾಡುವ ಸುಂದರವಾದ ನವಿಲಿನಂತೆ ಇರುವ ಅವಳನ್ನು ಕರೆದು ತರದಾಕುವುದೇ? ಅವನು ಮಾಡಿದ್ದು ಅವಿವೇಕವೆಂದಾ, ಅದಕ್ಕಾಗಿ ಅವನು ತನ್ನ ಪ್ರಾಣಗಳನ್ನೇ ತೆರಬೇಕೆಂದಾ ಆ ನೀಚನ ಮನದಲ್ಲಿ ನಾಟಿಹೋಗುವಂತೆ, ಬಲಿಷ್ಠವಾದ ಕೋಲುಗಳಿಂದ ಬಾಣಪ್ರಯೋಗ ಮಾಡಿದ ಮನ್ಮಥಸುಂದರನಾದ ಶ್ರೀರಾಮನಿಗೆ ನಾವು ಭಯಪಟ್ಟಿದ್ದೇವೆ. ನಮಗೆ ಅಭಯವನ್ನಿತ್ತು ನಮ್ಮನ್ನು ರಕ್ಷಿಸಬೇಕು. ನಿಮ್ಮ (ಶ್ರೀರಾಮನ) ಕೀರ್ತಿಯು ದಿಕ್ಕುದಿಕ್ಕಾಗಿ ಬೆಳೆಯಲಿ.

9. புரங்கள்மூன்று மோர் மாத்திரைப் போதில்
பொங்கெரிக்கிரை கண்டவனம்பில்,
சரங்களே கொடிதாய டுகின்ற
சாம்பவானுடன் நிற்கத் தொழுதோம்,
இரங்கு நீ யெமக்கெந்தை பிரானே
இலங்கு வெங்கதிரோன்றன் சிறுவா,
குரங்குகட்கரசே, எம்மைக் கொல்லேல்
கூறினோம் தடம்பொங்கத்தம் பொங்கோ

ಪುರಙ್ಗಳ್ ಮೂನ್ರುಮೋರ್ ಮಾತ್ತಿರೈಪ್ಪೋದಿಲ್
ಪೊಙ್ಗೆರಿಕ್ಕಿರೈ ಕಣ್ಡವನಮ್ಬಿಲ್,
ಶರಙ್ಗಳೇ ಕೊಡಿದಾಯಡುಹಿನ್ರ
ಶಾಮ್ಬವಾನುಡನ್ ನಿರ್ಕತ್ತೊಳುದೋಮ್,
ಇರಙ್ಗುನೀಯೆಮಕ್ಕೆನ್ದೈ ಪಿರಾನೇ
ಇಲಙ್ಗು ವೆಙ್ಗದಿರೋನ್ರನ್ ಶಿರುವಾ,
ಕುರಙ್ಗುಕಟ್ಕರಶೇ, ಎಮ್ಮೈಕ್ಕೊಲ್ಲೇಲ್
ಕೂರಿನೋಮ್ ತಡಮ್ ಪೊಙ್ಗತ್ತಮ್ ಪೊಙ್ಗೋ.

ಪುರಙ್ಗಳ್ ಮೂನ್ರುಮ್ புரங்கள்மூன்றும் = ತ್ರಿಪುರಗಳನ್ನು, ಓರ್ ಮಾತ್ತಿರೈ ಪೋದಿಲ್ ஓர் மாத்திரை போதில் = ಕ್ಷಿಪ್ರವಾದ ನಿಮಿಷಕಾಲ, ಪೊಙ್ಗು ಎರಿಕ್ಕೇ பொங்கு எரிக்கே = ದಳ್ಳುರಿಗೆ, ಇರೈ ಕಣ್ಡವನ್ இரை கண்டவன் = ಆಹಾರವಾಗಿ ಮಾಡಿದವನ, ಅಮ್ಬಿಲ್ அம்பில் = ಅಂಬುಗಳಿಗಿಂತಲೂ, ಶರಙ್ಗಳೇ சரங்களே = (ತನ್ನ) ಬಾಣಗಳನ್ನೇ ಕೊಡಿದಾಯ್ கொடிதாய் = ಕ್ರೂರವಾಗಿ, (ತೀಕ್ಷ್ಣವಾಗಿ), ಅಡುಹಿನ್ರ அடுகின்ற = ಪ್ರಯೋಗಿಸುವ, ಶಾಮ್ಬವಾನ್ ಉಡನ್ சாம்பவான் உடன் = ಜಾಂಬವನೊಡನೆ, ನಿರ್ಕ நிற்க = ನಿಲ್ಲುವುದಕ್ಕಾಗಿ (ಇರುವುದಕ್ಕಾಗಿ, ತೊಳುದೋಮ್ தொழுதோம் = ನಮಸ್ಕರಿಸಿದೆವು, ಇರಙ್ಗು

இரங்கு = ಕೃಪೆದೋರು, ನೀ ಎಮಕ್ಕು நாமக்கு = ನೀನು ನಮಗೆ, ಎನ್ದೈ நாந்தாத = ನಮ್ಮ ಸ್ವಾಮಿಯೇ, ಏರಾನೇ பிரானே = ಒಡೆಯನೇ, ಇಲಙ್ಗು இலங்கு = ಹೊಳೆಯುವ, ವಜ್ರದಶನ್ ಶನ್ உபங்க கிரோண் தூண் = ದೀರ್ಘವಾದ, ಕುರಙ್ಗುಕಟ್ಟು குரங்குகட்கு அரசே ಬಾ = ಮಗನೇ, ಕುರಙ್ಗುಕಟ್ಟು ಅರಸೇ குரங்குகட்கு அரசே = ವಾನರರ ರಾಜನೇ, ಎಮ್ಮೈ ಕೈವಿಡೇಲ್ எம்மை கைவிடேல் = ನಮ್ಮನ್ನು ಕೈಬಿಡಬೇಡ, ಕೋಙ್ಗಿನೇಲಮ் கோங்கிறீரும் = ಹೇಳ ತೊಡಗು, ಕಳಿನ್ ಕುಙ್ಗುಮಮ್ ಪೊಙ್ಗ கடம் பொங்க ಕಟಳುಪ್ಪುಕ್ಕ್ವನ್, ಶಹಮಾ ಪೊಙ್ಗುಮ ಪೊಙ್ಗಲ್ ಬಾಳೆಯಲಿ, ಬಾಳೆಯಲಿ.
கூடும் பொங்கோ = ಹಿಂಸೆಯು ಬಾಳೆಯಲಿ, ಬಾಳೆಯಲಿ.

ತ್ರಿಪುರಗಳನ್ನು ಒಂದು ರೆಪ್ಪೆಯಾಡಿಸುವಷ್ಟು ಕಾಲದಲ್ಲಿಯೇ ಆಹಾರವಾಗಿ ಮಾಡಿದವನ ಬಾಣಗಳಿಗಿಂತಲೂ ತನ್ನ ಬಾಣಗಳನ್ನೇ ಶೀಘ್ರವಾಗಿ ಪ್ರಯೋಗಿಸುವ ಜಾಂಬವನೆಂದನೆ ಇರುವುದರಿಂದ ನಮ ಹೊಳೆಯುವ ದೀರ್ಘ ಭುಜವುಳ್ಳವನು. ನಮ್ಮ ಸ್ವಾಮಿಯೇ, ಒಡೆಯನೇ ಹೊಳೆಯುವ ದೀರ್ಘ ಭುಜದವನೇ, ಮಗನೇ, ವಾನರರ ರಾಜನೇ, ನಮಗೆ ನೀನು ಕೃಪೆಮಾಡು. ನಮ್ಮನ್ನು ಕೈಬಿಡಬೇಡ. ಹಿಂಸೆಯು ಬಾಳೆಯಲಿ ಬಾಳೆಯಲಿ. (೭)

ತ್ರಿಪುರದಹನದ ಕಥೆ:- ತಾರಕಾಸುರನೆಂಬುವನಿಗೆ ವಿದ್ಯುನ್ಮಾಲಿ, ತಾರಕಾಕ್ಷ, ಕಮಲಾಕ್ಷ ಎಂಬ ಮೂವರು ಮಕ್ಕಳು. ಇವರು ಬ್ರಹ್ಮನನ್ನು ಕುರಿತು ಘೋರವಾಗಿ ತಪಸ್ಸುಮಾಡಿ ಅವನಿಂದ ವಿಚಿತ್ರವಾದ ಸಾಮರ್ಥ್ಯವುಳ್ಳ ಮೂರು ವಿಮಾನಗಳನ್ನು ಪಡೆದುಕೊಂಡರು. ಈ ವಿಮಾನಗಳು ಆಕಾಶದಲ್ಲಿ ಒಂದುಕಡೆಯಿಂದ ಮತ್ತೊಂದು ಕಡೆಗೆ ಹಾರಾಡುವಂಥವುಗಳಾಗಿಯೂ, ಅದೃಶ್ಯವಾಗಿ ಹೋಗುವಂಥವುಗಳಾಗಿಯೂ ಇದ್ದವು. ಮೂವರು ರಾಕ್ಷಸರು ತಮ್ಮ ಬಲಿಷ್ಠ ಅನುಯಾಯಿಗಳನ್ನು ಸೇರಿಸಿಕೊಂಡು, ಮೂರು ವಿಮಾನಗಳನ್ನು ಸ್ವೇಚ್ಛೆಯಾಗಿ ಹಾರಾಡಿಸುತ್ತಾ, ಎಲ್ಲಿ ಬೇಕೆಂದರೆ ಅಲ್ಲಿಳಿಸುತ್ತಾ, ಅವುಗಳೊಡನೆ ಸಿಕ್ಕಿಕೊಂಡ ವಿಮಾನಗಳನ್ನು ನಾಶಪಡಿಸುತ್ತಾ ಕಾಲಕಳೆಯುತ್ತಿದ್ದರು. ಮತ್ತೆ ಹೇಳಿದರೆ ಇವರ ಹಾವಳಿಯನ್ನು ತಡೆಯಲು ಸಾಧ್ಯವಾಗಲಿಲ್ಲ, ದೇವಾದಿದೇವತೆಗಳು ತ್ರಿಪುರಾಸುರರ ಉಪದ್ರವದಿಂದ ತಮ್ಮನ್ನು ಪಾರುಮಾಡಬೇಕೆಂದು ರುದ್ರನನ್ನು ಮೊರೆಹೊಕ್ಕರು. ಆಗ ರುದ್ರನು ಭೂಮಿಯನ್ನು ರಥವನ್ನಾಗಿಯೂ, ಸೂರ್ಯಚಂದ್ರರನ್ನು ರಥದ ಚಕ್ರಗಳನ್ನಾಗಿಯೂ, ನಾಲ್ಕು ವೇದಗಳನ್ನು ರಥದ ಕುದುರೆಗಳನ್ನಾಗಿಯೂ, ಬ್ರಹ್ಮನನ್ನೇ ರಥದ ಸಾರಥಿಯನ್ನಾಗಿಯೂ, ಮೇರು ಪರ್ವತವನ್ನು ಬಿಲ್ಲನ್ನಾಗಿಯೂ, ಆದಿಶೇಷನನ್ನು ಬಿಲ್ಲಿನ ಹಗ್ಗವನ್ನಾಗಿಯೂ, ಮಹಾವಿಷ್ಣುವನ್ನೇ ತೀಕ್ಷ್ಣವಾದ ಅಂಬನ್ನಾಗಿಯೂ, ವಾಯುವನ್ನು ಅಂಬಿನ ಗರಿಗಳನ್ನಾಗಿಯೂ, ಅಗ್ನಿಯನ್ನು ಅಂಬಿನ ಮೊನೆ

Garani Srinivasan

ಯನ್ನಾಗಿಯೂ ಭಾವಿಸಿಕೊಂಡು, ಶ್ರೀವಿರಾಮರನ ಮೇಲೆ ಯುದ್ಧವನ್ನು ಮಾಡಿ, (ಬಾಣವನ್ನು ಪ್ರಯೋಗಿಸಿ,) ಒಂದು ಕೈ ಎತ್ತಿ ಬಿಡಿಯು ವರ್ಷ ಕಾಲದಲ್ಲಿ, ಆ ಕಾಲದಲ್ಲಿಯೇ ಆ ಮಹಾ ವಿಜ್ಞಾನಗಳನ್ನು ಕುಬ್ಜ ಹಾಕಿದನು. ಅದ್ದರಿಂದ ಶ್ರೀವಿರಾಮರನಾ ಕುಬ್ಜ ಬಾ ದಯಾದರು.

ಲಂಕೆಯ ರಾಕ್ಷಸರು ಹೇಳಿಕೊಳ್ಳುತ್ತಾರೆ: ಸ್ವಾಮಿ, ಶ್ರೀರಾಮನವ ಬಾಣ ಕಾಲದಲ್ಲಿ ಯುದ್ಧದ ಪ್ರಯೋಗಿಸಿದ ಬಾಣಾಸ್ತ್ರಂಗಳು ಶಿಕ್ಷೆಯಾದ ಬಾಣಗಳನ್ನು ಪ್ರಯೋಗಿಸಿದ ಬಲ್ಲ ಜಾಂಬವಂತನನ್ನು ಆಶ್ರಯಿಸಿದ ಯುಕ್ತಿಸಿದೆವು. ನಾವು ಯುದ್ಧ ವಿಶ್ರಾಂತಿ ಅವನ ಬಳಿಯಿಂದ ನಮ್ರತೆಯಿಂದ ನಮಸ್ಕರಿಸಿದೆವು. ವಾನರ ರಾಜನಾದ ಸುಗ್ರೀವನೇ, ನೀನಾದರೂ ನಮಗೆ ಕೃಪೆದೋರು. ನಮ್ಮನ್ನು ಕೊಲ್ಲಬೇಡ. ಶ್ರೀರಾಮನ ಹಿರಿಯ ಬಳಿಯಂತ್ತ ಹೋಗಲಿ.

10\. அங்கு வானவர்க்காகுலம் தீர

அணியிலங்கை யழித்தவன்றன்னை,

பொங்கு மா வலவன் கலிகன்றி

புகழ்ந்த பொங்கத்தங் கொண்டு இவ்வுலகினில்

எங்கும்பாடி நின்றாடுமின் தொண்டீர்!

இம்மையே யிடரில்லை, இறந்தால்

தங்குமூரண்டமே கண்டு கொண்மின்

சாற்றினோந் தடம் பொங்கத்தம் பொங்கோ

ಅಙ್ಗು ವಾನವರ್ಕ್ಕಾಕುಲಮ್ ತೀರ

ಅಣಿಯಿಲಙ್ಗೈ ಯಳಿತ್ತವನ್ ತನ್ನೈ,

ಪೊಙ್ಗು ಮಾ ವಲವನ್ ಕಲಿಕನ್ರಿ

ಪುಹಳ್ನ್ದ ಪೊಙ್ಗತ್ತಙ್ಗೊಣ್ಡು ಇವ್ವುಲಗಿನಿಲ್

ಎಙ್ಗುಮ್ ಪಾಡಿ ನಿನ್ರಾಡುಮಿನ್ ತೊಣ್ಡೀರ್!

ಇಮ್ಮೈಯೇ ಯಿಡರಿಲ್ಲೈ, ಇರನ್ದಾಲ್

ತಙ್ಗುಮೂರಣ್ಡಮೇ ಕಣ್ಡು ಕೊಣ್ಮಿನ್

ಶಾಟ್ರಿನೋನ್ದಡಮ್ ಪೊಙ್ಗತ್ತಮ್ ಪೊಙ್ಗೇ.

ಅಙ್ಗು அங்கு = ಮೇಲಣ ಲೋಕಗಳಲ್ಲಿ, ವಾನವರ್ಕ್ಕು வானவர்க்கு = ದೇವತೆಗಳಿಗೆ, ಆಕುಲಮ್ ஆகுலம் = ಭಯ ದುಃಖಗಳು, ತೀರ தீர = ತೀರುವಂತೆ, ಅಣಿ அணி = ಶೋಭಾಯಮಾನ, ಇಲಙ್ಗೈ இலங்கை = ಲಂಕೆಯನ್ನು, ಅಳಿತ್ತವನ್ ತನ್ನೈ அழித்தவன் தன்னை = ನಾಶಗೊಳಿಸಿದವನನ್ನು ಕುರಿತು, ಪೊಙ್ಗು பொங்கு = ಉತ್ಸಾಹದಿಂದ ತುಂಬಿರುವ, ಮಾ மா = ಕುದುರೆಯನ್ನು,

ವಲವನ್ ಬಲಯಿನ್ = ನಡದ ಬಲ್ಲವನೂ, ಕಲಕ್ಕಮ್ ಇಲ್ಲಾ ಕಣ್ಣಿ = ಕಲಕ್ಕಂಪಿಲ್ಲದೆಯೂ, ಪುಲಿಯ 4 ಕಟ್ಟಿ = ಹೊಗಳುವ, ಹೊಗ್ಗತ್ತಮ ಪೊಂಗು ಕತ್ತಿರುಂ = ಜಯಕಾರವನ್ನು, ಕೇಟ್ಟು ಕೊಣ್ಡು = ಕೇಳಿ ಆನಂದಿಸಿ, ಇ ಉಲಗನಿಲ್ ಇ-ಉಲಗಿನಿಲ್ = ಈ ಲೋಕದಲ್ಲಿ, ಎಙ್ಙುಮ್ ನಾಙ್ಗುಂ = ಎಲ್ಲ ಕಡೆಯೂ, ಪಾಡಿ = ಹಾಡುತ್ತಾ, ನಿನ್ದು ನಿನ್ರು = ನಿಂತು, ಆಡುವಿನ್ ಆಡಿಯಿನ್ = ಕುಣಿದಾಡಿ, ತೊಣ್ಡರ್ ತೊಣ್ಡರ್ = ಭಕ್ತರೇ, ಇಮ್ಮೈಯಲೇ ಇಮ್ಮೈಯೇ = ಈ ಜನ್ಮದಲ್ಲಿಯೇ, ಇಡರ್ ಇಲ್ಲೈ ಇಡರ್ ಇಲ್ಲ = ದುಃಖ ದೈನ್ಯಗಳು ಇರುವುದಿಲ್ಲ. ಇಡನ್ದಾಲ್ ಇರುನ್ದಾಲ್ = ಸಂಶಯ ಬೇಡ, ಶಙ್ಗುಮ್ ತಙ್ಗುಮ್ = ಹೋಗಿ ಸೇರುವ, ಊರ್ ಉಣ್ರ್ = ಊರು, ಅಣ್ಣುಮೇ ಅಣ್ಣಮ್ = ಪರಮಪದವೇ, ಕಣ್ಡು ಕೊಣ್ಡವರ್ ಕಣ್ಡು ಕೊಣ್ಡಿನ್ = ಅರಿತಿದ್ದೀರಲ್ಲ, ಶ್ರೀರಾಮನ ಶಾಱ್ಱುಮೇ = ದೂಂದಾಂ ಹೇಳುತ್ತೇವೆ (ಹೇಳುವೆವು), ಶರಮ ಹೊಗ್ಗತ್ತಮ ಹೊಗಳ್ತೇ ಕುಡಂ ಪೊಂಗು ಕತ್ತಿರುಂ ಪೊಂಗುಕೆ ಮಹಿಮೆಯುಂ ಬೆಳೆಯಲಿ ಬೆಳೆಯಲಿ.

ಮೇಲಿನ ಲೋಕಗಳಲ್ಲಿ ದೇವತೆಗಳಿಗೆ ಉಂಟಾದ ಭಯ ದುಃಖಗಳು ಶಮನ ಮಾಡಬಲ್ಲ ಲಂಕೆಯನ್ನು ನಾಶಗೊಳಿಸಿದವನನ್ನು ಕುರಿತು, ಉತ್ಸಾಹದಿಂದ ನಡೆದಾಡುವ ಕುದುರೆಯನ್ನು ನಿರ್ವಹಿಸಬಲ್ಲವನಾ ಕಲಕ್ಕಮಿಲ್ಲದೆಯೂ ಹೊಗಳುವ ಜಯಕಾರವನ್ನು ಕೇಳಿ ಆನಂದಿಸಿ ಈ ಲೋಕದಲ್ಲಿ ಎಲ್ಲ ಕಡೆಯಲ್ಲೂ ಹಾಡುತ್ತಾ ನಿಂತು ಕುಣಿದಾಡಿ, ಭಕ್ತರೇ, ಈ ಜನ್ಮದಲ್ಲಿಯೇ ದುಃಖ ದೈನ್ಯಗಳು ನಿಮಗೆ ಇರುವುದಿಲ್ಲ; ಸಂಶಯ ಬೇಡ ನೀವು ಹೋಗಿ ಸೇರುವ ಊರು ಪರಮಪದವೆಂದೇ ತಿಳಿದುಕೊಳ್ಳಿರಿ. ದೂಂದಾಂ ಹೇಳುತ್ತೇವೆ. ಶ್ರೀರಾಮನ ಮಹಿಮೆಯು ಬೆಳೆಯಲಿ, ಬೆಳೆಯಲಿ. (10)

ಭೂಲೋಕದಲ್ಲಿ ರಾಕ್ಷಸರು ಪ್ರಬಲರಾದರು. ಅವರ ದಾಳಿಯಿಂದ ಯಜ್ಞಯಾಗಾದಿಗಳಿಗೆ ಆತಂಕವುಂಟಾಯಿತು. ಭಯಂಕರ. ಲಂಕೆಗೆ ಅಧಿಪತಿಯಾದ ರಾವಣಾಸುರನ ಬಲದರ್ಪಗಳು ಹೆಚ್ಚುತ್ತಿರದಾದವು. ತನ್ನ ಭುಜಬಲ ಪರಾಕ್ರಮದಿಂದ ಮೂರು ಲೋಕಗಳನ್ನು ನಡುಗಿಸುತ್ತಿದ್ದ ಅವನಿಂದ ತಮ್ಮನ್ನು ರಕ್ಷಿಸಬೇಕೆಂದು ದೇವತೆಗಳು ಶೇಷಶಯನನಾದ ಭಗವಂತನಲ್ಲಿ ಮೊರೆಯಿಟ್ಟರು. ತಾನು ಇಕ್ಷ್ವಾಕು ವಂಶದಲ್ಲಿ ದಶರಥ ಚಕ್ರವರ್ತಿಯ ಮಗನಾಗಿ ತಾನು ಜನಿಸಿ ಅವರ ದುಃಖಗಳನ್ನು ತೊಲಗಿಸುವುದಾಗಿ ಭಗವಂ

ತನು ಅಭಯವನ್ನಿತ್ತನು. ಹೀಗೆಯೇ, ಶ್ರೀ ರಾಮನಾಗಿ ಸ್ವಾಮಿಯು
ಜನಿಸಿದ ಬಳಿಕ ಚಿಕ್ಕ ವಯಸ್ಸಿನಿಂದಲೇ ರಾಕ್ಷಸ ಕುಲವನ್ನು
ಧ್ವಂಸ ಮಾಡುತ್ತಾ ಬಂದನು. ಮಾರೀಚ, ಸುಬಾಹುಗಳನ್ನು ನಿಗ್ರಹಿಸಿ
ದನು. ತಾಟಕಿಯನ್ನು ಕೊಂದನು. ಅನಂತರ, ಪಿತೃವಾಕ್ಯಪರಿಪಾಲನೆ
ಗಾಗಿ ತನ್ನ ತಮ್ಮ ಲಕ್ಷ್ಮಣನನ್ನು, ಧರ್ಮಪತ್ನಿ ಸೀತೆಯನ್ನು ಕೂಡಿಕೊಂ
ಡು ಹದಿನಾಲ್ಕು ವರ್ಷಗಳ ವನವಾಸಕ್ಕಾಗಿ ಕಾಡಿಗೆ ಹೋದನು. ಅಲ್ಲಿ
ದಂಡಕಾರಣ್ಯದಲ್ಲಿ (ಜನಸ್ಥಾನದಲ್ಲಿ) ಸೇರಿಕೊಂಡಿದ್ದ ಖರ, ದೂಷಣ, ತ್ರಿಶಿರಸ್ಸುಗಳನ್ನು
ಇನ್ನೂ ಅನೇಕಾನೇಕ ರಾಕ್ಷಸರನ್ನು ನಾಶಗೊಳಿಸಿದನು. ಪಂಚವಟಿಯ
ಲ್ಲಿ ವಾಸಮಾಡುತ್ತಿರುವಾಗ ರಾವಣಾಸುರನು ಸನ್ಯಾಸಿಯಾಗಿ ಆಶ್ರ
ಮದಲ್ಲಿ ಉಳಿದುಕೊಂಡಿದ್ದ ಸೀತಾದೇವಿಯನ್ನು ಮೋಸದಿಂದ ಅಪಹರಿ
ಸಿ, ಲಂಕೆಯಲ್ಲಿ ಸೆರೆಯಿಟ್ಟನು. ಇತ್ತ ಶ್ರೀರಾಮನು ಕಳೆದುಕೊಂಡ
ತನ್ನ ಧರ್ಮಪತ್ನಿಯನ್ನು ಹುಡುಕುತ್ತಾ ಕಿಷ್ಕಿಂಧೆಯಲ್ಲಿ ಸುಗ್ರೀವನ
ಸಖ್ಯ ದೊರಕಿತು. ಅವನೂ ತನ್ನ ವಾನರಸೈನ್ಯವನ್ನು ಶ್ರೀರಾಮನ ಸೇವೆ
ಯಲ್ಲಿ ತೊಡಗಿಸಿದನು. ನಾಲ್ಕು ದಿಕ್ಕಿನಲ್ಲೂ ಸೀತಾದೇವಿಯನ್ನು ಹುಡುಕಲು
ವಾನರರು ಹೋದರು. ದಕ್ಷಿಣದ ಕಡೆ ಹೊರಟ ಹನುಮಂತನು, ಲಂಕೆಗೆ
ಅಡ್ಡಲಾಗಿದ್ದ ದಕ್ಷಿಣ ಸಮುದ್ರವನ್ನು ಹಾರಿ, ಲಂಕೆಯನ್ನು ಸೇರಿ, ಎಲ್ಲ
ಕಡೆಯಿಂದ ಹುಡುಕಾಡಿ, ಅಶೋಕವನದಲ್ಲಿ ಸೀತೆಯನ್ನು ಕಂಡನು.
ಆಕೆಗೆ ಹರ್ಷವನ್ನು ತಂದು, ಶ್ರೀರಾಮನ ಮುದ್ರೆಯುಂಗುರವನ್ನಿತ್ತು,
ಆಕೆಯಿಂದ ಚೂಡಾಮಣಿಯನ್ನು ಪಡೆದನು. ಅನಂತರ, ತಾನು
ಶ್ರೀರಾಮದೂತನಾಗಿ ಬಂದಿದ್ದನ್ನು ಪ್ರಕಟಗೊಳಿಸಬೇಕೆಂದು ಬಗೆದು,
ರಾವಣನಿಗೆ ಅತಿಪ್ರಿಯವಾದ ಸುಂದರವಾದ ಅಶೋಕವನವನ್ನು ಮುರಿದು
ಹಾಳುಮಾಡಿದನು. ಅವನನ್ನು ತಡೆಯಲು ಬಂದ ರಾಕ್ಷಸರನ್ನೆಲ್ಲ ಕೊಂ
ದು ಹಾಕಿದನು. ದೊಡ್ಡ ಸೈನ್ಯದೊಡನೆ ಅವನನ್ನೆದುರಿಸಿದ ಅಕ್ಷಯ
ಕುಮಾರನೇ ಮೊದಲಾದ ಪ್ರಮುಖ ರಾಕ್ಷಸರನ್ನು ಸದೆಬಡಿದನು. ಕಡೆಗೆ,
ಇಂದ್ರಜಿತುವಿನ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು, ರಾವಣನ ಎದುರಿಗೆ ಕರೆ
ದೊಯ್ಯಲ್ಪಟ್ಟನು. ರಾವಣನಿಗೆ ಶ್ರೀರಾಮನ ಶೌರ್ಯವನ್ನು ಮಹಿಮೆ
ಯನ್ನು ವಿವರಿಸಿ ಹೇಳಿದನು. ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸಿ,
ಅವನ ಕ್ಷಮೆ ಬೇಡೆಂದು ಬುದ್ಧಿ ಹೇಳಿದನು. ರಾವಣನು ಇದನ್ನು ಕೇಳ
ಬೇಕಲ್ಲ! ಅವನಿಗೆ ಕೋಪ ಬಂತು. ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಿ
ಅನಂತರ ಓಡಿಸಿಬಿಡಿರೆಂದು ಆಜ್ಞಾಪಿಸಿದನು. ಹನುಮಂತನು ತನ್ನ
ಬಾಲದ ಬೆಂಕಿಯಿಂದಲೇ ಲಂಕೆಯನ್ನು ಸುಟ್ಟು ಭಸ್ಮ ಮಾಡಿದನು. ಶ್ರೀ
ರಾಮನ ಬಳಿಗೆ ಹಿಂತಿರುಗಿ, ವಿಷಯವನ್ನು ವಿವರಿಸಿದನು. ಶ್ರೀರಾಮ
ನು ವಾನರಸೈನ್ಯದೊಡನೆ ಕಡಲಕರೆಗೆ ಬಂದು, ಕಡಲಿಗೆ ಸೇತುವೆ ಕಟ್ಟಿ,

Garani Srinivasan

ಕಡಲನ್ನು ದಾಟಿ, ಲಂಕೆಯನ್ನು ಪ್ರವೇಶಿಸಿ, ರಾವಣನೊಡನೆ ಯುದ್ಧ ಮಾಡಿ
ದನು. ರಾವಣನು ತನ್ನ ಕಡೆಯ ರಾಕ್ಷಸ ವೀರರನ್ನೆಲ್ಲಾ ಕಳೆದುಕೊಂಡ
ಬಳಿಕ, ತಾನೂ ಶ್ರೀರಾಮನೊಡನೆ ಯುದ್ಧಕ್ಕೆ ನಿಂತು, ಹೋರಾಡಿ, ಮಡಿ
ದನು. ದೇವತೆಗಳೆಲ್ಲರೂ ಹರ್ಷಿಸಿದರು.

(ಮನುಷ್ಯನಾಗಿ) [ಕ್ಷತ್ರಿಯ ವಂಶದಲ್ಲಿ ಜನಿಸಿ, ತನ್ನ ಬಿಲ್ಲು ಬಾಣಗಳಿಂದಲೇ
ಅಪ್ರತಿಮ ಸಾಹಸವನ್ನು ತೋರಿಸಿದ ಶ್ರೀರಾಮನ ಹಿರಿಮೆಯನ್ನೇನೆಂ
ದು ಹೊಗಳುವುದು! ಎಷ್ಟು ಹೊಗಳಿದರೆ ತಾನೇ ಅದು ತೀರುವುದು!
ಶ್ರೀರಾಮನಿಗೆ ಜಯವೋ ಜಯ! "ಕಡಮೋ ಪ್ರಜ್ಞೆ ತ್ತಮೋ ಪ್ರಜ್ಞೆ" ಇದನ್ನು ಬಲ್ಲವರಾಗಿ
ಅವನ ಹಿರಿಮೆ ಬೆಳೆಯಲಿ, ಬೆಳೆಯಲಿ! ಶ್ರೀರಾಮನ
ಮಾಡಿಕೊಂಡು, ಅತ್ಯಂತ ಅಪರೂಪವಾದ ರೀತಿಯಲ್ಲಿ, ಶ್ರೀರಾಮನ
ಅಧ್ಯಾತ್ಮ ಬೋಧೆಯನ್ನು ನಲ್ಲಿ ಸುತ್ತಿರುವವನು ಕಂಬಯನು.
ಈ ಹತ್ತು ಪಾಶುರಗಳಲ್ಲಿ ಹೇಳಿರುವ ವಿಷಯವನ್ನು ಶ್ರೀರಾಮ
ನ ಹಿರಿಮೆಯ ಜಯಕಾರವನ್ನು ನಿಂತಾಗ ಜಪಿಸಿಕೊಂಡು
ಕೀರ್ತನದಲ್ಲಿ ಎಲ್ಲ ಕಡೆಯಲೂ ನಿಂತು, ಕುಳಿತು, ಹಾಡಿ, ಹರಡಿ
ಬೇಕಾದ ಕಲಿಯನು ಭಕ್ತ ಜನರಿಗೆ ಆದರದ ಕರೆಯನ್ನು ಕೊ
ಡುತ್ತಿದ್ದಾನೆ. ಹೀಗೆ ಮಾಡುವುದರಿಂದ ಎರಡು ಬಗೆಯ ಫಲವುಂ
ಟೆನ್ನುತ್ತಾನೆ. ಇಹ ಜೀವನದಲ್ಲಿಯೇ ಎಲ್ಲ ರೀತಿಯ ದುಃಖವೇದನೆ
ಗಳು ಇಲ್ಲವಾಗುತ್ತವೆ ಎಂಬುದೊಂದು. ಗತಿಸಿದ ಬಳಿಕ, ಪರಮ
ಪದ ವಾಸವೇ ತಪ್ಪದೆ ಪ್ರಾಪ್ತವಾಗುತ್ತದೆ ಎಂಬುದು ಮತ್ತೊಂದು.
ಎಲ್ಲರೂ ಕಂಡುಕೊಳ್ಳಬೇಕಾದದ್ದು, ಘಂಟಾಘೋಷವಾಗಿ ಸಾರಿ
ಹೇಳಬೇಕಾದದ್ದು ಇದನ್ನೇ! ಇದೇ ತಿರುವಾಯ್ಮೊಳಿಯ ಫಲಶ್ರುತಿ.

ಟಿಪ್ಪಣಿ: அடிவரவு:— இரக்கமோ இரக்கம், வித்து
பத்து, தந்தோ தண்டகா, எஞ்சல் எஞ்சல், செய்வன செ
மபொன், சுதமோ ஒருகும், தாயமோ தாழும், மனமோ
மனம், விருள் புரங்கள், மூல அங்கு, (வித்து
எத்து).

ಪೆರಿಯ ತಿರುಮೊೞಿ - ಪತ್ತನೆಯ ಪತ್ತು - ಮೂರನೆಯ ತಿರುಮೊೞಿ

பெரிய திருமொழி - பத்தாம் பத்து - மூன்றாந் திருமொழி

3. ಏತ್ತುಗಿನ್ಱೋಮ್ - ஏத்துகின்றோம்

1. ஏத்துகின்றோம் நாத்தழும்ப இராமன் திருநாமம்,
சோத்தநம்பி சுக்கிரீவா உம்மைத் தொழுகின்றோம்,
வார்த்தை பேசீரெம்மை உங்கள் வானரம் கொல்லாமே,
கூத்தர் போல ஆடுகின்றோம் குழமணி தூரமே.

ಏತ್ತುಗಿನ್ಱೋಮ್ ನಾತ್ತೞುಂಬ ಇರಾಮನ್ ತಿರುನಾಮಮ್,
ಶೋತ್ತನಮ್ಬಿ ಶುಕ್ಕಿರೀವಾ ಉಮ್ಮೈತ್ ತೊೞುಗಿನ್ಱೋಮ್,
ವಾರ್ತ್ತೈ ಪೇಶೀರೆಮ್ಮೈ ಉಙ್ಗಳ್ ವಾನರಮ್ ಕೊಲ್ಲಾಮೇ,
ಕೂತ್ತರ್ ಪೋಲ ಆಡುಗಿನ್ಱೋಮ್ ಕುೞುಮಣಿ ದೂರಮೇ.

ಏತ್ತುಗಿನ್ಱೋಮ್ ஏத்துகின்றோம் = ಸ್ತುತಿಸುತ್ತಿದ್ದೇವೆ, ~~ಹೇಳಿಕೊಳ್ಳುತ್ತಿದ್ದೇವೆ~~,
ನಾ நா = (ನಮ್ಮ) ನಾಲಿಗೆ, ತೞುಂಬ தழும்ப = ಅಭ್ಯಾಸವಾಗುವಂ
ತೆ, ಇರಾಮನ್ இராமன் = ಶ್ರೀರಾಮನ, ತಿರುನಾಮಮ್ திரு
நாமம் = ಪವಿತ್ರನಾಮವನ್ನು, ಶೋತ್ತಮ್ ನಮ್ಬಿ சோத்தம்
நம்பி = ನಮಸ್ಕಾರ ಮಹಾಪ್ರಭು (ಮಹಾರಾಜ), ಶುಕ್ಕಿರೀವಾ சுக்கி
ரீவா = ಸುಗ್ರೀವನೇ, ಉಮ್ಮೈ உம்மை = ನಿಮಗೆ, ತೊೞುಗಿನ್
ಱೋಮ್ தொழுகின்றோம் = ಕೈಮುಗಿಯುತ್ತಿದ್ದೇವೆ, ವಾರ್
ತ್ತೈ ಪೇಶೀರ್ வார்த்தை பேசீர் = ಮಾತನ್ನು ಹೇಳಿ (ಆಜ್ಞಾಪಿಸಿ),
ಉಙ್ಗಳ್ உங்கள் = ನಿಮ್ಮ, ವಾನರಮ್ வானரம் = ವಾನರರು,
ಕೊಲ್ಲಾಮೇ கொல்லாமே = ಕೊಲ್ಲದೆ ಇರುವಂತೆ, ಕೂತ್ತರ್ ಪೋಲ್
கூத்தர் போல் = ಕುಣಿದಾಡತಕ್ಕವರಹಾಗೆ (ನಾಟ್ಯವಿದುಷರಂ
ತೆ), ಆಡುಗಿನ್ಱೋಮ್ ஆடுகின்றோம் = ಕುಣಿ
ದಾಡುತ್ತಿದ್ದೇವೆ, ಕುೞು குழ = ಯೌವನಕಾಲಯಾದ, ಮಣಿ மணி
= ರತ್ನದಮಾನದ, ದೂರಮೇ தூரமே = ದೂರದಲ್ಲಿದ್ದುಕೊಂಡೇ.

ನಮಸ್ಕಾರ, ಮಹಾಪ್ರಭೋ, (ಮಹಾರಾಜ) ಸುಗ್ರೀವ, ನಿಮಗೆ ಕೈಮುಗಿಯುತ್ತಿದ್ದೇವೆ. ಶ್ರೀರಾಮನ ಪವಿತ್ರನಾಮವನ್ನು ನಮ್ಮ ನಾಲಿಗೆಗೆ ಅಭ್ಯಾಸವಾಗುವಂತೆ ಸ್ತುತಿಸುತ್ತಿದ್ದೇವೆ. ನಿಮ್ಮ ವಾನರರು ನಮ್ಮನ್ನು ಕೊಲ್ಲದಂತೆ ಅವರಿಗೆ ಮಾತನ್ನು ಹೇಳಿ. ನಾಟ್ಯವಿದುಷರಂತೆ (ಕುಣಿದಾಡತಕ್ಕವರ ಹಾಗೆ), ಯೌವನಕಾಲಯಾದ ರತ್ನದಮಾನದ ದೂರದಲ್ಲಿದ್ದುಕೊಂಡೇ ಕುಣಿದಾಡುತ್ತಿದ್ದೇವೆ.

Garani Srinivasan

ರಾವಣನ ವಧೆಯ ಬಳಿಕ ಲಂಕೆಯಲ್ಲಿ ಉಳಿದುಕೊಂಡ ರಾಕ್ಷಸರು "ಶ್ರೀರಾಮನಿಗೆ ಜಯವಾಗಲಿ ಜಯ" ಎಂದು ಹಿಗ್ಗಿನಿಂದ ಕೂಗಿದರು ಎಂಬುದು ಹಿಂದಿನ ಕಿರುಹೊತ್ತಿಗೆಯ ವಿಷಯ. ಮತ್ತು, ತಾವು ಭಯಪಟ್ಟಿರುವುದನ್ನೂ, ತಮ್ಮ ಭಯವನ್ನು ನೀಗಿಸಬೇಕೆಂದೂ, ಅಭಯವಿತ್ತು ತಮ್ಮನ್ನು ಕಾಪಾಡಬೇಕೆಂದೂ ಶ್ರೀರಾಮನಲ್ಲಿ, ಸುಗ್ರೀವನಲ್ಲಿ, ಜಾಂಬವಂತನಲ್ಲಿ, ಯುವರಾಜ ಅಂಗದನಲ್ಲಿ ಬೇಡಿಕೊಂಡರು.

ಈ ಕಿರುಹೊತ್ತಿಗೆಯು ಸ್ವಲ್ಪ ಹೆಚ್ಚು ಕಡಿಮೆ ಆ ವಿಷಯಕ್ಕೇ ಮೀಸಲು. ವಾನರರಾಜನಾದ ಸುಗ್ರೀವನ ಮುಂದೆ ಅವರು ಅಂಜಲಿಬದ್ಧರಾಗಿ ನಿಂತಿದ್ದಾರೆ. ಅವನ ಮನಸ್ಸನ್ನೊಲಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಶ್ರೀರಾಮನ ಕಡೆಯವರಾದ ವಾನರರೊಡನೆ ಕೂಡಿಕೊಂಡೇ ತಾವೂ ವಿಜಯೋತ್ಸವದಲ್ಲಿ ಪಾಲುಗೊಳ್ಳಬೇಕೆನ್ನುತ್ತಾರೆ. ಆವೇಶದಿಂದ ಕುಣಿದಾಡಬೇಕೆನ್ನುತ್ತಾರೆ. ಆದರೆ, ಅವರಿಗೆ ಅಂಜಿಕೆ. ವಾನರರಲ್ಲಿ ಯಾರಾದರೂ ತಮ್ಮನ್ನು ರಾಕ್ಷಸರೆಂದು, ಶ್ರೀರಾಮನ ಶತ್ರುಗಳೆಂದು ಭಾವಿಸಿದರೆ? ಕೊಂದುಹಾಕಿದರೆ? ವಿಜಯೋತ್ಸವದಲ್ಲಿ ತಮಗೆ ಪಾಲುಗೊಳ್ಳಲು ಆಗದೆ ಹೋದರೇ? ಹೀಗೆಲ್ಲ ಅವರು ಯೋಚಿಸುತ್ತಾರೆ. ರಾಕ್ಷಸರಾಗಿ ತಾವಂತೂ ಶ್ರೀರಾಮನ ನಿಯಮವಿವರ್ತನೆಗಳಿಗೆ ನಡೆದುಕೊಳ್ಳಲು ಸಾಧ್ಯವಿಲ್ಲದಂತೆ ಹೋಗಬಹುದು. ದೂರದಲ್ಲಿದ್ದುಕೊಂಡೇ ಶ್ರೀರಾಮನನ್ನು ಸ್ತುತಿಸುತ್ತ ಕುಣಿದಾಡಬೇಕೆನ್ನುತ್ತಾರೆ.

ರಾಕ್ಷಸರು ಬೇಡಿಕೊಳ್ಳುತ್ತಾರೆ: ಮಹಾಪ್ರಭೂ, ಸುಗ್ರೀವ, ನಿಮಗೆ ನಮಸ್ಕಾರ. ನಾವೀಗ ಶ್ರೀರಾಮಭಕ್ತರಾಗುವುದಕ್ಕೆ ತಕ್ಕವರಾಗಿ ನಡೆದುಕೊಳ್ಳುತ್ತಿದ್ದೇವೆ. ಶ್ರೀರಾಮನ ಪವಿತ್ರವಾದ ನಾಮವನ್ನು ಎಡೆಬಿಡದಂತೆ ಉಚ್ಚರಿಸುತ್ತ ನಮ್ಮ ನಾಲಗೆ ಚೆನ್ನಾಗಿ ಅಭ್ಯಾಸ ಮಾಡಿಕೊಳ್ಳುತ್ತಿದ್ದೇವೆ. ಶ್ರೀರಾಮನ ವಿಜಯದಲ್ಲಿ ನಾವು ಪಾಲುಗೊಳ್ಳಬಯಸುತ್ತೇವೆ. ಉತ್ತಮ ನಾಟ್ಯವಿಧಾನಗಳಂತೆ ನಾವು ಕುಣಿದಾಡಬಯಸುತ್ತೇವೆ. ಅತ್ಯಂತ ಮನಸುಂದರನೂ ಶ್ರೇಷ್ಠರಕ್ಷಣಮಾನನೂ ಆದ ಶ್ರೀರಾಮನ ಹತ್ತಿರಕ್ಕೆ ನಾವು ಹೋಗಲು ಯೋಗ್ಯರಲ್ಲವೆಂದರೂ ಚಿಂತೆಯಿಲ್ಲ. ದೂರದಿಂದಲೇ ನಮ್ಮ ಆನಂದವನ್ನು ತೋರ್ಪಡಿಸಲಿದ್ದೇವೆ. ಆದ್ದರಿಂದ, ಸ್ವಾಮಿ, ಕೃಪೆಮಾಡಿ ನೀವು ನಿಮ್ಮ ವಾನರರಲ್ಲಿ

ನಮ್ಮನ್ನು ಕೊಲ್ಲಬಾರದೆಂದು ಆಜ್ಞೆ ಮಾಡಿ. ನಾವು ಭಯ ಪಡುವವರು. ನಿಮ್ಮ ಅಭಯಹಸ್ತಕ್ಕಾಗಿ ಎದುರು ನೋಡುತ್ತಿದ್ದೇವೆ.

2. எம்பிரானே, யென்னை யாள்வாய் என்றென்று அரற்றுதே,
அம்பின் வாய்ப்பட்டாற்றகில்லாது இந்திரசித்து அழிந்தான்,
நம்பி அநுமா, சுக்கிரீவா, அங்கதனே, நளனே,
கும்பகர்ணன் பட்டுப்போனான் குழமணிதூரமே.

ಎಮ್ಬಿರಾನೇ, ಎನ್ನೈಯಾಳ್ವಾಯ್ ಎನ್ಱೆನ್ಱರಱ್ಱಾದೇ,
ಅಮ್ಬಿನ್ ವಾಯ್ಪ್ಪಟ್ಟಾಱ್ಱಗಿಲ್ಲಾದು ಇನ್ದಿರಶಿತ್ತಳಿನ್ದಾನ್,
ನಮ್ಬಿ ಅನುಮಾ, ಶುಗ್ರೀವಾ, ಅಙ್ಗದನೇ, ನಳನೇ,
ಕುಮ್ಬಕರ್ಣನ್ ಪಟ್ಟುಪ್ಪೋನಾನ್ ಕುೞಮಣಿದೂರಮೇ.

ಎಮ್ಬಿರಾನೇ எம்பிரானே = ನನ್ನ ಸ್ವಾಮಿಯೇ, ಎನ್ನೈ என்னை = ನನ್ನನ್ನು, ಆಳ್ವಾಯ್ ஆள்வாய் = ಆಳುವವನೇ (ಆಳುವವನು), ಎನ್ಱು ಎನ್ಱು என்று என்று = ಎಂದೆಂದು (ಬಗೆಬಗೆಯಾಗಿ), ಅರಱ್ಱಾದೇ அரற்றுதே = ಬದರದೆಯೇ (ನಾಮಸ್ಮರಣೆ ಮಾಡದೆಯೇ), ಅಮ್ಬಿನ್ அம்பின் = ಬಾಣದ, ವಾಯ್ಪಟ್ಟು வாய்பட்டு = ಬಾಯಿಗೆ ಬಿದ್ದು, ಆಱ್ಱಗಿಲ್ಲಾದು ஆற்றகில்லாது = ತಡೆಯಲಾರದೆ, ಇನ್ದಿರಶಿತ್ತು இந்திரசித்து = ಇಂದ್ರಜಿತ್ತು, ಅೞಿನ್ದಾನ್ அழிந்தான் = ಅಳಿದನು, ನಮ್ಬಿ நம்பி = ಸುಪ್ರಸಿದ್ಧರಾದ, ಅನುಮಾ அநுமா = ಹನುಮಂತ, ಶುಗ್ರೀವಾ சுக்கிரீவா = ಸುಗ್ರೀವ, ಅಙ್ಗದನೇ அங்கதனே = ಅಂಗದ, ನಳನೇ நளனே = ನಳ, ಕುಮ್ಬಕರ್ಣನ್ கும்பகர்ணன் = ಕುಂಭಕರ್ಣನು, ಪಟ್ಟುಪೋನಾನ್ பட்டுபோனான் = ಮಡಿದುಹೋದನು, ಕುೞ குழ = ಯೌವನಶಾಲಿಯು, ಮಣಿ மணி = ರತ್ನದಂಥವನೂ (ಆದ ಶ್ರೀರಾಮನಿಗೆ), ದೂರಮೇ தூரமே = ಬಹುದೂರದಲ್ಲಿಯೇ.

ಸುಪ್ರಸಿದ್ಧರಾದ ಹನುಮಂತ, ಸುಗ್ರೀವ, ಅಂಗದ, ನಳರೇ, ಇಂದ್ರಜಿತ್ತು ನನ್ನ ಸ್ವಾಮೀ, ನನ್ನನ್ನಾಳುವವನೇ ಎಂದು ಮುಂತಾಗಿ ಭಗವಂತನ ನಾಮಸ್ಮರಣೆ ಮಾಡದೆಯೇ (ಸ್ವಾಮಿಯ) ಬಾಣದ ಬಾಯಿಗೆ ಬಿದ್ದು ತಡೆಯಲಾರದೆ ಸತ್ತನು. ಕುಂಭಕರ್ಣನೂ ~~ಮಡಿದುಹೋದನು~~ ಯೌವನಶಾಲಿಯೂ ರತ್ನದಂಥವನೂ ಆದ ಶ್ರೀರಾಮನಿಗೆ ದೂರದಲ್ಲಿಯೇ ಮಡಿದುಹೋದನು. ②

ಲಂಕೆಯ ರಾಕ್ಷಸರು ಈ ಪಾಶುರದಲ್ಲಿ ಶ್ರೀರಾಮನ ಕಡೆಯ ಸುಪ್ರಸಿದ್ಧ ವಾನರವೀರರನ್ನು ಅಣಕ ಮಾಡಿಕೊಳ್ಳುತ್ತಿದ್ದಾರೆ. ಅವರಲ್ಲಿ ಮೊದಲನೆಯವನು

Garani Srinivasan

ಹನುಮಂತ. ಸಮುದ್ರವನ್ನು ದಾಟಿ ಲಂಕೆಯನ್ನು ಮೊದಲು ನೋಡಿದವನು. ಸೀತೆಯನ್ನು ಅಶೋಕವನದಲ್ಲಿ ಕಂಡು ಆಕೆಗೆ ಶ್ರೀರಾಮನ ಕ್ಷೇಮವಾರ್ತೆಯನ್ನು ಹೇಳಿದವನು. ರಾವಣನ ಪ್ರೀತಿಯ ಮಗನಾದ ಅಕ್ಷಕುಮಾರನನ್ನೂ, ಇತರ ಹಲವಾರು ರಾಕ್ಷಸ ಪ್ರಮುಖರನ್ನೂ ಕೊಂದು ಹಾಕಿದವನು. ಶ್ರೀರಾಮದೂತನಾಗಿ ರಾವಣನಿಗೆ ಬುದ್ಧಿ ಹೇಳಿದವನು. ಅದಕ್ಕಾಗಿ, ತನ್ನ ಬಾಲಕ್ಕೆ ಹಚ್ಚಿದ ಬೆಂಕಿಯಿಂದಲೇ ಲಂಕೆಯನ್ನು ಸುಟ್ಟು ಹಾಕಿದವನು. ಮತ್ತೆ, ಶ್ರೀರಾಮನೊಡನೆ ಲಂಕೆಗೆ ಬಂದು, ಯುದ್ಧದಲ್ಲಿ ಶ್ರೀರಾಮನಿಗೆ ನಾನಾ ರೀತಿಯಲ್ಲಿ ನೆರವಾದವನು.

ಹನುಮಂತನ ಮೂಲಕ ಶ್ರೀರಾಮನ ಸಖ್ಯವನ್ನು ಮಾಡಿಕೊಂಡವನು ಸುಗ್ರೀವ. ಅವನ ಅಣ್ಣನಾದ ವಾಲಿಯೇ ಅವನ ಕಿಷ್ಕಿಂಧೆಯ ರಾಜ್ಯವನ್ನು ಕಸಿದುಕೊಂಡು ಅವನನ್ನು ~~...~~ ರಾಜ್ಯಭ್ರಷ್ಟನನ್ನಾಗಿ ಮಾಡಿದ್ದರಿಂದ, ಸಂಕಟದಿಂದ ಅಲೆದಾಡುತ್ತಿದ್ದಾಗ ಆದದ್ದು ಆ ಸ್ನೇಹ. ಇದರಿಂದ ಸುಗ್ರೀವನಿಗೆ ಅವನ ರಾಜ್ಯ ಲಭ್ಯಿಸಿತು. ಕೃತಜ್ಞತೆಯಿಂದ ಸುಗ್ರೀವನು ಸೀತೆಯನ್ನು ಶ್ರೀರಾಮನಿಗೆ ಹುಡುಕಿಕೊಡುವುದರಲ್ಲಿ ಎಲ್ಲ ಬಗೆಯಲ್ಲೂ ನೆರವಿತ್ತನು. ತನ್ನ ಸೈನ್ಯವನ್ನು ದಂಡೆತ್ತನ್ನು ಬೀಡಲು ಮಾಡಿದನು. ಶ್ರೀರಾಮನೊಡನಿದ್ದು, ಅವನಿಗೆ ವಿಜಯವನ್ನು ಗಳಿಸಿಕೊಟ್ಟನು.

ಅಂಗದನು ವಾನರರ ಯುವರಾಜ. ಅವನು ವಾನರಸೈನ್ಯದೊಡನೆ ಇದ್ದುಕೊಂಡು, ಯುದ್ಧ ಮಾಡಿ, ನಾನಾ ಕಷ್ಟಗಳನ್ನೆದುರಿಸಿ, ರಾಕ್ಷಸಪ್ರಮುಖರನ್ನು ಕೊಂದು, ರಾವಣನ ಕೋಟೆಯನ್ನು ತನ್ನ ಕಾಲಿನಿಂದಲೇ ಒದೆದು, ತನ್ನ ಶಕ್ತಿಯ ಪರಾಕ್ರಮವನ್ನು ತೋರಿಸಿದ ಅಪ್ರತಿಮ ಸಾಹಸಿ.

ನಳನಾದರೋ ಶ್ರೀರಾಮನು ಲಂಕಾಪ್ರವೇಶ ಮಾಡಲು ಅಡ್ಡಿಯಾಗಿದ್ದ ಕಡಲಿಗೆ ಸೇತುವೆಯನ್ನು ಕಟ್ಟಿದ ಮಹಾಚತುರನಾದ ವಾನರ.

ರಾಕ್ಷಸರು ಹೇಳಿಕೊಳ್ಳುತ್ತಾರೆ: ಸ್ವಾಮಿ, ನಮ್ಮ ಒಡೆಯನಾದ ರಾವಣನಿಗೆ ಎಲ್ಲ ರೀತಿಯಲ್ಲೂ ನೆಚ್ಚಿನ ಬೆಂಬಲಿಗರೆಂದರೆ, ಅವನ ಹಿರಿಯ ಮಗನಾದ ಇಂದ್ರಜಿತ್ತು ಮತ್ತು ಅವನ ತಮ್ಮನಾದ ಕುಂಭಕರ್ಣ. ಇಂದ್ರಜಿತುವಾದರೋ, ತನ್ನ ಭುಜಬಲ ಪರಾಕ್ರಮವೊಂದನ್ನೇ ನಂಬಿ, ರಾಮಲಕ್ಷ್ಮಣರೊಡನೆ ಯುದ್ಧ ಮಾಡುತ್ತಾ, ಮಾಯಾಯುದ್ಧದಿಂದಲೂ, ಮಂತ್ರತಂತ್ರಗಳಿಂದಲೂ ಅವರನ್ನು ಜಯಿಸಲು ಯತ್ನಿಸಿ, ಕಡೆಗೆ ಲಕ್ಷ್ಮಣನಿಂದ ಸತ್ತ. [illegible]ಲದು ನಿಲ ಪಾದರೂ ಭಾಗವನ್ನು ಮನ್ನಣೆಯನ್ನು ಮಾಡಲಿಲ್ಲ. ಕುಂಭಕರ್ಣನೂ ಸಹ ಶ್ರೀರಾಮನನ್ನು ಯುದ್ಧದಲ್ಲಿ ಎದುರಿಸಿ ಸತ್ತನು. ಅವರಿಬ್ಬರೂ ಶ್ರೀರಾಮನ ತಿರುವಡಿಗಳನ್ನು ಪೂಜಿಸಿದ್ದರೆ! ನಾವೂ ಹಾಗೆಯೇ, ಶ್ರೀರಾಮನಿಂದ ದೂರವಾಗಿರುವವರೇ. ನಮಗಾದರೋ,

Garani Srinivasan

ಶ್ರೀರಾಮನಲ್ಲಿ ಭಕ್ತಿ ಆದರಗಳಿಂದ ದೂರದಲ್ಲಿದ್ದರಾದರೂ ಶ್ರೀರಾಮನ
ವಿಜಯೋತ್ಸವದಲ್ಲಿ ಪಾಲುಗೊಂಡು, ಆನಂದದಿಂದ ಕುಣಿದಾಡ ಬೇಕೆನ್ನಿಸು
ತ್ತದೆ. ನಮಗೆ ವಾನರರ ಭಯವಿದೆ. ಆದ್ದರಿಂದ, ದಯವಿಟ್ಟು ವೀರರೇ,
ನೀವು ನಿಮ್ಮ ವಾನರರಿಗೆ ಆಜ್ಞಾಪಿಸಿ, ನಾವು ಆನಂದಿಸುವಂತೆ ಮಾಡಿ.

3. ஞாலமாளுமுங்கள் கோமான் எங்களிராவணற்கு,
காலனாகிவந்தவாகண்டஞ்சிக் கருமுகில்போல்,
நீலன் வாழ்க சுடேணன் வாழ்க அங்கதன் வாழ்கவென்று,
கோலமாக வாடுகின்றோம் குழமணிதூரமே.

ಞಾಲ ಮಾಳುಮುಙ್ಗಳ್ ಕೋಮಾನ್ ಎಙ್ಗಳಿರಾವಣಾರ್ಕು,
ಕಾಲನಾಹಿ ವನ್ದವಾ ಕಣ್ಡಂಜಿ ಕ್ಕರುಮುಹಿಲ್ ಪೋಲ್,
ನೀಲನ್ ವಾಳ್ಗ ಸುಡೇಣನ್ ವಾಳ್ಗ ಅಙ್ಗದನ್ ವಾಳ್ಗವೆನ್ರು,
ಕೋಲಮಾಹ ವಾಡುಗಿನ್ರೋಮ್ ಕುಲಮಣಿದೂರವೇ.

ಞಾಲಮ್ ಆಳುಮ್ ஞாலம் ஆளும் = ಭೂಮಿಯನ್ನು ಆಳುವ
ನ, ಉಙ್ಗಳ್ ಕೋಮಾನ್ உங்கள் கோமான் = ನಿಮ್ಮ ಒಡೆಯನು
(ರಾಜನು), ಎಙ್ಗಳ್ எங்கள் = ನಮ್ಮ, ಇರಾವಣಾರ್ಕು இராவ
ணற்கு = ರಾವಣನಿಗೆ, ಕಾಲನ್ ಆಹಿ காலன் ஆகி = ಯಮನೇ
ಆಗಿ, ವನ್ದ ಆ ಕಣ್ಡು வந்தவா கண்டு = ಬಂದ ರೀತಿಯನ್ನು ಕಂಡು,
ಅಂಜಿ அஞ்சி = ಹೆದರಿ, ಕರುಮುಹಿಲ್ ಪೋಲ್ கருமுகில்
போல் = ಕಾರ್ಮುಗಿಲಿನಂಥ, ನೀಲನ್ நீலன் = ನೀಲನು,
ವಾಳ್ಗ வாழ்க = ಬಾಳಲಿ, ಸುಡೇಣನ್ ವಾಳ್ಗ சுடே
ணன் வாழ்க = ಸುಷೇಣನು ಬಾಳಲಿ, ಅಙ್ಗದನ್ ವಾಳ್ಗ
அங்கதன் வாழ்க = ಅಂಗದನು ಬಾಳಲಿ, ಎನ್ರು என்று
= ಎಂದು, ಕೋಲಮ್ ಆಹಿ கோலம் ஆகி = ಅಂದವಾಗಿ, ಆಡು
ಗಿನ್ರೋಮ್ ஆடுகின்றோம் = ಕುಣಿದಾಡುತ್ತಿದ್ದೇವೆ.
ಕುಲ குழ = ಯೌವನಶಾಲಿಯ, ಮಣಿ மணி = ರತ್ನದಂಥವನ,
ದೂರವೇ தூரமே = ದೂರದಲ್ಲಿಯೇ.

ಭೂಮಿಯನ್ನಾಳುವ ನಿಮ್ಮ ಒಡೆಯನು (ರಾಜನು) ನಮ್ಮ ರಾವ
ಣನಿಗೆ ಯಮನೇ ಆಗಿ ಬಂದ ರೀತಿಯನ್ನು ಕಂಡು, ಭಯವಿಟ್ಟು,
ಕಾರ್ಮುಗಿಲಿನಂಥ ನೀಲನು ಬಾಳಲಿ, ಸುಷೇಣನು ಬಾಳಲಿ, ಅಂಗದ

ನು ಬಾಳಲಿ, ಎಂದು ಅಂದವಾಗಿ ಕೂಗಿದಾಡುತ್ತೇವೆ, ಯೌವನ ಶಾಲಿಯೂ, ರಕ್ತದಂಥವನೂ ಆದವನ ದ್ವಾರದಲ್ಲಿಯೇ. (3)

ರಾಷ್ಠರು ಹೇಳುತ್ತಾರೆ: ಸ್ವಾಮಿಯೇ ಸುಗ್ರೀವಾದಿಗಳಿಗೆ, ಭೂಮಂಡಲವನ್ನಾಳುವವನೂ, ನಿತ್ಯ ಯೌವನ ಸುಂದರನೂ, ರಕ್ತದಂಥವನೂ, ನಿಮ್ಮ ದೊರೆಯನೂ ಆದ ಶ್ರೀರಾಮನು ನಮ್ಮ ರಾವಣನಿಗೆ ಶಾಸ್ತಿಯವನೇ ಆಗಿ ಲಂಕೆಗೆ ಬಂದನು. ಅದನ್ನು ಕಂಡು ನಾವು ಹೆದರಿದೆವು. ಆದ್ದರಿಂದ 'ಕಾಯುದಗಿಲ ಬಣ್ಣದ ಸ್ವಾಮಿಗೆ ಜಯ', 'ನೀಲನಿಗೆ ಜಯ', 'ಸುಷೇಣನಿಗೆ ಜಯ', 'ಅಂಗದನಿಗೆ ಜಯ', 'ಅವರು ಚಿರಕಾಲ ಬಾಳಲಿ' ಎಂದು ಮುಂತಾಗಿ ವಿಧವಿಧವಾಗಿ ಕೂಗುತ್ತಾ ಆನಂದದಿಂದ ಹೊಗಳಿದಾ ಕುಣಿದಾಡುತ್ತಾ, ಸ್ವಾಮಿಯ ದ್ವಾರದಲ್ಲಿಯೇ ವಿಜಯೋಲ್ಲಾಸವನ್ನು ನಡೆಸುತ್ತೇವೆ. ಇದಕ್ಕಾಗಿ, ನೀವು ನಿಮ್ಮ ವಾನರರಿಗೆ ಆಜ್ಞೆ ಕೊಡಿ. ನಮ್ಮನ್ನು ಅವರು ಶತ್ರುಗಳೆಂದು ಭಾವಿಸದಿರಲಿ. ನಮ್ಮನ್ನು ಕೊಲ್ಲದಿರಲಿ.

'ನಳ'ನ ಹಾಗೆಯೇ 'ನೀಲ'ನೂ ಐರಾಕ್ರಮಿಯು ವಾನರ. ವಾಲಿಗೆ ಹೆಣ್ಣು ಕೊಟ್ಟ ಮಾವನೇ 'ಸುಷೇಣ'.

4. மணங்கள் நாறும் வார்குழலார் மாதர்களாகத்தை,
புணர்ந்த சிந்தை புன்மையாளன் பொன்ற வரிசிலையால்,
கணங்கள் உண்ண வாளியாண்ட காவலனுக்கு இளையோன்,
குணங்கள் பாடியாடு கின்றோம் குழமணி தூரமே.

ಮಣಾಙ್ಗಳ್ ನಾಱುಮ್ ವಾರ್ ಕುೞಲಾರ್ ಮಾದರ್ ಹಳಾಗತ್ತೈ,
ಪುಣರ್ನ್ದ ಶಿನ್ದೈ ಪುನ್ಮೈಯಾಳನ್ ಪೊನ್ಱ ವರಿಶಿಲೈಯಾಲ್,
ಕಣಾಙ್ಗಳುಣ್ಣ ವಾಳಿಯಾಣ್ಡ ಕಾವಲನುಕ್ಕಿಳೈಯೋನ್,
ಕುಣಾಙ್ಗಳ್ ಪಾಡಿಯಾಡುಕಿನ್ಱೋಮ್ ಕುೞಮಣಿದೂರಮೇ.

ಮಣಾಙ್ಗಳ್ மணங்கள் = ವಿಧವಿಧವಾದ ವಾಸನೆಗಳು (ಸುಗಂಧಗಳು), ನಾಱುಮ್ நாறும் = ಹರಡುವ (ಹರಡು<u>ತ್ತಿ</u>ರುವ), ವಾರ್ ಕುೞಲಾರ್ வார் குழலார் =(ಬಾಹುವಂಧಿ) ಉದ್ದನಾದ ಕೂದಲಿನವರಾದ, ಮಾದರ್ಗಳ್ மாதர்கள் = ಕಾಂತೆಯರ (ಸ್ತ್ರೀಯರ), ಆಗತ್ತೈ ஆகத்தை = ಆದರವನ್ನು, (ಪ್ರೀತಿಯನ್ನು), ಶಿನ್ದೈ சிந்தை = ಚಿಂತೆಯ, ಪುಣರ್ನ್ದ புணர்ந்த = ಕೂಡಿಕೊಂಡಿರುವ, ಪುನ್

ಮ್ಮೆ ಆಳನ್ புன்மை ஆனான் = ಬಹಳ ನೀಚನಾದವನು, ಪೊನ್
ಱ பொன்ற = ನಾಶವಾಗುವಂತೆ, ವೆಂ ಶಿಲೈಯಾಲ್ வரி சிலையா
ಲ್ = ಸುಂದರವಾದ ಬಿಲ್ಲಿನಿಂದ, ಕಣಾಙ್ಗಳ್ கணாங்கள் = ಭೂತಗಣ
ಗಳು, ಉಣ್ಣ உண்ணா = ಉಣ್ಣುವಂತೆ, ವಾಳಿ வாளி = ಬಾಣಗಳನ್ನು,
ಆಣ್ಡ ஆண்ட = ಪ್ರಯೋಗಿಸಿದ, ಕಾವಲನುಕ್ಕು காவலனுக்கு
= ಒಡೆಯ (ರಕ್ಷಕ)ನಿಗೆ, ಇಳೈಯೋನ್ இளையோன் = ತಮ್ಮನ
ಕಳಲ್ಗಳ್ கழல்கள் = ಪಾದಗಳನ್ನು, ಪಾಡಿ பாடி = ಹಾಡು
ತ್ತಾ, ಆಡುವನ್ ಆಯೋಮ್ ஆடுகின்றோம் = ಕುಣಿದಾಡುತ್ತಿದ್ದೇವೆ,
ಕುಮ குழ = ಯೌವನಶಾಲಿಯಾದ, ಮಣಿ மணி = ರತ್ನದಂಥವನ,
ದೂರವೇ தூரமே = ದೂರದಲ್ಲಿಯೇ.

ಬಗೆಬಗೆಯ ಪಂಮುಖಗಳನ್ನು ಹರಡುತ್ತಿರುವ ಉದ್ದನಾದ ಕಲಿಗೆ ದಲನವರಾದ ಕಾಯಂದಿರ (ಹೆಂಗಸರ) ಪ್ರೀತ್ಯಾದರಗಳಿಂದ ತುಂಬಿದ ಒಂತೆ (ಮನಸ್ಸಿನವನು) ಯುವನಾದ ಬಹಳ ನೀಚನಾದವನು ನಾಶವಾಗುವಂತೆಯೂ, ಅವನ ಕಳೇಬರವನ್ನು ಭೂತಗಣಗಳು ಉಣ್ಣುವಂತೆಯೂ ಸುಂದರವಾದ ಬಿಲ್ಲಿನಿಂದ ಬಾಣಗಳನ್ನು ಪ್ರಯೋಗಿಸಿದ ಒಡೆಯನಿಗೆ (ಜಗದ್ರಕ್ಷಕನಿಗೆ) ತಮ್ಮನ ಪಾದಗಳನ್ನು ಹಾಡುತ್ತಾ ಕುಣಿದಾಡುತ್ತಾ ಇರುತ್ತೇವೆ, ಯೌವನಶಾಲಿಯಾದ ರತ್ನದಂಥವನ ದೂರದಲ್ಲಿಯೇ.

ರಾಕ್ಷಸರು ವಾನರ ವೀರರ ವಿಜಯ ಪರಾಕ್ರಮಗಳನ್ನು ಕೇಳಿ ಹೊಗಳುವುದು, ಬಿಟ್ಟುಬಿಟ್ಟನನ್ನು ಹೊಗಳುವುದು ಅವರನ್ನು ಬಿಟ್ಟು ಹೇಳುವುದರಲ್ಲಿ. ಈ ವಿಷಯದಲ್ಲಿ ಅವರ ಮನಸ್ಸು ಶ್ರೀರಾಮನ ತಮ್ಮನಾದ ಲಕ್ಷ್ಮಣನ ಗುಣಗಾನದ ಕಡೆಗೆ. ಅಣ್ಣನಾದ ಶ್ರೀರಾಮನಲ್ಲಿ ಎಡೆಬಿಡದ ಪ್ರೀತ್ಯಾದರ, ~~...~~ ನೆರಳಿನಂತೆ ಅವನನ್ನು ಅನುಸರಿಸುತ್ತಾ ಅವನ ಸೇವೆಲು ಸೇವಕನಂತೆ ಮಾಡುವ ಭಕ್ತಿಯು ದೀಕ್ಷೆ, ಅಣ್ಣನನ್ನು ಸಂಕಟದಿಂದ ಬಿಡಿಸುವುದಕ್ಕಾಗಿ ತನ್ನ ಶಕ್ತಿಯಲ್ಲಾದ ಸಹಾಯ (ಚಿಕಿತ್ಸೆ), ಸರ್ವ ವಿಧದಲ್ಲೂ ಸ್ವಾರ್ಥತ್ಯಾಗ — ಇವು ಲಕ್ಷ್ಮಣನ ಕೆಲವು ಸದ್ಗುಣಗಳು.

ರಾಕ್ಷಸರು ಹೇಳಿಕೊಳ್ಳುತ್ತಾರೆ: ಸ್ವಾಮಿ, ವಾನರವೀರರೇ, ನಮ್ಮ ಒಡೆಯನಾದ ರಾವಣನು ಸ್ತ್ರೀಲಂಪಟನಾಗಿ, ಅವರ ನಿಂದನೀಯವಾದದ್ದೇ ಇರಬೇಕೆಂಬ ತೀವ್ರವಾದ ಮನದಾಸೆಯನ್ನುಳ್ಳ ಕಡುನೀಚನಾಗಿದ್ದವನಾಗಿ, ಶ್ರೀರಾಮನ ಸುಂದರವಾದ ಬಿಲ್ಲಿನಿಂದ ತೀಕ್ಷ್ಣವಾದ ಬಾಣಗಳಿಂದ ಹತನಾದನು. ಅವನ ಕಳೇಬರವನ್ನು ಭೂತ ಪ್ರೇತಗಣಗಳು ಕಿತ್ತು ತಿನ್ನುವಂತಾದವು. ಶ್ರೀರಾಮನಿಗೆ ತಮ್ಮನಾದ ಅವನ ನೆಚ್ಚಿನ ಬೆಂಬಲಿಗನಾದ ಲಕ್ಷ್ಮಣನ ಗುಣಗಾನವನ್ನು ಮಾಡುತ್ತಾ ನಾವು ಕುಣಿದಾಡುತ್ತೇವೆ. ನಿಮ್ಮ

ವಾನರರಿಂದ ನಮಗೆ ಅಂಜಿಕೆಯಿಲ್ಲವಾದರೆ, ನಾವು ದಿವ್ಯಸುಂದರನಾ ಯೌವನಶಾಲಿಯೂ ಆದ ಶ್ರೀರಾಮನಿಗೆ ದೂರದಲ್ಲಿದ್ದುಕೊಂಡೇ, ವಿಜಯೋತ್ಸವವನ್ನು ಆನಂದದಿಂದ ನಡೆಸುತ್ತೇವೆ. ಅದಕ್ಕೆ ನೀವು ನಮಗೆ ನೆರವಾಗಿ.

5. வென்றி தந்தோம் மானம் வேண்டோம் தானமெமக்காக,
இன்று தம்மினெங்கள் வாழ்நாள் எம்பெருமான் தமர்காள்,
நின்று காணீர் கண்களார நீரெம்மைக் கொல்லாதே,
குன்று போல வாடுகின்றோம் குழமணி தூரமே.

ವೆನ್ಱಿ ತನ್ದೋಮ್ ಮಾನಮ್ ವೇಣ್ಡೋಮ್ ತಾನಮೆಮಕ್ಕಾಗ,
ಇನ್ಱು ತಮ್ಮಿನೆಙ್ಗಳ್ ವಾೞ್ನಾಳ್ ಎಮ್ಬೆರುಮಾನ್ ತಮರ್ಗಾಳ್,
ನಿನ್ಱು ಕಾಣೀರ್ ಕಣ್ಗಳಾರ ನೀರೆಮ್ಮೈಕ್ಕೊಲ್ಲಾದೇ,
ಕುನ್ಱು ಪೋಲ ವಾಡುಗಿನ್ಱೋಮ್ ಕುೞಮಣಿ ತೂರಮೇ.

ವೆನ್ಱಿ வென்றி = ಜಯವನ್ನು, ತನ್ದೋಮ್ தந்தோம் = ನಿಮಗೆ ತಂದು ಕೊಟ್ಟೆವು, ಮಾನಮ್ மானம் = ಮಾನವನ್ನು (ಸ್ವಾಭಿಮಾನವನ್ನು), ವೇಣ್ಡೋಮ್ வேண்டோம் = ಬೇಡುವುದಿಲ್ಲ (ಆಶಿಸುವುದಿಲ್ಲ), ತಾನಮ್ தானம் = ದಾನವಾಗಿ, ಎಮಕ್ಕು ಆಗ எமக்கு ஆக = ನಮಗಾಗಿ, ಇನ್ಱು இன்று = ಈಗ, ತಮ್ಮಿನ್ தம்மின் = ಕೊಡಿರಿ, ಎಙ್ಗಳ್ ವಾೞ್ನಾಳ್ எங்கள் வாழ்நாள் (வாழ்+நாள் = வாழ்நாள்) = ನಮ್ಮ ಬದುಕುವ ದಿನಗಳನ್ನು (ಆಯುಸ್ಸನ್ನು), ಎಮ್ಬೆರುಮಾನ್ ತಮರ್ಗಾಳ್ எம்பெருமான் தமர்காள் = ನಮ್ಮ ಸ್ವಾಮಿಯ ಕಡೆಯವರೇ, ನಿನ್ಱು ಕಾಣೀರ್ நின்று காணீர் = ನಿಂತು ನೋಡಿ, ಕಣ್ಗಳ್ ಆರ கண்கள் ஆர = ಕಣ್ಣು ತುಂಬ, ನೀರ್ நீர் = ನೀವು, ಎಮ್ಮೈ எம்மை = ನಮ್ಮನ್ನು, ಕೊಲ್ಲಾದೇ கொல்லாதே = ಕೊಲ್ಲದಂತೆ, ಕುನ್ಱು ಪೋಲ குன்று போல = ಬೆಟ್ಟದಂತೆ, ಆಡುಗಿನ್ಱೋಮ್ ஆடுகின்றோம் = ಕುಣಿದಾಡುತ್ತಿದ್ದೇವೆ, ಕುೞ குழ = ಯೌವನಶಾಲಿಯೂ, ಮಣಿ மணி = ರತ್ನಪ್ರಾಯನೂ, ಆದ ಸ್ವಾಮಿಯು, ದೂರಮೇ தூரமே = ದೂರದಲ್ಲಿಯೇ.

ನಮ್ಮ ಸ್ವಾಮಿಯ ಕಡೆಯವರೇ, ನಿಮಗೆ ನಾವು ಜಯವನ್ನು ತಂದು ಕೊಟ್ಟಿದ್ದೇವೆ. ನಮ್ಮ (ಸ್ವಾಭಿ)ಮಾನವನ್ನು ಆಶಿಸುವುದಿಲ್ಲ,

Garani Srinivasan

ನಮ್ಮ ಮುಂದಿನ ಬದುಕುವ ದಿನಗಳನ್ನು ನಮಗೆ ದಾನವಾಗಿ ಕೊಡಿ. ನಮ್ಮ
ನ್ನು ಕೊಲ್ಲದಂತೆ ನಿಂತು ~~ನೋ~~ ನಿಮ್ಮ ಕಣ್ಣು ತುಂಬ ನೋಡಿ. ನಾವು ಅತಿ
ಬಲಶಾಲಿಯೂ ರಕ್ತಪ್ರಿಯನೂ ಆಗಿರುವ ಸ್ವಾಮಿಗೆ ದೂರದಲ್ಲಿಯೇ (5)
ಬೆಟ್ಟಗಳ ಹಾಗೆ ಕುಣಿದಾಡುತ್ತಿರುತ್ತೇವೆ.

ರಾಕ್ಷಸರು ಹೇಳಿಕೊಳ್ಳುತ್ತಾರೆ: ಸ್ವಾಮೀ, ವಾನರವೀರರೇ, ನಿಮಗೆ ವಿಜಯವನ್ನು ತಂದುಕೊಟ್ಟವರು ನಾವೇ. ನಮಗೆ ಸ್ವಾಭಿಮಾನವೂ ಬೇಡ, ದುರಭಿಮಾನವೂ ಬೇಡ. ನೀವು ನಮ್ಮನ್ನು ಕೊಲ್ಲದಂತೆ ನಮ್ಮ ಮುಂದಿನ ಬದುಕಿನ ದಿನಗಳ ದಾನವನ್ನು ನೀಡಿ. ನೀವೇ ನಿಂತು, ನಿಮ್ಮ ಕಣ್ಣು ತುಂಬ ನೋಡಿ ಆನಂದಿಸುವಂತೆ- ರಕ್ತಪ್ರಿಯನೂ ಅತಿಬಲಶಾಲಿಯೂ ಆದ ಶ್ರೀರಾಮನಿಂದ ದೂರವಾಗಿದ್ದುಕೊಂಡೇ, ನಾವು ಬೆಟ್ಟಗಳು ಕುಣಿದಾಡುವ ಹಾಗೆ. ಮತ್ತೊಮ್ಮೆ ಕುಣಿದಾಡುತ್ತೇವೆ, ನೋಡಿ.

6. கல்லின் முந்நீர் மாற்றி வந்து காவல் கடந்து, இலங்கை
அல்லல் செய்தானுங்கள் கோமான் எம்மை யமர்க்களத்து,
வெல்லகில்லாதஞ்சினோங்காண் வெங்கதிரோன் சிறுவா,
கொல்ல வேண்டா ஆடுகின்றோம் குழமணி தூரமே.

ಕಲ್ಲಿನ್ ಮುನ್ನೀರ್ ಮಾಟ್ರಿವನ್ದು ಕಾವಲ್ ಕಡನ್ದು, ಇಲಙ್ಗೈ
ಅಲ್ಲಲ್ ಶೆಯ್ದಾನುಙ್ಗಳ್ ಕೋಮಾನ್ ಎಮ್ಮೈಯಮರ್ಕ್ಕಳತ್ತು,
ವೆಲ್ಲಕಿಲ್ಲಾದಂಜಿನೋಙ್ಗಾಣ್ ವೆಙ್ಗದಿರೋನ್ ಶಿರುವಾ,
ಕೊಲ್ಲವೇಣ್ಡಾ ಆಡುಗಿನ್ರೋಮ್ ಕುಳಮಣಿ ದೂರಮೇ.

ಕಲ್ಲಿನ್ கல்லின் = ಬೆಟ್ಟಗಳಿಂದ, (~~[illegible]~~), ಮುನ್ನೀರ್ முந்நீர் = ಕಡಲನ್ನು, ಮಾಟ್ರಿ மாற்றி = ಅಡ್ಡಗಟ್ಟಿ, ವನ್ದು வந்து = ಬಂದು, ಕಾವಲ್ காவல் = ಕೋಟೆಗಳನ್ನು, ಕಡನ್ದು கடந்து = ದಾಟಿ, ಇಲಙ್ಗೈ இலங்கை = ಲಂಕೆಯನ್ನು, ಅಲ್ಲಲ್ ಶೆಯ್ದಾನ್ அல்லல் செய்தான் = ಸಂಕಟಕ್ಕೆ ಈಡುಮಾಡಿದನು, ಉಙ್ಗಳ್ ಕೋಮಾನ್ உங்கள் கோமான் = ನಿಮ್ಮ ಒಡೆಯನು, ಎಮ್ಮೈ எம்மை = ನಮ್ಮನ್ನು, ಅಮರ್ಕಳತ್ತು அமர்களத்து = ಯುದ್ಧರಂಗದಲ್ಲಿ, ವೆಲ್ಲಕಿಲ್ಲಾದು வெல்லகில்லாது = ಗೆಲ್ಲಲಾರದೆ, ಅಂಜಿನೋಮ್ ಕಾಣ್ அஞ்சினோம் காண் = ಅಂಜಿದ್ದೇವೆ ಕಂಡೆಯಾ, ವೆಙ್ಗದಿರೋನ್ ಶಿರುವಾ வெங்கதிரோன் சிறுவா = ಸೂರ್ಯನ ಮಗನೇ, ಕೊಲ್ಲವೇಣ್ಡಾ கொல்ல வேண்டா = ನಮ್ಮನ್ನು ಕೊಲ್ಲಬೇಡ, ಆಡುಗಿನ್ರೋಮ್ ஆடுகின்றோம் =

ಕುಣಿದಾಡುತ್ತಿದ್ದೇವೆ. ಕುಲು குழு = ರಾವಣನ ಕುಲವೂ, ಮಣಿ மணி = ರತ್ನಪ್ರಾಯನೂ ಆದವನ, ದೂರವೇ தூரமே = ದೂರದಲ್ಲಿಯೇ.

ಸೂರ್ಯನ ಮಗನೇ, ನಿಮ್ಮ ಒಡೆಯನು ~~ಅಂಕೆಯನ್ನು~~ ಬೆಟ್ಟಗಳಿಂದ ಕಡಲನ್ನು ಅಡ್ಡಕಟ್ಟಿ ಬಂದು, ಕೋಟೆಗಳನ್ನು ದಾಟಿ, ~~ನಮ್ಮನ್ನು ಯುದ್ಧರಂಗದಲ್ಲಿ~~ ಲಂಕೆಯನ್ನು ಪ್ರವೇಶಿಸಿ, ನಮ್ಮನ್ನು ಯುದ್ಧರಂಗದಲ್ಲಿ ಕಡು ಸಂಕಟಕ್ಕೆ ಈಡು ಮಾಡಿದನು. ಗೆಲ್ಲಲಾರದೆ ನಾವು ಅಂಜಿದ್ದೇವೆ, ಕಂದಯ್ಯಾ! ನಮ್ಮನ್ನು ಕೊಲ್ಲಬೇಡ. ನಾವು ರಾವಣನ ಕುಲವೂ ರತ್ನದಂತವನೂ ಆದವನ ದೂರದಲ್ಲಿಯೇ ಅವನ ವಿಜಯಕ್ಕಾಗಿ ಕುಣಿ (6) ದಾಡುತ್ತಿದ್ದೇವೆ.

ರಾಕ್ಷಸರು ಹೇಳುತ್ತಾರೆ: ಸೂರ್ಯನ ಮಗನಾದ ಸುಗ್ರೀವನೇ, ನಿಮ್ಮ ಒಡೆಯನಾದ ಶ್ರೀರಾಮನು ಅಸಾಧಾರಣ ಪುರುಷನೇ! ಕಡಲಿನಿಂದಲೂ, ಭದ್ರವಾದ ಕೋಟೆಗಳಿಂದಲೂ ಕೂಡಿರುವ ನಮ್ಮ ಲಂಕೆಯನ್ನು ಯಾರೂ ಮುಟ್ಟಲಾರರು, ಪ್ರವೇಶಿಸಲಾರರು ಎಂದು ನಂಬಿದ್ದನ್ನು ನಿಮ್ಮ ಒಡೆಯನು ಸುಳ್ಳು ಮಾಡಿದನಲ್ಲ! ಹಾಗಿಲ್ಲವಾದರೆ, ಬೆಟ್ಟಗಳನ್ನೇ ಬಳಸಿಕೊಂಡು ಕಡಲಿಗೆ ಸೇತುವೆಯನ್ನು ಕಟ್ಟಲಾದೀತೇ? ಸಾಮಾನ್ಯ ಮಾನವನಾಗಿ, ವಾನರ ಸೈನ್ಯದೊಡನೆ ಲಂಕೆಯನ್ನು ಪ್ರವೇಶಿಸಿದನು. ಯುದ್ಧರಂಗದಲ್ಲಿ ನಮ್ಮನ್ನು ಎದುರಿಸಿದನು. ನಮ್ಮ ಮಹಾಮಹಾ ವೀರರನ್ನೆಲ್ಲಾ ಸದೆಬಡಿದನು. ಯಾವ ಬಗೆಯಲ್ಲೂ ನಾವು ಅವನನ್ನು ಗೆಲ್ಲುವುದಕ್ಕಾಗದೆ ಇರುವುದನ್ನು, ಲಂಕೆಯನ್ನು ಸುಡುಗಾಡಿನಂತೆ ಮಾಡಿದ್ದನ್ನು ಕಂಡು ನಾವು ಅಂಜಿದ್ದೇವೆ. ಸೋಲನ್ನಪ್ಪಿರುವ ನಾವು ನಿಮ್ಮ ಒಡೆಯನ ವಿಜಯೋತ್ಸವದಲ್ಲಿ, ನಿಮ್ಮ ಸ್ವಾಮಿಗೆ ದೂರದಲ್ಲಿದ್ದುಕೊಂಡೇ, ಕುಣಿದಾಡುತ್ತಿದ್ದೇವೆ. ದಯವಿಟ್ಟು ನಮ್ಮನ್ನು ಕೊಲ್ಲಬೇಡ. ಕಾಪಾಡು.

7. மாற்றமாவதித்தனையே வம்மினரக்கருள்ளீர்,
சீற்றம் நும்மேல் தீரவேண்டில் சேவகம் பேசாதே,
ஆற்றல் சான்ற தொல்பிறப்பில் அநுமனை வாழ்க வென்று,
கூற்றமன்னார் காணவாடீர் குழுமணி தூரமே.

ಮಾಟ್ರಮಾವದಿತ್ತನ್ನೈಯೇ ವಮ್ಮಿನರಕ್ಕರುಳ್ಳೀರ್,
ಶೀಟ್ರಮ್ ನುಮ್ಮೇಲ್ ತೀರವೇಣ್ಡಿಲ್ ಶೇವಗಮ್ ಪೇಶಾದೇ,
ಆಟ್ರಲ್ ಶಾನ್ರ ತೊಲ್ ಪಿರಪ್ಪಿಲ್ ಅನುಮನೈ ವಾಳ್ಗವೆನ್ರು,
ಕೂಟ್ರಮನ್ನಾರ್ ಕಾಣಾವಾಡೀರ್ ಕುಲುಮಣಿ ದೂರಮೇ.

ಮಾಟ್ರಮ್ மாற்றம் = ಉತ್ತರ, ಆವದು ஆவது = ಆಗುವುದು, ಇತ್ತನ್ನೈಯೇ இத்தனையே = ಇಷ್ಟೇ! ವಮ್ಮಿನ್ வம்மின் = ಬನ್ನಿ,

Garani Srinivasan

ಅರಕ್ಕರ್ ಉಳ್ಳೀರ್ அரக்கர் உளீர் = ರಾಕ್ಷಸತ್ವವುಳ್ಳವರೇ, ಶೀಱ್ಱಮ್
சீற்றம் = ಕಡುಕೋಪವು, ನುಮ ಮೇಲ್ நும் மேல் = ನಿಮ್ಮ ಮೇಲೆ,
ತೀರವೇಣ್ಡಿಲ್ தீர வேண்டில் = ತೀರಬೇಕೆಂದರೆ, ಶೇವಕಮ್ சே
வகம் = ಶೌರ್ಯವನ್ನು, ಪೇಶಾದೇ பேசாதே = ಹೇಳಿಕೊಳ್ಳದೆ,
ಆಱ್ಱಲ್ ஆற்றல் = ಪರಾಕ್ರಮವನ್ನು, ಶಾನ್ಱು சான்று = ಸಾರುವ, ತೊ
ಲ್ தொல் = ಅನಾದಿಯಾದ ಪಿಱಪ್ಪಿಲ್ பிறப்பில் = ಬದುಕಿನಲ್ಲಿ, ಅನುಮನೈ
அனுமனை = ಹನುಮಂತನನ್ನು, ವಾಳ್ಗ ಎನ್ಱು வாழ்க என்று =
ಚಿರಕಾಲ ಬಾಳಲಿ ಎಂದು, ಕೂಱ್ಱಮ ಅನ್ನಾರ್ கூற்றம் அன்னார் =
ಯಮಸ್ವರೂಪರು, ಕಾಣ காண = ಕಾಣುವಹಾಗೆ, ಆಡೀರ್ ஆடீர் =
ಕುಣಿದಾಡಿರಿ, ಶೋಲೈ சோலை = ಉಪವನ ಶಾಲೆಯೂ, ಮಣಿ மணி = ರತ್ನ
ದಂಥವನೂ ಆದವನ, ದೂರಮೇ தூரமே = ದೂರದಲ್ಲಿಯೇ.

ರಾಕ್ಷಸತ್ವವುಳ್ಳವರೇ ಬನ್ನಿ. ಎಲ್ಲಕ್ಕೂ ಪರಿಹಾರವಿದ್ದೇ! ನಿಮ್ಮ ಮೇಲಣ ಕಡುಕೋಪವು ತೀರಬೇಕೆಂದರೆ, ನಿಮ್ಮ ಶೌರ್ಯವನ್ನು ಹೇಳಿಕೊಳ್ಳದೆಯೇ, ಪರಾಕ್ರಮವನ್ನು ಸಾರುವ ಅನಾದಿಯಾದ ಬದುಕಿನ 'ಹನುಮಂತನಿಗೆ ಜಯವಾಗಲಿ' (ಅವನು ಚಿರಕಾಲ ಬಾಳಲಿ) ಎಂದು, ನಿಮ್ಮ ಯಮಸ್ವರೂಪರು ಕಾಣುತ್ತಿರುವಂತೆಯೇ, ಉಪವನ ಶಾಲೆಯೂ
ರತ್ನದಂಥವನೂ ಆದ ಶ್ರೀರಾಮನಿಗೆ ದೂರದಲ್ಲಿಯೇ, ಮನಸಾರ (7)
ಕುಣಿದಾಡಿರಿ.

ಈ ತಿರುಮಾಲೆಯಲ್ಲಿ ಲಂಕೆಯಲ್ಲಿ ಉಳಿದಿರುವ ರಾಕ್ಷಸವರ್ಗಕ್ಕೇ ಕರೆಕೊಡಲಾಗಿದೆ. ಅವರ ಒಡೆಯನಾದ ರಾವಣನು ಮಾಡಿದ ಮಹಾಪರಾಧಕ್ಕೆ ಪರಿಹಾರವೇನು? ರಾವಣನು ಮಡಿದ ಮೇಲೆ ಉಳಿದವರು ಮಾಡತಕ್ಕದ್ದೇನು? – ಎಂಬುದನ್ನು ಇಲ್ಲಿ ಹೇಳಲಾಗಿದೆ.

ಶಾಸ್ತ್ರರು ಹೇಳುತ್ತಾರೆ: ಲಂಕೆಯಲ್ಲಿ ಉಳಿದಿರುವ ರಾಕ್ಷಸತ್ವವುಳ್ಳವರೇ, ಎಲ್ಲರೂ ಬನ್ನಿ. ನಿಮಗೆ ಸೋಲಾಯಿತಲ್ಲ, ನಿಮ್ಮ ಒಡೆಯನನ್ನು ಸಾಮಾನ್ಯ ಮಾನವನೊಬ್ಬನು ಕೊಂದುಹಾಕಿದನಲ್ಲ, ನಿಮ್ಮ ಸುಂದರವಾದ ಲಂಕೆಯನ್ನು ನಾಶಮಾಡಿದನಲ್ಲ – ಎಂಬ ಕೋಪ ನಿಮ್ಮಲ್ಲಿ ಉಳಿದಿದೆಯೇ? ಆ ನಿಮ್ಮ ಕೋಪ ತೀರುವಂಥ ಪರಿಹಾರವನ್ನು ಹೇಳುತ್ತೇನೆ, ಕೇಳಿ. ನಿಮ್ಮ ಶೌರ್ಯಸಾಹಸಗಳನ್ನು ನೀವು ಮರೆತುಬಿಡಿ. ಅದಕ್ಕೆ ಬದಲಾಗಿ, ಹುಟ್ಟಿನಿಂದಲೂ ತನ್ನ ಪರಾಕ್ರಮವನ್ನು ತೋರ್ಪಡಿಸಿಕೊಂಡ ವಾನರಮುಖ್ಯನಾದ ಹನುಮಂತನ ಅತುಲ ಭುಜಬಲವನ್ನು ಕೊಂಡಾಡೋಣ. "ಹನುಮಂತನಿಗೆ ಜಯವಾಗಲಿ, ಹನುಮಂತನು ಚಿರಕಾಲ ಬಾಳಲಿ" – ಎಂದು ಜಯಕಾರಗಳನ್ನು

Garani Srinivasan

ಮಾಡೋಣ. ಯಶೋವನ ಶಾಲೆಯನ್ನು ರತ್ನದಂಡ ಮುಂತಾದವುಗಳನ್ನು
ಆದ ಶ್ರೀರಾಮನಿಗೆ ದೂರದಲ್ಲಿಯೇ, ಆ ಮಹಾಪ್ರಭುವಾದ ವಾನರ
ಪ್ರಮುಖರ ಕಣ್ಣ ಮುಂದೆಯೇ ನಾವೆಲ್ಲರೂ ಆನಂದದಿಂದ ಕುಣಿ
ದಾಡೋಣ. ಬನ್ನಿ. ಅದೇ ಎಲ್ಲಕ್ಕೂ ಮಿಗಿಲು.

8. கவளயானைப் பாய்புரவித் தேரொடாட்களெல்லாம்,
துவள, வென்ற வென்றியாளன் தன் தமர் கொல்லாமே,
தவள மாட நீடயோத்திக் காவலன்றன் சிறுவன்,
குவளை வண்ணன் காண வாடார் குழை மணித்தூரமே.

ಕವಳಯಾನೈ ಪ್ಪಾಯ್ ಪುರವಿತ್ತೇರೊಡಾಟ್ಕಳೆಲ್ಲಾಮ್
ತುವಳ, ವೆನ್ಱ ವೆನ್ಱಿಯಾಳನ್ ತನ್ ತಮರ್ ಕೊಲ್ಲಾಮೇ,
ತವಳಮಾಡ ನೀಡಯೋತ್ತಿಕ್ಕಾವಲನ್ಱನ್ ಶಿಱುವನ್,
ಕುವಳೈ ವಣ್ಣನ್ ಕಾಣಾವಾಡಾರ್ ಕುಳೈ ಮಣಿತ್ತೂರಮೇ.

ಕವಳಮಾ ಯಾನೈ கவளம் யானை = ಕಬಳಿಸುವ ಆನೆಗಳೂ, ಕೆನೆಯುವ
ಪಾಯ್ ಪುರವಿ பாய் புரவி = ನುಗ್ಗಿ ಬರುವ ಕುದುರೆಗಳೂ, ತೇರೋಡು
தேரொடு = ರಥಗಳೂ – ಇವುಗಳಿಂದ ಅಣಿಗೊಂಡ – ಅರಕ್ಕರ್ ಎಲ್ಲಾ
ಮ் அரக்கர் எல்லாம் = ಎಲ್ಲಾ ರಾಕ್ಷಸರೂ, ತುವಳ துவள =
ಸಂಕಟದಿಂದ ಸೊರಗುವಂತೆ, ಮಾಡಿ, ವೆನ್ಱ வென்ற = ಜಯಗಳಿಸಿದ,
ವೆನ್ಱಿಯಾಳನ್ ತನ್ வென்றியாளன் = ಜಯಶೀಲನಾದ ಸ್ವಾಮಿಯ
ತಮರ್ தமர் = ಕಡೆಯವರು (ವಾನರರು), ಕೊಲ್ಲಾಮೇ கொல்லாமே =
ಕೊಲ್ಲದೆ ಇರುವಂತೆ, ತವಳಮಾ தவளம் = ಬೆಳ್ಳಗಿರುವ, ಮಾಡಮಾ மாட
ம் = ಉಪ್ಪರಿಗೆಗಳಿಂದ, ನೀಡು நீடு = ಉನ್ನತವಾಗಿರುವ, ಅಯೋತ್ತಿ அயோ
த்தி = ಅಯೋಧ್ಯೆಯ, ಕಾವಲನ್ ತನ್ காவலன் தன் = ಒಡೆಯನ,
ಶಿಱುವನ್ சிறுவன் = ಕುಮಾರನಾದ, ಕುವಳೈ ವಣ್ಣನ್ குவளை வண்
ணன் = ಕನ್ನೈದಿಲೆಯ ಬಣ್ಣದವನು, ಕಾಣ காண = ಕಾಣುವಂತೆ,
ಆಡಾರ್ ஆடார் = ಕುಣಿದಾಡಿರಿ, ಕುಳೈ குழை = ಯಶೋವನ ಶಾಲೆಯಾದ,
ಮಣಿ மணி = ರತ್ನದಂಡವನ, ದೂರಮೇ தூரமே = ದೂರದಲ್ಲಿಯೇ.

ಕಬಳಿಸುವ ಆನೆಗಳೂ, ನುಗ್ಗಿ ಬರುವ ಕುದುರೆಗಳೂ, ರಥಗಳೂ –
ಇವುಗಳಿಂದ ಅಣಿಗೊಂಡ ರಾಕ್ಷಸರೆಲ್ಲರೂ ಸಂಕಟದಿಂದ ಸೊರಗುವಂ
ತೆ ಮಾಡಿ ಜಯಗಳಿಸಿದ ಜಯಶೀಲನಾದ ಸ್ವಾಮಿಯ ಕಡೆಯವರು
(ವಾನರರು) ಕೊಲ್ಲದಿರುವಂತೆ, ಬೆಳ್ಳಗಿರುವ ಉಪ್ಪರಿಗೆಗಳಿಂದ ಉನ್ನತವಾ
ದ ಅಯೋಧ್ಯೆಯ ರಾಜನ ಕುಮಾರನಾದ ಕನ್ನೈದಿಲೆಯ ಬಣ್ಣದವನು
ಕಾಣುವಂತೆ, ಯಶೋವನ ಶಾಲೆಯನ್ನು ರತ್ನದಂಡವನ್ನೂ ಆದವನ ದೂರದಲ್ಲಿಯೇ
ಕುಣಿದಾಡಿರಿ.

ರಾಕ್ಷಸರು ಹೇಳುತ್ತಾರೆ: ಲಂಕೆಯಲ್ಲಿ ಉಳಿದಿರುವ ರಾಕ್ಷಸರೇ, ನಿಮ್ಮ ನಮ್ಮ ಕಣ್ಣೆದುರಲ್ಲಿಯೇ, ಚತುರಂಗಬಲದಿಂದ ಕೂಡಿದ ಮಹಾ ಪರಾಕ್ರಮಿಗಳೆನಿಸಿಕೊಂಡ ರಾಕ್ಷಸ ವೀರರೆಲ್ಲರೂ, ಶ್ರೀರಾಮನ ಬಾಣಗಳಿಗೆ ತುತ್ತಾಗಿ, ಸಂಕಟಪಟ್ಟು ಸಾವನ್ನಪ್ಪಿದರು. ಶ್ರೀರಾಮನು ಜಯಶಾಲಿಯಾದ. ಉಳಿದಿರುವ ನಾವುಗಳಾದರೋ, ಕನ್ನೈದಿಲೆಯ ಬಣ್ಣದವನಾದ, ನಿತ್ಯಯೌವನ ಸುಂದರನಾದ, ರಕ್ತದಂಥ ಕಣ್ಣುಗಳನ್ನುಳ್ಳ ಶ್ರೀರಾಮನ ಕಣ್ಣ ಮುಂದೆಯೇ, ದೂರದಲ್ಲಿಯೇ ಇದ್ದುಕೊಂಡು, ಕುಣಿದಾಡುತ್ತಾ ವಿಜಯೋತ್ಸವದಲ್ಲಿ ಪಾಲುಗೊಳ್ಳೋಣ ಬನ್ನಿ. ಇದರಿಂದ, ಶ್ರೀರಾಮನ ಕಡೆಯವರು ನಮ್ಮನ್ನು ಶತ್ರುಗಳೆಂದು ಭಾವಿಸುವುದಿಲ್ಲ. ನಮ್ಮನ್ನು ಕೊಲ್ಲುವುದಿಲ್ಲ.

9. ஏடொத்தேந்தும் நீணிலவேல் எங்கள் இராவணனார்
ஓடிப்போனார், நாங்களெய்த்தோம் உய்வதோர் காரணத்தால்,
சூடிப்போந்தோம் உங்கள் கோமானாணை தொடரேல் மின்,
கூடிக்கூடியாடுகின்றோம் குழமணிதூரமே.

ಏಡೊತ್ತೇನ್ದುಮ್ ನೀಣಿಲ್ವೇಲ್ ಎಙ್ಗಳ್ ಇರಾವಣನಾರ್
ಓಡಿಪ್ಪೋನಾರ್, ನಾಙ್ಗಳೆಯ್ತ್ತೋಮ್ ಉಯ್ವದೋರ್ ಕಾರಣತ್ತಾಲ್,
ಶೂಡಿಪ್ಪೋನ್ದೋಮ್ ಉಙ್ಗಳ್ ಕೋಮಾನಾಣೈ ತೊಡರೇಲ್ಮಿನ್,
ಕೂಡಿಕ್ಕೂಡಿ ಯಾಡುಗಿನ್ರೋಮ್ ಕುೞಮಣಿ ತೂರವೇ.

ಏಡು ಒತ್ತ ஏடு ஒத்த = ತಾಳೆಯ ಗರಿಯಂತೆ, ಏನ್ದುಮ್ ஏந்தும் = ಧರಿಸುವುದಕ್ಕೆ, ನೀಳ್ ಇಲೈ நீள் இலை = ಉದ್ದನಾದ ಎಲೆಯ, ವೇಲ್ வேல் = ಖಡ್ಗವುಳ್ಳ, ಎಙ್ಗಳ್ ಇರಾವಣನಾರ್ எங்கள் இராவணனார் = ನಮ್ಮ ರಾವಣನು, ಓಡಿಪ್ಪೋನಾರ್ ஓடிப்போனார் = ಓಡಿಹೋದನು, ನಾಙ್ಗಳ್ நாங்கள் = ನಾವು, ಎಯ್ತ್ತೋಮ್ எய்த்தோம் = ಬೆದರಿದ್ದೆವು, ಉಯ್ವದು ಓರ್ ಕಾರಣತ್ತಾಲ್ உய்வது ஓர் காரணத்தால் = ಉಜ್ಜೀವಿಸಬೇಕೆಂಬ ಒಂದು ಕಾರಣದಿಂದ, ಶೂಡಿಪ್ಪೋನ್ದೋಮ್ சூடி போந்தோம் = ಶರಣಾಗತರಾದೆವು, ಉಙ್ಗಳ್ ಕೋಮಾನ್ உங்கள் கோமான் = ನಿಮ್ಮ ಒಡೆಯನ, ಆಣೈ ஆணை = ಆಜ್ಞೆಯನ್ನು, ತೊಡರೇಲ್ಮಿನ್ தொடரேல்மின் = (ನಮ್ಮನ್ನು) ಮುಟ್ಟದೇ ದೂರವಿರಿ, ಕೂಡಿ ಕೂಡಿ கூடி கூடி = ಒಟ್ಟಿಗೆ ಕೂಡಿಕೊಂಡು, ಆಡುಗಿನ್ರೋಮ್ ஆடுகின்றோம் = ಕುಣಿದಾಡುತ್ತಿದ್ದೇವೆ, ಕುೞ குழ = ಯೌವನಶಾಲಿಯೂ, ಮಣಿ மணி = ರತ್ನಪ್ರಾಯನೂ, ಆದವನ, ತೂರವೇ தூரமே = ದೂರದಲ್ಲಿಯೇ.

Gareni Srinivasan

ಕಾಳಿಯು ಗಣಿಯಂತೆ ಉದ್ದನಾದ ಎಲೆಯ ಖಡ್ಗವನ್ನು ಧರಿಸಿದ್ದ ನಮ್ಮ ರಾವಣನು ಸೋತು ಹೋದನು. ನಾವು ಬೇರೆ ದಿಕ್ಕೆಟ್ಟವು (ನಿಸ್ಸಹಾಯಕರಾದವು). ಉಜ್ಜೀವನ ಹೊಳ್ಳಬೇಕೆಂಬ ಒಂದು ಕಾರಣದಿಂದ ನಿಮ್ಮ ಒಡೆಯನ ಆಜ್ಞೆಯನ್ನು ಶಿರಸಾ ವಹಿಸಿದ್ದೇವೆ. ನಮ್ಮನ್ನು ಮುಟ್ಟಬೇಡಿ. ನಾವು ಒಟ್ಟಿಗೆ ಕೂಡಿಕೊಂಡು ಕುಣಿದಾಡುತ್ತಿದ್ದೇವೆ, ಯಾವ ಕಾಲ (9)
ಯಲೂ ರಕ್ತದಂಥವನೂ ಆದವನ ದೂರದಲ್ಲಿಯೇ.

ರಾಕ್ಷಸರು ಹೇಳುತ್ತಾರೆ: ವಾನರ ವೀರರೇ, ಉದ್ದನಾದ ಕಾಳಿಯ ಗಣಿಯಂತೆ ಅಗಲವಾದ ಬಹಳ ಹರಿತವಾದ ಅಲಗುಳ್ಳ ಖಡ್ಗವನ್ನು ಧರಿಸಿದ ನಮ್ಮ ರಾವಣನು ಯುದ್ಧದಲ್ಲಿ ನಿಮ್ಮ ಒಡೆಯನನ್ನು ಎದುರಿಸಲಾರದೆ, ಸೋತು ಹೋದನು, ಸತ್ತು ಹೋದನು. ನಾವು ಒಡೆಯನಿಲ್ಲದೆ ಕಂಗೆಟ್ಟೆವು. ನಮ್ಮ ಉದ್ಧಾರವನ್ನು ಪಡೆಯುವುದೆಂಬ ಒಂದು ಮುಖ್ಯವಾದ ಕಾರಣಕ್ಕಾಗಿಯೇ ನಾವು ನಿಮ್ಮ ಒಡೆಯನ ಆಣತಿಯನ್ನು ಶಿರಸಾವಹಿಸಿದೆವು. ನಾವೀಗ ನಿಮ್ಮ ಒಡೆಯನ ವಿಜಯೋತ್ಸವದಲ್ಲಿ, ತಂಡ ತಂಡಗಳಾಗಿ ಕೂಡಿಕೊಂಡು, ಕುಣಿದಾಡುತ್ತಾ ಆನಂದಿಸುತ್ತಿದ್ದೇವೆ. ನೀವೀಗ ನಮ್ಮನ್ನು ಮುಟ್ಟಬೇಡಿ. ನಿಮ್ಮ ಶತ್ರುಗಳು ನಾವೆಂದು ಭಾವಿಸಬೇಡಿ. ನಮ್ಮನ್ನು ಕೊಲ್ಲದೆ ದೂರವಿರಿ.

10. வென்றதொல் சீர்த் தென்னிலங்கை வெஞ்சமத்து, அன்றரக்கர்
குன்றமன்னார் ஆடியுய்ந்த குழமணிதூரத்தை,
கன்றிநெய்ந்நீர் நின்ற வேற்கைக் கலியன் ஒலிமாலை,
ஒன்றுமொன்றும் ஐந்துமூன்றும் பாடி நின்றாடுமினே.

ವೆನ್ಱು ತೊಲ್ ಶೀರ್ ತ್ತೆನ್ನಿಲಙ್ಗೈ ವೆಂಜಮತ್ತು, ಅನ್ಱರಕ್ಕರ್
ಕುನ್ಱಮನ್ನಾರ್ ಆಡಿಯುಯ್ನ್ದ ಕುೞಮಣಿ ತೂರತ್ತೈ,
ಕನ್ಱಿನೆಯ್ ನೀರ್ ನಿನ್ಱ ವೇಱ್ಕೈಕ್ಕಲಿಯನ್ ಒಲಿಮಾಲೈ,
ಒನ್ಱುಮೊನ್ಱುಮ್ ಐನ್ದುಮೂನ್ಱುಮ್ ಪಾಡಿ ನಿನ್ಱಾಡುಮಿನೇ.

ವೆನ್ಱು வென்ற = ಜಯವನ್ನೇ, ತೊಲ್ தொல் = ಪ್ರಾಚೀನವಾದ, ಶೀರ್ சீர் = ಕೀರ್ತಿಯನ್ನಾಗಿ ಉಳ್ಳ, ತೆನ್ தென் = ದಕ್ಷಿಣದ, ಇಲಙ್ಗೈ இலங்கை = ಲಂಕೆಯ, ವೆಮ್ வெம் = ಬಿರುಸಾದ, ಶಮತ್ತು சமத்து = ಯುದ್ಧಭೂಮಿಯಲ್ಲಿ, ಅನ್ಱು அன்று = ಅಂದು, ಅರಕ್ಕರ್ அரக்கர் = ರಾಕ್ಷಸರು, ಕುನ್ಱಮ್ ಅನ್ನಾರ್ குன்றம்

Garani Srinivasan

ಅಣ್(ಣ)ರ್ = ಬೆಟ್ಟದ ಹಾಗೆ, ಆಡಿ ಆಡಿ = ಕುಣಿದಾಡಿ, ಉಯ್ನ್ದ
ಒಳ್ನಿಕ್ಕ = ಉಜ್ಜ್ವಲವನ ಗೊಂಡ, ಕುಲಿ(ಕ್ಕ)ಪ್ಪ = ಅತಿಪಿವನ ಕಾಲಿಯೂ,
ಮಣಿ ಮಣ್ಣಿ = ರಕ್ತಪ್ರಾಯವನೂ ಆದವನ, ದೂರತ್ತಿಲ್ ತಾರ ಕ್ಕಾತ್ =
ದೂರದಲ್ಲಿ ಎಂಬುದನ್ನು, ಕನ್ಯಾ ಕಣ್(ಣ)ಗ್ = ಪಳ್ಳಗಿರುವ,
ನಯ ಅಕ್ಕಯ = ಕುಷ್ಟಿದವಂದ, ನೀರ್ ಕ್ಕೊರ್ = ಪಡಜಕೆಯ, ನಿನ್ನ
ಕ್ಕಿಣ್ಣ = ದೃಢವಾದ, ವೇಲ್ ಡೆಬಸ = ವೇಲಾಯುಧವನ್ನು, ಕೈ
ಣಾಕ = ಹಿಡಿದವನಾದ (ಕೈಯುವನಾದ), ಕಲಿಯನ್ ಕಲಿಯಣ್
= ಕಲಿಯನ (ತಿರುಮಂಗೈ ಆಳ್ವಾರರ), ಒಲಿ ಮಾಲೈ ಶಾಲಿಮಾಗಿಲು
= ಹಾಡಿನ ಮಾಲೆಯಾದ, ಒನ್ರುಮ ಒನ್ರುಮ ಪಿನ್ನುಮ
ಮೂನ್ರುಮ ಒಣ್ರುಮ್ ಒಣ್ರುಮ್ ಐನ್ದುಮ್ ಮೂಣ್ರು
ಮ್ = ಒಂದಾಗಿ ಒಂದಾಗಿ ಬಿದ್ದ ಮೂರನ್ನು (ಹತ್ತನ್ನು), ಪಾಡಿ ಪಾಡಿ =
ಹಾಡಿ, ನಿನ್ರು ನಿನ್ರು = (ನಿಶ್ಚಲವಾಗಿ) ನಿಂತು, ಆಡುಮಿನೇ
ಆಡುಮಿನೇ = ಆಡಿರಿ. (ಕುಣಿದಾಡಿರಿ).

ಪುರಾತನ ಕಾಲದಿಂದಲೂ ಜಯವನ್ನೇ ಕೇಳಿಕೆಯನ್ನಾಗಿ ಉಳ್ಳ ಸೊಬಗಿನ ಲಂಕೆಯ ಬಿರುಸಾದ ಯುದ್ಧಭೂಮಿಯಲ್ಲಿ, ಅಂದು ರಾಕ್ಷಸರು ಬೆಟ್ಟದ ಹಾಗೆ ಕುಣಿದಾಡಿ ಉಜ್ಜ್ವಲವನ ಗೊಂಡ 'ಅತಿಪಿವನ ಕಾಲಿಯೂ ರಕ್ತಪ್ರಾಯವನೂ ಆದವನ ದೂರದಲ್ಲಿ' ಎಂಬುದನ್ನು ಪಳ್ಳಗಿದ ಕುಷ್ಟಿದವಂದ ಪಡಜಕೆಯ ದೃಢವಾದ ವೇಲಾಯುಧವನ್ನು ಹಿಡಿದವನಾದ ಕಲಿಯನ್ನು ಹೊಗಳಿದ ಹತ್ತು ಪಾಶುರಗಳ ಮಾಲೆಯನ್ನು (ನಿಶ್ಚಲವಾಗಿ) (10) ನಿಂತು ಹಾಡಿ ಕುಣಿದಾಡಿರಿ.

ಎಲ್ಲಿ ಯುದ್ಧಕ್ಕೆ ಹೋದರೂ, ಅಲ್ಲಿ ಜಯವನ್ನೇ ಗಳಿಸಿಕೊಳ್ಳುತ್ತಿದ್ದವನು ಸೊಬಗಿನ ಲಂಕೆಯ ಒಡೆಯನಾದ ರಾವಣಾಸುರನು. ಬಹಳ ಹಿಂದಿನಿಂದಲೂ ಜಯವೇ ಅವನ ಕೇಳಿಕೆ! ಅಂಥವನಿಗೆ, ಅವನ ಊರಿನಲ್ಲಿಯೇ ದುಸ್ಥಿತಿಯೂ ಮರಣವೂ ಪ್ರಾಪ್ತವಾಯಿತು. ಸ್ತ್ರೀವ್ಯಾಮೋಹವೆಂಬುದೇ ಅವನಿಗೆ ಕುತ್ತು ತಂದದ್ದು. ಅದರಿಂದ ಅವನೊಬ್ಬ ಸಾಯಲಿಲ್ಲ; ಜೊತೆಗೆ ಅವನ ಮಕ್ಕಳು, ಬಂಧು ಬಳಗ, ಲೆಕ್ಕವಿಲ್ಲದಷ್ಟು ಪ್ರಮುಖ ರಾಕ್ಷಸವೀರರು ಅವನಿಗಾಗಿ ಪ್ರಾಣ ತೆತ್ತರು. ಪಾಪವನ್ನೇ ಅರಿಯದ, ಯುದ್ಧಪ್ರಿಯರಾದ ರಾಕ್ಷಸರು ಸತ್ತದ್ದು ಎಷ್ಟೋ! ಸಕಲೈಶ್ವರ್ಯ ಸಮೃದ್ಧವಾದ ಸುಂದರವಾದ ಲಂಕೆಯೂ ಹಾಳಾಯಿತು. ಒಬ್ಬ ಮಾಡಿದ ಅಪರಾಧಕ್ಕಾಗಿ ಇಷ್ಟೆಲ್ಲ ಸರ್ವನಾಶವೇ! ರಾವಣನ ಮೇಲೆ ಯುದ್ಧವನ್ನು ಹೂಡಿದ ಸಾಮಾನ್ಯ ಮಾನವನಂತೆ ಬಂದ ಶ್ರೀರಾಮನೂ ಅವನ ವಾನರ ಸೈನ್ಯವೂ ರಾವಣವಧೆಯ ನಂತರ ಲಂಕೆಯಲ್ಲಿಯೇ ವಿಜಯೋತ್ಸವವನ್ನು ನಡೆಸುತ್ತಿದ್ದಾರೆ. ಲಂಕೆಯಲ್ಲಿ ಅಳಿದುಳಿದ ರಾಕ್ಷಸರಿಗೆ ಪ್ರಾಣಭಯ! ಯಾವ ಪಾಪವನ್ನೂ ಮಾಡದ ತಮ್ಮನ್ನು

ವಾನರರು ಶತ್ರುಗಳೆಂದು ಭಾವಿಸಿ ಎಲ್ಲಿ ಕೊಂದು ಹಾಕುತ್ತಾರೋ ಎಂಬುದು ಅವರ ಭಯ! ತಮ್ಮನ್ನು ಕೊಲ್ಲಬಾರದೆಂದು, ತಾವು ಶ್ರೀರಾಮನ ವಿಜಯೋತ್ಸವದಲ್ಲಿ ಪಾಲುಗೊಳ್ಳುತ್ತಿರುವವರೆಂದು, ತನ್ನ ಪ್ರಿಯನಾದ ಲಕ್ಷ್ಮಣನ ಸುಂದರನಾದ ಆ ಶ್ರೀರಾಮನ ದೂತರಲ್ಲಿಯೇ, ತಾವು ಬೆಟ್ಟಗಳ ಹಾಗೆ ಮತ್ತು ಮರೆತು ಕುಣಿಯುತ್ತಿರುವವರೆಂದು, ತಾವು ಶತ್ರುಗಳಲ್ಲವೆಂದು, ತಮ್ಮ ಕುಣಿತಕ್ಕೆ ಪ್ರೋತ್ಸಾಹವನ್ನು ಕೊಡಬೇಕೆಂದು, ಹೀಗೆ ಹಾಡಿ, ಆಡಿ, ತಾವು ಉಜ್ಜೀವನಗೊಳ್ಳಬೇಕೆಂದು ರಾಕ್ಷಸರು ಹೇಳಿಕೊಳ್ಳುತ್ತಿದ್ದಾರೆ.

ಇಂದಿನ ತಿರುವಾಯ್ಮೊಳಿಯಲ್ಲಿ ಹೇಳಿದ "ಕಡಮಾ ಪೃಜ್ಞತ್ತಮಾ ಪೃಜ್ಞೋ" ಎಂಬ ಪಲ್ಲವಿಯ ಹಾಗೆಯೇ ಈ ತಿರುವಾಯ್ಮೊಳಿಗೆ 'ಕುಲಿ ... ಶ್ರೀರಾಮನ ವಿಜಯ ಮಣಿದಾರವೇ" ಎಂಬ ಪಲ್ಲವಿ ಒಪ್ಪುತ್ತದೆ. ಎರಡೂ ಶ್ರೀರಾಮನ ವಿಜಯದ ಹರ್ಷದ ಕೊಂಡಾಟವೇ! ಎರಡೂ ರಾಕ್ಷಸರ ಸಂಹಾರದ ವಿಷಯವೇ! ಶತ್ರುವಾದವರ ಸಂಗ ಇದ್ದರೇನಂತೆ? ಭಗವಂತನಲ್ಲಿ ಮರೆ ಹೊಕ್ಕವನನ್ನು ಸ್ವಾಮಿ ಕೈಬಿಡುವುದೇ ಇಲ್ಲ - ಉದ್ಧರಿಸುವನು! ಹತ್ತಿರವಾದರೇನು, ದೂರವಾದರೇನು?

ಭಗವಂತನ ಸಮ್ಮುಖದಲ್ಲಿ ಸ್ವಾಮಿಯ ಗುಣಗಾನ ಮಾಡುತ್ತಾ, ಅದರ ಅನುಭವದಲ್ಲಿಯೇ ಮೈಮರೆತು ಕುಣಿದಾಡುತ್ತಾ ಪ್ರಾಪಂಚಿಕ ಸಂಕಟಗಳನ್ನು ಮರೆಯುವುದೆಂದರೆ ನಿಜವಾಗಿಯೂ ಉಜ್ಜೀವನದ ಹಾದಿಯನ್ನು ಹಿಡಿದಂತೆಯೇ. ಸಾರವತ್ತಾದ ಈ ವಿಷಯವನ್ನು ಹತ್ತು ಪಾಶುರಗಳ ಮೂಲಕ ಭಕ್ತರಿಗೆ ಆಳ್ವಾರ್ ತಿಳಿಸಿರುವನು. ದರ್ಶನದ ತೋರಿಸುತ್ತಿರುವವನು ಭಕ್ತಪ್ರಿಯನಾದ ಕರುಣಾಳು. ಭಗವಂತನ ಕಲ್ಯಾಣ ಗುಣಗಳನ್ನು ಅದ್ಭುತ ಲೀಲೆಗಳನ್ನು ನಿಶ್ಚಲ ಮನದಿಂದ ಹಾಡಿ - ಕುಣಿಯಿರಿ - ನಲಿಯಿರಿ. ಹಾಗೆ ಮಾಡಿದ್ದಕ್ಕೆ ಆಶ್ಲೋಕ ದೂರವೇ ಫಲ. ಇದೇ ಈ ತಿರುವಾಯ್ಮೊಳಿಗೆ ಫಲಶ್ರುತಿ!

ಅಡಿಯನಡಿ: அடிவரவு :— ಪಿರುತ್ತು ನೀಡುಮಾ ஏத்துகின்ற ரேம், ಎಪ್ಪಾರ್ನೇ எம்பிரானே, ಇಲಮಾ ஞாலம், ಮಣ್ಣಾಜ್ಞ ಳ್ ಮணங்கள், ವೇನ್ಲ್ வென்றி, ಕಲ್ಲಿನ್ கல்லின், ಮೂಡ್ರ ಮಾ மாற்றம், ಕವಳಮಾ கவளம், ಪಿರು ஏடு, ವೇನ್ಲ ವೆன்ற, (ಶನ್ದಮಾ சந்தம்).

22.1.79

ಪೆರಿಯ ತಿರುಮೊಳಿ - ಪತ್ತನೆಯ ಪತ್ತು - ನಾಲ್ಕನೆಯ ತಿರುಮೊಳಿ
பெரிய திருமொழி - பத்தாம்பத்து - நான்காந்திருமொழி

4. ಶನ್ದಮಲರ್ ಕುಳಲ್ ತಾಳ - சந்தமலர்குழல்தாழ

1. சந்தமலர்குழல்தாழத் தானுகந்தோடித்தனியே
வந்து, என்முலைத்தடந்தன்னை வாங்கிநின்வாயில் மடுத்து,
நந்தன் பெறப்பெற்ற நம்பி, நானுகந்துண்ணுமமுதே,
எந்தைபெருமானே யுண்ணாய் என்னம்மம் சேமமுண்ணாயே.

ಶನ್ದಮಲರ್ ಕುಳಲ್ ತಾಳತ್ ತಾನುಹನ್ದೋಡಿತ್ತನಿಯೇ,
ವನ್ದು, ಎನ್ ಮುಲೈತ್ತಡನ್ದನ್ನೈ ವಾಙ್ಗಿ ನಿನ್ ವಾಯಿಲ್ ಮಡುತ್ತು,
ನನ್ದನ್ ಪೆಱಪ್ಪೆಱ್ಱ ನಮ್ಬೀ, ನಾನುಹನ್ದುಣ್ಣುಮಮುದೇ,
ಎನ್ದೈ ಪೆರುಮಾನೇ ಯುಣ್ಣಾಯ್ ಎನ್ನಮ್ಮಮ್ ಶೇಮಮುಣ್ಣಾಯೇ.

ಶನ್ದಮ್ சந்தம் = ಸುಂದರವಾದ, ಮಲರ್ மலர் = ಹೂಗಳನ್ನು
ಮುಡಿದ, ಕುಳಲ್ குழல் = ಕೂದಲು, ತಾಳ தாழ = ಅಲುಗಾಡು
ತ್ತಿರಲು, ತಾನ್ தான் = ತಾನೇ (ನೀನೇ), ಉಹನ್ದು உகந்து = ಆಶೆ
ಯಿಂದ, ಓಡಿ ஓடி = ಓಡುತ್ತಾ, ತನಿಯೇ தனியே = ಒಬ್ಬನೇ, ವನ್ದು
வந்து = ಬಂದು, ಎನ್ என் = ನನ್ನ, ಮುಲೈ ತಡಮ್ ತನ್ನೈ முலை
தடம் தன்னை = ದೊಡ್ಡ (ವಿಶಾಲವಾದ) ಮೊಲೆಗಳನ್ನು, ವಾಙ್ಗಿ வாங்
கி = ಸೆಳೆದು, ನಿನ್ நின் = ನಿನ್ನ, ವಾಯಿಲ್ வாயில் = ಬಾಯಲ್ಲಿ,
ಮಡುತ್ತು மடுத்து = ಇರಿಸಿಕೊಂಡು, ನನ್ದನ್ நந்தன் = ನಂದ
ಗೋಪನು, ಪೆಱಪ್ಪೆಱ್ಱ பெறப்பெற்ற = ಪಡೆದು ಪಡೆದ, ನಮ್ಬೀ
நம்பி = ಸ್ವಾಮಿಯೇ, ನಾನ್ நான் = ನಾನು, ಉಹನ್ದು உகந்து
= ಆಶಿಸಿ, ಉಣ್ಣುಮ್ உண்ணும் = ಉಣ್ಣುವ, ಅಮುದೇ அமு
தே = ಅಮೃತವೇ, ಎನ್ದೈ எந்தை = ತಂದೆಯೇ, ಪೆರುಮಾನೇ
பெருமானே = ಪರಮಪುರುಷನೇ, ಉಣ್ಣಾಯ್ உண்ணாய் =
ಉಣ್ಣುವವನಾಗು, ಎನ್ ಅಮ್ಮನ್ என் அம்மன் = ನನ್ನ ಮೊಲೆಯನ್ನು
ಶೇಮಮ್ சேமம் = ಕಾಪಾಡಿರುವುದನ್ನು, ಉಣ್ಣಾಯ್ உண்ணாய்
= ಉಣ್ಣುವವನಾಗು.

ನಂದಗೋಪನು ಪಡೆದು ಪಡೆದ ಸ್ವಾಮಿಯೇ, ನಾನು ಆಶಿಸಿ ಸವಿಯುವಂಥ ಅಮೃತವೇ, ನನ್ನ ತಂದೆಯೇ, ಪರಮಪುರುಷನೇ, ಸುಂದರವಾದ ಹೂಗಳನ್ನು ಮುಡಿದ ಕೂದಲನ್ನು ಅಲುಗಿಸುತ್ತಾ,

ನೀನೇ ಜಿಂಕೆಯಾಗಿ ಆಶೆಯಿಂದ ಓಡಿ ಬಂದು, ನನ್ನ ದೇಹದ ರೋಮಗಳನ್ನು ಕೆರೆದು ನಿನ್ನ ಬಾಯಲ್ಲಿ ಸೇರಿಸಿಕೊಂಡು ಉಣ್ಣುವವನಾದನು; ನನ್ನ ಮೈ ರೋಮಗಳಲ್ಲಿ ಕಾಪಾಡಿಟ್ಟಿರುವುದನ್ನು ಉಣ್ಣುವವನಾದ. (1)

ಇಂದಿನ ಎರಡು ತಿರುಮೊಳಿಗಳಲ್ಲಿ ಭಗವಂತನ ಶ್ರೀರಾಮಾವತಾರದ ಹಿರಿಮೆಯನ್ನು ವರ್ಣಿಸಿ ಹೇಳಲಾಯಿತು. ಶ್ರೀರಾಮನ ಬಿಲ್ಗಾರಿಕೆ, ಅತುಲ ಪರಾಕ್ರಮ, ಜಯಿಸಲಾಗದ ದಿಟ್ಟತನ, ಕೀರ್ತಿ, ಕಾರುಣ್ಯ, ಮೃದು ಮಂಗಳಕರ ಸದ್ಗುಣಗಳು — ಇವುಗಳನ್ನೆಲ್ಲಾ ಸುಂದರವಾಗಿ ಸಮಯೋಚಿತವಾಗಿ ಲಂಕೆಯಲ್ಲಿ ಸೋತು ಉಳಿದಿರುವ ರಾಕ್ಷಸರ ಬಾಯಿಂದಲೇ ಹೇಳಿಸಲಾಯಿತು. ಭಗವಂತನಿಗೆ ಶತ್ರುವಾದರೂ ಬೇರೆಯಲ್ಲ. ಅವನು ಶರಣೆಂದರೆ ಸಾಕು. ಸ್ವಾಮಿ ತನ್ನ ಭಕ್ತವರ್ಗಕ್ಕೆ ತೋರುವ ವಾತ್ಸಲ್ಯದಂತೆಯೇ ಅವನಿಗೂ ತೋರುವುದು ಭಗವಂತನ ಸೌಶೀಲ್ಯ ಸೌಲಭ್ಯ ಗುಣಗಳು!

ಈ ತಿರುಮೊಳಿಯಲ್ಲಿ ಭಗವಂತನ ಕೃಷ್ಣಾವತಾರದ ದಿವ್ಯ ಲೀಲೆಯನ್ನು ಎತ್ತಿ ತೋರಲಾಗಿದೆ. ಭಗವಂತನನ್ನು ಮಾತ್ರವಲ್ಲ ಮಗನಾಗಿ ಪಡೆದ ವಸುದೇವ-ದೇವಕಿಯರಂತಲ್ಲದೆ ಹೆತ್ತನ ಬೃಂದಾವನದಲ್ಲಿ ನಂದಗೋಕುಲದ ನಂದಗೋಪ-ಯಶೋದೆಯರು. ಭಗವಂತನನ್ನು ಮಗುವಾಗಿ ಸಾಕಿ ಬೆಳೆಸಿ, ಅವನ ಬಾಲಲೀಲೆಗಳನ್ನೆಲ್ಲಾ ನೋಡುತ್ತಾ, ತಮ್ಮ ಮಗನೇ ಅವನೆಂದು ಭ್ರಮಿಸಿ, ಅವನನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಲು ಯತ್ನಿಸಿದರು! ಅವನ ಅತಿಮಾನುಷ ಸಾಹಸಗಳನ್ನೂ, ಅದ್ಭುತ ಲೀಲೆಗಳನ್ನೂ, ಕಂಡು, ಕೇಳಿ, ಭಯಪಟ್ಟರು! ಬೆರಗಾದರು! ಪುಳಕಿತರಾದರು! ಆನಂದಿಸಿದರು!

ಈ ಪಾಶುರದಲ್ಲಿ ತಾಯಿಯಾಗಿ ಯಶೋದೆಗೆ ಬಂದು ವಿಚಿತ್ರವಾದ ಆಸೆ. ತಾನು ಕಾಲಕಾಲಕ್ಕೆ ಸರಿಯಾಗಿ ತನ್ನ ಕೂಸಿಗೆ ತನ್ನ ಮೊಲೆಯನ್ನೂಡಿಸುವುದು ಹಾಗಿರಲಿ. ತನ್ನ ಮಗನಾದ ಬಾಲಕೃಷ್ಣನೇ ಆಸೆಯಿಂದ ಓಡಿ ಬಂದು, ತಾನೇ ಸ್ವತಂತ್ರಿಸಿ, ಮುಚ್ಚಿಟ್ಟಿರುವ ತನ್ನ ತಾಯಿ (ಯಶೋದೆ)ಯ ಮೊಲೆಯನ್ನು ತನ್ನ ಪುಟ್ಟ ಕೈಗಳಿಂದ ಹಿಡಿದು, ಹೊರತೆಗೆದು, ಬಾಯಿಟ್ಟು, ಎದೆಹಾಲನ್ನು ಹೊಟ್ಟೆ ತುಂಬ ಕುಡಿದು ಆನಂದಿಸಲಿ ಎಂಬುದು ಅವಳ ಬಯಕೆ! ಆ ಚಿತ್ರಣವನ್ನು ಇಲ್ಲಿ ನಮ್ಮ ಕಣ್ಣ ಮುಂದೆ ತಂದಿಡಲಾಗಿದೆ.

"ನಂದನು ಪಡೆದು ಪಡೆದ ಸ್ವಾಮಿಯೇ — நந்தன் பெறு பெற்ற நம்பி" — ಕೃಷ್ಣನನ್ನು ಪಡೆದದ್ದು ವಸುದೇವ-

ದೇವಕಿಯರು ಕಂದನ ಕಾರಾಗೃಹದಲಿ. ಅದೇ ಸಮಯದಲ್ಲಿ, ನಂದ ಗೋಕುಲದಲ್ಲಿ ನಂದಗೋಪ-ಯಶೋದೆ ಹಡೆದದ್ದು ಹೆಣ್ಣುಮಗು. ಭಗವನ್ಮಾಯೆಯಿಂದ ಬಾಲಕೃಷ್ಣನಿಗೆ ಹೆಣ್ಣುಮಗುವಿಗೆ ಅದಲು ಬದಲಾದದ್ದು ಯಶೋದೆಗೆ ತಿಳಿಯದಂತೆ. ತಾನು ಹೆತ್ತ ಕಂದನು ಮಗುವೇ ಕೃಷ್ಣನೆಂದು 'ಅವಳ ದೃಢ ನಂಬಿಕೆ. ಅದಕ್ಕಾಗಿಯೇ ಈ ಬಗೆಯ ಮಾತು!

ಯಶೋದೆ ಬಾಲಕೃಷ್ಣನನ್ನು ಕರೆದು ಹೇಳುತ್ತಾಳೆ; ನನ್ನ ಮುದ್ದಿನ ಮಗುವೇ, ಸುಂದರವಾದ ಹೂಗಳಿಂದ ಅಲಂಕರಿಸಿರುವ ನಿನ್ನ ತಲೆಗೂದಲು, ನೀನು ನನ್ನ ಬಳಿಗೆ ಓಡಿಬರುತ್ತಿರುವಾಗ, ಅಲುಗುತ್ತಾ ಬಹಳ ಆಕರ್ಷಕವಾಗಿರುತ್ತದೆ. ನನ್ನ ಬಳಿಗೆ ಆಸೆಯಿಂದ ಓಡಿಬಾ. ನನ್ನ ಮೊಲೆಗಳನ್ನು ಹೊರಕ್ಕೆ ಎಳೆದುಕೋ. ನಿನ್ನ ಬಾಯನ್ನು ಅವಕ್ಕೆ ಹಚ್ಚು. ಅವುಗಳಲ್ಲಿ ನಿನಗಾಗಿಯೇ ಜೇನಿನಂತಹ ಕೂಡಿಟ್ಟಿರುವ ಹಾಲಿದೆ. ಅದನ್ನು ನಿನ್ನ ಹೊಟ್ಟೆ ತುಂಬ ತೃಪ್ತಿಯಾಗಿ ಕುಡಿದು ಆನಂದಿಸು!

2. வங்கமறிகடல்வண்ணா, மாமுகிலேயொக்கும் நம்பீ,
செங்கணெடிய திருவே, செங்கமலம் புரைவாயா,
கொங்கைசுரந்திட வுன்னைக் கூவியும் காணாதிருந்தேன்,
எங்கிருந்தாயர்களோடும் என் விளையாடுகின்றாயே.

ವಙ್ಗಮಱಿಕಡಲ್ ವಣ್ಣಾ, ಮಾಮುಹಿಲೇ ಯೊಕ್ಕುಮ್ ನಮ್ಬೀ,
ಶೆಙ್ಗಣ್ ನೆಡಿಯ ತಿರುವೇ, ಶೆಙ್ಗಮಲಮ್ ಪುರೈವಾಯಾ,
ಕೊಙ್ಗೈ ಶುರನ್ದಿಡ ಉನ್ನೈಕ್ಕೂವಿಯುಮ್ ಕಾಣಾದಿರುನ್ದೇನ್,
ಎಙ್ಗಿರುನ್ದಾಯರ್ಗಳೋಡುಮ್ ಎನ್ ವಿಳೈಯಾಡುಹಿನ್ಱಾಯೇ.

ವಙ್ಗಮ್ வங்கம் = ಅಲೆಗಳು, ಮಱಿ மறி = ಮಗುಚಿಕೆಗಳಿಂದ ಕದಡಿಹೋದ, ಕಡಲ್ ವಣ್ಣಾ கடல் வண்ணா = ಕಡಲಿನ ಬಣ್ಣದವನೇ, ಮಾ ಮುಹಿಲೇ ಒಕ್ಕುಮ್ மா முகிலே ஒக்கும் = ದೊಡ್ಡ (ಸುಂದರವಾದ) ಮುಗಿಲನ್ನೇ ಹೋಲುವ, ನಮ್ಬೀ நம்பீ = ಸ್ವಾಮಿಯೇ, ಶೆಮ್ செம் = (ತಾವರೆಯಂತೆ) ಕೆಂಪಗೆ (ಸುಂದರವಾದ), ಕಣ್ ನೆಡಿಯ கண் நெடிய = ವಿಶಾಲವಾದ ಕಣ್ಣುಗಳುಳ್ಳ, ತಿರುವೇ திருவே = ಶ್ರೀಮಂತನೇ, ಶೆಮ್ ಕಮಲಮ್ செம் கமலம் = ಕೆಂದಾವರೆಯನ್ನು, ಪುರೈ புரை=

ಹೊಳೆಯುವ, ವಾಯಾ வாயா = ತುಟಿಗಳುಳ್ಳವನೇ, ಕೊಙ್ಗೈ (ಹಾಲು) எங்காங்
கை = (ನನ್ನ) ಮೊಲೆಗಳು, ಸುರನ್ದ சுரந்திட = ಸುರಿಸುತ್ತಿರಲು,
ಉನ್ನೈ உன்னை = ನಿನ್ನನ್ನು, ಕೂವಿಯುಮ್ கூவியும் = ಕೂಗಿ ಕರೆ
ದರೂ, ಕಾಣಾದು ಇರುನ್ದೇನ್ காணாது இருந்தேன் = ಕಾಣದೆ
ಇದ್ದೇನೆ, ಏಙ್ಗಿ ಇರುನ್ದು ஏங்கி இருந்து = ಎಲ್ಲದ್ದುಕೊಂಡು,
ಆಯರ್ಗಳೋಡುಮ್ ஆயர்களோடும் = ಗೋವಳರೊಡನೆ,
ಎನ್ನಣ್ = ಏನು, ವಿಳೈಯಾಡುಕಿನ್ರನೈಯೇ விளையாடுகி
ன்றனை = ಆಟವಾಡುತ್ತಿದ್ದೀಯೆ

ಅಲೆಗಳ ಪಂಕ್ತಿಗಳಿಂದ ಕದಡಿ ಹೋಗಿರುವ ಕಡಲಿನ ಬಣ್ಣದವನೇ, ಸೊಬಗಿನ ಮಹಾಮಣಿ ಆ ಹೊಳೆಯುವ ಬಾಯಿಯುಳ್ಳ, ಕೆಂದಾವರೆಯಂತೆ ಸುಂದರವಾದ ವಿಶಾಲವಾದ ಕಣ್ಣುಗಳುಳ್ಳ ಶ್ರೀಮಂತನೇ, ಕೆಂದಾವರೆಯನ್ನು ಹೋಲುವ ತುಟಿಗಳುಳ್ಳವನೇ, ನನ್ನ ಮೊಲೆಗಳಲ್ಲಿ ಹಾಲು ಸುರಿದು ಹೋಗುತ್ತಿದೆ. ನಿನ್ನನ್ನು ಕೂಗಿ ಕರೆದರೂ ನಾನು ನಿನ್ನನ್ನು ಕಾಣದೆ ಇದ್ದೇನೆ. ಎಲ್ಲದ್ದುಕೊಂಡು ಗೋವಳರೊಡನೆ ಆಟವಾಡುತ್ತಿರುವೆಯೇನು? (2)

ತಾಯಿಯು ಕೇಳದೆ ತನ್ನ ಕಂದನಾದ ಕೃಷ್ಣನನ್ನು ಕೂಗಿ ಕರೆಯುತ್ತಾಳೆ: ಅಲೆಗಳ ಪಂಕ್ತಿಗಳಿಂದ ತುಂಬಿ ಹೊರಳಿ ಹೊರಳಿಯುವ ಕಡಲಿನ ಬಣ್ಣದವನೇ, ಸೊಬಗಿನಿಂದ ಕೂಡಿದ ಕಾಂತಿಪೂರ್ಣವಾದ ಕಾಯುರ್ಗಿ [illegible] ಅನಂತವನೇ, ಕೆಂದಾವರೆಯ ದಳದಂತೆ ವಿಶಾಲವಾದ ಆಕರ್ಷಕವಾದ ಕಣ್ಣುಗಳುಳ್ಳವನೇ, ಕೆಂದಾವರೆಯ ಬಣ್ಣದ ದಿವ್ಯವಾದ ಚೆಂದುಟಿಯುಳ್ಳವನೇ, ನಿನ್ನನ್ನು ಎಷ್ಟು ರೀತಿಯಲ್ಲಿ ಕೂಗಿ ಕರೆದರೂ ನೀನು ನನ್ನ ಕಣ್ಣಿಗೆ ಕಾಣಿಸಿಕೊಳ್ಳುವುದಿಲ್ಲವಲ್ಲ! ನೀನೆಲ್ಲಿ ಅಡಗಿಕೊಂಡಿದ್ದೀಯೆ? ಗೋವಳರ ಜೊತೆಯಲ್ಲಿ ಆಟವಾಡುತ್ತಿರುವೆಯೇನು? ಬದಲ್ಲ ಪ್ರೀತಿನಿಂದ ನಿನ್ನನ್ನ ಅರುವ ನಿನ್ನ ತಾಯಿಯ ಅವಸ್ಥೆಯೇನೆಂದು ಯೋಚಿಸಿದೆಯಾ? ನಿನ್ನನ್ನು ನೆನೆನೆನೆದು ನಿನ್ನ ತಾಯಿಯ ಸ್ತನಗಳಲ್ಲಿ ಹಾಲು ಉಕ್ಕಿ ಸೋರಿ ಹೋಗುತ್ತಿದೆಯಲ್ಲ! ನಿನಗಾಗಿಯೇ ಅದನ್ನು ಎಷ್ಟು ಕಾಲವಾದರೂ ನಾನು ಕಾಪಾಡಿಟ್ಟುಕೊಂಡಿರುವುದಾದರೂ ಹೇಗೆ? ಕಂದಾ, ಕೃಷ್ಣಾ, ನಿನ್ನ ತಾಯಿಯ ಮೇಲೆ ಕರುಣೆಯಿಟ್ಟು ಬೇಗ ನನ್ನ ಬಳಿಗೆ ಬಾ. ಹಾಲನ್ನು ಕುಡಿದು, ನನ್ನನ್ನು ತೃಪ್ತಿಪಡಿಸು.

ತನ್ನ ಕಂದನ ಮೇಲೆ ತಾಯಿಗೆ ಎಷ್ಟು ಮಮತೆಯೋ ಅಷ್ಟೇ ಮಮತೆಯನ್ನು ಭಕ್ತನು ತನ್ನ ಸ್ವಾಮಿಯ ಮೇಲೆ ಇಡಬೇಕು. ತಾಯಿ ತನ್ನ ಮಗುವನ್ನು ಗಮನಿಸುವಂತೆಯೇ ಭಕ್ತನೂ ಭಗವಂತನಲ್ಲಿ ಎಷ್ಟೋ ವಹಿಸಬೇಕು.

Garani Srinivasan

3. திருவிற்பொலிந்தவெழிலார் ஆயர்தம்பிள்ளைகளோடு,
தெருவில் திரிகின்ற நம்பீ, செய்கின்ற தீமைகள் கண்டிட்டு,
உருகியென் கொங்கையின் தீம்பால் ஓட்டந்து பாய்ந்திடுகின்ற,
மருவிக்குடங்காலிருந்து வாய்முலையுண்ண நீ வாராய்.

ತಿರುವಿಲ್ ಪೊಲಿಂದ ಎೞಿಲಾರ್ ಆಯರ್ ತಮ್ ಪಿಳ್ಳೈಗಳೋಡು,
ತೆರುವಿಲ್ ತಿರಿಗಿನ್ರ ನಂಬೀ, ಶೆಯ್‌ಗಿನ್ರ ತೀಮೈಗಳ್ ಕಂಡಿಟ್ಟು,
ಉರುಗಿಯೆನ್ ಕೊಂಗೈಯಿನ್ ತೀಂಪಾಲ್ ಓಟ್ಟಂದು ಪಾಯ್‌ನ್ದಿಡುಗಿನ್ರ,
ಮರುವಿಕ್ಕುಡಂಗಾಲಿರುಂದು ವಾಯ್ ಮುಲೈಯುಣ್ಣ ನೀ ವಾರಾಯ್.

ತಿರುವಿಲ್ திருவில் = ಸಂಪತ್ತಿನಲ್ಲಿ, ಪೊಲಿಂದ பொலிந்த = ಅಭ್ಯುದಯಗೊಂಡಿರುವ, ಎೞಿಲ್ எழில் = ದೇಹ ಸೌಂದರ್ಯ, ಆರ್ ஆர் = ತುಂಬಿರುವ, ಆಯರ್ ತಮ್ ஆயர் தம் = ಗೋವಳರ, ಪಿಳ್ಳೈಗಳೋಡು பிள்ளைகளோடு = ಬಾಲಕರೊಡನೆ, ತೆರುವಿಲ್ தெருவில் = ಬೀದಿಗಳಲ್ಲಿ, ತಿರಿಗಿನ್ರ திரிகின்ற = ಆಡುತ್ತಿರುವ, ನಂಬೀ நம்பீ = ಪರಿಪೂರ್ಣನೇ, ಶೆಯ್‌ಗಿನ್ರ செய்கின்ற = (ನೀನು) ಮಾಡುತ್ತಿರುವ, ತೀಮೈಗಳ್ தீமைகள் = ಚೇಷ್ಟೆಗಳನ್ನು, ಕಂಡಿಟ್ಟು கண்டிட்டு = ನೋಡಿ, ಉರುಗಿ உருகி = ಕರಗಿ, ಎನ್ ಕೊಂಗೈಯಿನ್ என் கொங்கையின் = ನನ್ನ ಮೊಲೆಗಳಿಂದ, ತೀಂಪಾಲ್ தீம் பால் = ಮಧುರವಾದ (ಸಿಹಿಯಾದ) ಹಾಲು, ಓಟ್ಟಂದು ஓட்டந்து = ಉಕ್ಕಿ, ಪಾಯ್‌ನ್ದು ಇಡುಗಿನ್ರ பாய்ந்து இடுகின்ற = ಮುಂದು ಹೋಗುತ್ತಿದೆ. ಮರುವಿ மருவி = ಪ್ರೀತ್ಯಾ, ಕುಡಂಗಾಲ್ ಇರುಂದು குடங்கால் இருந்து = ಮಡಿಲಲ್ಲಿ ಮಲಗಿ, ಮುಲೈ ಉಣ್ಣ முலை உண்ண = ಮೊಲೆಯನ್ನುಣ್ಣಲು, ನೀ ವಾರಾಯ್ நீ வாராய் = ನೀನು ಬರುವವನಾಗು.

ಸಂಪತ್ತಿನಲ್ಲಿ ಅಭ್ಯುದಯಗೊಂಡಿರುವ, ದೇಹಸೌಂದರ್ಯ ತುಂಬಿರುವ ಗೋವಳ ಬಾಲಕರೊಡನೆ ಬೀದಿಗಳಲ್ಲಿ ಆಡುತ್ತಿರುವ ಪರಿಪೂರ್ಣನೇ, ನೀನು ಮಾಡುತ್ತಿರುವ ಚೇಷ್ಟೆಗಳನ್ನು ನೋಡಿ, ನನ್ನ ಮೊಲೆಗಳಿಂದ ಕರಗಿ, ಸಿಹಿಯಾದ ಹಾಲು ಉಕ್ಕಿ ಮುಂದು ಹೋಗುತ್ತಿದೆ. ಪ್ರೀತ್ಯಾ ನನ್ನ ಮಡಿಲಲ್ಲಿ ಮಲಗಿ ಮೊಲೆಯನ್ನುಣ್ಣಲು ನೀನು ಬರುವವನಾಗು. (3)

GaraniSrinivasan

ಭಗವಂತನೇ ತನ್ನ ಮಗನಾಗಿ, ಬಾಲಲೀಲೆಗಳನ್ನು ತೋರಿಸುತ್ತಾ ಆಡಿ ಕೊಳ್ಳುತ್ತಿರುವುದನ್ನು ಕಂಡ ಯಶೋದೆಗೆ, ಮನಸ್ಸು ಅರಳಿದಂತೆ ಆನಂದವು ಉಕ್ಕಿ ಹರಿಯುವುದು ಹೆಚ್ಚೇ? ಯಶೋದೆಗಲ್ಲದೆ ಆ ವಿಶಿಷ್ಟಾನುಭವದ ಭಾಗ್ಯ ಮತ್ತಾರಿಗುಂಟು? ಭಕ್ತನಿಗೆ ಈ ಬಗೆಯ ಭಾಗ್ಯ ಲಭಿಸಿದರೋ!

ತಾಯಿ ಯಶೋದೆ ಕೃಷ್ಣನನ್ನು ಕೂಗಿ ಕರೆಯುತ್ತಾಳೆ: ಏರಿಪ್ರಾಣನೇ, ಪ್ರೇಮ ಗಾದಂಬಿಸುತ್ತಾ ತುಂಬಿರುವ ಗೋವಳಬಾಲಕರ ಜೊತೆಯಲ್ಲಿ ನೀನು ಕೂಡಿ ತೊಂಡು, ನಂದಗೋಕುಲದ ಬೀದಿಗಳಲ್ಲಿ ನಡೆಸುವ ಚಿತ್ರವಿಚಿತ್ರವಾದ ಆಟ, ತುಂಟಾಟಗಳನ್ನು ನಾನು ಕಣ್ಣಾರ ಕಂಡೆ. ನನ್ನ ಮನಸ್ಸು ಕರಗಿ ಹೋಗುತ್ತದೆ. ನಿನ್ನ ಮೇಲಣ ವಾತ್ಸಲ್ಯ ಮಿತಿಮೀರುತ್ತದೆ. ನನ್ನ ಮೊಲೆಗಳಲ್ಲಿ ಸಿಹಿಯಾದ ಹಾಲು ತಾನೇ ತಾನಾಗಿ ಉಕ್ಕಿ ಹರಿದು ಸುರಿದು ಹೋಗುತ್ತದೆ. ಮಗುವೇ, ಓಡಿ ಬಾ. ನನ್ನ ಮಡಿಲಲ್ಲಿ ಸ್ವಸ್ಥವಾಗಿ ಮಲಗು. ಹಾಲು ವ್ಯರ್ಥವಾಗುವುದರ ಬದಲಾಗಿ, ಅದನ್ನು ಕುಡಿದು ತೃಪ್ತನಾಗು:

4. மக்கள் பெறுதவம் போலும் வையத்து வாழும் மடவார்,
மக்கள் பிறர் கண்ணுக்கொக்கும் முதல்வா, மதக்களிறன்னாய்,
செக்கரிளம்பிறை தன்னை வாங்கி நின் கையில் தருவன்,
ஒக்கலை மேலிருந்தம்மம் உவந்தினிதுண்ணநீ வாராய்.

ಮಕ್ಕಳ್ ಪೆಱುತವಮ್ ಪೋಲುಮ್ ವೈಯತ್ತು ವಾೞುಮ್ ಮಡವಾರ್,
ಮಕ್ಕಳ್ ಪಿಱರ್ ಕಣ್ಣುಕ್ಕೊಕ್ಕುಮ್ ಮುದಲ್ವಾ, ಮದಕ್ಕಳಿಱನ್ನಾಯ್,
ಶೆಕ್ಕರಿಳಮ್ ಪಿಱೈ ತನ್ನೈ ವಾಙ್ಗಿ ನಿನ್ ಕೈಯಿಲ್ ತರುವನ್,
ಒಕ್ಕಲೈ ಮೇಲಿರುನ್ದಮ್ಮಮ್ ಉವನ್ದಿನಿದುಣ್ಣನೀ ವಾರಾಯ್.

ಮಕ್ಕಳ್ மக்கள் = ಮಕ್ಕಳಿಗಾಗಿ, ಪೆಱು பெறு = ಬಲುದೊಡ್ಡ, ತವಮ್ ಪೋಲುಮ್ தவம் போலும் = ತಪಸ್ಸಿನ ಫಲವೋ, ವೈಯತ್ತು வையத்து = ಭೂಲೋಕದಲ್ಲಿ, ವಾೞುಮ್ வாழும் = ಬಾಳುವ, ಮಡವಾರ್, ಮಕ್ಕಳ್ மடவார் மக்கள் = ಸ್ತ್ರೀಯರಿಗೂ ಪುರುಷರಿಗೂ, ಪಿಱರ್ பிறர் = ಇತರರ, ಕಣ್ಣುಕ್ಕು கண்ணுக்கு = ಕಣ್ಣಿಗೆ, ಒಕ್ಕುಮ್ ஒக்கும் = ಎಂಬಂತೆ ಇರುವ, ಮುದಲ್ವಾ முதல்வா = ಆದಿಕಾರಣನೇ, ಮದಮ್ ಕಳಿಱು மதம் களிறு = ಮದ್ದಾನೆಯನ್ನು, ಅನ್ನಾಯ್ அன்னாய் = ಹೋಲುವವನೇ, ಶೆಕ್ಕರ್ செக்கர் = ಸಂಜೆಯ ಕೆಂಪು ಗಗನದಲ್ಲಿರುವ, ಇಳಮ್ ಪಿಱೈ ತನ್ನೈ இளம் பிறை தன்னை = ಬಾಲಚಂದ್ರನನ್ನು, ವಾಙ್ಗಿ வாங்கி = ತೆಗೆದು, ನಿನ್ நின் = ನಿನ್ನ, ಕೈಯಿಲ್ கையில் = ಕೈಯಲ್ಲಿ,

ತರುವನ್ த(ரு)வன் = ಕೊಡುತ್ತೇನೆ, ಒಕ್ಕಲೈ ಮೇಲ್ ஒக்கலை
மேல் = ನನ್ನ ಸೊಂಟದಲ್ಲಿ, ಇರುನ್ದು இ(ரு)ந்து = ಇದ್ದುಕೊಂಡು,
ಅಮ್ಮಮ್ ಅம்மம் = ಮೊಲೆಯನ್ನು (ಹಾಲನ್ನು), ಉವನ್ದು ಉவ
ந்து = ಆದರದಿಂದ, ಇನಿದು இனிது = ಚೆನ್ನಾಗಿ, ಉಣ್ಣಾ ಉண்
ணா = ಉಣ್ಣುವುದಕ್ಕೆ, ನೀ ವಾರಾಯ್ நீ வாராய் = ನೀನು ಬರು
ವವನಾಗು.

ಭೂಲೋಕದಲ್ಲಿ ಬಾಳುವ ಇತರ ಸ್ತ್ರೀ ಪುರುಷರ ಕಣ್ಣಿಗೆ ಮತ್ತು ಆಗಾಗ ಮೂಡದ ಬಲುದೊಡ್ಡ ತಪಸ್ಸಿನ ಫಲವೋ ಎಂಬಂತೆ ಇರುವ ಆದಿಕಾರಣನೇ, (ಸಾಮರ್ಥ್ಯದಲ್ಲಿ) ಮದ್ದಾನೆಯನ್ನು ಹೋಲುವವನೇ, ಸಂಜೆಯ ಕೆಂಪು ಗಗನದಲ್ಲಿರುವ ಬಾಲಚಂದ್ರನನ್ನು ಕರೆದು ನಿನ್ನ ಕೈಗೆ ಕೊಡುತ್ತೇನೆ. ನನ್ನ ಸೊಂಟದಲ್ಲಿದ್ದುಕೊಂಡು ಮೊಲೆಯನ್ನು ಆದರದಿಂದ ಚೆನ್ನಾಗಿ ಉಣ್ಣುವುದಕ್ಕೆ ನೀನು ಬರುವವನಾಗು. (4)

ತಾಯಿ ಯಶೋದೆ ತನ್ನ ಕಂದನಾದ ಬಾಲಕೃಷ್ಣನನ್ನು ಕೂಗಿ ಕರೆಯುತ್ತಾಳೆ: ಜಗದಾದಿಕಾರಣನೇ, ಮದ್ದಾನೆಯಂತೆ ಸಾಮರ್ಥ್ಯನೇ, ನಿನ್ನನ್ನು ಹಡೆದ ನಾನೆಷ್ಟು ಭಾಗ್ಯವಂತಳೋ! ಭೂಲೋಕದಲ್ಲಿ ಬಾಳುವ ಇತರ ಸ್ತ್ರೀ ಪುರುಷರೆಲ್ಲರೂ ಕರುಬುವಂತೆ, ಆಸೆಪಡುವಂತೆ, ಹೊಗಳುವಂತೆ ನೀನು ಅವರ ಕಣ್ಣಿಗೆ ಕಂಡುಬರುತ್ತೀಯಲ್ಲ! ಅವರೆನ್ನುತ್ತಾರೆ: "ಇಂಥ ಅಪಾರವಾದ ಕಾಂತಿಯುಳ್ಳ ಮಗುವನ್ನು ಪಡೆಯುವುದಕ್ಕೆ ಇವನ ತಾಯಿ ಎಷ್ಟು ದೊಡ್ಡ ತಪಸ್ಸನ್ನು ಮಾಡಿರಬೇಕು! ಆ ತಪಸ್ಸಿನ ಫಲವೇ ಈ ಮಗುವಾಗಿ ರೂಪುಗೊಂಡಿರಬೇಕು." ಅವರ ಕೊಂಡಾಟಕ್ಕೆ ಅನುಗುಣವಾಗಿಯೇ ನೀನಿದ್ದೀ. ಮಗುವೇ, ನನ್ನ ಬಳಿಗೆ ಓಡಿಬಾ. ~~ನಿನ್ನ~~ ಸಂಜೆಗೆಂಪು ~~ಗಗನದಲ್ಲಿ~~ ಬಾನಿನಲ್ಲಿ ಬೆಳಗುವ ಬಾಲಚಂದ್ರನನ್ನು ಕರೆದು ನಿನ್ನ ಕೈಗೆ ಕೊಡುತ್ತೇನೆ. ಬಾ, ನನ್ನ ಸೊಂಟದಲ್ಲಿದ್ದುಕೊಂಡು ಆದರದಿಂದ ನನ್ನ ಮೊಲೆಹಾಲನ್ನು ಚೆನ್ನಾಗಿ ಉಣ್ಣುವೆಯಂತೆ.

ಮಗುವನ್ನು ತೃಪ್ತಿಪಡಿಸುವುದಕ್ಕೆ ಯಶೋದೆ ತನಗೆ ಸಾಧ್ಯವಲ್ಲದ ಕೆಲಸವನ್ನು ಮಾಡುತ್ತೇನೆನ್ನುತ್ತಾಳೆ. ಬಾನಿನಲ್ಲಿ ಬೆಳಗುವ ಬಾಲಚಂದ್ರನನ್ನು ಅವಳು ಎಟುಕಿಸಿಕೊಳ್ಳಬಲ್ಲಳೇ? ತನಗೆ ಅಬ್ಬದಂಥ ಈ ಹಾರದ ಶಕ್ತಿಯೇ? ತನ್ನ ಮೊಲೆಯಲ್ಲಿ ತೊರೆಯುಕ್ಕುತ್ತಿರುವ ಹಾಲನ್ನು ವ್ಯರ್ಥ ಮಾಡದಂತೆ, ಮಗುವಿಗೆ ತೃಪ್ತಿಯಾಗಿ ಕುಡಿಸಿ ಬಿಡಬೇಕೆಂದೇ ಅಲ್ಲವೇ? ಭಗವಂತನಿಗೆ ತನ್ನ ಸೇವೆಯ ವಿನಿಯೋಗ ಮಾಡಬೇಕೆಂದೂ, ಭಗವಂತನಿಗೆ ಅದರಿಂದ ಪ್ರೀತಿಯಾಗಬೇಕೆಂದೂ ನಿಜಭಕ್ತನ ಕಾತರವಷ್ಟೆ!

5. மைத்தகருங்குஞ்சிமைந்தா, மாமருதூடு நடந்தாய்,
வித்தகனே, விரையாதே வெண்ணெய் விழுங்கும் விகிர்தா,
இத்தனை போதன்றியென்றன் கொங்கை சுரந்திருக்ககில்லா,
உத்தமனே, அம்மமுண்ணாய் உலகளந்தாய் அம்மமுண்ணாய்.

ಮೈತ್ತಕರುಙ್ಞಂಜಿ ಮೈನ್ದಾ ಮಾಮರುದೂಡು ನಡನ್ದಾಯ್,
ವಿತ್ತಗನೇ, ವಿರೈಯಾದೇ ವೆಣ್ಣೆಯ್ ವಿೞುಙ್ಗುಮ್ ವಿಹಿರ್ತಾ,
ಇತ್ತನೈ ಪೋದನ್ರಿಯೆನ್ರನ್ ಕೊಙ್ಗೈ ಶುರನ್ದಿರುಕ್ಕಹಿಲ್ಲಾ,
ಉತ್ತಮನೇ, ಅಮ್ಮಮುಣ್ಣಾಯ್ ಉಲಹಳನ್ದಾಯ್ ಅಮ್ಮಮುಣ್ಣಾಯ್.

ಮೈತ್ತ மைத்த = ಕಾಡಿಗೆಯಂತೆ, ಕರು கரு = ಕಪ್ಪನೆಯ, ಕುಂಜಿ குஞ்சி = ತಲೆಗೂದಲಿನ, ಮೈನ್ದಾ மைந்தா = ಮಗುವೇ (ಮಗನೇ), ಮಾ மா = ಬಲುದೊಡ್ಡ, ಮರುದು மருது = ಮತ್ತಿ ಮರಗಳ, ಊಡು ஊடு = ನಡುವೆ, ನಡನ್ದಾಯ್ நடந்தாய் = ನಡೆದವನೇ, ವಿತ್ತಗನೇ வித்தகனே = ಆಶ್ಚರ್ಯಕಾರಿಯೇ, ವಿರೈಯಾದೇ விரையாதே = ತಡಮಾಡದೆ, ವೆಣ್ಣೆಯ್ வெண்ணெய் = ಬೆಣ್ಣೆಯನ್ನು, ವಿೞುಙ್ಗುಮ್ விழுங்கும் = ನುಂಗುವ, ವಿಹಿರ್ತಾ விகிர்தா = ವಿಚಿತ್ರ ವರ್ತನೆಯವನೇ, ಇತ್ತನೈ ಪೋದು இத்தனை போது = ಇಷ್ಟು ಹೊತ್ತು, ಅನ್ರಿ அன்றி = ಅಲ್ಲದೆ, ಎನ್ರನ್ என்றன் = ನನ್ನ, ಕೊಙ್ಗೈ கொங்கை = ಮೊಲೆಗಳು, ಶುರನ್ದು சுரந்து = ಸುರಿಸುತ್ತಾ, ಇರುಕ್ಕಹಿಲ್ಲಾ இருக்ககில்லா = ಇರಲಾರದು, ಉತ್ತಮನೇ உத்தமனே = ಶ್ರೇಷ್ಠಗುಣಗಳುಳ್ಳವನೇ, ಅಮ್ಮಮುಣ್ಣಾಯ್ அம்மம் உண்ணாய் = ಮೊಲೆಯನ್ನುಣ್ಣುವೆಯಂತೆ, ಉಲಹಳನ್ದಾಯ್ உலகளந்தாய் = ಲೋಕಗಳನ್ನಳೆದವನೇ, ಅಮ್ಮಮುಣ್ಣಾಯ್ அம்மம் உண்ணாய்.

ಕಾಡಿಗೆಯಂತೆ ಕಪ್ಪಾಗಿರುವ ತಲೆಗೂದಲಿನ ಮಗುವೇ, ಬಲುದೊಡ್ಡ ಮತ್ತಿ ಮರಗಳ ನಡುವೆ ನಡೆದವನೇ, ಆಶ್ಚರ್ಯಕಾರಿಯೇ, ತಡಮಾಡದೆ ಬೆಣ್ಣೆಯನ್ನು ನುಂಗುವ ವಿಚಿತ್ರ ವರ್ತನೆಯವನೇ. ನನ್ನ ಮೊಲೆಗಳಲ್ಲಿ ಹಾಲು ಇಷ್ಟು ಹೊತ್ತೂ ಸುರಿದು ಹೋಗುತ್ತಲೇ ಇರಬಲ್ಲದೇ? ಶ್ರೇಷ್ಠಗುಣಗಳುಳ್ಳವನೇ, ಲೋಕಗಳನ್ನಳೆದವನೇ, ಮೊಲೆಯುಣ್ಣುವೆಯಂತೆ ಬಾರಯ್ಯ. (5)

ವಿಶಾಲವಾದ ಹೊಳೆಯುವ ಕಣ್ಣುಗಳು, ಕಪ್ಪನೆಯ ಗುಂಗುರು ಕೂದಲು ಮೋಹಕವಾದ ವಸ್ತುಗಳು. ಬಾಲಕೃಷ್ಣನನ್ನು ಆಕರ್ಷಕವಾಗಿ ಮಾಡುತ್ತಿದ್ದವು ಅವೇ.

ಬಾಲಕೃಷ್ಣನ ಬಗೆಬಗೆಯ ಚೇಷ್ಟೆಯ ದೂರನ್ನು ಕೇಳಿ, ಸಹಿಸಲಾರದೆ, ತಾಯಿ ಯಶೋದೆ ಅವನನ್ನು ಒರಳುಕಲ್ಲಿಗೆ ಕಟ್ಟಿಹಾಕಿ, ಮನೆಗೆಲಸಕ್ಕೆಂದು ಒಳಕ್ಕೆ ಹೋದಳಂತೆ. ಮಗುವು ಸ್ವಲ್ಪ ಹೊತ್ತು ಅತ್ತಂತೆ ನಟಿಸಿದನಂತೆ. ಆ ಮೇಲೆ, ಮೆಲ್ಲಗೆ ಒರಳನ್ನು ತನ್ನೊಡನೆ ಎಳೆದು ಕೊಂಡು ಅಂಬೆಗಾಲಿಕ್ಕುತ್ತಾ, ದೊಡ್ಡದಾಗಿ ಬೆಳೆದಿರುವ ಜೋಡಿ ಮತ್ತಿ ಮರಗಳ ನಡುವೆ ನುಸುಳಿದನಂತೆ. ಒರಳುಕಲ್ಲನ್ನು ತನ್ನ ಕಡೆಗೆ ಎಳೆದು ಕೊಳ್ಳುವ ಪ್ರಯತ್ನ ಮಾಡಿದನಂತೆ. ಅದರಿಂದ ಆದದ್ದೇನು? ಎರಡು ಭಾರಿ ಮತ್ತಿ ಮರಗಳೂ ಮುರಿದು ಬಿದ್ದವಂತೆ. ಏನಾಶ್ಚರ್ಯ!

ನಂದಗೋಕುಲದ ಗೋಪಿಯರು ತಮ್ಮತಮ್ಮ ಮನೆಗಳಲ್ಲಿ ಕಟ್ಟಿ ಇಟ್ಟಿದ್ದ ಬೆಣ್ಣೆಯನ್ನೆಲ್ಲಾ ಎಡೆಬಿಡದೆ ನುಂಗಿ ಬಿಡುತ್ತಿದ್ದ ವಿಚಿತ್ರವರ್ತನೆಯ ವಿಸ್ಮಯಕಾರಿ ಅವನು.

ತ್ರಿವಿಕ್ರಮನಾಗಿ ಅವತರಿಸಿದಾಗ ಭಗವಂತನು ತನ್ನ ಎರಡೇ ಹೆಜ್ಜೆಗಳಿಂದ ಮೂರು ಲೋಕಗಳನ್ನೂ ಅಳೆದು ಕೊಂಡ ಅದ್ಭುತಕಾರಿ.

ತಾಯಿ ಯಶೋದೆ ಕೃಷ್ಣನನ್ನು ಕೂಗಿ ಕರೆಯುತ್ತಾಳೆ: ಆಕರ್ಷಕವಾದ ಕಪ್ಪು ಕೂದಲಿನವನೇ, ಮತ್ತಿ ಮರಗಳ ನಡುವೆ ನುಸುಳಿ ಅವುಗಳನ್ನು ಮುರಿದು ಹಾಕಿದವನೇ, ಎಷ್ಟು ಬೆಣ್ಣೆಯನ್ನಾದರೂ ಎಡೆಬಿಡದೆ ನುಂಗುವ ವಿಚಿತ್ರ ಬಾಲಕನೇ, ಉತ್ತಮನೇ, ನಿನಗಾಗಿಯೇ ನಾನು ಕಾದು ಕೊಂಡಿದ್ದೇನೆ. ನನ್ನ ಮೊಲೆಗಳಲ್ಲಿ ಬಹಳ ಹೊತ್ತಿನಿಂದಲೂ ಹಾಲು ಉಕ್ಕಿ ಹರಿದು ಹೋಗುತ್ತಿದೆಯಲ್ಲ! ಹಾಗೆಯೇ, ವ್ಯರ್ಥವಾಗಿ ಅದನ್ನು ಹರಿಯಗೊಡಲು ಒಳ್ಳೆಯದೇ? ಬೇಗ ಬಾ, ಮಗು. ಹಾಲನ್ನುಂಡು ತೃಪ್ತಿಗೊಳ್ಳು ಯಂತೆ.

6. பிள்ளைகள் செய்வன செய்யாய் பேசிற் பெரிதும் வலியை,
கள்ளம் மனத்திலுடையை காணவே தீமைகள் செய்தி,
உள்ளமுருகியென் கொங்கை ஓட்டந்து பாய்ந்திடுகின்ற,
பள்ளிக்குறிப்புச் செய்யாதே பாலமுதுண்ண நீவாராய்.

ಪಿಳ್ಳೈಗಳ್ ಶೆಯ್ವನ ಶೆಯ್ಯಾಯ್ ಪೇಶಿಱ್ ಪೆರಿದುಮ್ ವಲಿಯೈ,
ಕಳ್ಳಮ್ ಮನತ್ತಿಲುಡೈಯೈ ಕಾಣವೇ ತೀಮೈಗಳ್ ಶೆಯ್ದಿ,
ಉಳ್ಳಮುರುಗಿಯೆನ್ ಕೊಙ್ಗೈ ಓಟ್ಟನ್ದು ಪಾಯ್ನ್ದಿಡುಕಿನ್ಱ,
ಪಳ್ಳಿಕ್ಕುಱಿಪ್ಪುಚ್ಚೆಯ್ಯಾದೇ ಪಾಲಮುದುಣ್ಣ ನೀ ವಾರಾಯ್.

ಪಿಳ್ಳೈಗಳ್ பிள்ளைகள் = ಮಕ್ಕಳು, ಶೆಯ್ವನ செய்வன = ಮಾಡುವುದನ್ನು, ಶೆಯ್ಯಾಯ್ செய்யாய் = (ನೀನು) ಮಾಡುವುದಿಲ್ಲ,

Garani Srinivasan

ಪೇಶಿಲ್ பேசில் = ಮಾತನಾಡಿದರೆ (ಹೇಳಲುಹೋದರೆ), ಪೆರಿದುಮ
பெரிதும் = ಬಹಳ ಹೆಚ್ಚಾದ, ವಲಂಪ್ರ பொருளாய = ಶಕ್ತಿಯುಳ್ಳ,
ಕಳ್ಳಮ್ கள்ளம் = ಕಪಟವನ್ನು, ಮನತ್ತಿಲ್ மனத்தில் =
ಮನಸ್ಸಿನಲ್ಲಿ, ಉಡೈಯಾಯ್ உடையாய் = ಉಳ್ಳವನಾದ್ದರಿಂದ,
ಕಾಣಾವೇ காணவே = ನೋಡುತ್ತಿರುವ ಹಾಗೆಯೇ, ತೀಮೈಗಳ್
தீமைகள் = ದುಷ್ಕರ್ಮಗಳನ್ನೇ (ಚೇಷ್ಟೆಗಳನ್ನೇ), ಶೆಯ್ದಿ
செய்தி = ಮಾಡುತ್ತೀ, ಉಳ್ಳಮ್ உள்ளம் = ಮನಸ್ಸು,
ಉರುಹ உருகி = ಕರಗಿ, ಎನ್ என் = ನನ್ನ, ಕೊಂಗೈ கொங்
கை = ಮೊಲೆಗಳು, ಒಟ್ಟನ್ದು ஒட்டந்து = ಉಕ್ಕಿ, ಪಾಯುನ್ದು
ಇರುಕ್ಕಿನ್ರ பாய்ந்து இருக்கின்ற = ಹರಿದು ಹೋಗುತ್ತಿದೆ,
ಪಳ್ಳಿ பள்ளி = ಮಲಗುವ (ನಿದ್ದೆಯ), ಕುರಿಪ್ಪು குறிப்பு = ಸೂಚ
ನೆಗಳನ್ನು, ಶೆಯ್ಯಾದೇ செய்யாதே = ಮಾಡದೆಯೇ, ಪಾಲ್
பால் = ಹಾಲನ್ನು, ಅಮುದುಣ್ಣ அமுதுண்ண = ಆಶೆಯಿಂದ
ಉಣ್ಣಲು, ನೀ ವಾರಾಯ್ நீ வாராய் = ನೀ ಬರುವಂಥವನಾಗು.

ಮಕ್ಕಳು ಮಾಡಿದ್ದನ್ನು (ಮಾಡುವುದನ್ನು) ನೀನು ಮಾಡುವುದಿಲ್ಲ. ಹೇಳಲುಹೋದರೆ ಬಹಳ ಹೆಚ್ಚಾದ ಶಕ್ತಿಯುಳ್ಳ ಕಾರ್ಯಗಳನ್ನೇ ಮಾಡುತ್ತೀ. ಮನದಲ್ಲಿ ಕಪಟವನ್ನುಳ್ಳವನಾದ್ದರಿಂದ. ನೋಡುತ್ತಿರುವ ಹಾಗೆಯೇ ಚೇಷ್ಟೆಗಳನ್ನೇ ಮಾಡುತ್ತೀ. ನನ್ನ ಮನಸ್ಸು ಕರಗುತ್ತದೆ. ನನ್ನ ಮೊಲೆಗಳಲ್ಲಿ ಹಾಲು ಉಕ್ಕಿ ಹರಿದು ಹೋಗುತ್ತಿದೆ. ನಿದ್ದೆಯ ಸೂಚನೆಗಳನ್ನು ಮಾಡದೆಯೇ ಹಾಲನ್ನು ಆಶೆಯಿಂದ ಉಣ್ಣಲು ನೀನು (6) ಬರುವಂಥವನಾಗು.

ತಾಯಿ ಯಶೋದೆ ಮಗುವಾದ ಕೃಷ್ಣನನ್ನು ಕೂಗಿ ಕರೆಯುತ್ತಿದ್ದಾಳೆ: ಕೃಷ್ಣ, ವಿಚಿತ್ರವಾದ ಮಗು ನೀನು. ನಿನ್ನ ವಯಸ್ಸಿನ ಇತರ ಮಕ್ಕಳಂತೆ ನೀನಲ್ಲ. ಅವರು ಮಾಡುವ ಸಾಮಾನ್ಯವಾದ ಚೇಷ್ಟೆಗಳನ್ನು ಆಡುವ ಮಾಟಗಳನ್ನು ನೀನು ಆಡುವುದಿಲ್ಲ. ಹೇಳುತ್ತಾ ಹೋದರೆ, ನಿನ್ನ ಒಂದೊಂದು ಕೆಲಸವೂ ಅದ್ಭುತವೇ, ಆಶ್ಚರ್ಯಕರವೇ, ಶಕ್ತಿಪೂರ್ಣವೇ. ನಿನ್ನ ಮನಸ್ಸಿನಲ್ಲಿ ಕಪಟವನ್ನೇ ತುಂಬಿಕೊಂಡಿರುತ್ತೀ. ನಿನ್ನ ಯೋಚನೆಗಳನ್ನು ಅರಿತುಕೊಳ್ಳಲು ಸಾಧ್ಯವೇ ಇಲ್ಲ. ನೋಡುತ್ತಿರುವ ಹಾಗೆಯೇ, ಚಿತ್ರವಿಚಿತ್ರವಾದ, ಎಣಿಕೆಗೆ ನಿಲುಕದಂಥ ಚೇಷ್ಟೆಗಳಲ್ಲಿ ತೊಡಗುತ್ತೀ. ನಿನ್ನ ಆಟಗಳನ್ನು ಚೇಷ್ಟೆಗಳನ್ನು, ಮಾಟಗಳನ್ನು ಗಮನಿಸಿ, ನನ್ನ ಮನಸ್ಸು ವಾತ್ಸಲ್ಯದಿಂದ ಕರಗಿ ಹೋಗುತ್ತದೆ. ನನ್ನ ಮೊಲೆಗಳಲ್ಲಿ ಹಾಲು ಉಕ್ಕಿ ಹರಿದು ಹೋಗುತ್ತದೆ. ಮಗು, ಬಾ. ನನ್ನ ಹಾಲನ್ನು ಆಶೆಯಿಂದ ಉಣ್ಣುವೆಯಂತೆ. ಆಕಳಿಸುವುದು, ಮೈಮುರಿ

ಯುವುದು. ಕಣ್ಣುಗಳನ್ನು ಮುಚ್ಚುವುದು ಮುಂತಾದ ನಿದ್ರೆಯ ಸೂಚನೆ
ಗಳನ್ನು ಮಾಡಿ ನನ್ನನ್ನು ಮೋಸಗೊಳಿಸಬೇಡ.

7. தன் மகனாக வன் பேய்ச்சி தான் முலையுண்ணக் கொடுக்க,
வன் மகனாய் அவள் ஆவி வாங்கி முலையுண்ட நம்பீ,
நன் மகளாய் மகளோடு நானில மங்கை மணாளா,
என் மகனே யம்மமுண்ணாய் என்னம்மம் சேமமுண்ணாயே.

ತನ್ ಮಗನಾಗ ವನ್ ಪೇಯ್‌ಚ್ಚಿ ತಾನ್ ಮುಲೈಯುಣ್ಣಕ್ಕೊಡುಕ್ಕ,
ವನ್ ಮಗನಾಯವಳಾವಿ ವಾಙ್ಗಿ ಮುಲೈಯುಣ್ಡ ನಮ್ಬೀ,
ನನ್ ಮಗಳಾಯ್ ಮಗಳೋಡು ನಾನಿಲ ಮಙ್ಗೈ ಮಣಾಳಾ,
ಎನ್ ಮಗನೇ ಯಮ್ಮಮುಣ್ಣಾಯ್ ಎನ್ನಮ್ಮಮ್ ಶೇಮಮುಣ್ಣಾಯೇ

ತನ್ ಮಗನಾಗ தன் மகனாக = ತನ್ನ ಮಗನಂತೆಯೇ, ವನ್ ಪೇಯ್‌ಚ್ಚಿ வன் பேய்ச்சி = ಬಲಿಷ್ಠಳಾದ ರಾಕ್ಷಸಿಯು, ಮುಲೈಯುಣ್ಣ முலையுண்ண = ಮೊಲೆಯುಣ್ಣಲು, ಕೊಡುಕ್ಕ கொடுக்க = ಕೊಡಲು, ವನ್ ಮಗನ್ ಆಯ್ வன் மகன் ஆய் = ಬಲಿಷ್ಠನಾದ ಮಗನಾಗಿ, ಅವಳ್ அவள் = ಅವಳ, ಆವಿ ஆவி = ಪ್ರಾಣವನ್ನು, ವಾಙ್ಗಿ வாங்கி = ಸೆಳೆದು, ಮುಲೈ ಉಣ್ಡ ನಮ್ಬೀ முலை உண்ட நம்பீ = ಮೊಲೆಯುಣ್ಡ ಪೂರ್ಣನೇ. ನನ್ ಮಗಳ್ ಆಯ್ நன் மகள் ஆய் = ಉತ್ತಮವಾದ ಮಗಳಾದ, ಮಗಳೋಡು மகளோடு = ಶ್ರೀದೇವಿಗೂ, ನಾನಿಲ ಮಙ್ಗೈ நானிலம் மங்கை = ಭೂದೇವಿಗೂ, ಮಣಾಳಾ மணாளா = ಒಡೆಯನೇ (ಪತಿಯೇ), ಎನ್ ಮಗನೇ என் மகனே = ನನ್ನ ಮಗನಾಗಿರುವವನೇ, ಅಮ್ಮಮ್ಮುಣ್ಣಾಯ್ அம்மம் உண்ணாய் = ನನ್ನ ಹಾಲನ್ನು ಕುಡಿ, ಎನ್ ಅಮ್ಮಮ್ என் அம்மம் = ನನ್ನ ಮೊಲೆಯಲ್ಲಿ, ಶೇಮಮ್ சேமம் = ಕಾಪಾಡಿರುವುದನ್ನು, ಉಣ್ಣಾಯ್ உண்ணாய் = ಉಣ್ಣಯ್ಯಾ.

ಬಲಿಷ್ಠಳಾದ ರಾಕ್ಷಸಿಯು ತನ್ನ ಮಗನಂತೆಯೇ ಮೊಲೆಯುಣ್ಣಲು ಕೊಡಲು, ಬಲಿಷ್ಠನಾದ ಮಗನಾಗಿ, ಅವಳ ಪ್ರಾಣವನ್ನು ಸೆಳೆದು ಮೊಲೆಯುಣ್ಡ ಪೂರ್ಣನೇ, ಶ್ರೇಷ್ಠಳಾದ ಕನ್ಯೆಯಾದ ಶ್ರೀದೇವಿಗೂ ಭೂದೇವಿಗೂ ಪತಿಯೇ, ನನ್ನ ಮಗನಾಗಿರುವವನೇ, ನನ್ನ ಮೊಲೆಯುಣ್ಣು ಬಾ. ನನ್ನ ಮೊಲೆಯಲ್ಲಿ ಕಾಪಾಡಿಟ್ಟುಕೊಂಡಿರುವುದನ್ನು ಉಣ್ಣಯ್ಯಾ. (7)

ತಾಯಿ ಯಶೋದೆ ತನ್ನ ಮಗನಾದ ಕೃಷ್ಣನನ್ನು ಕೂಗಿ ಕರೆಯುತ್ತಾಳೆ.

Garani Srinivasan

ವರಿಷ್ಠಾನಾದವನೇ, ಪೂತನಿಯೆಂಬ ಬಲಿಷ್ಠ ರಾಕ್ಷಸಿಯು ಬಂದಳು.
ಅವಳು ಸ್ತನಕ್ಕೆ ಮಗನೇ ನೀನು ಎಂದೆಂದೆ ನಿನ್ನನ್ನು ಎತ್ತಿಕೊಂಡಳು.
ತನ್ನ ಮೊಲೆಯನ್ನು ಕೊಟ್ಟಳು. ಬಲಿಷ್ಠನಾದ ಬಾಲಕನಂತೆ ನೀನು
ಅವಳ ಮೊಲೆಯನ್ನು ನುಂಗಿ ಅವಳ ಪ್ರಾಣವನ್ನು ಹೀರಿಬಿಟ್ಟೆ.
ಶ್ರೀದೇವಿಗೂ ಭೂದೇವಿಗೂ ಪತಿಯಾದವನೇ, ನನ್ನ ಪ್ರೀತಿಯ ಮಗು
ನಾರುವವನೇ ಬಾ. ನನ್ನ ಮೊಲೆಯಲ್ಲಿ ನಿನಗಾಗಿಯೇ ಕಾದಿಟ್ಟು
ಕೊಂಡಿರುವ ಹಾಲನ್ನು ಕುಡಿದು ತೃಪ್ತನಾಗು.

8. உந்தமடிகள் முனிவர் உன்னை நான் என்கையிற் கோலால்,
நொந்திட மோதவுங் கில்லேன் உங்கள் தமரா நிரையெல்லாம்,
வந்து புகுதரும் போது வானிடைத் தெய்வங்கள் காண,
அந்தியம் போதங்கு நில்லேல் ஆழியங் கையனே வாராய்.

ಉನ್ದಮಡಿಗಳ್ ಮುನಿವರ್ ಉನ್ನೈ ನಾನೆನ್ ಕೈಯಿಲ್ ಕೋಲಾಲ್,
ನೊನ್ದಿಡ ಮೋದವುಙ್ಗಿಲ್ಲೇನ್ ಉಙ್ಗಳ್ ತಮರಾನಿರೈಯೆಲ್ಲಾಮ್,
ವನ್ದು ಪುಗುದರುಮ್ ಪೋದು ವಾನಿಡೈತ್ತೆಯ್ವಙ್ಗಳ್ ಕಾಣ,
ಅನ್ದಿಯಮ್ ಪೋದಙ್ಗು ನಿಲ್ಲೇಲ್ ಆೞಿಯಙ್ಗೈಯನೇ ವಾರಾಯ್.

ಉನ ತಮ ಉண் தம் = ನಿನ್ನ, ಅಡಿಗಳ್ அடிகள் = ತಂದೆಯವರು, ಮುನಿವರ್ முனிவர் = ಕೋಪಗೊಳ್ಳುತ್ತಾರೆ, ಉನ್ನೈ உன்னை = ನಿನ್ನನ್ನು, ನಾನ್ நான் = ನಾನು, ಎನ ಕೈಯಿಲ್ என் கையில் = ಕೈಯಿಂದಲಾಗಲಿ, ಕೋಲಾಲ್ கோலால் = ಕೋಲಿನಿಂದಲಾಗಲಿ, ನೊನ್ದಿಡ நொந்திட = ನೋವಾಗುವಂತೆ, ಮೋದವುಮ್ ಕಿಲ್ಲೇನ್ மோதவும் கில்லேன் = ಹೊಡೆಯುವುದಿಲ್ಲ, ಉಙ್ಗಳ್ ತಮರ್ உங்கள் தமர் = ನಿಮ್ಮ, ಆನಿರೈ ಎಲ್ಲಾಮ್ ஆநிரை எல்லாம் = ದನಕರುಗಳ ಹಿಂಡುಗಳೆಲ್ಲಾ, ವನ್ದು வந்து = ಬಂದು, ಪುಗುದರುಮ್ புகுதரும் = ಕೊಟ್ಟಿಗೆಗಳನ್ನು ಪ್ರವೇಶಿಸುವ, ಪೋದು போது = ಕಾಲದಲ್ಲಿ, ವಾನ್ ಇಡೈ வான் இடை = ಆಕಾಶದಲ್ಲಿ, ದೆಯ್ವಙ್ಗಳ್ ಕಾಣ தெய்வங்கள் காண = ದೇವತೆಗಳು ನೋಡುವಂತೆ, ಅನ್ದಿ ಅಮ್ ಪೋದು அந்தி அம் போது = ಸಂಜೆಯ ಸೊಬಗಿನ ಸಮಯದಲ್ಲಿ, ಅಙ್ಗು அங்கு = ಅಲ್ಲಿ, ನಿಲ್ಲೇಲ್ நில்லேல் = ನಿಲ್ಲಬೇಡ, ಆೞಿ ಅಮ್ ಕೈಯನೇ ஆழி அம் கையனே =

Garani Srinivasan

ಚಕ್ರಾಯುಧವನ್ನು ಸುಂದರವಾದ ಕೈಯಲ್ಲುಳ್ಳವನೇ, ವಾರಾಯ್ ವಾರಾ
ಯ್ = ಬಾರಯ್ಯ.

ಚಕ್ರವನ್ನು ಸುಂದರವಾದ ಕೈಯಲ್ಲುಳ್ಳವನೇ, ನಿನ್ನ ತಂದೆಯವರು
ಕೋಪಿಸಿಕೊಳ್ಳುತ್ತಾರೆ. ನಾನು ನನ್ನ ಕೈಯಿಂದಲಾಗಲಿ ಕೋಲಿನಿಂದಾಗಲಿ
ನಿನಗೆ ನೋವಾಗುವಂತೆ ಹೊಡೆಯುವುದಿಲ್ಲ. ನಿಮಗೆ ಸೇರಿದ ದನಕರು
ಗಳೆಲ್ಲವೂ ಕೊಟ್ಟಿಗೆಗೆ ಬಂದು ಸೇರುವ ಕಾಲದಲ್ಲಿ, ಸುಂದರವಾದ
ಸಂಜೆಯ ಸಮಯದಲ್ಲಿ, ಬಾನಿನಲ್ಲಿ ದೇವತೆಗಳು ನೋಡುವಂತೆ ಚೌಕ (8)
ಗಳಲ್ಲಿ ನಿಲ್ಲಬೇಡ. ಬಾರಯ್ಯ.

ತಾಯಿ ಯಶೋದೆ ತನ್ನ ಮಗನನ್ನು ಕೂಗಿ ಕರೆಯುತ್ತಾಳೆ: ಮಗು, ಕೈಯಲ್ಲಿ ಚಕ್ರದ ರೇಖೆಯನ್ನುಳ್ಳವನೇ, (ಚಕ್ರಾಯುಧಧಾರಿಯೇ), ಈಗ ಸುಂದರವಾದ ಸಂಜೆಯ ಸಮಯ, ದಿಟ. ನಿಮಗೆ ಸೇರಿದ ದನಕರುಗಳೆಲ್ಲವೂ ಕಾಡಿನಿಂದ ಮನೆಗಳಿಗೆ ಹಿಂತಿರುಗುವ ಸಮಯ. ಅವು ಬಹಳ ಆತುರದಿಂದ ಧಾವಿಸಿ ಬರುತ್ತವೆ. ತಮ್ಮ ತಮ್ಮ ಕೊಟ್ಟಿಗಳನ್ನು ಬೇಗ ಸೇರಿಕೊಳ್ಳಲು ಯತ್ನಿಸುತ್ತವೆ. ನೀನು ಇಂಥ ಸಮಯದಲ್ಲಿ ನಾಲ್ಕು ಬೀದಿಗಳು ಸೇರುವ ಚೌಕದಲ್ಲಿ ನಿಂತಿದ್ದೀಯಲ್ಲ! ದೇವತೆಗಳು ಎಲ್ಲರೂ ಬಾನಿನಲ್ಲಿ ನಿಂತು ನಿನ್ನ ದಿವ್ಯಸುಂದರ ರೂಪವನ್ನು ನೋಡುತ್ತ ಹರ್ಷಿಸುತ್ತಾರೆ. ಅವರಿಗೆ ತೃಪ್ತಿಯೂ ಆನಂದವೂ ಆಗುವುದು ನಿಶ್ಚಯ. ಆದರೆ, ಚೌಕದಲ್ಲಿ ನಿಂತಿರುವ ನಿನಗೆ ಅಪಾಯವಾದರೆ ಏನ್ಗತಿ? ನೀನು ಅಲ್ಲಿ ನಿಂತಿರುವುದನ್ನು ನಿಮ್ಮ ತಂದೆ ಕಂಡರೆ ಅವರು ಕೋಪಿಸಿಕೊಳ್ಳುವರು. ಮಗು, ನಾನು ನಿನ್ನನ್ನು ಹಿಂಸಿಸುವುದಿಲ್ಲ, ಕೈಯಿಂದ ಹೊಡೆಯುವುದಿಲ್ಲ. ಕೋಲಿನಿಂದಲೂ ಹೊಡೆಯುವುದಿಲ್ಲ. ನಿನಗೆ ಯಾವ ಬಗೆಯಲ್ಲೂ ನೋವನ್ನುಂಟು ಮಾಡುವುದಿಲ್ಲ. ಬಾ ಮಗು. ಅಲ್ಲಿ ನಿಲ್ಲಬೇಡ.

9. பெற்றத்தலைவனெங்கோமான் பேரருளாளன் மதலாய்,
சுற்றக்குழாத்திளங்கோவே தோன்றிய தொல் புகழாளன்,
கற்றினந்தோறும் மறித்துக் கானந்திரிந்த களிறே,
எற்றுக்கென்னம்மமுண்ணாதே யெம்பெருமானிருந்தாயே.

ಪೆಟ್ರತ್ತಲೈವನೆಙ್ಗೋಮಾನ್ ಪೇರರುಳಾಳನ್ ಮದಲಾಯ್,
ಶುಟ್ರಕ್ಕುೞಾತ್ತಿಳಙ್ಗೋವೇ ತೋನ್ಱಿಯ ತೊಲ್ ಪುಗೞಾಳನ್,
ಕಟ್ರಿನನ್ದೋಱುಮ್ ಮಱಿತ್ತು ಕಾನನ್ದಿರಿನ್ದ ಕಳಿಱೇ,

ಎದುರ್ಕ್ಕೆನ್ನಮ್ಮ ಮುನ್ನಾದಲ್ಲಿ ಯೆಪ್ಪೆರುಮಾನಿರುನ್ದಾಯೇ.

ಪೆಟ್ರವಾ பெற்றம் = ದನಕರುಗಳ (ಗೋವೃಗಳ), ಕಲ್ಪವನ காவலன் = ಒಡೆಯನಾದ, ಎನ್ நான் = ನನ್ನ, ಕೋಮಾನ್ கோமான் = ಸ್ವಾಮಿಯೇ, ಪೇರರುಳಾಳನ್ பேருளாளன் = ಮಹಾದಯಾಳುವಾದವನ, ಮದಲಾಂಯ್ மதலாய் = ಮಗನೇ, ಕುಟ್ರವಾ ಕುಲಮಾ குற்றம் குழாம் = ಬಂಧುಸಮೂಹಕ್ಕೆ, ಇಳಮ ಕೋವೇ திணம் கோயெ = ಚಿಕ್ಕ ಒಡೆಯನೇ (ಯುವರಾಜನೇ), ಕೋನ್ ಱಿಯ தோன்றிய = ಪ್ರಕಟನವಾದ, ಪುಹಳಾಳನ್ புக = ಪ್ರಖ್ಯಾತವಾದ, ಕೋಲ್ கோல் = ಪ್ರಾಚೀನವಾದ, ಕದ್ರು ಇನವಾ கற்று இனம் = ಕರುಗಳ ಕುಲದ ಶ್ರೇಷ್ಠವಂಶನೇ, ಕಾನವಾ ಕೋಳ ಮಂದೆಗಳನ್ನು, ಮಱಿಕ್ಕ மறிக்கு = ಮೇಯಿಸುತ್ತ, ಕಾನದ ಕಾಡಿನಲ್ಲೆಲ್ಲಾ, (ಕಾಡಿನಲ್ಲಿದ್ದರೂ), ಕಿರಿ ಯವಾ கானம் தோறும் = ಕಾಡಿನಲ್ಲೆಲ್ಲಾ, (ಕಾಡಿನಲ್ಲಿದ್ದರೂ), ಕಿರಿ ಯವಾ கானம் தோறும் = ವೃಷಭನೇ, ನ್ದ திரிந்த = ಅಲೆದಾಡಿದ, ಕಳಿಱೇ களிறு = ವೃಷಭನೇ, ಎದುರ್ಕ್ಕು ನಾಱ್ಱು ಕ್ಕು = ಪರಕ್ಕಾಗಿ, ಎನ ಅಮ್ಮವಾ ನான் அம்மம் = ಎದುರ್ಕ್ಕು ನಾற்றுக்கு = ಪರಕ್ಕಾಗಿ, ಎಮಾವೆ ನನ್ನ ಮೊಲೆಯನ್ನು, ಉಣ್ಣಾದೇ உண்ணாதே = ಉಣ್ಣದಂತೆ, ಎಮಾವೆ ನನ್ನ ಮೊಲೆಯನ್ನು, ಇರುನ್ದಾಯೇ ರುಮಾನ್ நம் பெருமான் = ನನ್ನ ಸ್ವಾಮಿಯೇ (ದೇವರೇ), ಇರುನ್ದಾಯೇ திருந்தாயே = ಇರುವೆಯಲ್ಲ!

ಗೋವೃಗಳ ಒಡೆಯನಾದ ನನ್ನ ಸ್ವಾಮಿಯೇ, ಮಹಾದಯಾಳುವಾದವನ ಮಗನೇ, ಬಂಧುಸಮೂಹಕ್ಕೆ ಚಿಕ್ಕ ಒಡೆಯನೇ (ಯುವರಾಜನೇ), ಪ್ರಖ್ಯಾತವಾದ ಪ್ರಾಚೀನಶ್ರೇಷ್ಠವಂಶನೇ, ಕರುಗಳ ಮಂದೆಗಳನ್ನು ಮೇಯಿಸುತ್ತ ಕಾಡಿನಲ್ಲೆಲ್ಲಾ ಅಲೆದಾಡಿದ ವೃಷಭನೇ, ನನ್ನ ದೇವರೇ, ಪರಕ್ಕಾಗಿ ನನ್ನ ಮೊಲೆಯನ್ನುಣ್ಣದೆ ಇರುವೆ? (9)

10. இம்மையிடர் கெடவேண்டி யெந்தைழில் தோட்டகனி
கன்றி,
செம்மைப்பணுவல் நூல் கொண்டு செங்கணிடிய
வன்றன்னின,
அம்மமுண்ணென்று றைக்கின்ற பாடலிவைவையைந்து
மைந்தும்,
மெய்ம்மைமனத்துவைக்தேத்த வின்னாவராக
றமாமே.

ಇಮ್ಮೈಯಿಡರ್ ಕೆಡವೇಣ್ಡಿ ಯೇನ್ದೆೞಿಲ್ ಕೋೞ್ಟಲಕನ್ಱಿ,
ಶೆಮ್ಮೈಪ್ಪಣುವಲ್ ನೂಲ್ ಕೊಣ್ಡು ಶೆಙ್ಗಣಿಡಿಯವನ್ಱನ್ನೈ,
ಅಮ್ಮಮುಣ್ಣೆನ್ಱುೞೈಕ್ಕಿನ್ಱ ಪಾಡಲವೈಯೈನ್ದುಮೈನ್ದುಮ್,
ಮೆಯ್ಮ್ಮೈಮನತ್ತುವೈತ್ತೇತ್ತ ವಿಣ್ಣೋವರಾಹಲುಮಾಮೇ.

ಇಮ್ಮೈ இம்மை = ಈ ಜನ್ಮದ, ಇಡರ್ இடர் = ದುಃಖ ಸಂಕಟಗಳನ್ನು, ಕೆಡ ವೇಣ್ಡಿ கெட வேண்டி = ಹೋಗಲಾಡಿಸುವಂತೆ ಬೇಡುತ್ತಾ, ಏನ್ದು ஏந்து = ಧರಿಸಿರುವ, ಎಳಿಲ್ எழிற் = ಸಾಮರ್ಥ್ಯದ, ತೋಳ್ தோள் = ತೋಳುಗಳುಳ್ಳ, ಕಲಿಕನ್ಱಿ கலிகன்றி = ಕಲಿಧ್ವಂಸಿಯು, ಶೆಮ್ಮೈ செம்மை = ಸುಂದರವಾದ, ಪನುವಲ್ பனுவல் = ಕವಿತೆಯ, ನೂಲ್ நூல் = ಶಾಸ್ತ್ರಸಾರವನ್ನು, ಕೊಣ್ಡು கொண்டு = ಎತ್ತಿಕೊಂಡು (ಬಳಸಿಕೊಂಡು), ಶೆಮ್ ಕಣ್ ನೆಡಿಯವನ್ ತನ್ನೈ செம் கண் நெடியவன் தன்னை = ಕೆಂದಾವರೆಯಂತೆ ಸುಂದರವಾದ ವಿಶಾಲವಾದ ಕಣ್ಣುಳ್ಳವನನ್ನು, ಅಮ್ಮಮ್ ಉಣ್ಣ ಎನ್ಱು அம்மம் உண்ணு என்று = ಮೊಲೆಯುಣ್ಣು ಎಂದು, ಉಱೈಕ್ಕಿನ್ಱ உறைக்கின்ற = ಹೇಳುತ್ತಿರುವ, ಪಾಡಲ್ பாடல் = ಹಾಡುಗಳಾದ, ಇವೈ இவை = ಈ, ಐನ್ದುಮ್ ಐನ್ದುಮ್ ஐந்தும் ஐந்தும் = ಹತ್ತನ್ನೂ, ಮೆಯ್ಮೈ மெய்ம்மை = ಸತ್ಯಶುದ್ಧವಾದ, ಮನತ್ತು மனத்து = ಮನದಲ್ಲಿ, ವೈತ್ತು வைத்து = ಇಟ್ಟುಕೊಂಡು, ಏತ್ತ ஏத்த = ಸ್ತುತಿಸಲು, ವಿಣ್ಣವರ್ விண்ணவர் = ಪರಮಪದವಾಸಿಗಳು, ಆಗುವರ್ ஆகுவரும் = ಆಗುವರೂ, ಆಮೇ ஆமே = ನಿಶ್ಚಯವೇ.

ಈ ಜನ್ಮದ ದುಃಖ ಸಂಕಟಗಳನ್ನು ಹೋಗಲಾಡಿಸುವಂತೆ ಬೇಡುತ್ತಾ ಸಾಮರ್ಥ್ಯಪೂರ್ಣವಾದ ತೋಳುಗಳನ್ನುಳ್ಳ ಕಲಿಯನು (ತಿರುಮಂಗೈ ಆಳ್ವಾರರು), ಶಾಸ್ತ್ರಸಾರವನ್ನು ಬಳಸಿಕೊಂಡು ರಚಿಸಿದ ಸುಂದರವಾದ ಕವಿತೆಯ ಮೂಲಕ ಕೆಂದಾವರೆಯಂತೆ ವಿಶಾಲವೂ ಸುಂದರವೂ ಆದ ಕಣ್ಣುಗಳುಳ್ಳವನನ್ನು "ಮೊಲೆಯುಣ್ಣು" ಎಂದು ಹೇಳುತ್ತಿರುವ ಹಾಡುಗಳಾದ ಈ ಹತ್ತನ್ನೂ ಸತ್ಯಶುದ್ಧವಾದ ಮನದಲ್ಲಿಟ್ಟುಕೊಂಡು ಸ್ತುತಿಸಲು ಪರಮಪದವಾಸಿಗಳಾಗು (10)
ವುದೂ ನಿಶ್ಚಯವೇ.

ಈ ತಿರುಮೊಳಿಯ ಕಡೆಯ ಪಾಶುರವಿದು. ಇದರಲ್ಲಿ ತಾಯಿ ಯಶೋದೆ ತನ್ನ ಮುದ್ದು ಮಗನಾದ ಕೃಷ್ಣನನ್ನು "ಮಗೂ, ನನ್ನ ಮೊಲೆಹಾಲು ಕುಡಿಬಾ" ಎಂದು ಕರೆದು ಹೇಳುತ್ತಾಳೆ. ಕೃಷ್ಣ ಎಲ್ಲ ಮಕ್ಕಳಂತೆ ಅಲ್ಲವೆಂದೂ ಅವನು ಬಹಳ ವಿಚಿತ್ರವಾದ ಮಗುವೆಂದೂ ಅವಳಿಗೆ ಗೊತ್ತು. ಅವನು ಆಡುವ ಆಟಗಳೂ, ಮಾಡುವ ಚೇಷ್ಟೆಗಳೂ ಆಶ್ಚರ್ಯಪೂರ್ಣವೂ ಅದ್ಭುತವೂ ಆದವು. ಅವುಗಳನ್ನು ಕಣ್ಣಾರ ಕಂಡಾಗ, ಅವುಗಳ ವಿವರಣೆಯನ್ನು ಕೇಳದಾಗ

Garani Srinivasan

ಅವಳಿಗೆ ಅನಿರ್ವಚನೀಯವಾದ ಸಂತೋಷವುಂಟಾಗುತ್ತದೆ. ಅವಳ ಮೊಲೆಗಳಲ್ಲಿ ಹಾಲು ತೊರೆಯುತ್ತಿರುತ್ತದೆ. ಅದು ವ್ಯರ್ಥವಾಗಿ ಹರಿದು ಹೋಗುವುದಲ್ಲ. ತನ್ನ ಮುದ್ದು ಮಗನಿಗಾಗಿಯೇ ಅದನ್ನು ಕಾಪಾಡಿಟ್ಟುಕೊಂಡಿರುವಳಲ್ಲ, ಮಗು ಅದನ್ನು ಕುಡಿದು ತೃಪ್ತಿ ಪಡುವುದರ ಜೊತೆಗೆ ತನ್ನನ್ನು ತೃಪ್ತಿ ಪಡಿಸಬೇಡವೇ ಎಂಬುದು ಯಶೋದೆಯ ಹಂಬಲ. ಅದಕ್ಕೆ ಬದಲಾಗಿ, ಮಗುವು ನಂದಗೋಕುಲದಲ್ಲಿ ಮನೆಮನೆಗಳಲ್ಲಿ ಗೊಲ್ಲತಿಯರು ಕಷ್ಟಪಟ್ಟು ಕೂಡಿಟ್ಟಿರುವ ಬೆಣ್ಣೆಯನ್ನೆಲ್ಲಾ ತಿಂದು ಬಿಡುವುದೇ? ಅವರಿಂದ ದೂರಿಸಿಕೊಳ್ಳುವುದೇ? ಗೋವಳ ಬಾಲಕರ ಸಂಗಡ ಕರುಗಳನ್ನು ಮೇಯಿಸಲು ಕಾಡಿಗೆ ಹೋಗುವುದೇ? ಸುಂದರವಾದ ಸಂಜೆಗಳಲ್ಲಿ, ದನಕರುಗಳು ಭರದಿಂದ ಮನೆಗೆ ಹಿಂತಿರುಗುವ ಸಮಯದಲ್ಲಿ ಮಗುವು ನಾಲ್ಕು ಬೀದಿಗಳು ಸೇರುವ ಚೌಕದಲ್ಲಿ ನಿಂತಿರುವುದೇ? ತನಗೆ ಅದರಿಂದ ಅಪಾಯವೆಂಬ ಯೋಚನೆಯಾದರೂ, ಭಯವಾದರೂ ಬೇಡವೇ? ಅವನೇಕೆ ಎದೆಹಾಲನ್ನು ಕುಡಿಯಲು ತಡವಾಗುವುದು? ಯಶೋದೆ ತೃಪ್ತಿ ಅದಕ್ಕೆಯೇ? ತೋರುವದೇ? ಹೀಗೆಲ್ಲಾ ಯೋಚಿಸುತ್ತಾ ಯಶೋದೆ ಅವನನ್ನ ಬಗೆಬಗೆಯಾಗಿ ಸ್ತೋತ್ರ ಮಾಡುತ್ತಾ ಕರೆಯುತ್ತಾಳೆ.

ಕಲಿಯನೂ ಸಹ ತಾಯಿ ಯಶೋದೆಯ ಧ್ಯಾನದಲ್ಲೇ ಅನುದಿನ [illegible]ತ್ತಾನೆ. ಭಕ್ತರ ಈ ಜೀವನದ ದುಃಖ ಸಂಕಟಗಳನ್ನು ದೂರಮಾಡೆಂದು ಈ ಪಾಶುರಗಳ ಮೂಲಕ ಭಗವಂತನಲ್ಲಿ ಪ್ರಾರ್ಥಿಸುತ್ತಾನೆ. ಶುದ್ಧವಾದ ನಿರ್ಮಲವಾದ ತಮಿಳಿನಲ್ಲಿ ಸುಂದರವಾದ ಕವಿತೆಯ ಮೂಲಕ ಶಾಸ್ತ್ರ ಸಾರವನ್ನೇ ಇಲ್ಲಿ ಹರಿಸುತ್ತಾನೆ.

ತಾಯಿ ಯಶೋದೆ ತನ್ನ ಕಂದನನ್ನು 'ಮೊಲೆಯುಣ್ಣು ಬಾ" ಎಂದು ನಿರಂತರವಾದ ಪ್ರೇಮದಿಂದ ಹಾಡಿ ಹಂಬಲಿಸುವ ಹಾಗೆಯೇ ಭಕ್ತನು ತನ್ನ ಹೃದಯಾಂತರಾಳದಿಂದ ಉಕ್ಕಿ ಹರಿಯುವ ಪರಿಶುದ್ಧವಾದ ಪ್ರೇಮದಿಂದ ಭಗವಂತನಿಗಾಗಿ ಹಂಬಲಿಸುತ್ತಾ ಅವನನ್ನು ಆದರದಿಂದ ಕೂಗಿ ಕರೆದರೆ, ಭಗವಂತನು ಅವನಿಗೆ ಒಲಿಯುವುದು ಖಂಡಿತ. ಅವನಿಗೆ ಅದರಿಂದ ಅಮರತ್ವವು ತಪ್ಪದೆ ಪ್ರಾಪ್ತವಾಗುತ್ತದೆಯೆಂದು ಹೇಳುವುದೇ ಈ ತಿರುಮೊಲೆಯ ಫಲಶ್ರುತಿ.

— o —

ಅಡಿಯನಡೆ: அடிவரவு: – ತನ್ನಮ சந்தம், ವಜ್ಞಮ வங்கம், ತಿರುವಿಲ் திருவில், ಮಕ್ಕಳ್ மக்கள், ವೃತ್ತ ணமத்த, ಪಿಳ್ಳೈ ತಳ್ பிள்ளைகள், ತನ್ ಮಗನ್ தன் மகன், ಉನ್ನಮ உந்தம், ಪೆರ್ರಮ பெற்றம், ಇವ್ವಾರ இம்மை, (ಪೂಜ್ಞೇ ತ್ತಿ பூங்கோதை)

— o —

30.1.79

ಪೆರಿಯ ತಿರುಮೊಳಿ – ಪತ್ತನೆಯ ಪತ್ತು – ಐದನೆಯ ತಿರುಮೊಳಿ
பெரிய திருமொழி - பத்தாம் பத்து - ஐந்தாந் திருமொழி.

5. ಪೂಙ್ಗೋದೈಯಾಯ್ಚ್ಚಿ – பூங்கோதையாய்ச்சி.

1. பூங்கோதையாய்ச்சி கடைவெண்ணெய்ப் புக்குண்ண,
ஆங்கவளார்த்துப் புடைக்கப் புடையுண்டு,
ஏங்கியிருந்து சிணுங்கி விளையாடும்,
ஓங்கோத வண்ணனே சப்பாணி ஒளிமணிவண்ணனே சப்பாணி.

ಪೂಙ್ಗೋದೈಯಾಯ್ಚ್ಚಿ ಕಡೈ ವೆಣ್ಣೆಯ್ ಪುಕ್ಕುಣ್ಣ,
ಆಙ್ಗವಳಾರ್ತ್ತು ಪ್ಪುಡೈಕ್ಕ ಪ್ಪುಡೈಯುಣ್ಡು,
ಏಙ್ಗಿಯಿರುನ್ದು ಶಿಣುಙ್ಗಿ ವಿಳೈಯಾಡುಮ್,
ಓಙ್ಗೋದ ವಣ್ಣನೇ ಶಪ್ಪಾಣಿ ಒಳಿಮಣಿವಣ್ಣನೇ ಶಪ್ಪಾಣಿ.

ಪೂಙ್ಗೋದೈ பூகோதை = ಹೂ ಮುಡಿದ ಕೂದಲಿನ, ಆಯ್ಚ್ಚಿ ஆய்ச்சி = ಗೊಲ್ಲತಿಯು, ಕಡೈ கடை = ಕಡೆದ, ವೆಣ್ಣೆಯ್ வெண்ணெய் = ಬೆಣ್ಣೆಯನ್ನು, ಪುಕ್ಕು ಉಣ್ಣ புக்கு உண்ண = ಪ್ರವೇಶಿಸಿ ~~[illegible]~~, ಉಣ್ಣಲು, ಅವಳ್ அவள் = ಆಗೋಪಿಯು, ಆಙ್ಗು ஆங்கு = ಅಲ್ಲಿ (ಆಗ), ಆರ್ತ್ತು ஆர்த்து = ಅಬ್ಬರಿಸಿ (ಕಟ್ಟಿಹಾಕಿ), ಪುಡೈಕ್ಕ புடைக்க = ಹೊಡೆಯಲು, ಪುಡೈ ಉಣ್ಡು புடை உண்டு = ಹೊಡೆತವನ್ನುಂಡು, ಏಙ್ಗಿ ஏங்கி = ಅಳುತ್ತಾ, ಇರುನ್ದು இருந்து = ಇದ್ದು, ಶಿಣುಙ್ಗಿ சிணுங்கி = ಚೀರಾಡಿ, ವಿಳೈಯಾಡುಮ್ விளையாடும் = ಆಟವಾಡುವ, ಓಙ್ಗು ಓದಮ್ ஓங்கு ஓதம் = ಎತ್ತರವಾದ ಅಲೆಗಳಿಂದ ಕೂಡಿದ ಕಡಲಿನ, ವಣ್ಣನೇ வண்ணனே = ಬಣ್ಣವುಳ್ಳವನೇ, ಶಪ್ಪಾಣಿ சப்பாணி = ಚಪ್ಪಾಳೆ ತಟ್ಟು, ಒಳಿ ஒளி = ತೇಜಸ್ಸಿನಿಂದ ಕೂಡಿದ, ಮಣಿ மணி = ರತ್ನ (ನೀಲಮಣಿ) ದಂತೆ ಬಣ್ಣವುಳ್ಳವನೇ, ಶಪ್ಪಾಣಿ சப்பாணி = ಚಪ್ಪಾಳೆ ತಟ್ಟು.

ಕಲೆಗೆ ಹೂ ಮುಡಿದಿರುವ ಗೊಲ್ಲತಿಯು ಕಡೆದು ಕೂಡಿಟ್ಟಿದ್ದ ಬೆಣ್ಣೆಯನ್ನು ಕಪಟದಿಂದ ಒಳಹೊಕ್ಕು ಉಣ್ಣಲು, ಆಗ ಅಲ್ಲಿಯೇ ಆಗೋಪಿಯು ಅಬ್ಬರಿಸಿ (ಕಟ್ಟಿಹಾಕಿ), ಹೊಡೆಯಲು, ಹೊಡೆತವನ್ನು ತಿಂದು ಅಳುತ್ತಾ ಚೀರಾಡುತ್ತಾ ಇದ್ದು ಆಟವಾಡುವ ಎತ್ತರವಾದ ಅಲೆಗಳು ತುಂಬಿರುವ ಕಡಲವಣ್ಣನೇ, ಹೊಳೆಹೊಳೆ (1) ಯುವ ರತ್ನದಂತೆ ಬಣ್ಣವುಳ್ಳವನೇ ಚಪ್ಪಾಳೆ ತಟ್ಟು!

ಒಂದನೆ ತಿರುಮೊಳಿಯಂತೆಯೇ ಈ ತಿರುಮೊಳಿಯೂ ಶ್ರೀಕೃಷ್ಣನ ಕುರಿತ ಮುಂದುವರಿದಿದೆ. ಮುದ್ದಾದ ಕೃಷ್ಣನ ಬಾಲ ಲೀಲೆಗಳನ್ನು ತಾಯಿ ಯಶೋದೆ (ಮತ್ತು ನಂದಗೋಕುಲದ ಇತರ ಗೊಲ್ಲತಿಯರು?)

Gaiani Srinivasan

ಹೀಗೆ ವಿಧ ವಿಧವಾಗಿ ಕಂಡು, ಅನುಭವಿಸಿ, ಆನಂದಿಸಿದಳು ಎಂಬುದನ್ನು ಆಳ್ವಾರರು ಊಹಿಸಿಕೊಂಡು ಇದರಲ್ಲಿ ವಿವರಿಸಿ ಹೇಳುತ್ತಿದ್ದಾರೆ. ಬಹುಶಃ ಅವರೂ ಸಹ ಯಶೋದೆಯಂತೆ ಆ ಅನುಭವ ಆನಂದಗಳಲ್ಲಿ ಭಾಗಿಯಾಗಿದ್ದಾರೆ ಎನ್ನಬಹುದಲ್ಲವೇ?.

ಒಂದಿನ ಕಿರುಮನೆಯಲ್ಲಿ ತಾಯಿ ಯಶೋದೆ ಅತಿಶಯವಾದ ಪ್ರೀತ್ಯಾದರಗಳಿಂದ ತನ್ನ ಕಂದನಾದ ಕೃಷ್ಣನನ್ನು "ಮೊಲೆಹಾಲು ಕುಡಿಬಾ" ಎಂದು ಕರೆದು ಕೂಗಿದಳಷ್ಟೆ. ಈ ಕಿರುಮನೆಯಲ್ಲಿ ಕೃಷ್ಣನು ಸಣ್ಣ ಪುಟ್ಟ ಕೆಲಸಗಳನ್ನು ಮಾಡುವಷ್ಟು ಬೆಳೆದಿದ್ದಾನೆ. ಯಶೋದೆ ಮನೆಯಲ್ಲಿ ಬೆಳಗಿನ ಝಾಂವಲೇ ಎದ್ದು, ಮೊಸರು ಕಡೆದು, ಬೆಣ್ಣೆ ತೆಗೆದು, ನೆಲುವಿನ ಮೇಲೆ ಭದ್ರವಾಗಿ ಕಾಪಾಡುತ್ತಾಳೆ. ಆ ಬೆಣ್ಣೆಯನ್ನೆಲ್ಲಾ ಯಾವಾಗಲಾದರೋ ಕೃಷ್ಣನು ತಿಂದು ಬಿಡುತ್ತಾನೆ. ಯಶೋದೆಗೆ ಇದು ಗೊತ್ತಾಗುತ್ತದೆ. ಅವಳಿಗೆ ಕೋಪ ಬರುತ್ತದೆ. ಅಷ್ಟು ಬೆಣ್ಣೆಯನ್ನು ನುಂಗಿದರೆ ಮಗುವಿನ ಗತಿಯೇನು? ಕಳ್ಳತನವನ್ನು ಈಗಿನಿಂದಲೇ ಕಲಿತುಬಿಟ್ಟರೆ? ತಪ್ಪು ಮಾಡಿದ್ದಕ್ಕೆ ಶಿಕ್ಷೆ ಮಾಡಬೇಡವೇ? ಹೀಗೆ ಯೋಚಿಸಿ, ಯಶೋದೆ ಕೃಷ್ಣನನ್ನು ಅಲ್ಲೇ ಆಗಲೇ ಹಿಡಿದುಕೊಂಡು ಗದ್ದರಿಸುತ್ತಾಳೆ. ಹೆದರಿಸುತ್ತಾಳೆ. ಹೊಡೆಯುತ್ತಾಳೆ. ಎಲ್ಲ ಮಕ್ಕಳಂತೆ, ಹೊಡೆತ ತಿಂದ ಕೃಷ್ಣನೂ ಅಳುತ್ತಾನೆ, ಚೀರಾಡುತ್ತಾನೆ.

ವಾಸ್ತವ ಯಾವುದು? ಎತ್ತರವಾದ ಅಲೆಗಳ ತರಂಗಗಳಿಂದ ಕಲಕಿದ ಕಡಲಿನ ಬಣ್ಣದವನಾದ, ಹೊಳೆಯುವ ರತ್ನಗಳ ಆಶ್ಚರ್ಯಕರವಾದ ಬಣ್ಣದವನಾದ ಭಗವಂತನೇ ಕೃಷ್ಣನಾಗಿ ಇದ್ದುಕೊಂಡು ಹೊಡೆತ ತಿನ್ನುವುದೇ? ಅಳುವುದೇ? ಚೀರುವುದೇ? ಇದೆಲ್ಲ ಸ್ವಾಮಿಯ ಕಪಟನಾಟಕವಲ್ಲವೇ? ಆಟವೇ ಅಲ್ಲವೇ?.

ಈ ವಿಚಿತ್ರ ವಿಷಯವನ್ನು ಸ್ಮರಿಸಿಕೊಂಡು, ಅದನ್ನು ಸ್ವಾರಸ್ಯವಾಗಿ ಹಾಡಿ ಹೇಳುತ್ತಾ, ತಾಯಿ ಯಶೋದೆ ತನ್ನ ಕಂದನಾದ ಕೃಷ್ಣನ ಪುಟ್ಟ ಕೈಗಳಿಂದ ಚಪ್ಪಾಳೆ ತಟ್ಟಿಸುತ್ತಾಳೆ. ಕಂಡು ಆನಂದಿಸುತ್ತಾಳೆ. ಆಳ್ವಾರರೋ?

2. தாயர் மனங்கள் தடிப்ப, துயிர் நெய்யுண்
டேயெம்பிராக்கள்! இருநிலத்தெங்கள் தம்,
ஆயரழக! அடிகளரவிந்த
வாயவனே! கொட்டாய் சப்பாணி
மால்வண்ணனே கொட்டாய் சப்பாணி

ತಾಯರ್ ಮನಙ್ಗಳ್ ತಡಿಪ್ಪ, ತಯಿರ್ ನೆಯ್ಯು
ಡೇಯೆಮ್ಪಿರಾಕ್ಕಳ್! ಇರುನಿಲತ್ತೆಙ್ಗಳ್ ತಮ್,
ಆಯರಳಗ! ಅಡಿಗಳರವಿನ್ದ
ವಾಯವನೇ! ಕೊಟ್ಟಾಯ್ ಶಪ್ಪಾಣಿ ಮಾಲ್ ವಣ್ಣನೇ ಕೊಟ್ಟಾಯ್ ಶಪ್ಪಾಣಿ

Garani Srinivasan

ತಾಯರ್ ಮನಙ್ಗಳ್ தாயர் மனங்கள் = ತಾಯಂದಿರ ಮನಸ್ಸು, ತುಡಿ
ಪ್ಪ துடிப்ப = ನಡುಗುವಂತೆ, ತಯಿರ್ ನೆಯ್ ಉಣ್ಡು தயிர் நெய் உண்
டு = ಮೊಸರು ತುಪ್ಪವನ್ನುಂಡು, ಪೆಯ್ ಆಯ್ = ತಕ್ಕದ್ದು ಮಾಡಿದೆನೆಂದು ಸಮಾ
ಧಾನ ಕೊಂಡ, ಎಮ್ಮಪಿರಾಕ್ಕಳ್ எம்பிராக்கள் = ಸ್ವಾಮಿಯೇ,
ಇರುನಿಲತ್ತು இருநிலத்து = ವಿಶಾಲವಾದ ಭೂಮಿಯಲ್ಲಿ, ಎಙ್ಗಳ್
ತಮ್ எங்கள்தம் = ನಮ್ಮವರಾದ, ಆಯರ್ ஆயர் = ಗೋವಳರ
(ಗೋವಳ ಕುಲದ), ಅಳಗ அழக = ಸುಂದರನೇ, ಅಡಿಗಳ್ அடி
கள் = ಪಾದಗಳನ್ನು, ಅರವಿನ್ದಮ್ அரவிந்தம் = ಕೆಂದಾವರೆಯಂ
ತೆ ಉಳ್ಳ, ವಾಯವನೇ வாயவனே = ಮುಖವನ್ನು (ಬಾಯನ್ನು) ಉಳ್ಳ
ವನೇ, ಕೊಟ್ಟಾಯ್ ಚಪ್ಪಾಣಿ கொட்டாய் சப்பாணி = ಚಪ್ಪಾಳೆ
ತಟ್ಟಯ್ಯ, ಮಾಲ್ ವಣ್ಣನೇ மால் வண்ணனே = ಕರಿಯ ಬಣ್ಣದ
ವನೇ, ಕೊಟ್ಟಾಯ್ ಚಪ್ಪಾಣಿ கொட்டாய் சப்பாணி = ಚಪ್ಪಾಳೆ
ತಟ್ಟಯ್ಯ!

ತಾಯಂದಿರ ಮನಸ್ಸು ನಡುಗುವಂತೆ ಮೊಸರು ತುಪ್ಪವನ್ನುಂಡು ತಕ್ಕ
ದ್ದನ್ನೇ ಮಾಡಿದೆನೆಂದು ಸಮಾಧಾನಗೊಂಡ ಸ್ವಾಮಿಯೇ, ವಿಶಾಲವಾದ
ಭೂಮಿಯಲ್ಲಿ ನಮ್ಮವರಾದ ಗೋವಳ ಕುಲದ ಸುಂದರನೇ, ಪಾದಗಳ
ನ್ನು ಮುಖ (ಬಾಯಿ) ವನ್ನು ಕೆಂದಾವರೆಯಂತೆ ಉಳ್ಳವನೇ, ಕರಿಯ (2)
ಬಣ್ಣದವನೇ, ಚಪ್ಪಾಳೆ ತಟ್ಟಯ್ಯ!

ಯಶೋದೆ ಕೃಷ್ಣನನ್ನು ಕುರಿತು ವರ್ಣಿಸುತ್ತಾ ಹೇಳುತ್ತಾಳೆ: ಮಗು
ನನ್ನ ಸ್ವಾಮೀ, ನೀನು ಮನೆ ಮನೆಯನ್ನು ಹೊಕ್ಕು ಮೊಸರನ್ನು ತುಪ್ಪ
ವನ್ನೂ ಅಳತೆ ಮೀರಿ ತಿಂದೆಯಲ್ಲವೇ? ಇದನ್ನು ಕಂಡ, ಇದನ್ನು ಕೇಳಿದ
~~ಇದರಿಂದ~~ ಇದನ್ನು ಕುರಿತು ಯೋಚಿಸಿದ ಎಲ್ಲ ತಾಯಂದಿರಿಗೂ ನಿನಗೆ ಇದರಿಂ
ದ ಏನಪಾಯ ಸಂಭವಿಸುವುದೋ ಎಂದು ನಡುಕವುಂಟಾಯಿತು. ಮಾ
ಡ ಬೇಕಾದ ಕೆಲಸವನ್ನೇ ಮಾಡಿಬಿಟ್ಟೆನೆಂದು ನೀನು ನೆಮ್ಮದಿಗೊಂಡಿದ್ದ
ಯಲ್ಲವೇ? ವಿಶಾಲವಾದ ಈ ಭೂಮಂಡಲದಲ್ಲಿ ಬಾಳುವ ಗೋವಳ
ಕುಲಕ್ಕೇ ನೀನು ಆಕರ್ಷಕ ಸುಂದರನು. ನಿನ್ನ ಪಾದಗಳೂ ಮುಖವೂ
ಕೆಂದಾವರೆಯಂತೆ ಕೋಮಲವಾಗಿಯೂ ಸುಂದರವಾಗಿಯೂ ಇವೆ. ಕಪ್ಪ
ನೆಯ ಮೈಬಣ್ಣದ ಸ್ವಾಮಿಯೇ, ನಿನ್ನ ಪುಟ್ಟ ಕೈಗಳಿಂದ ಚಪ್ಪಾಳೆ ತಟ್ಟು.
ನೋಡಿ ಹರ್ಷಿಸುತ್ತೇನೆ.

3. தாமோருருட்டித் தயிர் நெய் விழுங்கிட்டு,
தாமோ தவழ்வரென்றய்ச்சி தாம்பினால்,
தாமோ தாக்கையாலார்க்கத் தழும்பிருந்த,
தாமோதரா! கொட்டாய் சப்பாணி
தாமரைக்கண்ணனே! சப்பாணி.

Garani Srinivasan

ತಾಮೋರುರುಟ್ಟಿತ್ತಯಿರ್ ನೆಯ್ ವಿಳುಙ್ಗಿಟ್ಟು,
ತಾಮೋ ತವಳ್ವರೆನ್ರಾಯ್ಚ್ಚಿ ತಾಂಬಿನಾಲ್,
ತಾಮೋರ್ ಕ್ಕೈಯಾಲಾರ್ಕ್ಕತ್ತ ಉಂಬಿರುನ್ದ,
ತಾಮೋದರಾ, ಕೊಟ್ಟಾಯ್ ತಪ್ಪಾಣಿ ತಾಮರೈಕ್ಕಣ್ಣಾನೇ ತಪ್ಪಾಣಿ.

ತಾ தா = ಓಡಿಬಂದು, ಮೋರ್ ಉರುಟ್ಟಿ மோர் உருட்டி = ಮಜ್ಜಿಗೆಯನ್ನು ಉರುಡಿಸಿ, ತಯಿರ್ ನೆಯ್ தயிர் நெய் = ಮೊಸರನ್ನೂ ತುಪ್ಪವನ್ನೂ, ವಿಳುಙ್ಗಿಟ್ಟು விழுங்கிட்டு = ನುಂಗಿದಾಗ, ತಾಮೋ தாமோ = ತಾವಾದರೋ, ತವಳ್ವರ್ தவழ்வர் = ತೆವಳುತ್ತಿರುವರಲ್ಲ, ಎನ್ರು என்று = ಎಂದು, ಆಯ್ಚ್ಚಿ ஆய்ச்சி தாம் = ಗೊಲ್ಲತಿಯು, ತಾಂಬಿನಾಲ್ தாம்பினால் = ಹಗ್ಗದಿಂದ, ಮೋದ மோத = ಹೊಡೆಯಲು, ಆಕ್ಕೈಯಾಲ್ ஆக்கையால் = ನಾರಿನಿಂದ, ಆರ್ಕ್ಕ ஆர்க்க = ಕಟ್ಟಿದಾಗಲು, ತಳುಂಬು ಇರುನ್ದ தழும்பு இருந்த = ಗುರುತು ಬಿದ್ದಿರುವ, ತಾಮೋತರಾ தாமோதரா = ದಾಮೋದರನೇ, ಕೊಟ್ಟಾಯ್ ತಪ್ಪಾಣಿ கொட்டாய் சப்பாணி = ಚಪ್ಪಾಳೆ ತಟ್ಟಯ್ಯ, ತಾಮರೈಕ್ಕಣ್ಣಾನೇ தாமரைக்கண்ணனே = ಕೆಂದಾವರೆಯಂತೆ ಕಣ್ಣುಳ್ಳವನೇ, ತಪ್ಪಾಣಿ சப்பாணி = ಚಪ್ಪಾಳೆ ತಟ್ಟಯ್ಯ.

ಓಡಿಬಂದು ಮಜ್ಜಿಗೆಯನ್ನು ಉರುಡಿಸಿ, ಮೊಸರು ತುಪ್ಪಗಳ
ನ್ನು ನುಂಗಿದಾಗ, ತಾನು (ಏನೂ ಅರಿಯದವನಂತೆ) ತೆವಳಿಕೊಂಡು
ಹೋಗುತ್ತಿರುವನಲ್ಲ ಎಂದು ಗೊಲ್ಲತಿಯು ಹಗ್ಗದಿಂದ ಹೊಡೆದು ನಾರಿ
ನಿಂದ ಕಟ್ಟಿದಾಗಲು, ಅದರ ಗುರುತು ಬಿದ್ದಿರುವ ದಾಮೋದರಾ, ಕೆಂದಾ (3)
ವರೆಯಂತೆ ಕಣ್ಣುಳ್ಳವನೇ, ಚಪ್ಪಾಳೆ ತಟ್ಟಯ್ಯ.

ಕೃಷ್ಣನಿಗೆ 'ದಾಮೋದರ' — 'ಹೊಟ್ಟೆಗೆ ಹಗ್ಗದಿಂದ ಬಿಗಿಸಿಕೊಂಡವನು' — ಎಂಬ ಹೆಸರು. ಈ ಹೆಸರಿಗೆ ಕಾರಣವೇನು ಎಂಬುದನ್ನು ಆಳ್ವಾರರು ಇಲ್ಲಿ ಹೇಳುತ್ತಿದ್ದಾರೆ. ಮಗುವಾದ ಕೃಷ್ಣನು ವಿಲಕ್ಷಣವಾದ ಚೇಷ್ಟೆಗಳನ್ನು ಮಾಡುವುದರಲ್ಲಿ ನಿಸ್ಸೀಮ. ಓಡೋಡಿ ಬಂದು ಮಜ್ಜಿಗೆಯ ಗಡಿಗೆಯನ್ನು ಉರುಡಿಸಿ, ಮಜ್ಜಿಗೆಯನ್ನೆಲ್ಲಾ ಚೆಲ್ಲಿದಾಗ, ಮೊಸರು ತುಪ್ಪಗಳನ್ನು ನುಂಗಿದಾಗ, ಏನೂ ಅರಿಯದವನಂತೆ ಮನೆಯಲ್ಲೆಲ್ಲಾ ನುಳದಾಡುತ್ತಿದ್ದನಂತೆ. ತಾಯಿ ಯಶೋದೆ ಇದನ್ನು ಕಂಡು, ಮೂದಲಿಸಿ ಮಾತನಾಡುತ್ತಾ, ಕೈಯಲ್ಲಿರುವ ಹಗ್ಗದಿಂದಲೇ ಅವನನ್ನು ಮೃದುವಾಗಿ ಹೊಡೆದು, ನಾರಿನಿಂದ (ಆ ಹಗ್ಗದಿಂದಲೇ) ಅವನನ್ನು ಒಂದು ಒರಳು ಕಲ್ಲಿಗೆ ಕಟ್ಟಿಹಾಕಿದಳಂತೆ. ಆ ಹಗ್ಗದ ಗುರುತು ಹೊಟ್ಟೆಯ ಸುತ್ತಲೂ ಬಿತ್ತಂತೆ.

ಯಶೋದೆ ಅದನ್ನು ನೆನಪಿಗೆ ತರುತ್ತಾ "ದಾಮೋದರಾ, ಕೆಂದಾವ

Garani Srinivasan

ಕರಿಯ ಕಣ್ಣಾ, ಚಪ್ಪಾಳೆ ತಟ್ಟು, ಚಪ್ಪಾಳೆ ತಟ್ಟು" ಎಂದು ಕುತೂಹಲದಿಂದ ಕರೆಕೊಡುತ್ತಾಳೆ.

4. பெற்றார் தளை கழலப் பேர்ந்தங்கயலிடத்து,
உற்றாரொருவருமின்றி யுலகினில்,
மற்றாரு மஞ்சப்போய் வஞ்சப்பெண் நஞ்சுண்ட,
கற்றாயனே! கொட்டாய் சப்பாணி
கார்வண்ணனே! கொட்டாய் சப்பாணி

ಪೆಟ್ರಾರ್ ತಳೈಕಲಲ ಪ್ಪೇರ್ನ್ದಙ್ಗಯಲಿಡತ್ತು,
ಉಟ್ರಾರೊರುವರುಮಿನ್‌ಱಿಯುಲಗಿನಿಲ್,
ಮಟ್ರಾರುಮಂಜಪ್ಪೋಯ್ ವಂಜಪ್ಪೆಣ್ ನಂಜುಂಡ,
ಕಟ್ರಾಯನೇ, ಕೊಟ್ಟಾಯ್ ಶಪ್ಪಾಣಿ ಕಾರ್‌ವಣ್ಣನೇ ಕೊಟ್ಟಾಯ್ ಶಪ್ಪಾಣಿ.

ಪೆಟ್ರಾರ್ பெற்றார் = ಹೆತ್ತವರ, ತಳೈ தளை = ಕಾಲಿನ ಬೇಡಿಗಳು (ಕಾಲಿನ ಸರಪಣಿಗಳು), ಕಲಲ கழல = ಕಳಚಿ ಬೀಳುವುದಕ್ಕಾಗಿ, ಪ್ಪೇರ್ನ್ದ பேர்ந்த = ಅವತರಿಸಿದ, ಅಙ್ಗು அங்கு = ಆಸ್ಥಳಕ್ಕೆ, ಅಯಲ್ ಇಡತ್ತು அயல் இடத்து = ಮಗ್ಗುಲ ಸ್ಥಳದಲ್ಲಿ, ಉಟ್ರಾರ್ உற்றார் = ಬಂಧುಗಳು, ಒರುವರುಮ್ ஒருவரும் = ಯಾರೊಬ್ಬರೂ, ಇನ್‌ಱಿ இன்றி = ಇಲ್ಲದಂತೆ, ಉಲಗಿನಿಲ್ உலகினில் = ಲೋಕದಲ್ಲಿ, ಮಟ್ರಾರುಮ್ மற்றாரும் = ಇತರರೆಲ್ಲರೂ, ಅಂಜ அஞ்ச = ಅಂಜುವಂತೆ, ಪ್ಪೋಯ್ போய் = ಹೋಗಿ, ವಂಜಮ್ வஞ்சம் = ವಂಚನೆಯ, ಪೆಣ್ பெண் = ಹೆಣ್ಣಿನ, ನಂಜು ಉಣ್ಡ நஞ்சு உண்ட = ವಿಷವನ್ನುಂಡ, ಕನ್‌ಱು ಆಯನೇ கன்று ஆயனே = ಕರುಗಳ ರಕ್ಷಕನೇ, ಕೊಟ್ಟಾಯ್ ಶಪ್ಪಾಣಿ கொட்டாய் சப்பாணி = ಚಪ್ಪಾಳೆ ತಟ್ಟು, ಕಾರ್‌ವಣ್ಣನೇ கார் வண்ணனே = ಕಾರ್ಮುಗಿಲಿನ ಬಣ್ಣದವನೇ, ಕೊಟ್ಟಾಯ್ ಶಪ್ಪಾಣಿ கொட்டாய் சப்பாணி = ಚಪ್ಪಾಳೆ ತಟ್ಟು.

ಹೆತ್ತವರ ಕಾಲಿನ ಸರಪಣಿಗಳು ಕಳಚಿ ಬೀಳುವುದಕ್ಕಾಗಿ ಅವತರಿಸಿದ ಸ್ಥಳಕ್ಕೆ ಮಗ್ಗುಲ ಸ್ಥಳದಲ್ಲಿ ಬಂಧುಗಳು ಯಾರೊಬ್ಬರೂ ಇಲ್ಲದಂತೆ ಲೋಕದಲ್ಲಿ ಇತರರೆಲ್ಲರೂ ಅಂಜುವಂತೆ ಹೋಗಿ ವಂಚನೆಯ ಹೆಣ್ಣಿನ ವಿಷವನ್ನುಂಡ ಕರುಗಳ ರಕ್ಷಕನೇ, ಕಾರ್ಮುಗಿಲಿನ ಬಣ್ಣದವನೇ ಚಪ್ಪಾಳೆ ತಟ್ಟು. (4)

'ಹೆತ್ತವರು' ಎಂದರೆ ಕೃಷ್ಣನನ್ನು ಮಗನಾಗಿ ಪಡೆದ ದೇವಕಿ ವಸುದೇವರು.

Garani Srinivasan

ದೇವಕಿ ಕಂಸನ ತಂಗಿ. ಅವಳನ್ನು ವಸುದೇವನಿಗೆ ಕೊಟ್ಟು ಮದುವೆ ಮಾಡಿ, ವಿಜೃಂಭಣೆಯಿಂದ ಮೆರವಣಿಗೆ ನಡೆಸುತ್ತಿದ್ದಾಗ, ದೇವಕಿಯ ಎಂಟನೆಯ ಮಗನೇ ಅವನ ಮೃತ್ಯುವೆಂದು ನುಡಿದ ಅಶರೀರವಾಣಿಯನ್ನು ಕಂಸನು ಕೇಳಿದನು. ಕೂಡಲೇ ಬಂಧು ದೇವಕೀ ವಸುದೇವರಿಗೆ ಸೆರೆವಾಸ. ಅವರ ಕಾಲಿಗೆ ಸರಪಣಿಗಳು ಬಂದವು. ದೇವಕಿಯು ಹೆತ್ತ ಒಂದೊಂದು ಮಗುವನ್ನೂ ಕಂಸನು ಕೊಲ್ಲುತ್ತಾ ಬಂದನು. ಸೆರೆಮನೆಯಲ್ಲೇ ದೇವಕಿಗೆ, ಎಂಟನೆಯ ಮಗನಾಗಿ ಭಗವಂತನು ಜನಿಸಿದನು. ಕಂಸನ ಕೈಗೆ ಸಿಗದಂತೆ ಆ ಮಗುವನ್ನು ನಂದಗೋಕುಲದಲ್ಲಿ ನಂದಗೋಪನ ಪತ್ನಿಯಾದ ಯಶೋದೆಯ ಹೆಣ್ಣು ಮಗುವಿನೊಂದಿಗೆ ವಿಚಿತ್ರರೀತಿಯಲ್ಲಿ ಅದಲು ಬದಲು ಮಾಡಲಾಯಿತು. ಹೀಗೆ, ಭಗವಂತನು ಹುಟ್ಟಿದ ಸ್ಥಳವಾದ ಮಥುರೆಯ ಹತ್ತಿರದ ಮತ್ತೊಂದು ಸ್ಥಳದಲ್ಲಿ ಎಂದರೆ ನಂದಗೋಕುಲದಲ್ಲಿ ಯಶೋದೆಯ ಮಗನಾಗಿ ಬೆಳೆಯತೊಡಗಿದನು. ಅಲ್ಲಿಗೂ ಬಂದಳು ಕಂಸನ ಕಡೆಯ ಶತ್ರುವಾದ ಪೂತನಿ. ಅಲ್ಲಿ ಬಂಧು ಬಳಗದವರು ಯಾರೂ ಹತ್ತಿರ ಇಲ್ಲದ ಸಮಯವನ್ನು ಕಾದು ನೋಡಿ, ವಂಚಕಿಯಾದ ಪೂತನಿಯು ಯಶೋದೆಯಂತೆ ವೇಷ ಧರಿಸಿಕೊಂಡು ಬಂದಳು. ಕಂದನಾದ ಕೃಷ್ಣನನ್ನೆತ್ತಿಕೊಂಡಳು. ತಾಯಿಯ ಹಾಗೆಯೇ ತನ್ನ ವಿಷ ತುಂಬಿದ ಎದೆ ಹಾಲನ್ನು ಕುಡಿಸಲು ಯತ್ನಿಸಿದಳು. ಕೃಷ್ಣನೂ ಆದರದಿಂದ ಆ ಹಾಲನ್ನು ಸವಿಯುತ್ತಾ ಕುಡಿಯುವುದರ ಜೊತೆಗೆ ಅವಳ ಪ್ರಾಣವನ್ನೂ ಹೀರಿಬಿಟ್ಟನು. ಸತ್ತು ಬಿದ್ದ ಪೂತನಿಯ ಕಳೇಬರವನ್ನು ಕಂಡು ಗೋವಳರು ಅವಾಕ್ಕಾದರು. ಕೃಷ್ಣನು ನಗುನಗುತ್ತಾ ಇರುವುದನ್ನು ಕಂಡು ನೋಡಿ ಜನ! ಎಲ್ಲರೂ ಅಂಜಿದರು.

ನಂದಗೋಕುಲದಲ್ಲಿ ಬೆಳೆಯುತ್ತಿದ್ದ ಕೃಷ್ಣನು ಇತರ ಗೋವಳ ಬಾಲಕರಂತೆ, ಕರುಗಳನ್ನು ಮೇಯಿಸಲು ಅವುಗಳ ಹಿಂದೆ ಕಾಡಿಗೆ ಹೋಗುತ್ತಿದ್ದನು. ಪುಟ್ಟಗೋಪಾಲಕನಾದದ್ದು ಅವನು ಹೀಗೆ.

5. சோத்தென நின்னைத் தொழுவன் வரந்தா,
பேய்ச்சி முலையுண்ட பிள்ளாய்!, பெரியன
ஆய்ச்சியரப்பம் தருவர், அவர்க்காகச்
சாற்றியோராயிரம் சப்பாணி
தடங்கைகளாற் கொட்டாய் சப்பாணி.

ಸೋತ್ತೆನ ನಿನ್ನೈತ್ತೊಳುವನ್ ವರನ್ದಾ,
ಪೇಯ್ಚ್ಚಿ ಮುಲೈಯುಣ್ಡ ಪಿಳ್ಳಾಯ್!, ಪೆರಿಯನ
ಆಯ್ಚ್ಚಿಯರಪ್ಪಮ್ ತರುವರ್, ಅವರ್ಕ್ಕಾಗ
ಶಾತ್ರಿಯೋರಾಯಿರಮ್ ಶಪ್ಪಾಣಿ ತಡಙ್ಗೈಗಳಾಲ್ ಕೊಟ್ಟಾಯ್ ಶಪ್ಪಾಣಿ.

ಸೋತ್ತೆನ சோத்தென = ಕೈ ಜೋಡಿಸಿಕೊಂಡು ~~[illegible]~~, ನಿನ್ನೈ நின்னை = ನಿನ್ನನ್ನು, ತೊಳುವನ್ தொழுவன் = ನಮಸ್ಕರಿಸಿ, (ಸೇವೆ ಮಾಡುತ್ತೇನೆ) ಪೂಜಿಸುತ್ತೇನೆ, ವರಮ್ ತಾ வரம் தா = ನನ್ನ ಕೋರಿಕೆಗಳನ್ನು ಈಡೇರಿಸು, ಪೇಯ್ಚ್ಚಿ பேய்ச்சி = ರಾಕ್ಷಸಿಯ, ಮುಲೈ ಉಣ್ಡ முலை உண்ட = ಮೊಲೆಯನ್ನುಂಡ, ಪಿಳ್ಳಾಯ್ பிள்ளாய் = ಮಗುವೇ,

ಪೆರಿಯನ பெரியன = ದೊಡ್ಡದಾದ, ಆಯ್ಚ್ಚಿಯರ್ ஆய்ச்சிய
ர் = ಗೊಲ್ಲತಿಯರು, ಅಪ್ಪಮುಂ அப்பம் = ಅಪ್ಪವನ್ನು, ತರುವರ್
தருவர் = ತರುತ್ತಾರೆ, ಅವರ್ಕ್ಕಾಗ அவர்க்காக = ಅವರಿಗೋ
ಸ್ಕರವಾಗಿ, ಶಾಱ್ಱಿ சாற்றி = ಪ್ರಾರ್ಥಿಸುತ್ತಾ, ಓರ್ ಆಯಿರಮುಂ ಶ
ಪ್ಪಾಣಿ சப்பாணி = ಚಪ್ಪಾಳೆಗಳು,
ஆயிரம் = ಒಂದು ಸಾವಿರ, ತಡಕ್ಕೈಗಳಾಲ್ தட கைகளால் = ವಿಶಾಲವಾದ ಕೈಗಳಿಂದ,
ಕೊಟ್ಟಾಯ್ ಶಪ್ಪಾಣಿ கொட்டாய் சப்பாணி = ಚಪ್ಪಾಳೆ
ತಟ್ಟಯ್ಯಾ.

ಕೈಜೋಡಿಸಿಕೊಂಡು ನಿನ್ನನ್ನು ನಮಸ್ಕರಿಸಿ ಪ್ರಾರ್ಥಿಸುತ್ತೇನೆ.
ನನ್ನ ಕೋರಿಕೆಗಳನ್ನು ಈಡೇರಿಸು. ರಾಕ್ಷಸಿಯ ಮೊಲೆಯುಣ್ಣುಂಡ
ಮಗುವೇ, ನಿನಗೆ ಗೊಲ್ಲತಿಯರು ದೊಡ್ಡದೊಡ್ಡ 'ಅಪ್ಪ'ಗಳನ್ನು ತರು
ತ್ತಾರೆ. ಅವರಿಗೋಸ್ಕರವಾಗಿ ಪ್ರಾರ್ಥಿಸುತ್ತಾ ಒಂದು ಸಾವಿರ ಚಪ್ಪಾಳೆಗಳ (5)
ನ್ನು ವಿಶಾಲವಾದ ಕೈಗಳಿಂದ ಚಪ್ಪಾಳೆ ತಟ್ಟಯ್ಯಾ.

ರಾಕ್ಷಸಿಯ ದೊಡ್ಡ ದೊಡ್ಡ ಮೊಲೆಗಳಿಂದ ವಿಷದ ಹಾಲನ್ನು ಕುಡಿದ
ಕಂದನಿಗೆ ನಂದಗೋಕುಲದ ಗೊಲ್ಲತಿಯರು ದೊಡ್ಡ ದೊಡ್ಡ ಅಪ್ಪಗಳನ್ನೇ
ಹೊಟ್ಟೆಲ್ಲವೇ ತೃಪ್ತಿಪಡಿಸಬೇಕಾದದ್ದು! ಅಪ್ಪ ಎಂದರೆ ಬೆಲ್ಲದ ದೋಸೆ!
ವಿಷದ ಕಟ್ಟುರುಚಿಯನ್ನು ಹೋಗಿಸಲು ಬೆಲ್ಲದ ದೋಸೆಯೇ ಮದ್ದು ಎಂಬ
ದಾಸೆ.

ತಾಯಿ ಯಶೋದೆಗೆ ಬಹಳ ಆಶೆ. ತನ್ನ ಮಗುವಿನ ಪುಟ್ಟ ಕೈಗಳಿಂ
ದ ಚಪ್ಪಾಳೆ ತಟ್ಟಿಸುತ್ತಾ ತಾನು ಆನಂದಿಸಬೇಕೆನ್ನುತ್ತಾಳೆ.

ಯಶೋದೆ ಹೇಳುತ್ತಾಳೆ: ಮಗು, ನಿನ್ನನ್ನು ಕೈಜೋಡಿಸಿ
ಬೇಡಿಕೊಳ್ಳುತ್ತೇನೆ. ನನ್ನ ಕೋರಿಕೆಯನ್ನು ಈಡೇರಿಸು. ನಿನಗೆ ಅಪ್ಪ
ಗಳನ್ನು ತಂದುಕೊಡುವ ಗೊಲ್ಲತಿಯರ ಮೇಲ್ಮೆಗಾಗಿ, ನಿನ್ನ ಸಾವಿರನಾಮ
ಗಳನ್ನು ಹೇಳುತ್ತಾ, ಹೊಗಳುತ್ತೇನೆ. ಅವರಿಗಾಗಿ ನೀನು ನಿನ್ನ ವಿಶಾಲ
ವಾದ ಕೈಗಳಿಂದ ಚಪ್ಪಾಳೆ ತಟ್ಟು!

6. கேவலமன்றுன் வயிறு, வயிற்றுக்கு
நானவலப்பம் தருவன், கருவிளைப்
பூவலர் நீண்முடி நந்தன் தன் போரேறே!
கோவலனே! கொட்டாய் சப்பாணி
குடமாடீ கொட்டாய் சப்பாணி.

ಕೇವಲಮನ್ಱುನ್ ವಯಿಱು, ವಯಿಱ್ಱುಕ್ಕು
ನಾನವಲಪ್ಪಮ್ ತರುವನ್, ಕರುವಿಳೈ

Garani Srinivasan

ಪೂವಲರ್ ನೀಳ್ ಮುಡಿ ನನ್ದನ್ ತನ್ ಪೋರೇಱೇ,
ಕೋವಲನೇ, ಕೊಟ್ಟಾಯ್ ಶಪ್ಪಾಣಿ ಕುಡಮಾಡೀ ಕೊಟ್ಟಾಯ್ ಶಪ್ಪಾಣಿ.

ಕೇವಲಮ್ கேவலம் = ಸಾಮಾನ್ಯವಾದದ್ದು, ಅನ್ಱು அன்று = ಅಲ್ಲ, ಉನ್ ವಯಿಱು உன் வயிறு = ನಿನ್ನ ಹೊಟ್ಟೆ, ನಾನ್ நான் = ನಾನು, ವಯಿಱ್ಱುಕ್ಕು வயிற்றுக்கு = ಹೊಟ್ಟೆಗೆ, ಅವಲ್ அவல் = ಅವಲಕ್ಕಿಯನ್ನು, ಅಪ್ಪಮ್ அப்பம் = ಬೆಲ್ಲದ ದೋಸೆಯನ್ನು, ತರುವನ್ தருவன் = ಕೊಡುತ್ತೇನೆ, ಕರುವಿಳೈ ಪ್ಪೂ(ಅಲರ್) கருவிளைப்பூ(அலர்) = ನೀಲಿಯ/(ಅರಳಿದ) ಬೇಲಿ ಹೂವಿನ, ನೀಳ್ ಮುಡಿ நீள் முடி = ವಿಸ್ತಾರವಾದ ಕಿರೀಟದ, ನನ್ದನ್ ತನ್ நந்தன் தன் = ನಂದಗೋಪನ, ಪೋರ್ ಏಱೇ போர் ஏறே = ಹೋರಾಡುವಂಥ ವೃಷಭನೇ, ಕೋವಲನೇ கோவலனே = ಗೋಪಾಲನೇ, ಕೊಟ್ಟಾಯ್ ಶಪ್ಪಾಣಿ கொட்டாய் சப்பாணி = ಚಪ್ಪಾಳೆ ತಟ್ಟಯ್ಯಾ, ಕುಡಮಾಡೀ குடம் ஆடீ = ಕೊಡದ ಕುಣಿತವನ್ನು ನಡೆಸುವವನೇ, ಕೊಟ್ಟಾಯ್ ಶಪ್ಪಾಣಿ கொட்டாய் சப்பாணி = ಚಪ್ಪಾಳೆ ತಟ್ಟಯ್ಯಾ.

ನಿನ್ನ ಹೊಟ್ಟೆ ಸಾಮಾನ್ಯವಾದದ್ದಲ್ಲ. ನಿನ್ನ ಹೊಟ್ಟೆಗೆ ನಾನು ಅವಲಕ್ಕಿಯನ್ನು ಬೆಲ್ಲದ ದೋಸೆಯನ್ನು ಕೊಡುತ್ತೇನೆ. ಅರಳಿದ ನೀಲಿ ಬಣ್ಣದ ಬೇಲಿಹೂವಿನ ವಿಸ್ತಾರವಾದ ಕಿರೀಟವನ್ನು ಧರಿಸಿರುವ ನಂದಗೋಪನ ಹೋರಾಡುವಂಥ ವೃಷಭನೇ, ಗೋಪಾಲನೇ, ಕೊಡದ ಕುಣಿತವನ್ನಾಡುವವನೇ, ಚಪ್ಪಾಳೆ ತಟ್ಟು, ಚಪ್ಪಾಳೆ ತಟ್ಟು. (6)

"ನಿನ್ನ ಹೊಟ್ಟೆ ಸಾಮಾನ್ಯವಾದದ್ದಲ್ಲ" — ಶ್ರೀಕೃಷ್ಣನು ಎಲ್ಲ ಮಕ್ಕಳಂತೆ ಅಲ್ಲ. ಇತರ ಮಕ್ಕಳಂತೆ ಹಾಲು ಕುಡಿದೋ, ಊಟ ತಿಂದೋ, ಅಲ್ಪದರಲ್ಲಿ ಹೊಟ್ಟೆ ತುಂಬಿಸಿಕೊಳ್ಳುವವನಲ್ಲ, ಕೃಷ್ಣ. ಏಕೆಂದರೆ, ನಂದಗೋಕುಲದ ಒಂದೊಂದು ಮನೆಯಲ್ಲೂ ಮೊಸರು, ಬೆಣ್ಣೆ, ತುಪ್ಪ ಮುಂತಾದುವುಗಳನ್ನು ಬಿಕ್ಕದ್ದು ಸಿಕ್ಕದಂತೆ ಮಿಕ್ಕ ಮೇಲೆ ಇಲ್ಲದಂತೆ ಅವನಿಗೆ ತಿಂದು ಹೊಟ್ಟೆ ತುಂಬಿಕೊಳ್ಳುವುದಕ್ಕಾಗುತ್ತಿದ್ದಿತೇ? ಸಾಮಾನ್ಯವಾಗಿ ಹಾಗೇನಾದರೂ ಮಾಡಿದರೆ, ಅದರ ಹೊಟ್ಟೆಯು ಸರಿಯೇನು? ಶ್ರೀಕೃಷ್ಣನಾಗಿರುವ ಭಗವಂತನ ಹೊಟ್ಟೆಯೇನು ಸಾಮಾನ್ಯವಾದದ್ದೇ? ಪ್ರಳಯಕಾಲದಲ್ಲಿ ಇಡಿಯ ಬ್ರಹ್ಮಾಂಡವನ್ನೇ ತನ್ನ ಹೊಟ್ಟೆಯಲ್ಲಿಯೇ ಅಡಗಿಸಿಟ್ಟುಕೊಂಡು ರಕ್ಷಿಸಿದವನಲ್ಲವೇ ಸ್ವಾಮಿ!

"ನಿನ್ನ ಹೊಟ್ಟೆಗೆ ನಾನು ಅವಲಕ್ಕಿ ..... ಕೊಡುತ್ತೇನೆ" — ಭಗವಂತನೇ ಆದ ತನ್ನ ಮಗನ (ಶ್ರೀಕೃಷ್ಣನ) ಹೊಟ್ಟೆ ಸಾಮಾನ್ಯವಾದದ್ದಲ್ಲವೆಂದು ತಾಯಿ ಯಶೋದೆಗೆ ಅರಿವಾದ್ದರೂ ಸಹ, ಅವನಿಗೆ ಇಷ್ಟವಾದ ಅವಲಕ್ಕಿಯನ್ನು

ಬೆಲ್ಲದ ದೋಸೆಯನ್ನು ಕೊಡುತ್ತೇನೆ ಎನ್ನುತ್ತಾಳೆ. ಮಗುವಿಗೆ ಹಸಿವಾಗಿರಬಹುದು; ಅವಳಿಗೆ, ಬೆಲ್ಲದ ದೋಸೆಯ ಮೇಲೆ ಅವನಿಗೆ ಆಸೆಯಿರಬಹುದು. ಕೊಟ್ಟು ತಾನೂ ತೃಪ್ತಿ ಪಡಬಹುದಲ್ಲ! ಇಷ್ಟೂ ಉಂಡವನಿಗೆ ಇಡಿ ಅವಳಿಗೆ ಬೆಲ್ಲದ ದೋಸೆ ದಕ್ಕೀತೇ? – ಹೀಗೆ ಯಶೋದೆಯ ಮನಸ್ಸಿನ ಧ್ಯಾಸ.

ಕೋಟಿಯಲ್ಲಿ ಸುಂದರವಾಗಿ ಅರಳಿರುವ ನೀಲಿ ಹೂವುಗಳನ್ನೆಲ್ಲಾ ಚೆನ್ನಾಗಿ ಜೋಡಿಸಿ ಎತ್ತರವಾದ ಕಂಬದಂತೆ ನಿಂತುಕೊಂಡು ದೇವಿಯಿಂದ ಓಡಾಡುತ್ತಿದ್ದನಂತೆ ಕೃಷ್ಣ. ಇದು ಅವನ ವ್ಯಕ್ತ ಬಣ್ಣಕ್ಕೆ ಅನುಗುಣವಾಗಿಯೂ, ಕಾಂತಿಯನ್ನು ಹೆಚ್ಚಿಸುವುದಾಗಿಯೂ ಇತ್ತೆಂದು ಕೇಳುತ್ತಾರೆ.

"ನಂದಗೋಪನ ಹೋರಾಡುವ ವೃಷಭನೇ" — ಬೆಳೆದ ಗೂಳಿಯಂತೆ ಸ್ವತಂತ್ರವಾಗಿ ಚೆಲುವೆಯಾಗಿ ಎಲ್ಲ ಕಡೆಯೂ ಓಡಾಡಿಕೊಂಡು, ಎಲ್ಲ ಗೋವಳರಿಗೂ ಪ್ರೀತಿ ಪಾತ್ರನಾಗಿ, ಇದ್ದವನು ನಂದಗೋಪನ ಪ್ರೀತಿಯ ಮಗನಾದ ಶ್ರೀಕೃಷ್ಣ.

7. புள்ளினை வாய் பிளந்து பூங்குருந்தம் சாய்த்து,
துள்ளி விளையாடித் தூங்குறி வெண்ணெயை,
அள்ளிய கையாலடியேன் முலை நெருடும்,
பிள்ளைப்பிரான்! கொட்டாய் சப்பாணி
பேய்முலையுண்டானே! சப்பாணி.

ಪುಳ್ಳಿನೈ ವಾಯ್ ಪಿಳನ್ದು ಪೂಙ್ಗುರುನ್ದಮ್ ಶಾಯ್‌ತ್ತು,
ತುಳ್ಳಿ ವಿಳೈಯಾಡಿತ್ತೂಙ್ಗುರಿ ವೆಣ್ಣೆಯ್ಯೆ,
ಅಳ್ಳಿಯ ಕೈಯಾಲಡಿಯೇನ್ ಮುಲೈ ನೆರುಡುಮ್,
ಪಿಳ್ಳೈಪ್ಪಿರಾನ್! ಕೊಟ್ಟಾಯ್ ಶಪ್ಪಾಣಿ ಪೇಯ್ ಮುಲೈಯುಣ್ಡಾನೇ! ಶಪ್ಪಾಣಿ.

ಪುಳ್ಳಿನೈ புள்ளினை = ಪಕ್ಷಿಯ, ವಾಯ್ வாய் = ಬಾಯನ್ನು, ಪಿಳನ್ದು பிளந்து = ಸೀಳಿದಾಗ, ಪೂ பூ = ಸುಂದರವಾದ (ಹೂಬಿಟ್ಟಿರುವ), ಕುರುನ್ದಮ್ குருந்தம் = ಕಾಡು ನಿಂಬೆ ಮರವನ್ನು, ಶಾಯ್‌ತ್ತು சாய்த்து = ಮುರಿದು ಹಾಕಿ, ತುಳ್ಳಿ துள்ளி = ಅತ್ಯುತ್ಸಾಹದಿಂದ, ವಿಳೈಯಾಡಿ விளையாடி = ಆಟವಾಡಿ, ತೂಙ್ಗು தூங்கு = ತೂಗುಹಾಕಿರುವ, ಉರಿ உறி = ನೆಲುವಿನಲ್ಲಿನ, ವೆಣ್ಣೆಯ್ಯೆ வெண்ணெயை = ಬೆಣ್ಣೆಯನ್ನು, ಅಳ್ಳಿಯ அள்ளிய = ಬಾಚಿದ, ಕೈಯಾಲ್ கையால் = ಕೈಯಿಂದ, ಅಡಿಯೇನ್ அடியேன் = ನನ್ನ (ಯಶೋದೆಯ), ಮುಲೈ முலை = ಮೊಲೆಯನ್ನು, ನೆರುಡುಮ್ நெருடும் = ನೀವರುವ, ಪಿಳ್ಳೈ பிள்ளை = ಮಗುವಾದ, ಪಿರಾನೇ பிரானே = ಸ್ವಾಮೀ, ಕೊಟ್ಟಾಯ್ ಶಪ್ಪಾಣಿ கொட்டாய் சப்பாணி = ಚಪ್ಪಾಳೆ ತಟ್ಟು, ಪೇಯ್

Garani Srinivasan

ಮುಲೈ ಉಣ್ಡಾನೇ பேய் முலை உண்டானே = ರಾಕ್ಷಸಿಯ ಮೊಲೆಯನ್ನುಂಡವನೇ, ಶಪ್ಪಾಣಿ சப்பாணி = ಚಪ್ಪಾಳೆ ತಟ್ಟಯ್ಯಾ.

ಪಕ್ಷಿಯ ಬಾಯನ್ನು ಸೀಳಿದಾತ, ಸುಂದರವಾಗಿ ಹೂಬಿಟ್ಟಿರುವ ಕಾಡುನಿಂಬೆ ಮರವನ್ನು ಮುರಿದು ನಾಯಿಸಿ, ಅತ್ಯುತ್ಸಾಹದಿಂದ ಆಟವಾಡಿ, ನೆಲುವಿನಲ್ಲಿ ತೂಗುಹಾಕಿರುವ ಬೆಣ್ಣೆಯನ್ನು ಬಾಚಿಕೊಂಡ ಕೈಯಿಂದ ನನ್ನ (ಯಶೋದೆಯ) ಮೊಲೆಯನ್ನು ಸವರುವ ಮಗುವಾದ ಕೃಷ್ಣನೇ, (7) ರಾಕ್ಷಸಿಯ ಮೊಲೆಯನ್ನುಂಡವನೇ, ಚಪ್ಪಾಳೆ ತಟ್ಟಯ್ಯಾ.

ಯಶೋದೆ ಹೇಳುತ್ತಾಳೆ: ಮಗುವಿನ ರೂಪದಲ್ಲಿರುವ ಭಗವಂತನೇ, ನಾಚಿಕೆಯಿಲ್ಲದ ನಿನ್ನ ಸಾಮರ್ಥ್ಯವನ್ನೇನೆಂದು ಹೊಗಳಲಿ? ನಿನ್ನನ್ನು ಕೊಲ್ಲಬೇಕೆಂದು ಪಕ್ಷಿಯ ರೂಪದಲ್ಲಿ ಬಂದ ಬಕಾಸುರನ ಕೊಕ್ಕನ್ನು ಹಿಡಿದು, ಅಗಲಿಸಿ, ಸೀಳಿದಾತ, ಅವನನ್ನು ಕೊಂದೆಯಲ್ಲ! ಸುಂದರವಾದ ಹೂಗಳಿಂದ ತುಂಬಿ ಆಕರ್ಷಕವಾದ ಕಾಡುನಿಂಬೆಯ ಮರದ ರೂಪದಲ್ಲಿ ~~ನಿಂತಿದ್ದ~~ ನಿನ್ನನ್ನು ಕೊಲ್ಲಲು ಎದುರು ನೋಡುತ್ತಿದ್ದ ಮಹೋಗ್ರ ರಾಕ್ಷಸನನ್ನು ಮುರಿದು ನಾಯಿಸಿದೆ. ನನ್ನ ಹಾಗೆ ರೂಪವನ್ನು ಧರಿಸಿ, ನಿನಗೆ ವಿಷವನ್ನುಣಿಸಿ ನಿನ್ನನ್ನು ಕೊಲ್ಲಲು ಬಂದ ಪೂತನಿಯೆಂಬ ದುಷ್ಟ ರಾಕ್ಷಸಿಯ ಮೊಲೆಯನ್ನುಂಡು, ಅವಳ ಪ್ರಾಣವನ್ನು ಹೀರಿ ಕೊಂದುಹಾಕಿದೆಯಲ್ಲ! ನಿನ್ನ ಉತ್ಸಾಹದ ಕುಣಿತವನ್ನು ನೋಡುವುದಕ್ಕೆ ಎಷ್ಟು ಆನಂದವೋ! ಎತ್ತರವಾದ ಕಡೆ ನೆಲುವಿನಲ್ಲಿ ತೂಗಹಾಕಿರುವ ಬೆಣ್ಣೆಯನ್ನು ಬಾಚಿ ಬಾಚಿ ತಿಂದೆಯಲ್ಲ! ಸಾಮಾನ್ಯ ಮಾನವ ಮಾಡುವ ಕೆಲಸವೇ ಅದು! ಅದೇ ಕೈಗಳಲ್ಲೇ ನನ್ನ ಮೊಲೆಗಳನ್ನು ಪ್ರೀತಿಯಿಂದ ಸವರುವೆಯಲ್ಲ! ಆ ಪುಟ್ಟ ಕೈಗಳಿಂದ ಚಪ್ಪಾಳೆ ತಟ್ಟು ಮಗು! ನೋಡಿ ಆನಂದಿಸುತ್ತೇನೆ.

8. யாயும் பிறரு மறியாத யாமத்து,
மாயவலவைப்பெண் வந்துமுலைதர,
பேயென்றவளைப் பிடித்துயிருண்ட,
வாயவனே! கொட்டாய் சப்பாணி
வாயவனே! கொட்டாய் சப்பாணி.
மால்வண்ணனே கொட்டாய் சப்பாணி

ಯಾಯುಮ್ ಪಿಱರು ಮಱಿಯಾದ ಯಾಮತ್ತು,
ಮಾಯವಲವೈಪ್ಪೆಣ್ ವನ್ದು ಮುಲೈತರ,
ಪೇಯೆನ್ಱವಳೈಪ್ಪಿಡಿತ್ತುಯಿರುಣ್ಡ,
ವಾಯವನೇ ಕೊಟ್ಟಾಯ್ ಶಪ್ಪಾಣಿ ಮಾಲ್‌ವಣ್ಣನೇ ಕೊಟ್ಟಾಯ್ ಶಪ್ಪಾಣಿ.

ಯಾಯುಮ್ யாயும் = ತಾಯಿಯೂ, ಪಿಱರುಮ್ பிறரும் = ಇತರರೂ, ಅಱಿಯಾದ அறியாத = ತಿಳಿಯದ, ಯಾಮತ್ತು யாமத்து = ಕಾಲದಲ್ಲಿ, ಮಾಯಮ್ மாயம் = ಮೋಸಮಾಡುವ, ಅಲವೈ ಪೆಣ್ அலவைப்பெண் = ದುಷ್ಟಳಾದ ಹೆಂಗಸು, ವನ್ದು வந்து = ಬಂದು, ಮುಲೈತರ முலைதர =

ಮೊಲೆ ಕೊಟ್ಟು ಹಾಲುಣಿಸಲು, ಪೇಯ್ பேய் = ರಾಕ್ಷಸಿ, ಎನ್ರು என்று = ಎಂದು, ಅವಳೈ அவளை = ಅವಳನ್ನು, ಪಿಡಿತ್ತು பிடித்து = ಹಿಡಿದುಕೊಂಡು, ಉಯಿರ್ ಉಣ್ಡ உயிர் உண்ட = ಪ್ರಾಣವನ್ನುಂಡ, ವಾಯವನೇ வாயவனே = ಬಾಯುಳ್ಳವನೇ, ಕೊಟ್ಟಾಯ್ ಶಪ್ಪಾಣಿ கொட்டாய் சப்பாணி = ಚಪ್ಪಾಳೆ ತಟ್ಟಯ್ಯ, ಮಾಲ್ ವಣ್ಣನೇ மால் வண்ணனே = ಕಾಡಿಗೆಯ ಬಣ್ಣದವನೇ, ಕೊಟ್ಟಾಯ್ ಶಪ್ಪಾಣಿ கொட்டாய் சப்பாணி.

ತಾಯಿಯೂ ಇತರರೂ ಅರಿಯದ ಕಾಲದಲ್ಲಿ ವಂಚನೆಯ ದುಷ್ಟತಂಗನು ಬಂದು ಮೊಲೆಯುಣಿಸಲು, ರಾಕ್ಷಸಿಯೆಂದು ಅವಳನ್ನು ಹಿಡಿದುಕೊಂಡು ಅವಳ ಪ್ರಾಣವನ್ನುಂಡ ಬಾಯುಳ್ಳವನೇ, ಕಾಡಿಗೆಯ ಬಣ್ಣದವನೇ, ಚಪ್ಪಾಳೆ ತಟ್ಟು! (8)

ಹಾಲು ಹನಿಸುಳಿಗೆ ತನ್ನನ್ನು ಎತ್ತಿಕೊಳ್ಳುವವಳು ತನ್ನ ತಾಯಿಯೇ ಅಥವಾ ಬೇರೆಯವಳೇ ಎಂಬುದರ ಅರಿವಾಗದು. ಇದು ಸಾಮಾನ್ಯ. ಶ್ರೀಕೃಷ್ಣನಿಗಾದರೋ, ತನ್ನನ್ನು ಎತ್ತಿಕೊಂಡವಳು ತನ್ನ ತಾಯಿಯೂ ಅಲ್ಲ, ಇತರ ಗೊಲ್ಲತಿಯರೂ ಅಲ್ಲ, ಅವಳೊಬ್ಬ ಕಡುವಂಚಕಿಯಾದ ರಾಕ್ಷಸಿಯೇ ಎಂದು ಅರಿವಾಯಿತಂತೆ. ಯಾರಿಗೂ ಅರಿಯದಂತೆ ಅವಳು ಬಂದು, ವಂಚನೆಯಿಂದ ಕೃಷ್ಣನನ್ನೆತ್ತಿಕೊಂಡು, ಅವಳ ಮೊಲೆಯನ್ನು ಕೃಷ್ಣನ ಬಾಯಿಗೆ ಹಚ್ಚಿದಳಂತೆ. ಇದು ರಾಕ್ಷಸಿಯಾದ್ದೆ ಎಂದು ಅವಳ ಮೊಲೆಯನ್ನು ಭದ್ರವಾಗಿ ಬಾಯಲ್ಲಿ ಹಿಡಿದುಕೊಂಡು, ಅದರಿಂದ ಅವಳ ಪ್ರಾಣವನ್ನೇ ಹೀರಿಬಿಟ್ಟನಂತೆ. ಕಾಡಿಗೆಯ ಬಣ್ಣದ ಎಳೆಯ ಮಗುವು ಎಂಥ ವಿಸ್ಮಯಕಾರಿ!

ಎಲ್ಲ ಮಕ್ಕಳಂತೆ ಅವನ ವಿಚಿತ್ರ ಕೃತ್ಯಗಳಿಂದ ಚಪ್ಪಾಳೆ ತಟ್ಟುವುದನ್ನು ನೋಡಿ ಆನಂದಿಸಬೇಕೆನ್ನುತ್ತಾಳೆ ತಾಯಿ ಯಶೋದೆ.

9. கள்ளக் குழவியாய்க் காலாற் சகடத்தை,
தள்ளியுதைத்திட்டுத் தாயாய் வருவாளை,
மெள்ளத் தொடர்ந்து பிடித்தாருயிருண்ட,
வள்ளலே, கொட்டாய் சப்பாணி
மால்வண்ணனே, கொட்டாய் சப்பாணி.

ಕಳ್ಳಕ್ಕುಳವಿಯಾಯ್ ಕ್ಕಾಲಾಲ್ ಶಕಡತ್ತೈ,
ತಳ್ಳಿಯುದೈತ್ತಿಟ್ಟು ತ್ತಾಯಾಯ್ ವರುವಾಳೈ,
ಮೆಳ್ಳತ್ತೊಡರ್ನ್ದು ಪಿಡಿತ್ತಾರುಯಿರುಣ್ಡ,
ವಳ್ಳಲೇ, ಕೊಟ್ಟಾಯ್ ಶಪ್ಪಾಣಿ. ಮಾಲ್ ವಣ್ಣನೇ ಕೊಟ್ಟಾಯ್ ಶಪ್ಪಾಣಿ.

ಕಳ್ಳಮ್ கள்ளம் = ಕಪಟದ, ಕುಳವಿ ಆಯ್ குழவி ஆய் = ಮಗುವಾಗಿ, ಕಾಲಾಲ್ காலால் = ಕಾಲಿನಿಂದ, ಶಕಡತ್ತೈ சகடத்தை = ಶಕಟವನ್ನು (ಬಂಡಿಯನ್ನು), ಉದೈತ್ತಿಟ್ಟು உதைத்திட்டு = ಒದೆದು ಹಾಕಿ, ತಾಯ್ ಆಯ್ தாய் ஆய் = ತಾಯಿಯಾಗಿಯೇ, ವರುವಾಳೈ

வருவாளை = ಬಂದವಳನ್ನು, ಮೆಳ್ಳ மெள்ள = ಮೆಲ್ಲಗೆ, ತೊಡರ್ನ್ದು தொடர்ந்து = ಬೆಂಬಲೆಬಿದ್ದು (ಸಿಕ್ಕಿಸಿಕೊಂಡು), ಪಿಡಿತ್ತು பிடித்து = ಹಿಡಿದು ಕೊಂಡು, ಆರ್ ಉಯಿರ್ ஆர் உயிரை = ತುಂಬು ಜೀವವನ್ನು, ಉಣ್ಡ உண்ட = ಉಂಡಂಥ, ವಳ್ಳಲೇ வள்ளலே = ಉದಾರಿಯೇ, ಮಾಲ್ ವಣ್ಣನೇ மால் வண்ணனே = ಕಾಡಿಗೆಯ ಬಣ್ಣದವನೇ, ಕೊಟ್ಟಾಯ್ ಚಪ್ಪಾಣಿ கொட்டாய் சப்பாணி = ಚಪ್ಪಾಳೆ ತಟ್ಟು (ತಟ್ಟು).

ಕಪಟದ ಮಗುವಾಗಿ, ಕಾಲಿನಿಂದ ಶಕಟವನ್ನು (ಬಂಡಿಯನ್ನು) ಒದೆದು ಹಾಕಿ, ತಾಯಿಯಾಗಿಯೇ ಬಂದವಳನ್ನು ಮೆಲ್ಲಗೆ ಬೆಂಬಲೆಬಿದ್ದು ಹಿಡಿದುಕೊಂಡು ಅವಳ ತುಂಬು ಜೀವವನ್ನು ಉಂಡಂಥ ಉದಾರಿಯೇ, (9)
ಕಾಡಿಗೆಯ ಬಣ್ಣದವನೇ, ಚಪ್ಪಾಳೆ ತಟ್ಟು!

ಭಗವಂತನೇ ಶ್ರೀಕೃಷ್ಣನಾಗಿ ಅವತರಿಸಿದ್ದು. ಈ ರಹಸ್ಯವನ್ನು ಯಾರೂ ಅರಿಯದಿರುವಂತೆ, ಸ್ವಾಮಿಯು ಸಾಮಾನ್ಯವಾದ ಶಿಶುವಿನಂತೆಯೇ ಜನಿಸಿ, ನಂದಗೋಕುಲದಲ್ಲಿ ಬೆಳೆಯ ತೊಡಗಿದನು. ಅವನ ಸೋದರಮಾವನಾದ ಕಂಸನು ಅವನನ್ನು ಕೊಲ್ಲಬೇಕೆಂದು ಬಹಳ ಯತ್ನಿಸ ತೊಡಗಿದನು. ಮೊಟ್ಟ ಮೊದಲು ಕೊಲ್ಲಲು ಬಂದವಳು ಪೂತನಿಯೆಂಬ ರಾಕ್ಷಸಿ. ಅನಂತರ ಬಂದವನು ಶಕಟಾಸುರ. ಶಕಟಾಸುರನು ಬಂಡಿಯ ರೂಪವನ್ನು ತಳೆದು, ಅಲ್ಲಿ ಮಲಗಿದ್ದ ಕೃಷ್ಣನ ಮೇಲೆ ಹರಿದು ಅವನನ್ನು ಕೊಲ್ಲಲು ಯತ್ನಿಸಿದನು. ಪುಟ್ಟ ಮಗುವು ಕೈಕಾಲುಗಳನ್ನು ಆಡಿಸುವಂತೆಯೇ ಆಡಿಸುತ್ತಾ, ಮೇಲೆ ನುಗ್ಗಿ ಬಂದ ಶಕಟ (ಬಂಡಿಯನ್ನು)ನನ್ನು ಕಾಲಿನಿಂದ ಒದೆದು ಪುಡಿಪುಡಿ ಮಾಡಿ ಹಾಕಿದನು. ತನ್ನ ತಾಯಿ ಯಶೋದೆಯಂತೆಯೇ ವೇಷ ಮರೆಸಿಕೊಂಡು ಮೊಲೆಯನ್ನಿತ್ತು ಕೊಲ್ಲುವಂತೆ ಬಂದ ಪೂತನಿಯ ಮೊಲೆಗಳನ್ನ ಬಾಯಿಗಿಟ್ಟು, ಅವಳ ತುಂಬು ಜೀವವನ್ನ ಕೃಷ್ಣನು ಹೀರಿಬಿಟ್ಟನು.

ಕಪಟದಿಂದ ಕೊಲ್ಲಲು ಬಂದವರನ್ನು ಏನೂ ಅರಿಯದ ಹಸುಳೆಯಂತೆ ವರ್ತಿಸುತ್ತಾ, ಕಪಟದಿಂದಲೇ ಕೊಂದು ಹಾಕಿದರೂ ಸಹ, ತನ್ನ ಸ್ಪರ್ಶಮಾತ್ರದಿಂದಲೇ ಅವರಿಗೆ ಸದ್ಗತಿಯನ್ನು ಕೊಟ್ಟನಲ್ಲ, ಸ್ವಾಮಿ. ಎಂಥ ಉದಾರ ಭಗವಂತ!

10. காரார் புயற்கைக் கலிகன்றி மங்கையர் கோன்,
பேராளன் நெஞ்சில் பிரியாதிடங்கொண்ட
சீராளா, செந்தாமரைக் கண்ணா, தண்டுழாய்த்
தாராளா, கொட்டாய் சப்பாணி
தாராளா, கொட்டாய் சப்பாணி.
தடமார்வா கொட்டாய் சப்பாணி

ಕಾರಾರ್ ಪುಯಲ್ಕೈಕ್ ಕಲಿಕನ್ರಿ ಮಙ್ಗೈಯರ್ ಕೋನ್,
ಪೇರಾಳನ್ ನೆಂಜಿಲ್ ಪಿರಿಯಾದಿಡಙ್ಗೊಣ್ಡ
ಶೀರಾಳಾ, ಶೆನ್ದಾಮರೈಕ್ಕಣ್ಣಾ, ತಣ್ಡುಳಾಯ್
ತ್ತಾರಾಳಾ, ಕೊಟ್ಟಾಯ್ ಚಪ್ಪಾಣಿ, ತಡಮಾರ್ವಾ ಕೊಟ್ಟಾಯ್ ಚಪ್ಪಾಣಿ.

ಕಾರ್ கார் = ಕಾರ್ಮುಗಿಲು, ಆರ್ ஆர் = ತುಂಬಿಕೊಂಡಿರುವ ಹಾಗೆ,
ಪುಯಲ್ ಕೈ புயல் கை = ಔದಾರ್ಯವನ್ನುಳ್ಳ, ಕಲಿಕನ್ರಿ கலி
கன்றி = ಕಲಿಧ್ವಂಸಿಯಾದ, ಮಙ್ಗೈಯರ್ ಕೋನ್ மங்கையர்
கோன் = ತಿರುಮಂಗೈ ನಾಡಿನವರ ಒಡೆಯನಾದ, ಪೇರ್ ಆಳನ್ பேர்
ஆளன் = ಕೀರ್ತಿವಂತನ, ನೆಂಜಿಲ್ நெஞ்சில் = ಮನಸ್ಸಿನಿಂದ, ಪಿರಿ
ಯಾದು பிரியாது = ಬೇರ್ಪಡದಂತೆ, ಇಡಮ್ ಕೊಣ್ಡ இடம் கொ
ண்ட = ಮನೆಮಾಡಿಕೊಂಡಿರುವ, ಶೀರಾಳಾ சீராளா = ಸಕಲಸದ್ಗು
ಣಾವಂತನೇ, ಶೆಮ್ ತಾಮರೈ ಕಣ್ಣಾ செம் தாமரை கண்ணா =
ಕೆಂದಾವರೆಯಂತೆ (ಕೆಂಪಾಗಿನ) ಕಣ್ಣುಳ್ಳವನೇ, ತಡ ಮಾರ್ವಾ தட
மார்வா = ವಿಶಾಲವಾದ ವಕ್ಷವುಳ್ಳವನೇ, ಕಾಟ್ಟಾಯ್ ಶಪ್ಪಾಣಿ
காட்டாய் சப்பாணி = ಚಪ್ಪಾಳೆ ತಟ್ಟು.

ಕಾರ್ಮುಗಿಲು ತುಂಬಿಕೊಂಡಿರುವ ಹಾಗೆ ಔದಾರ್ಯವನ್ನುಳ್ಳವನೂ ಕಲಿಧ್ವಂಸಿಯೂ ತಿರುಮಂಗೈ ನಾಡಿನ ಜನರ ಒಡೆಯನೂ ಆದ ಕೀರ್ತಿವಂತನ ಮನಸ್ಸಿನಿಂದ ಬೇರ್ಪಡದಂತೆ ಮನೆ ಮಾಡಿಕೊಂಡಿರುವ ಸಕಲ ಸದ್ಗುಣಾವಂತನೇ, ಕೆಂದಾವರೆಯಂತೆ ಕೆಂಪಾಗಿನ ಕಣ್ಣುಳ್ಳವನೇ, ವಿಶಾಲವಾದ ವಕ್ಷವುಳ್ಳವನೇ ಚಪ್ಪಾಳೆ ತಟ್ಟು. (10)

ಈ ಶಿರುಪ್ಪಾಣಿಯ ಕಡೆಯ ಪಾಶುರವಿದು. ಇತರ ಒಂಬತ್ತು ಪಾಶುರಗಳಂತೆ ಇದೂ ಸಹ ಭಗವಂತನ ಬಾಲಲೀಲೆಯನ್ನು ನೋಡಬೇಕೆಂಬ ಆಸೆಯೊಂದನ್ನು ಮನಃಪೂರ್ವಕವಾಗಿ ಬಯಸುತ್ತದೆ.

ತಾಯಿ ಯಶೋದೆ ತನ್ನ 'ಹೆತ್ತ' ಮಗನಾದ ಬಾಲಕೃಷ್ಣನ ಕೈಯಲ್ಲಿ ಚಪ್ಪಾಳೆ ತಟ್ಟಿಸುತ್ತಾ, ಅದಕ್ಕೆ ತಕ್ಕಂತೆ ಅವನ ಗುಣಗಾನ ಮಾಡುತ್ತಾ, ಅವನನ್ನು ಹುರಿದುಂಬಿಸುತ್ತಾ, ಆ ಲೀಲೆಯನ್ನು ಕಣ್ತುಂಬ ನೋಡುತ್ತಾ ಆನಂದಿಸುತ್ತಾಳೆ ಎಂಬುದು ಶಿರುಪ್ಪಾಣಿಯ ವಿಷಯ.

ಕಾರ್ಮುಗಿಲು ತನ್ನ ಶಕ್ತಿ ಮೀರಿ ಹೋಗಿ ನೀರನ್ನು ತುಂಬಿಟ್ಟುಕೊಂಡು, ಗಗನದಲ್ಲಿ ಮೆಲ್ಲ ಮೆಲ್ಲಗೆ ಸಂಚರಿಸುತ್ತಾ, ಕೆಳಗೆ ನೆಲದ ಮೇಲಿರುವ ನಾನಾ ಪ್ರಾಣಿಗಳಿಗೂ, ಪೈರು ಪಚ್ಚೆಗಳಿಗೂ, ಗಿಡ ಮರ ಬಳ್ಳಿಗಳಿಗೂ, ಜನರಿಗೂ - ಅವು ಅಪೇಕ್ಷಿಸುವುದಕ್ಕಿಂತಲೂ ಹೆಚ್ಚಾಗಿ, ಸಮೃದ್ಧಿಯಾಗಿ, ಮಳೆಗರೆಯುತ್ತಾ, ಔದಾರ್ಯವನ್ನು ತೋರಿಸುವ ಹಾಗೆಯೇ, ಕಲಿಯನು ತಿರುಮಂಗೈ ನಾಡಿನ ಒಡೆಯನೂ, ಕಲಿಯುಗದ ದೋಷಗಳನ್ನು ಧ್ವಂಸ ಮಾಡುವವನೂ, ಸದ್ಗುಣವಂತನೆಂಬ ಕೀರ್ತಿವಂತನೂ, ಭಕ್ತಶ್ರೇಷ್ಠನೂ, ಭಗವದ್ಭಾಗವತರಲ್ಲಿ ತೋರಿಸುವ ಔದಾರ್ಯವೂ. ಅವನ ಜೀವನ ಚರಿತ್ರೆಯಿಂದ ಅದು ಹೊರಬೀಳುವುದು. ~~ಭಗವಂತನನ್ನು~~ ಅನನ್ಯವಾದ ಸಾತ್ವಿಕ ಪ್ರೇಮದಿಂದ ಭಗವಂತನನ್ನು ತನ್ನ ಅಂತರಂಗದಲ್ಲಿಯೇ ಸ್ಥಿರವಾಗಿ ನೆಲೆ

Gorani Srinivasan

ಗೊಳಿಸಿಕೊಂಡಿದ್ದಾನೆ. ತನ್ನನ್ನು ತಾಯಿ ಯಶೋದೆಯೆಂದೇ ಭಾವಿಸಿಕೊಂಡು ತನ್ನ "ಮಗ"ನಾದ ಭಗವಂತನನ್ನು ಬಾಲಕೃಷ್ಣನಾಗಿ ಭಾವಿಸಿಕೊಂಡು, ಅವನ ಬಾಲ ಲೀಲೆಗಳಲ್ಲಿ ಬಂದಾಗ 'ಚಪ್ಪಾಳೆ ತಟ್ಟು'ವುದನ್ನು ಕಾಣುತ್ತ ಕಂಡು ಆನಂದ ಪಡುತ್ತಾಳೆ. ಈದಿನದಲ್ಲಿ ಶ್ರೀಕೃಷ್ಣಾವತಾರದ ~~ಕೆಲವು~~ ಅತಿಶಯವಾದ ಕೆಲವು ಲೀಲಾ ದೃಶ್ಯಗಳನ್ನು ನೆನೆಯುತ್ತಾಳೆ.

ಇತರ ತಿರುಮೊಳಿಗಳಂತೆ ಇದು ಫಲಶ್ರುತಿಯಿಂದ ಕೊನೆಗಾಣುವುದಿಲ್ಲ. ಕಾರಣವು ಇದರಲ್ಲಿ ತನ್ನ ಕವಿತೆಯ ಪ್ರಭಾವವನ್ನು ಮರೆತು, ತ ಕವಿತೆಯನ್ನು ಓದುವವರನ್ನು ಮರೆತು, ಅದರಿಂದ ಅವರಿಗೆ ಬರುವ ಲಾಭವನ್ನು ಕುರಿತು ಚಿಂತಿಸದೆ, ಭಗವಂತನ ಪುಟ್ಟ ಕೈಗಳಿಂದ ತಟ್ಟುವ ಚಪ್ಪಾಳೆಯಲ್ಲೂ ಅದರಿಂದ ಜನಿಸುವ ಆನಂದದಲ್ಲೂ ಮಗ್ನನಾಗಿ ಬಿಡುತ್ತಾನೆ. ಕೃತಿಯ ಕೊನೆಗೆ ದು ಆತ್ಮೀಯನಾಗಿ ಭಗವಂತನನ್ನು ಪ್ರಾರ್ಥಿಸುತ್ತಾನೆ. ತನ್ನದಾಗಿಯೇ ಎಲ್ಲರಾ ~~ಕ~~ ಅವರವರಿಗೆ ಇಷ್ಟವಾದ ರೀತಿಯಲ್ಲಿ ಭಗವಂತನನ್ನು ಭಾವಿಸಿಕೊಂಡು, ಭಗವಚ್ಚಿಂತನೆಯಲ್ಲಿ ಮಗ್ನರಾಗಿ ಆನಂದಪಡಬೇಕೆಂದೂ, ಅದೊಂದು ಸುಲಭವಾದ ಮಾರ್ಗವೆಂದೂ, ವಿಶೇಷವಾಗಿ ~~ಈ~~ ಮಾಲೆಯ ಮೂಲಕ ಸೂಚಿಸುತ್ತಿದ್ದಾನಲ್ಲವೇ?

— o —

ಅಡಿಯನಡೆ: அடிவரவு: — ಪೊಙ್ಗೆದ್ದ பூங்கோதை, ತಾಯರ் தாயார், ತಾನೊರ್ தாமோர், ಪೆತ್ತೊರ್ பெற்றோர், ಕೋತ್ತಿನ சோக்கை, ಕೋವಲ கோவலம், ಪುಳ್ಳಿ புள்ளின, ಕಾರ் காரார், ಯಾಯುಮ பாயும், ಕಳ್ಳ கள்ளம், (ಎಙ್ಗುಮ எங்காணும்)

— o —

12.2.79

- ಶ್ರೀಃ - (84) - ಶ್ರಿಯೈ ನಮಃ -

ಪೆರಿಯ ತಿರುಮೊೞಿ - ಪತ್ತಾಮ್ ಪತ್ತು - ಆಱಾನ್ ತಿರುಮೊೞಿ.

பெரிய திருமொழி - பத்தாம் பத்து - ஆறாந் திருமொழி.

6. ಎಙ್ಗಾನುಮೀದೊಪ್ಪದೋರ್ - எங்கானுமீதொப்பதோர்

1. எங்கானுமீதொப்பதோர் மாயமுண்டே
நரநாரணனாயுலகத்தறநூல்,
சிங்காமை விரித்தவனெம்பெருமான்
அதுவன்றியுஞ் செஞ்சுடரும் நிலனும்,
பொங்கார் கடலும் பொருப்பும் நெருப்பும்
நெருக்கிப் புகப்பொன் மிடற்றத்தனைபோது,
அங்காந்தவன் காண்மினின்றாய்ச்சியரால்
அளைவெண்ணெயுண்டாப்புண்டிருந்தவனே.

ಎಙ್ಗಾನುಮೀದೊಪ್ಪದೋರ್ ಮಾಯಮುಣ್ಡೇ
ನರನಾರಣನಾಯುಲಗತ್ತಱನೂಲ್,
ಶಿಙ್ಗಾಮೈ ವಿರಿತ್ತವನೆಮ್ಬೆರುಮಾನ್
ಅದುವನ್ಱಿಯುಂ ಜೆಞ್ಜುಡರುಮ್ ನಿಲನುಮ್,
ಪೊಙ್ಗಾರ್ ಕಡಲುಮ್ ಪೊರುಪ್ಪುಮ್ ನೆರುಪ್ಪುಮ್
ನೆರುಕ್ಕಿಪ್ಪುಗಪ್ಪೊನ್ ಮಿಡಱ್ಱತ್ತನೈ ಪೋದು,
ಅಙ್ಗಾನ್ದವನ್ ಕಾಣ್ಮಿನಿನ್ಱಾಯ್ಚ್ಚಿಯರಾಲ್
ಅಳೈವೆಣ್ಣೆಯುಣ್ಡಾಪ್ಪುಣ್ಡಿರುನ್ದವನೇ.

ಎಙ್ಗಾನುಮ್ எங்கானும் = ಎಲ್ಲಿಯಾದರೂ, ಈದು ಒಪ್ಪದು ஈது ஒப்பாது = ಇದರಂಥ, ಓರ್ ஓர் = ಒಂದು, ಮಾಯಮ್ மாயம் = ಆಶ್ಚರ್ಯಕರವಾದದ್ದು (ಮಾಯೆಯೆಂಬುದು), ಉಣ್ಡೇ உண்டே = ಇದೆಯೇ (ಉಂಟೇ?), ನರನ್ ನಾರಣನ್ ಆಯ್ நரன் நாரணன் ஆய் = ನರ-ನಾರಾಯಣ ಸ್ವರೂಪಿಯಾಗಿ, ಉಲಗತ್ತು உலகத்து = ಲೋಕದಲ್ಲಿ, ಅಱಮ್ ನೂಲ್ அறம் நூல் = ಧರ್ಮಶಾಸ್ತ್ರವನ್ನು, ಶಿಙ್ಗಾಮೈ சிங்காமை = ಕುಗ್ಗದಂತೆ, ವಿರಿತ್ತವನ್ விரித்தவன் = ವಿವರಿಸಿದವನು, ಎಮ್ಬೆರುಮಾನ್ எம்பெருமான் = ಭಗವಂತನು, ಅದು ಅನ್ಱಿಯುಮ್ அது அன்றியும் = ಅದೂ ಅಲ್ಲದೆ, ಶೆಮ್ ಶುಡರುಮ್ செம் சுடரும் = ಸುಂದರವಾದ (ಕಾಂತಿಯುಳ್ಳ) ಸೂರ್ಯ ಚಂದ್ರರನ್ನೂ, ನಿಲನುಮ್ நிலனும் = ಭೂಮಿಯನ್ನೂ, ಪೊಙ್ಗು பொங்கு = ಅಲೆಗಳಿಂದ ಕೂಡಿದ, ಆರ್ ஆர் = ತುಂಬ

Garani Srinivasan

ರುವ, ಕಡಲುಮ್ ಕಡಲ್ ಸೂೞುಮ್ = ಕಡಲನ್ನೂ, ಪೊರುಪ್ಪುಮ್ ಪೊಱು
ಪ್ಪುಮ್ = ಪರ್ವತಗಳನ್ನೂ, ನೆರುಪ್ಪುಮ್ ನೆಱುಪ್ಪುಮ್ = ಬೆಂಕಿ
ಯನ್ನೂ, ನೆರುಕ್ಕ ನೆಱುಕ್ಕಿ = ಒಟ್ಟಾಗಿ, ~~ಪುದಪ್ಪ = ಪೊನ್~~
~~ಮಲೆ (ಪ್ರಕಾಶಮಾನವಾದ)~~, ಪುದಪ್ಪ = ಸೇರಿರುವುದಕ್ಕೆ, ಪೊನ್ ಮುದಲು
ಪೊಣ್ ಮಿಡಱು = ಸುಂದರವಾದ (ಪವಿತ್ರವಾದ) ಹೊಟ್ಟೆಯನ್ನು. ಅತ್ತನೈ ಪೋದು
அத்தனை போது = ಅಷ್ಟು ಕಾಲವೂ, ಅಜ್ಞಾನವನ್ அங்கு காண்
ಬಣ್ = ವಿಸ್ತರಿಸಿಟ್ಟುಕೊಂಡವನು, ಕಣ್ಣನ್ காண் மின் = ನೋಡಿರಿ,
ಇನ್ಱು இன்று = ಇಂದು, ಆಯ್ಚ್ಚಿಯರಾಲ್ ஆய்ச்சியரால் =
ಗೊಲ್ಲತಿಯರಿಂದ, ಅಳೈ ವೆಣ್ಣೆಯ್ ಉಣ್ಣು அளை வெண்ணெய்
ಉಣ್ಡು = ಮೊಸರು ಬೆಣ್ಣೆಯನ್ನುಂಡು, ಆಪ್ಪುಣ್ಣು ஆப்புண்டு = ಕಟ್ಟಿ
ಹಾಕಿಸಿಕೊಂಡು, ಇರುನ್ದವನೇ இருந்தவனே = ಇದ್ದವನೇ.

ಎಲ್ಲಿಯಾದರೂ ಇದರಂಥ ಬೇರೊಂದು ಮಾಯೆಯೆಂಬುದುಂಟೇ?

ನರನಾರಾಯಣ ಸ್ವರೂಪಿಯಾಗಿ ಲೋಕದಲ್ಲಿ ಧರ್ಮಶಾಸ್ತ್ರವನ್ನು [illegible] ಹೊಸದಂತೆ ವಿವರಿಸಿದವನಾಗಿ, ~~ಭಗವಂತನು~~; ಅದೂ ಅಲ್ಲದೆ, ಸುಂದರವಾದ (ಬಂಡೆಯನ್ನುಳ್ಳ) ಸೂರ್ಯ ಚಂದ್ರರನ್ನು ಭೂಮಿಯನ್ನು ಅಲೆಗಳಿಂದ ಕದಡಿದ ತುಂಬು ಕಡಲನ್ನೂ, ಪರ್ವತಗಳನ್ನೂ, ಬೆಂಕಿಯನ್ನೂ, ಒಟ್ಟಾಗಿ ಸೇರಿಸಿಕೊಳ್ಳುವುದಕ್ಕೆ ಅಷ್ಟು ಕಾಲವೂ ತನ್ನ ಸುಂದರ (ಪವಿತ್ರ) ವಾದ ಹೊಟ್ಟೆಯನ್ನು ವಿಸ್ತರಿಸಿಟ್ಟುಕೊಂಡವನಾದ ಭಗವಂತನು ನೋಡಿರಿ ಇಂದು ಗೊಲ್ಲತಿಯರಿಂದ ಮೊಸರು ಬೆಣ್ಣೆಯನ್ನುಂಡು ಕಟ್ಟಿ ಹಾಕಿಸಿಕೊಂಡಿದ್ದವನೇ. (1)

ಹಿಂದಿನ ಎರಡು ತಿರುಮೊಳಿಗಳಲ್ಲಿ ಭಗವಂತನ ಶ್ರೀಕೃಷ್ಣಾವತಾರದ ಬಾಲಲೀಲೆಗಳನ್ನು - ಎಂದರೆ, ಮನುಷ್ಯನಾಗಿ ಮಾಡಿದ ಅದ್ಭುತ ಲೀಲೆಗಳಲ್ಲಿ ಕೆಲವನ್ನು ಹೇಳಲಾಯಿತು. ಈ ತಿರುಮೊಳಿಯಲ್ಲೂ ಭಗವಂತನ ದಿವ್ಯ ಗುಣಗಳನ್ನು ಅವುಗಳೊಂದಿಗೆ ಅವನ ಪರಮ ಸೌಲಭ್ಯ ಸೂಚಕವಾದ ವಾತ್ಸಲ್ಯದ ಗುಣಗಳನ್ನು ಸ್ವಾರಸ್ಯವಾದ ರೀತಿಯಲ್ಲಿ ವಿವರಿಸಲಾಗುತ್ತಿದೆ.

ಭಗವಂತನು 'ನರ-ನಾರಾಯಣ' ಅವತಾರವನ್ನು ತಳೆದದ್ದು, ಜ್ಞಾನ ಮಾರ್ಗದಲ್ಲಿ ಹೇಳಿರುವ ಧ್ಯಾನ ತಪಸ್ಸುಗಳ ಹಿರಿಮೆಯನ್ನು ಜಗತ್ತಿಗೆ ತೋರಿಸುವುದಕ್ಕಾಗಿಯೇ. ವೇದಗಳಲ್ಲಿ ಉದ್ಘೋಷವಾದ ಈ ಮಾರ್ಗದ ಸ್ಥಾನವನ್ನು ನಡೆಸಬೇಕಾದ ಕ್ರಮವನ್ನು ಅವರು ಆಚರಿಸಿ ತೋರಿಸಿದರು. ಜಗತ್ತಿನಲ್ಲಿ ಧರ್ಮವು ಕ್ಷೀಣವಾಗಿ, ಅಧರ್ಮ ಅನ್ಯಾಯಗಳು ಮಿತಿಮೀರಿದಾಗ, ನರನು ಅರ್ಜುನನಾಗಿಯೂ, ನಾರಾಯಣನು ಶ್ರೀಕೃಷ್ಣನಾಗಿಯೂ ಮತ್ತೆ ಅವತರಿಸಿದರು. ಅಧರ್ಮಿಗಳನ್ನು ಸದೆಬಡಿದರು. ಧರ್ಮಕ್ಕೆ ಮಾನ್ಯತೆ ತಂದರು. ವೇದ ವೇದಾಂತಗಳ ಸಾರವನ್ನು ಗೀತೋಪದೇಶದ ರೂಪದಲ್ಲಿ ಸಂಗ್ರಹವಾಗಿ ಜಗತ್ತಿನ ಮುಂದಿಟ್ಟು ಧರ್ಮವನ್ನು ಶಾಸ್ತ್ರವನ್ನು ಉದ್ಧರಿಸಿದರು. ಅವು ಸಂಕೀರ್ಣವಾಗಿಲ್ಲದಂತೆಯೂ, ಸುಲಭವಾಗಿ ಗ್ರಾಹ್ಯವಾಗುವಂತೆಯೂ, ಅನುಷ್ಠಾನಕ್ಕೆ

Garani Srinivasan

ಕರುವಂಶೆಯೂ ಅನುಕೂಲ ಮಾಡಿಕೊಟ್ಟರು.

ಪ್ರಳಯ ಕಾಲ ಬಂದಾಗ, ಸೃಷ್ಟಿಯ ಎಲ್ಲ ವಸ್ತುಗಳೂ ಲಯವಾಗುವಾಗ, ಭಗವಂತನು ಪರಸ್ಪರ ವಿರುದ್ಧ ವಸ್ತುಗಳಾದ ಸೂರ್ಯ, ಚಂದ್ರ, ನೆಲ, ನೀರು, ಬೆಂಕಿ, ಗಾಳಿ, ಬೆಟ್ಟ ಮೊದಲಾದ ಎಲ್ಲವನ್ನೂ ತನ್ನ ಪವಿತ್ರವಾದ ಹೊಟ್ಟೆಯಲ್ಲಿಯೇ ಒಟ್ಟಿಗೆ ಕೂಡಿಸಿಟ್ಟುಕೊಂಡು, ಮರು ಸೃಷ್ಟಿಗಾಗಿ, ಕಾಪಾಡಿಟ್ಟುಕೊಳ್ಳುತ್ತಾನೆ.

ಧರ್ಮಕ್ಕೆ ಚ್ಯುತಿ ಬಂದಾಗಲೆಲ್ಲ, ದುಷ್ಟರಾದ ಅಧರ್ಮಿಗಳ ನಾಶಕ್ಕಾಗಿ, ಧರ್ಮಿಷ್ಠರಾದ ಸಜ್ಜನರ ಉದ್ಧಾರಕ್ಕಾಗಿ ~~ಭಗವಂತನು~~ ಕಾಲ ಅವತಾರ ಮಾಡುವುದಾಗಿ ಭಗವಂತನ ಆಶ್ವಾಸನೆ.

ಆಳ್ವಾರರು ಹೇಳುತ್ತಾರೆ: ಧರ್ಮ ಮತ್ತು ಶಾಸ್ತ್ರಗಳು ಲೋಕದಲ್ಲಿ ಸ್ಥಿರವಾಗಿ ನೆಲೆಗೊಳ್ಳುವಂತೆ ಮಾಡುವ, ಮತ್ತು. ಪ್ರಳಯದಲ್ಲಿ ಸೃಷ್ಟಿಯೆಲ್ಲವನ್ನೂ ತನ್ನ ಹೊಟ್ಟೆಯಲ್ಲಿಟ್ಟು ಕಾಪಾಡತಕ್ಕ ಪರಮ ಸಮರ್ಥನೂ ಕಾರುಣಿಕನೂ ಆದ ಭಗವಂತನು, ಗೊಲ್ಲತಿಯರು ಕೂಡಿಟ್ಟ ಬೆಣ್ಣೆಯನ್ನೂ ಮೊಸರನ್ನೂ ಕಳ್ಳತನದಿಂದ ತಿಂದು ಅವರ ಕೈಗೆ ಸಿಕ್ಕಿಬಿದ್ದು, ಹಗ್ಗದಿಂದ ಕಟ್ಟಿಹಾಕಿಸಿಕೊಳ್ಳಬಹುದೇ? ನ್ಯಾಯವನ್ನು ಧರ್ಮವನ್ನು ಬೋಧಿಸುವವನು, ತಾನೇ ಅದನ್ನು ತಪ್ಪಿ ನಡೆಯುವುದೇ? ಶಿಷ್ಟಗನಂಯಾಗುವುದೇ? ಇದನ್ನು ಜ್ಞಾನವೆನ್ನೋಣವೇ? ಅಜ್ಞಾನವೆನ್ನೋಣವೇ? ಆಶ್ಚರ್ಯವೆನ್ನೋಣವೇ? ಮಾಯೆ ಎನ್ನೋಣವೇ? ಇದರಂತಹದ್ದು ಬೇರೆ ವಿಚಿತ್ರವುಂಟೇ? ಯಾರ ಕೈಗೂ ಸುಲಭವಾಗಿ ನಿಲುಕದ ಪರವಸ್ತುವಾದ ಭಗವಂತನು ಗೊಲ್ಲತಿಯರ ಕೈಯಲ್ಲಿ ಕಟ್ಟಿಹಾಕಿಸಿಕೊಳ್ಳುವಷ್ಟು ಸುಲಭನಾದನೇ?

'ಜ್ಞಾನ ಮಾರ್ಗದಿಂದ ತನ್ನನ್ನು ಸೇರಲು ಕಷ್ಟವೆಂದರೆ, ಭಕ್ತಿ ಮಾರ್ಗದಿಂದ ಸುಲಭವಾಗಿ ಸೇರಬಹುದಲ್ಲ! ಭಕ್ತಿಗೆ ಕಟ್ಟುಬೀಳುವವನು ನಾನು'– ಎಂಬುದನ್ನು ಇಲ್ಲಿ ತೋರಿಸಬೇಕೆಂದೇನೋ ಈ ಬಗೆಯ ಚಿತ್ರಣ?

2. குன்றொன்று மத்தாவரவமளாவிக்
குரைமாகடலைக் கடைந்திட்டு, ஒருகால்
நின்றுண்டை கொண்டோட்டி வன் கூன் நிமிர
நினைந்த பெருமான் அதுவன்றியும் முன்
நன்றுண்ட தொல்சீர் மகரக்கடலேழ்
மலையேழுலகேழொழியாமை நம்பி,
அன்றுண்டவன் காண்மின் இன்றாய்ச்சியரால்
அளைவெண்ணெயுண்டாப்புண்டிருந்தவனே.

Garani Srinivasan

ಕುನ್ಱೊನ್ಱು ಮುಕ್ತಾ ಪರವ ಮುಳ್ಳಿ
ಕ್ಷುರ್ತ್ಯ ಮಾ ಕಡಲ್ತ್ ಕ್ಕಡೈನ್ದಿಟ್ಟು, ಒರುಕಾಲ್
ನಿನ್ಱುಯರ್ತ್ತ ಕೇಣ್ಣೋಂಟ್ಟ ವನ್ ಕೂನ್ ನಿಮಿರ
ನಿನೈನ್ದ ಪೇರುಮಾನ್ ಅದುವನ್ಱಿಯುಮ್ ಮುನ್
ನನ್ಱುಣ್ಡ ತೋಲ್ ಶೀರ್ ಮಕರಕ್ಕಡಲೇಳುಂ
ಮಲೈಯೇಳುಮುಲಕೇಳುಂ ಊಯ್ವೊಯ್ಯ ನಮ್ಬಿ,
ಅನ್ಱುಣ್ಡ ವನ್ ಕಾಣ್ಮಿನ್ ಇನ್ಱಾಯ್ಚ್ಚಿಯರಾಲ್
ಅಳ್ಳೈವೆಣ್ಣೆಯುಣ್ಡಾಪ್ಪುಣ್ಡಿರುನ್ದವನೇ.

ಕುನ್ಱು குன்று = ಬೆಟ್ಟವನ್ನು, ಒನ್ಱು ஒன்று = ಒಂದನ್ನು, ಮುಕ್ತ ಮತ್ತು ... = ಕಡಗೋಲಾಗಿ, ಅರವಮ್ அரவம் = ಸರ್ಪವನ್ನು, ಅಳ್ಳುವಿ அளாவி = ಸುತ್ತಿ. ಕುರ್ತ್ಯ ಮಾ ಕಡಲ್ತ್ குரைமா கடலை = ಅಲೆಗಳುರುಂಬಿದ (ಘೋಷಿಸುತ್ತಿರುವ) ವಿಶಾಲವಾದ ಕಡಲನ್ನು, ಕಡೈನ್ದಿಟ್ಟು கடைந்திட்டு = ಕಡೆದು, ಒರುಕಾಲ್ ஒரு காலு = ಒಂದುಕಾಲದಲ್ಲಿ, ~~ಉಡ್ತ್ತ~~ ನಿನ್ಱು நின்று = ನಿಂತು/ಇದ್ದು, ಉಣ್ಡ್ತ ಕಣ್ಣು உண்டை கொண்டு = ಉಂಡೆಯಂತೆ, ವನ್ ಕೂನ್ வன் கூன் = ಪ್ರಬಲವಾದ ಗೂನು, ನಿಮಿರ நிமிர = ನೆಟ್ಟಗೆ ನಿಲ್ಲುವಂತೆ, ಓಟ್ಟ ஓட்டி = ಹೋಗಲಾಡಿಸಿ, ಪೇರುಮಾನ್ ... ನಿನೈನ್ದ நினைந்த = ಸಂಕಲ್ಪಿಸಿದ (ಮನಸ್ಸುಮಾಡಿದ), ಪೇರುಮಾನ್ = ಭಗವಂತನು, ಅದು ಅನ್ಱಿಯುಮ್ அதுவன்றியும் = ಅದಲ್ಲದೆಯೂ, ಮುನ್ முன் = ಹಿಂದೆ ಒಂದುಕಾಲದಲ್ಲಿ, ಉಣ್ಡ ಉಂಡ = ಉಂಡಂಥ, ತೋಲ್ ಶೀರ್ தொல் சீர் = ಪುರಾತನ ಕೀರ್ತಿಯ, ಮಕರ ಮಕರ... = ಮಕರಗಳಿರುವ ಏಳು ಮಹಾ ಕಡಲ್ ಏಳು மகரம் கடல் ஏழ் = ಏಳು ಮಹಾಸಾಗರಗಳನ್ನು, ಉಲಕಲು ಗಳನ್ನು, ಮಲೈ ಏಳು மலை ஏழ் = ಏಳು ಪರ್ವತಗಳನ್ನು, ಉಲಕೇಳುಂ ಊಯ್ವೊಯ್ಯ ... ಉಲಕು ஏழ் = ಏಳು ಲೋಕಗಳನ್ನು, ನಮ್ಬಿ நம்பி = ನಿಶ್ಚಯಿಸಿ, ಅನ್ಱಾಯ್ಚ್ಚಿಯಾರಾಲ್ = ನಾಶವಾದಂತೆ, ನಮ್ಬಿ ನம்பி = ನಿಶ್ಚಯಿಸಿ, ಅನ್ಱು அன்று = ಅಂದು, ಉಣ್ಡವನ್ ಕಾಣ್ಮಿನ್ உண்டவன் காண் = ಅಂದು, ಇನ್ಱು இன்று = ಇಂದು, ಆಯ್ಚ್ಚಿಯರಾಲ್ = ಉಂಡವನು ಕಾಣಿರಿ, ಇನ್ಱು இன்று = ಇಂದು, ಅಳ್ಳೈ ವೆಣ್ಣೆಯ ಯರಾಲ್ ஆய்ச்சியரால் = ಗೊಲ್ಲತಿಯರಿಂದ, ಅಳ್ಳೈ ವೆಣ್ಣೆಯ ಉಣ್ಡು = ಮೊಸರು ಬೆಣ್ಣೆಯನ್ನುಂಡು, ಆಪ್ಪುಣ್ಡಿರುನ್ದವನೇ ஆப்புண்டு இருந்தவனே = ಕಟ್ಟಿಹಾಕಿಸಿಕೊಂಡು ಇರುವವನೇ.

ಬೆಟ್ಟವೊಂದನ್ನು ಕಡಗೋಲಾಗಿಯೂ ಸರ್ಪವನ್ನು (ಅದಕ್ಕೆ) ಸುತ್ತಿಯೂ, ಅಲೆಗಳಿಂದ ಉರುಂಬಿ ಘೋಷಿಸುವ ವಿಸ್ತಾರವಾದ ಕಡಲನ್ನು ಕಡೆದವನೂ, ಮತ್ತೊಂದು ಕಾಲದಲ್ಲಿ, ಉಂಡೆಯಂತೆ ಆಗಿರುವ ಪ್ರಬಲವಾದ ಗೂನು (ದಾಸಿಯು) ನೆಟ್ಟಗೆ ನಿಲುವಂತೆ ಅದನ್ನು ಹೋಗಲಾಡಿಸಲು ಸಂಕಲ್ಪಿಸಿದವನೂ, ಅದೂ ಅಲ್ಲದೆ, ಹಿಂದೆ ಒಂದು ಕಾಲದಲ್ಲಿ ಉಂಡಹಾಕಿದಂಥ ಪುರಾತನ ಕೀರ್ತಿಯ ಮಕರಗಳಿರುವ ಏಳು ಮಹಾ ಕಡಲುಗಳು, ಏಳು ಪರ್ವತಗಳು, ಏಳು ಲೋಕಗಳೂ ನಾಶವಾದಂತೆ ನಿಶ್ಚಯಿಸಿ,

ಅವನ್ನುಂಡವನು, ~~ಕಾಣಿರಿ~~, ಇಂದು ಏನೆಂದರು ಬೆಣ್ಣೆಯನ್ನುಂಡು ಗೊಲ್ಲತಿಯರಿಂದ ಕಟ್ಟಿ ಹಾಕಿಸಿಕೊಂಡಿರುವವನೇ, ಕಾಣಿರಿ.

ಹಿಂದಿನ ಪಾಶುರದಲ್ಲಿ ಧರ್ಮ ಮತ್ತು ನ್ಯಾಯಕ್ಕೆ ನಿಯಾಮಕನಾಗಿ, ಬೋಧಿಸುವವನಾಗಿ, ಮಾರ್ಗದರ್ಶಕನಾಗಿ, ಭಗವಂತನು ಕಳ್ಳತನದಿಂದ ಏನೆಂದರು ಬೆಣ್ಣೆಯನ್ನುಂಡು, ಸಿಕ್ಕಿಬಿದ್ದು, ಕಟ್ಟಿಸಿಕೊಳ್ಳುವುದು ಏನು ವಿಚಿತ್ರ? ಎಂಬುದನ್ನು ಹೇಳಿದರು. ಈ ಪಾಶುರದಲ್ಲಿ ಪರಮೋಪಕಾರಿಯಾಗಿರುವ ಭಗವಂತನು ಗೊಲ್ಲತಿಯರ ಕೈಗೆ ಸಿಕ್ಕಿ ಬೀಳುವುದೇ? ಎಂಬುದನ್ನು ಹೇಳುತ್ತಾರೆ.

ಇಲ್ಲಿ ಮೂರು ವಿಷಯಗಳನ್ನು ಎತ್ತಿಕೊಳ್ಳಲಾಗಿದೆ. ಮೊದಲನೆಯದು ಸಮುದ್ರಮಥನ ವಿಷಯ: ದಾನವರಿಂದ ದೇವತೆಗಳಿಗೆ ಆದ ತೊಂದರೆಯನ್ನು ತಪ್ಪಿಸುವುದಕ್ಕಾಗಿ, ಹಾಲ್ಗಡಲನ್ನು ಕಡೆದು, ಅಮೃತವನ್ನು ಪಡೆದು, ಅದನ್ನು ದೇವತೆಗಳು ಕುಡಿದು ಅಮರರಾಗಬೇಕೆಂಬ ಸಲಹೆಯನ್ನು ಮಾಡಿದವನೂ, ಅದನ್ನು ಸಾಧಿಸುವಂತೆ ಎಲ್ಲ ಬಗೆಯ ಒತ್ತಾಸೆಯನ್ನು ಕೊಟ್ಟವನೂ, ತಾನೇ ಮಹಾಕೂರ್ಮನಾಗಿ ಅವತರಿಸಿ, ಸಮುದ್ರಮಥನಕ್ಕೆ ಅನುಕೂಲ ಮಾಡಿಕೊಟ್ಟವನೂ ಆದ ಪರಮೋಪಕಾರಿ ಭಗವಂತ.

ಎರಡನೆಯದು ಕುಬ್ಜೆಯನ್ನು ಉದ್ಧರಿಸಿದ ವಿಷಯ: ಭಗವಂತನು ಶ್ರೀಕೃಷ್ಣನಾಗಿ ಅವತರಿಸಿ ಲೆಕ್ಕವಿಲ್ಲದಷ್ಟು ಆಶ್ಚರ್ಯಕರವಾದ ಕೆಲಸಗಳನ್ನು ನಡೆಸಿದನಷ್ಟೆ. ಮಥುರೆಯಲ್ಲಿ ಧನುರ್ಯಾಗಕ್ಕೆ ಬರಬೇಕೆಂದು ಕಂಸನಿಂದ ಕರೆಬಂತು. ಬಾಲಕೃಷ್ಣನೂ ಅವನ ಅಣ್ಣನಾದ ಬಲರಾಮನೂ ಹೊರಟರು. ಮಥುರೆಯ ಹೆಬ್ಬಾಗಿಲಿನಿಂದಲೇ ಅವರು ಶತ್ರುಗಳನ್ನು ಎದುರಿಸಬೇಕಾಯಿತು. ಅವುಗಳನ್ನು ಒಂದೊಂದಾಗಿ ಜಯಿಸುತ್ತಾ ಅರಮನೆಗೆ ಹೋಗುವ ದಾರಿಯಲ್ಲಿ ಉಂಡೆಯಂತೆ ಗೂನುಬ್ಬಿರುವ ಕುಬ್ಜೆಯೊಬ್ಬಳು ಅರಮನೆಗೆ ಕಂಸನಿಗೋಸ್ಕರ ಪರಿಮಳಗಂಧವನ್ನು ಕೊಂಡೊಯ್ಯುತ್ತಿದ್ದದ್ದನ್ನು ಕಂಡರು. ತಮಗೆ ಪೂಸುವುದಕ್ಕೆ ಆ ಗಂಧವನ್ನು ಕೊಡೆಂದು ಅವಳನ್ನು ಕೇಳಿದರು. ಅವಳು ಸಂತೋಷದಿಂದ ಗಂಧದ ಬಟ್ಟಲನ್ನು ಮುಂದಕ್ಕೆ ಚಾಚಿದಳು. ಅವಳ ಈ ಸೌಜನ್ಯಕ್ಕೆ ಪ್ರತಿಯಾಗಿ ಶ್ರೀಕೃಷ್ಣನು ಉಪಕಾರ ಮಾಡಲು ಸಂಕಲ್ಪಿಸಿ, ಅವಳ ಗಲ್ಲವನ್ನು ಹಿಡಿದು ಮೇಲಕ್ಕೆ ಎತ್ತಿದನು. ಆ ಕ್ಷಣದಲ್ಲೇ ಅವಳು ಸುಂದರಿಯಾದಳು. ಭಗವಂತನ ಔದಾರ್ಯವನ್ನು ಕಂಡಿರಾ!

ಮೂರನೆಯದು ಭಗವಂತನ ಪ್ರಳಯ ಲೀಲೆಯ ವಿಷಯ: ಪ್ರಳಯಕಾಲದಲ್ಲಿ ಸಪ್ತ ಸಾಗರಗಳನ್ನು, ಸಪ್ತ ಕುಲಪರ್ವತಗಳನ್ನು, ಸಪ್ತ ಲೋಕಗಳನ್ನು ಒಟ್ಟಿಗೆ ಕಬಳಿಸಿಬಿಟ್ಟ ಭಗವಂತನು ಅವುಗಳ ಯಾವುವೂ ನಾಶವಾಗದಂತೆ, ಎಲ್ಲವನ್ನೂ ತನ್ನ ಹೊಟ್ಟೆಯಲ್ಲಿಟ್ಟುಕೊಂಡು ಸಂರಕ್ಷಿಸಿದನು. ಭಗವಂತ ಎಂಥ ಪರೋಪಕಾರಿ!

ಆಳ್ವಾರರು ಹೇಳುತ್ತಾರೆ: ಹಾಲ್ಗಡಲನ್ನು ಕಡೆದು, ಅಮೃತವನ್ನು

ಪಡೆಯುವುದಕ್ಕೆ ಅನುಕೂಲಮಾಡಿಕೊಟ್ಟವನೂ, ಉಂಡೆಯಂತಿರುವ ಕುಬ್ಜೆಯ ಗೂನನ್ನು ನಿವಾರಿಸಿದವನೂ, ಪ್ರಳಯದಿಂದ ಇಡೀ ಸೃಷ್ಟಿಯೇ ನಾಶವಾದಂತೆ ಅದೆಲ್ಲವನ್ನು ತನ್ನ ಹೊಟ್ಟೆಯಲ್ಲಿಟ್ಟುಕೊಂಡು ರಕ್ಷಿಸಿದವನೂ ಆದ ಭಗವಂತನು ಗೊಲ್ಲತಿಯರ ಮನೆಗಳಲ್ಲಿ ಮೊಸರು ಬೆಣ್ಣೆಯನ್ನುಂಡು, ಅವರ ಕೈಗೆ ಸಿಕ್ಕಿಬಿದ್ದು, ಹಗ್ಗದಿಂದ ಕಟ್ಟಿಸಿಕೊಂಡು ಅತ್ತುಕೊಂಡರೆ ಬಿಡುವುದು ಏನು ಮಾಯೆಯೋ!

3. உளைந்திட்டெழுந்த மதுகைடவர்கள்
உலப்பில்வலியாலவர்பால், வயிரம்
விளைந்திட்டதென்றெண்ணி விண்ணோர் பரவ
அவர்நாளொழித்த பெருமான் முனநாள்,
வளைந்திட்ட வில்லாளி வல்வாளெயிற்று
மலைபோலவுணனுடல் வள்ளுகிரால்,
அளைந்திட்டவன் காண்மினின்றாய்ச்சியரால்
அளைவெண்ணெயுண்டாப்புண்டிருந்தவனே.

ಉಳೈನ್ದಿಟ್ಟೆಳುನ್ದ ಮದುಕೈಟವರ್ಗಳ್
ಉಲಪ್ಪಿಲ್ ವಲಿಯಾಲವರ್ಪಾಲ್, ವಯಿರಮ್
ವಿಳೈನ್ದಿಟ್ಟದೆನ್ರೆಣ್ಣಿ ವಿಣ್ಣೋರ್ ಪರವ
ಅವರ್ ನಾಳೊಳಿತ್ತ ಪೆರುಮಾನ್ ಮುನನಾಳ್,
ವಳೈನ್ದಿಟ್ಟ ವಿಲ್ಲಾಳಿ ವಲ್ವಾಳೆಯಿಱ್ಱು
ಮಲೈಪೋಲವುಣನುಡಲ್ ವಳ್ಳುಗಿರಾಲ್,
ಅಳೈನ್ದಿಟ್ಟವನ್ ಕಾಣ್ಮಿನಿನ್ರಾಯ್ಚ್ಚಿಯರಾಲ್
ಅಳೈವೆಣ್ಣೆಯುಣ್ಡಾಪ್ಪುಣ್ಡಿರುನ್ದವನೇ.

ಉಳೈನ್ದಿಟ್ಟು உளைந்திட்டு = ಸಿಟ್ಟಿನಿಂದ ಅಬ್ಬರಿಸಿ, ಎಳುನ್ದ எழுந்த = ಮೇಲೆದ್ದ, ಮದುಕೈಟವರ್ಗಳ್ மதுகைடவர்கள் = ಮಧುಕೈಟಭರು, ಉಲಪ್ಪು ಇಲ್ உலப்பு இல் = ಮಿತಿಯಿಲ್ಲದ, ವಲಿಯಾಲ್ வலியால் = ಶಕ್ತಿಯಿಂದ, ಅವರ್ಪಾಲ್ அவர்பால் = ಅವರೊಡನೆ, ವಯಿರಮ್ வயிரம் = ವೈರವು, ವಿಳೈನ್ದಿಟ್ಟದು ಎನ್ರು விளைந்திட்டதுஎன்று = ಬೆಳೆದುಬಿಟ್ಟಿತು ಎಂದು, ಎಣ್ಣಿ எண்ணி = ಭಾವಿಸಿ, ವಿಣ್ಣೋರ್ விண்ணோர் = ದೇವತೆಗಳು, ಪರವ பரவ = ಪ್ರಾರ್ಥಿಸಲು, ಅವರ್ அவர் = ಅವರ (ಆ ರಾಕ್ಷಸರ), ನಾಳ್ நாள் = ಆಯುಸ್ಸನ್ನು, ಒಳಿತ್ತ ஒழித்த = ನಾಶಮಾಡಿದ, ಪೆರುಮಾನ್ பெருமான் = ಭಗವಂತನು, ಮುನನಾಳ್ முனநாள் = ಹಿಂದೆ ಒಂದು ದಿನ, ವಳೈನ್ದಿಟ್ಟ வளைந்திட்ட = ಬಗ್ಗಿಸಿಟ್ಟ (ಸಿದ್ಧವಾಗಿಟ್ಟುಕೊಂಡಿರುವ), ವಿಲ್ಲಾಳಿ வில்லாளி = ಬಿಲ್ಲುಗಾರನೂ, ವಲ್ வல் = ~~ಬಲ~~ ಬಲವಾದ, ವಾಳ್ வாள் = ಕತ್ತಿಯಂತಿರುವ

Galani Srinivasan

(ಹರಿತವಾದ), ಎಯಿಱ್ಱು எயிற்று = ಹಲ್ಲುಗಳುಳ್ಳವನೂ, ಮಲೈಪೋಲ್ மலை போல் = ಬೆಟ್ಟದಂಥವನೂ, ಆದ, ಅವ್ವುಣನ್ அவுணன் = ಹಿರಣ್ಯಕಶಿಪುವಿನ, ಉಡಲ್ உடல் = ಒಡಲನ್ನು, ವಳ್ ಉಗಿರಾಲ್ வள் உகிரால் = ಹರಿತವಾದ ಉಗುರಿನಿಂದ, ಅಳ್ಳನ್ದಿಟ್ಟವನ್ அளந்திட்டவன் = ಇಬ್ಭಾಗ ಮಾಡಿದವನು (ಎರಡಾಗಿ ಸೀಳಿದವನು), ಕಾಣ್ಮಿನ್ காண்மின் = ನೋಡಿರಿ. ಇನ್ನು இன்று = ಇಂದು, ಅಳೈ ವೆಣ್ಣೈಯ್ ಉಣ್ಡು அளை வெண்ணெய் உண்டு = ಮೊಸರು ಬೆಣ್ಣೆಯನ್ನುಂಡು, ಆಯ್ಚ್ಚಿಯರಾಲ್ ஆய்ச்சியரால் = ಗೊಲ್ಲತಿಯಿಂದ, ಆಪ್ಪುಣ್ಡಿರುನ್ದವನೇ ஆப்புண்டிருந்தவனே = ಕಟ್ಟಿ ಹಾಕಿಸಿಕೊಂಡವನೇ.

ಮಧುಕೈಟಭರು ಮಿತಿಯಿಲ್ಲದ ಶಕ್ತಿಯಿಂದ ಪುಷ್ಟಿಯಾಗಿ ಅಬ್ಬರಿಸುತ್ತಾ ಮೇಲೆದ್ದಾಗ, ಅವರೊಡನೆ ವೈರವು ಬೆಳೆದು ಬಿಟ್ಟಿತು ಎಂದು ಭಾವಿಸಿ, (ಹೆದರಿ), ದೇವತೆಗಳು ಪ್ರಾರ್ಥಿಸಲು, ಆ ರಾಕ್ಷಸರ ಆಯುಸ್ಸನ್ನು ಮುಗಿಸಿದ (ನಾಶಮಾಡಿದ) ಭಗವಂತನು, ಮತ್ತೊಂದು ಸಲ, ಸಿದ್ಧವಾಗಿ ಬಗ್ಗಿಸಿಟ್ಟುಕೊಂಡಿರುವ ಬಿಲ್ಲುಗಾರನೂ, ಕತ್ತಿಯಂತೆ ಹರಿತವಾಗಿರುವ ಹಲ್ಲುಗಳುಳ್ಳವನೂ, ಬೆಟ್ಟದಂಥವನೂ, ಆದ, ಹಿರಣ್ಯಕಶಿಪುವಿನ ಒಡಲನ್ನು ಹರಿತವಾದ ಉಗುರಿನಿಂದಲೇ ಎರಡಾಗಿ ಸೀಳಿದವನು, ಇಂದು ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯಿಂದ ಕಟ್ಟಿ ಹಾಕಿಸಿಕೊಂಡವನೇ (3)
ನೋಡಿರಿ.

ಈ ಪಾಶುರದಲ್ಲಿ ಭಗವಂತನ ಅಪ್ರತಿಮ ಬಲ ಮತ್ತು ಸಾಟಿಯಿಲ್ಲದ ಕನಿಕರಗಳನ್ನು ಕುರಿತು ಎರಡು ನಿದರ್ಶನಗಳನ್ನು ಕೊಡಲಾಗಿದೆ.

ಮಧು, ಕೈಟಭ ಎಂಬ ಇಬ್ಬರು ರಾಕ್ಷಸರು ತಮ್ಮ ತಪಃಪ್ರಭಾವದಿಂದ ಮಿತಿಯಿಲ್ಲದ ಶಕ್ತಿಯನ್ನು ಪಡೆದುಕೊಂಡು, ಯಾರನ್ನೂ ಲಕ್ಷಿಸದೆ, ಚತುರ್ಮುಖನಿಂದ ವೇದಗಳನ್ನು ಅಪಹರಿಸಿಕೊಂಡು ಹೋಗಿ ಸಮುದ್ರದಲ್ಲಿ ಎಲ್ಲಿಯೋ ಬಚ್ಚಿಟ್ಟುಕೊಂಡರು. ಅಬ್ಬರಿಸುತ್ತಾ ಅವರು ಮೇಲೆದ್ದಾಗ, ಅವರು ತಮ್ಮ ಮೇಲೆ ಯುದ್ಧ ಹೂಡುವರೆಂದೂ, ತಮಗೆ ಸಲ್ಲದ ಕಷ್ಟವನ್ನುಂಟು ಮಾಡುವರೆಂದೂ ನಡುನಡುಗಿದರು. ಕ್ಷೀರಸಾಗರಶಾಯಿಯಾದ ಭಗವಂತನನ್ನು ಅಂಗಲಾಚಿದರು. ಭಗವಂತನು ಅವರಲ್ಲಿ ಕನಿಕರಗೊಂಡು ಹಯಗ್ರೀವನಾಗಿ ಅವತರಿಸಿ, ಅವರನ್ನು ಸದೆಬಡಿದು, ವೇದಗಳನ್ನು ಚತುರ್ಮುಖನಿಗೆ ಮತ್ತೆ ಒದಗಿಸಿ, ದೇವತೆಗಳನ್ನು ರಕ್ಷಿಸಿದನು.

ಮತ್ತೊಂದು ಸಲ, ಹಿರಣ್ಯಕಶಿಪುವೆಂಬ ಮಹಾಬಲಿಷ್ಠನಾದ ದುಷ್ಟ ರಾಕ್ಷಸನನ್ನು, ನರಸಿಂಹರೂಪಿಯಾ ಭಗವಂತನು ಅವತರಿಸಿ, ತನ್ನ ಹರಿತವಾದ ಕೈಉಗುರುಗಳಿಂದಲೇ ಸೀಳಿಕೊಂದು, ಅವನಿಂದ ಚಿತ್ರಹಿಂಸೆಗೆ ಒಳಗಾಗಿದ್ದ ಮಹಾಭಕ್ತನಾದ ಬಾಲಕ ಪ್ರಹ್ಲಾದನನ್ನು ಅನುಗ್ರಹಿಸಿದನು.

ಆಳ್ವಾರರು ಹೇಳುತ್ತಾರೆ: ಅಪ್ರತಿಮ ಪರಾಕ್ರಮಿಯೂ ದುಷ್ಟ

ದಮನನೂ, ಶಿಷ್ಟರಕ್ಷಕನೂ ಆದ ಭಗವಂತನು ಈಗ ಕಳ್ಳತನದಿಂದ ನೊಂದರು ಬೆಣ್ಣೆಯನ್ನುಂಡು, ಗೊಲ್ಲತಿಯರಿಂದ ಕಟ್ಟಿ ಹಾಕಿಸಿಕೊಳ್ಳುವುದು ಏನು ವಿಚಿತ್ರ ಮಾಯೆಯೋ, ಕಾಣಿ.

4. தளர்ந்திட்டிமையோர் சரண் தாவெனத்தான்
சரணாய் முரணாயவனை, உகிரால்
பிளந்திட்டமரர்க்கருள் செய்துகந்த
பெருமான் திருமால் விரிநீருலகை,
வளர்ந்திட்ட தொல் சீர் விறல் மாவலியை
மண் கொள்ள வஞ்சித்தொருமாண் குறளாய்,
அளந்திட்டவன் காண்மினின்றாய்ச்சியரால்
அளை வெண்ணெயுண்டாப்புண்டிருந்தவனே.

ತಳರ್ನ್ದಿಟ್ಟಿಮೈಯೋರ್ ಶರಣ್ ತಾವೆನತ್ತಾನ್
ಶರಣಾಯ್ ಮುರಣಾಯವನ್ನೈ, ಉಗಿರಾಲ್
ಪಿಳನ್ದಿಟ್ಟಮರರ್ಕ್ಕರುಳ್ ಶೆಯ್ದುಗನ್ದ
ಪೆರುಮಾನ್ ತಿರುಮಾಲ್ ವಿರಿನೀರುಲಗೈ,
ವಳರ್ನ್ದಿಟ್ಟ ತೊಲ್ ಶೀರ್ ವಿಱಲ್ ಮಾವಲಿಯೈ
ಮಣ್ ಕೊಳ್ಳ ವಞ್ಜಿತ್ತೊರು ಮಾಣ್ ಕುಱಳಾಯ್,
ಅಳನ್ದಿಟ್ಟವನ್ ಕಾಣ್ಮಿನಿನ್ಱಾಯ್ಚ್ಚಿಯರಾಲ್
ಅಳೈವೆಣ್ಣೆಯುಣ್ಡಾಪ್ಪುಣ್ಡಿರುನ್ದವನೇ.

ತಳರ್ನ್ದಿಟ್ಟು தளர்ந்திட்டு = ಭಯಪಟ್ಟು ನಡುಗುತ್ತಾ, ಇಮೈಯೋರ್ இமையோர் = ದೇವತೆಗಳು, ಶರಣ್ ತಾ ಎನ சரண் தாஎன = ಕಾಪಾಡು ಎನ್ನಲು (ರಕ್ಷಣೆಯನ್ನು ಕೊಡು ಎನ್ನಲು), ತಾನ್ தான் = ಸ್ವಾಮಿಯು, ಶರಣಾಯ್ சரண் ஆய் = ರಕ್ಷಕನಾಗಿ, ಮುರಣಾಯ முரண் ஆய = ವಿರೋಧಿಯಾದ, ಅವನ್ನೈ அவனை = ಹಿರಣ್ಯಕಶಿಪುವನ್ನು, ಉಗಿರಾಲ್ உகிரால் = ಉಗುರಿನಿಂದ, ಪಿಳನ್ದಿಟ್ಟು பிளந்திட்டு = ಸೀಳಿ ಹಾಕಿ, ಅಮರರ್ಕ್ಕು அமரர்க்கு = ದೇವತೆಗಳಿಗೆ, ಅರುಳ್ ಶೆಯ್ದು அருள் செய்து = ಕೃಪೆಮಾಡಿ, ಉಗನ್ದ உகந்த = ಹರ್ಷಿಸಿದ, ಪೆರುಮಾನ್ பெருமான் = ಭಗವಂತನು, ತಿರುಮಾಲ್ திருமால் = ಶ್ರೀಪತಿಯು, ವಿರಿನೀರ್ ಉಲಗೈ விரிநீர் உலகை = (ವಿಸ್ತಾರವಾದ ನೀರಿನಿಂದ) ಕಡಲಿನಿಂದ ಸುತ್ತುವರಿದ ಭೂಮಿಯನ್ನು, ವಳರ್ನ್ದಿಟ್ಟ வளர்ந்திட்ட = ಬೆಳೆದು ಬಂದ, ತೊಲ್ ಶೀರ್ தொல் சீர் = ಪ್ರಾಚೀನ ಕೀರ್ತಿಯ, ವಿಱಲ್ விறல் = ಬಲಿಷ್ಠನಾದ, (ಹಠಮಯವನಾದ), ಮಾವಲಿಯೈ மாவலியை = ಮಹಾಬಲಿಯನ್ನು, ಮಣ್ ಕೊಳ್ಳ மண் கொள்ள =

ನೆಲವನ್ನು ಪಡೆಯುವುದರಲ್ಲಿ, ವಂಜಿತ್ತು வஞ்சித்து = ವಂಚಿಸಲು, ಒರು ಮಾಣ್ ಕುಱಳ್ ಆಯ್ ஒரு மாண் குறள் ஆய் = ಒಬ್ಬ ವಾಮನ ಬ್ರಹ್ಮಚಾರಿಯಾಗಿ, ಅಳನ್ದಿಟ್ಟವನ್ அளந்திட்டவன் = ಅಳೆದುಕೊಂಡವನು, ಕಾಣ್ಮಿನ್ காண்மின் = ಕಾಣಿರಿ, ಇನ್ರು இன்று = ಇಂದು, ಅಳೈವೆಣ್ಣೆಯ್ ಉಣ್ಡು அளைவெண்ணெய் உண்டு = ಮೊಸರು ಬೆಣ್ಣೆಯನ್ನುಂಡು, ಆಯ್ಚ್ಚಿಯರಾಲ್ ஆய்ச்சியரால் = ಗೊಲ್ಲತಿಯರಿಂದ, ಆಪ್ಪುಣ್ಡು ಇರುನ್ದವನೇ ஆப்புண்டு இருந்தவனே = ಕಟ್ಟಿಹಾಕಿಸಿಕೊಂಡು ಇರುವವನೇ.

ಭಯಪಟ್ಟು ನಡುಗುತ್ತಾ, ದೇವತೆಗಳು, 'ನಮಗೆ ರಕ್ಷಣೆ ಕೊಡು' ಎನ್ನಲು, ತಾನು ರಕ್ಷಕನಾಗಿ ಪರಾಕ್ರಮಿಯಾದ ದರ್ಪಿಷ್ಠ ಹಿರಣ್ಯಕಶಿಪುವನ್ನು ಉಗುರಿನಿಂದಲೇ ಸೀಳಿಹಾಕಿ ದೇವತೆಗಳಿಗೆ ಕೃಪೆ ಮಾಡಿದ ಭಗವಂತನು, ಶ್ರೀಯಃಪತಿಯು, ಬೆಳೆಸಿಕೊಂಡು ಬಂದ ಪ್ರಾಚೀನ ಕೀರ್ತಿಯ ಹಿರಿಮೆಯುಳ್ಳ ಮಹಾಬಲಿಯನ್ನು ನೆಲವನ್ನು ಪಡೆಯುವುದರಲ್ಲಿ ವಂಚಿಸಲು ಒಬ್ಬ ವಾಮನ ವಟುವಾಗಿ ವಿಸ್ತಾರವಾದ ನೀರಿನಿಂದ (ಕಡಲಿನಿಂದ) ಸುತ್ತುವರಿದಿರುವ ಭೂಮಿಯನ್ನು ಅಳೆದುಕೊಂಡವನು ಇಂದು ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯರಿಂದ ಕಟ್ಟಿಹಾಕಿಸಿಕೊಂಡವನೇ ಕಾಣಿರಿ. (4)

ಈ ಪಾಶುರದಲ್ಲಿ ಭಗವಂತನ ಎರಡು ಅವತಾರಗಳನ್ನು ಕೀರ್ತಿಸಲಾಗಿದೆ. ಮೊದಲನೆಯದು ನರಸಿಂಹಾವತಾರ. ಮಹಾಬಲಿಷ್ಠನೂ ಕಡುದುಷ್ಟನೂ ಆದ ಹಿರಣ್ಯಕಶಿಪುವಿನ ಸಂಹಾರಕ್ಕಾಗಿ ಅದು. ಅಂಥವನನ್ನು ಭಗವಂತನು ತನ್ನ ಕೈ ಉಗುರುಗಳಿಂದಲೇ ಸೀಳಿ ಕೊಂದು ಹಾಕುವುದು ಸ್ವಾಮಿಯ ಸಾಮರ್ಥ್ಯದ ಹಿರಿಮೆಯನ್ನು ತೋರಿಸುವುದು.

ಅವತಾರದ ಹಿರಿಮೆಯ ವೈಶಿಷ್ಟ್ಯವನ್ನು ಸ್ವಾಮಿಯ ಮತ್ತೊಂದು ಅವತಾರವು ತಿಳಿಸುತ್ತದೆ. ಬಲಿ ಚಕ್ರವರ್ತಿಯ ಕೀರ್ತಿ ಅವನ ತಾತನೂ ಪರಮಭಕ್ತನೂ ಆದ ಪ್ರಹ್ಲಾದನ ಕಾಲದಿಂದಲೂ ಬೆಳೆದು ಬಂದದ್ದು. ಅದನ್ನು ಅವನು ತನ್ನ ಕೊಡುಗೈಯಿಂದ ಇನ್ನಷ್ಟು ಬೆಳೆಸಿ ಬಹಳ ಕೀರ್ತಿವಂತನಾಗಿದ್ದನು. ಆ ಕೀರ್ತಿಗೆ ತಕ್ಕ ರೀತಿಯಲ್ಲಿ ಮನ್ನಣೆ ಮಾಡಬೇಕೆಂದೂ, ಅವನನ್ನು ಅನುಗ್ರಹಿಸಬೇಕೆಂದೂ ಸಂಕಲ್ಪಿಸಿ ಭಗವಂತನು ವಾಮನ ವಟುವಿನ ರೂಪದಲ್ಲಿ ಅವನ ಯಾಗಶಾಲೆಯನ್ನು ಪ್ರವೇಶಿಸಿ, ತನ್ನ ಹೆಜ್ಜೆಯಲ್ಲಿ ಮೂರು ಹೆಜ್ಜೆ ನೆಲವನ್ನು ಬೇಡಿ, ಬಲಿಯಿಂದ ಅದನ್ನು ಪಡೆದು ಕೂಡಲೇ ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದೇ ಹೆಜ್ಜೆಯಿಂದ ಇಡೀ ಭೂಮಂಡಲವನ್ನು ಅಳೆದುಕೊಂಡನಷ್ಟೆ!

ಆಳ್ವಾರರು ಹೇಳುತ್ತಾರೆ: 'ನಮಗೆ ಬಹಳ ಅಂಜಿಕೆ. ನಮಗೆ ರಕ್ಷಣೆ ಕೊಡು' ಎಂದು ಬೇಡಿಕೊಂಡ ದೇವತೆಗಳಿಗೆ ರಕ್ಷಕನಾಗಿ ನಿಂತು, ತನ್ನ ಕೈ ಉಗುರುಗಳಿಂದಲೇ ದುಷ್ಟ ಹಿರಣ್ಯಕಶಿಪುವನ್ನು ಸಂಹರಿಸಿದ ಸಮರ್ಥನೂ, ಕೀರ್ತಿಯ ಶಿಖರವನ್ನು ನಿಲುಕಿದ್ದ ಬಲಿಚಕ್ರವರ್ತಿಯನ್ನು ವಾಮನ ವಟುವಾಗಿ ಬಂದು, ವಂಚಿಸಿ, ತ್ರಿವಿಕ್ರಮನಾಗಿ ಭೂಮಂಡಲವನ್ನೇ ತನ್ನ ಒಂದು ಹೆಜ್ಜೆಯಿಂದ ಅಳೆದುಕೊಂಡ ಸಮರ್ಥನೂ, ಈಗ, ಕಳ್ಳತನದಿಂದ ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯರ ಕೈಯಿಂದ ಕಟ್ಟಿಸಿಕೊಳ್ಳುವುದೇ?

Garani Srinivasan

ಇದೇನು ಭಗವಂತನ ಮಾಯೆ ?

5. நீண்டான் குறளாய் நெடுவானளவும்
அடியார் படுமாழ் துயராயவெல்லாம்,
தீண்டாமை நினைந்திமையோரளவும்
செலவைத்தபிரான் அதுவன்றியும்முன்,
வேண்டாமைநமன்தமரை
வினவப்பெறுவாரலரென்று, உலகேழ்
ஆண்டானவன் காண்மினின்றாய்ச்சியரால்
அளைவெண்ணெயுண்டாப்புண்டிருந்தவனே

ನೀಣ್ಡಾನ್ ಕುಱಳಾಯ್ ನೆಡುವಾನಳವುಮ್
ಅಡಿಯಾರ್ ಪಡುಮಾೞ್ ತುಯರಾಯವೆಲ್ಲಾಮ್,
ತೀಣ್ಡಾಮೈ ನಿನೈನ್ದಿಮೈಯೋರಳವುಮ್
ಶೆಲವೈತ್ತ ಪಿರಾನ್ ಅದುವನ್ಱಿಯುಮ್ ಮುನ್,
ವೇಣ್ಡಾಮೈ ನಮನ್ ತಮರೈ
ವಿನವಪ್ಪೆಱುವಾರಲರೆನ್ಱು, ಉಲಗೇೞ್
ಆಣ್ಡಾನವನ್ ಕಾಣ್ಮಿನಿನ್ಱಾಯ್ಚ್ಚಿಯರಾಲ್
ಅಳೈವೆಣ್ಣೆಯುಣ್ಡಾಪ್ಪುಣ್ಡಿರುನ್ದವನೇ.

ನೀಣ್ಡಾನ್ நீண்டான் = ಎತ್ತರವಾಗಿ ಬೆಳೆದನು, ಕುಱಳ್ ಆಯ್ குறள் ஆய் = ವಾಮನನಾಗಿದ್ದವನು, ನೆಡು நெடு = ಬಹಳ ಎತ್ತರದ, ವಾನ್ ಅಳವುಮ್ வான் அளவும் = ಆಕಾಶ(ದೇವಲೋಕ)ದ ವರೆಗೂ, ಅಡಿಯಾರ್ அடியார் = ಭಕ್ತರು, ಪಡುಮ್ படும் = ಅನುಭವಿಸುವ, ಆೞ್ ஆழ் = ಗಾಢವಾದ (ಆಳವಾದ), ತುಯರ್ ಆಯ ಎಲ್ಲಾಮ್ துயர் ஆய எல்லாம் = ಸಂಕಟಗಳೆಲ್ಲವೂ, ತೀಣ್ಡಾಮೈ தீண்டாமை = ಬಾಧಿಸದಂತೆ, ನಿನೈನ್ದು நினைந்து = ಸಂಕಲ್ಪಿಸಿ, ಇಮೈಯೋರ್ ಅಳವುಮ್ இமையோர் அளவும் = ನಿತ್ಯಸೂರಿಗಳವರೆಗೂ, ಶೆಲ செல = ಹೋಗುವಂತೆ, ವೈತ್ತ வைத்த = ತನ್ನ ಪಾದವನ್ನು ಚಾಚಿದನು, ಪಿರಾನ್ பிரான் = ಭಗವಂತನು, ಅದು ಅನ್ಱಿಯುಮ್ அது அன்றியும் = ಅದಲ್ಲದೆಯೂ, ಮುನ್ முன் = ಹಿಂದೆ ಒಂದು ಕಾಲದಲ್ಲಿ, ವೇಣ್ಡಾಮೈ வேண்டாமை = ಬೇಕೆನ್ನದೆಯೇ, ನಮನ್ ತಮರ್ நமன் தமர் = ಯಮಭಟರು, ವಿನವ வினவ = ಕೇಳುವ ಮಾತನ್ನು, ಪೆಱುವರ್ ಅಲರ್ பெறுவர் அலர் = ಕೇಳುವವರಲ್ಲ, ಎನ್ಱು என்று = ಎಂದು, ಉಲಗು ಏೞ್ உலகு ஏழ் = ಏಳು ಲೋಕಗಳನ್ನೂ, ಆಣ್ಡಾನ್

ಅವನ್ ஆண்டான் அவன் = ರಕ್ಷಿಸಿದನು ಅವನು, ಕಾಣ್ಮಿನ್ காண்மின் = ಕಾಣಿರಿ, ಇನ್ಱು இன்று = ಇಂದು, ಅಳ್ಳಿವೆಣ್ಣೆಯ್ ಉಣ್ಡು அள்ளி வெண்ணெய் உண்டு = ಮೊಸರು ಬೆಣ್ಣೆಯನ್ನುಂಡು, ಆಯ್ಚ್ಚಿಯರಾಲ್ ஆய்ச்சியரால் = ಗೊಲ್ಲತಿಯರಿಂದ, ಆಪ್ಪುಣ್ಡು ಇರುನ್ದವನೇ ஆப்புண்டு இருந்தவனே = ಕಟ್ಟಿ ಹಾಕಿಸಿಕೊಂಡು ಇರುವವನೇ.

ವಾಮನನಾಗಿದ್ದವನು ಎತ್ತರವಾಗಿ ~~ಬೆಳೆದನು~~. ಆಕಾಶದವರೆಗೂ ಬೆಳೆದನು. ಭಕ್ತರು ಅನುಭವಿಸುವ ಗಾಢವಾದ ದುಃಖ ಸಂಕಟಗಳೆಲ್ಲವೂ (ಅವರನ್ನು) ಬಾಧಿಸದಂತೆ ಸಂಕಲ್ಪಿಸಿ, ನಿತ್ಯಸೂರಿಗಳವರೆಗೂ ಹೋಗುವಂತೆ ತನ್ನ ಪಾದವನ್ನು ಚಾಚಿದನು, ~~ಭಗ~~ ಭಗವಂತ. ಅದಲ್ಲದೆಯೂ, ಒಂದೆ ಒಂದು ಕಾಲದಲ್ಲಿ, ಬೇರೆ ಸನ್ನಿಧಿಯ ಯಮಭಟರು ಹೇಳುವ ಮಾತನ್ನು ಕೇಳುವವರಲ್ಲ ಎಂದು ಎಲ್ಲ ಲೋಕಗಳನ್ನು ಅವನು ರಕ್ಷಿಸಿದನು. ~~ಇಂದು~~ ಇಂದು ಅವನು ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯರಿಂದ ಕಟ್ಟಿ ಹಾಕಿಸಿಕೊಂಡು ಇದ್ದಾನೆ ಕಾಣಿರಿ! (5)

ಭಗವಂತನು ವಾಮನನಾಗಿ ಬಂದು ತ್ರಿವಿಕ್ರಮನಾಗಿ ಬೆಳೆದುದಕ್ಕೆ ಬಲಿ ಚಕ್ರವರ್ತಿಯನ್ನು ಪ್ರತ್ಯಕ್ಷವಾಗಿ ಅನುಗ್ರಹಿಸುವುದಕ್ಕೆ ಎಂಬ ಕಾರಣವನ್ನು ಕೊಡುವುದು ವಾಡಿಕೆ. ಈ ವಿಚಾರದಲ್ಲಿ ಅದಕ್ಕೆ ಹೊರತಾಗಿಯೂ ಸ್ವಾರಸ್ಯವಾದ ವಿವರಣೆಯಿದೆ. ತ್ರಿವಿಕ್ರಮನಾಗಿ ಭಗವಂತನು ತನ್ನ ಒಂದು ಪಾದದಿಂದ ಭೂಮಂಡಲವನ್ನೆಲ್ಲಾ ~~[illegible]~~ ಆವರಿಸಿ ಬಿಟ್ಟನಷ್ಟೆ. ಅದರಿಂದ, ಭಕ್ತರು ಭೂಲೋಕದಲ್ಲಿ ಆ ಪವಿತ್ರ ಪಾದವನ್ನು ಆಶ್ರಯಿಸಲು ಅನುಕೂಲವಾಯಿತು. ಅಷ್ಟರಿಂದಲೇ ಭಗವಂತನಿಗೆ ತೃಪ್ತಿಯಾಗಲಿಲ್ಲ. ~~[illegible]~~ ತನ್ನ ಭಕ್ತರಿಗೆ ಯಾರ ಭಯವೂ ಇಲ್ಲದಂತೆ, ಅವರು ನೇರವಾಗಿ ಪರಮಪದವನ್ನು ಸೇರುವಂತಾಗಲಿ ಎಂದು ಆ ಪಾದವನ್ನು ಪರಮಪದದವರೆಗೆ (ನಿತ್ಯಸೂರಿಗಳವರೆಗೆ) ಚಾಚಿಬಿಟ್ಟನಂತೆ! ಎಷ್ಟು ಸುಂದರವಾದ ವಿವರಣೆ! ಆಶ್ರಿತರಿಗೆ ಶಾಶ್ವತಾನಂದವನ್ನು ಕೊಡುವ ಉಪಕಾರಿಯೂ ಅನುಕೂಲಿಯೂ ಅಲ್ಲವೇ ಸ್ವಾಮಿ?

ಯಮಭಟರಿಗೆ ~~[illegible]~~ ಯಾರ ಅಂಜಿಕೆಯೂ ಇಲ್ಲ, ಯಾರ ಭಯವೂ ಇಲ್ಲ. ಭೂಲೋಕದ ಜೀವಿಗಳನ್ನು ಯಮಲೋಕಕ್ಕೆ ಎಳೆದೊಯ್ಯುವುದು ~~[illegible]~~. ಅವರ ಕೆಲಸ. ಭಗವಂತನನ್ನು ಆಶ್ರಯಿಸಿದವರ ಬಳಿಗೆ ಮಾತ್ರ ಅವರು ಸುಳಿಯುವವರಲ್ಲ. ಅದು ಭಗವಂತನ ಆಜ್ಞೆ. ಆದ್ದರಿಂದ, ಭಗವತ್ಕೃಪೆಗೆ ಪಾತ್ರರಾದ ಭಕ್ತರು, ಯಮಬಾಧೆಗೆ ಒಳಪಡದಂತೆ, ಪರಮಪದವಾಸಿಗಳೇ ಆಗುತ್ತಾರೆ.

ಆಳ್ವಾರರು ಹೇಳುತ್ತಾರೆ: ಭಗವಂತನು ವಾಮನ-ತ್ರಿವಿಕ್ರಮನಾಗಿ, ತನ್ನನ್ನು ಆಶ್ರಯಿಸಿದ ಭಕ್ತರ ಉದ್ಧಾರಕ್ಕಾಗಿ ಅವರ ಇಹ-ಪರ

ಜೀವನ ಮಾರ್ಗವನ್ನು ಬದಲಿಸಿಕೊಳ್ಳ ಬರವೀ ವಿಶಾಲಯಾದವನು ಕೂಡ ಕಳ್ಳತನದಿಂದ ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯರಿಂದ ಕಟ್ಟಿಹಾಕಿಸಿಕೊಳ್ಳುವುದು ಅದಾವ ಮಾಯೆಯೋ?

6. பழித்திட்ட வின்பப்பயன் பற்றறுத்துப்
பணிந்தேத்தவல்லார் துயராயவெல்லாம்,
ஒழித்திட்டவரைத்தனக்காக்கவல்ல
பெருமான் திருமாலதுவன்றியும்முன்,
தெழித்திட்டெழுந்தேயெதிர்நின்ற மன்னன்
திணந்தோளவையாயிரமும் மழுவால்,
அழித்திட்டவன் காண்மினின்றுச்சியரால்
அழாவண்ணையுண்டாப்புண்டிருந்தவனே.

ಪೞಿತ್ತಿಟ್ಟ ವಿನ್ಬಪ್ಪಯನ್ ಪಱ್ಱಱುತ್ತು
ಪ್ಪಣಿನ್ದೇತ್ತವಲ್ಲಾರ್ ತುಯರಾಯವೆಲ್ಲಾಮ್,
ಒೞಿತ್ತಿಟ್ಟವರೈತ್ತನಕ್ಕಾಕ್ಕವಲ್ಲ
ಪೆರುಮಾನ್ ತಿರುಮಾಲದುವನ್ಱಿಯುಮ್ಮುನ್,
ತೆೞಿತ್ತಿಟ್ಟೆೞುನ್ದೇಯೆದಿರ್ ನಿನ್ಱ ಮನ್ನನ್
ತಿನ್ತೋಳವೈಯಾಯಿರಮುಮ್ ಮೞುವಾಲ್,
ಅೞಿತ್ತಿಟ್ಟವನ್ ಕಾಣ್ಮಿನಿನ್ಱುಚ್ಚಿಯರಾಲ್
ಅೞ್ತ್ತವೆಣ್ಣೆಯುಣ್ಣಾಪ್ಪುಣ್ಡಿರುನ್ದವನೇ.

ಪೞಿತ್ತಿಟ್ಟ பழித்திட்ட = ತಪ್ಪಾಗಿ ಇರುವ, ಇನ್ಬಮ್ இன்பம் = ಭಕ್ತಿಯ; ಪಯನ್ பயன் = ಪ್ರಯತ್ನಗಳ, ಪಱ್ಱು ಅಱುತ್ತು பற்று அறுத்து = ಬಿಡಿಸುವನ್ನು ಕಡಿದು ಹಾಕಿ, ಪಣಿನ್ದು பணிந்து = ನಮಸ್ಕರಿಸಿ, ಏತ್ತವಲ್ಲಾರ್ ஏத்தவல்லார் = ಸ್ತುತಿಸಬಲ್ಲವರ, ತುಯರ್ ಆಯ ಎಲ್ಲಾಮ್ துயர் ஆய எல்லாம் = ದುಃಖದಿಂದ ಬಂದವುಗಳೆಲ್ಲವನ್ನೂ, ಒೞಿತ್ತು ಇಟ್ಟು ஒழித்து இட்டு = ನಿರ್ಮೂಲ ಮಾಡಿ, ಅವರೈ அவரை = ಅವರನ್ನು, ತನಕ್ಕು தனக்கு = ತನಗೆ, ಆಕ್ಕವಲ್ಲ ஆக்கவல்ல = (ದಾಸರಾಗಿ) ಮಾಡಿಕೊಳ್ಳಬಲ್ಲ, ಪೆರುಮಾನ್ பெருமான் = ಹಿರಿಮೆಯುಳ್ಳವನು, ತಿರುಮಾಲ್ திருமால் = ಲಕ್ಷ್ಮೀಪತಿ, ಅದು ಅನ್ಱಿಯುಮ್ அது அன்றியும் = ಅದು ಅಲ್ಲದೆಯೂ, ಮುನ್ முன் = ಹಿಂದೆ, ತೆೞಿತ್ತಿಟ್ಟು தெழித்திட்டு = ಅಬ್ಬರಿಸುತ್ತಾ, ಎೞುನ್ದೇ எழுந்தே = ಎದ್ದು, ಎದಿರ್ ನಿನ್ಱ எதிர் நின்ற = ಎದುರಲ್ಲಿ ನಿಂತ, ಮನ್ನನ್ மன்னன் = ರಾಜನ, ತಿನಮ್ திணம் = ಕೋಪದಿಂದ, ತೋಳ್ ಅವ್ವೈ தோள் அவை = ಆ ತೋಳುಗಳನ್ನು, ಆಯಿರಮುಮ್ ஆயிரமும் = ಸಾವಿರವನ್ನು, ಮೞುವಾಲ್ மழுவால் = ಗಂಡುಗೊಡಲಿಯಿಂದ, ಅೞಿತ್ತಿಟ್ಟವನ್ அழித்திட்டவன் = ನಾಶಮಾಡಿದವನು, ಕಾಣ್ಮಿನ್

Garani Srinivasan

காணமின் = ಕಾಣಿರಿ, ಇನ್ಱು இன்று = ಇಂದು, ಅಳೈ ವೆಣ್ಣೆಯುಣ್ಡು
அளை வெண்ணெய் உண்டு = ಮೊಸರು ಬೆಣ್ಣೆಯನ್ನುಂಡು, ಆಯ್ಚ್ಚಿ
ಯರಾಲ್ ஆய்ச்சியரால் = ಗೊಲ್ಲತಿಯರಿಂದ, ಆಪ್ಪುಣ್ಡು ಇರುನ್ದವನೇ
ஆப்புண்டு இருந்தவனே = ಕಟ್ಟಿಹಾಕಿಸಿಕೊಂಡವನೇ.

ತಪ್ಪಾಗಿ ಇಂತಹ ಭಕ್ತ ಪ್ರಿಯತ್ವಗಳ ಹಿರಿತನವನ್ನು ಕಡಿದುಹಾಕಿ, ನಮ್ಮನ್ನು
ಸ್ತುತಿಸಬಲ್ಲವರ ದುಃಖ ಸಂಕಟಗಳಾದುವೆಲ್ಲವನ್ನು ನಿರ್ಮೂಲನಗೊಳ
ಸಿ, ಅವರನ್ನು ತನಗೆ ದಾಸರಾಗಿ ಮಾಡಿಕೊಳ್ಳಬಲ್ಲ ಹಿರಿಮೆಯುಳ್ಳವನು
ಲಕ್ಷ್ಮೀಪತಿ. ಅದೂ ಅಲ್ಲದೆ, ಹಿಂದೆ, ಅಬ್ಬರಿಸುತ್ತಾ ಎದ್ದು ಎದುರಲ್ಲಿ ನಿಂತ
ರಾಜನ ಸಾವಿರ ತೋಳುಗಳನ್ನು ಕೋಪದಿಂದ ಗಂಡುಗೊಡಲಿಯಿಂದ
ನಾಶಮಾಡಿದವನು ಕಾಣಿರಿ, ಇಂದು ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯ (6)
ರಿಂದ ಕಟ್ಟಿಹಾಕಿಸಿಕೊಂಡವನೇ.

ಸರ್ವೇಶ್ವರನಾದ ಭಗವಂತನನ್ನು ಬಿಟ್ಟು, ಬೇರೆ ದೇವರುಗಳನ್ನು ನಂಬಿ, ಭಜಿಸಿ, ಭಕ್ತಿಮಾಡಿ, ಒಲಿಸಿಕೊಳ್ಳಲು ಪ್ರಯತ್ನಿಸಿ, ದಾಸ್ಯ ಶ್ರಮಪಟ್ಟು, ಕಡೆಗೆ ಅದರಿಂದ ಫಲವಿಲ್ಲವೆಂದು ತಿಳಿದವರು, ಮುಕ್ತಿ ಶ್ರೇಯಃ ಪತಿಯಾದ ಭಗವಂತನಿಗೆ ಎರಗಿ, ಸ್ತುತಿಸಿ, ಆಶ್ರಯಿಸಿದರೆ, ಭಗವಂತನು ಅಂಥವರಲ್ಲೂ ಕೃಪೆದೋರುವನು. ಅವರನ್ನು ಉದ್ಧರಿಸುವನು. ತನ್ನ ದಾಸರನ್ನಾಗಿಯೂ, ನಿತ್ಯ ಕಿಂಕರರನ್ನಾಗಿಯೂ ಮಾಡಿಕೊಳ್ಳುವನು. ಭಗವಂತನ ಹಿರಿಮೆ ಅದು.

ಹಿಂದೆ, ಕಾರ್ತವೀರ್ಯಾರ್ಜುನನು ತನ್ನ (ಕ್ಷತ್ರಿಯನೆಂಬ) ದರ್ಪದಿಂದ, ಜಮದಗ್ನಿ ಮಹರ್ಷಿಗಳ ಆಶ್ರಮದಲ್ಲಿ ಸೇವೆ ಮಾಡುತ್ತಿದ್ದ ಹೋಮಧೇನುವನ್ನು ಬಲಾತ್ಕಾರದಿಂದ ತನ್ನೊಡನೆ ಎಳೆದುಕೊಂಡುಹೋದನು. ಇದಕ್ಕೆ ಪ್ರತೀಕಾರವೆಂಬಂತೆ, ಮಹರ್ಷಿಯ ಮಗನಾಗಿ, ಪರಶುರಾಮನಾಗಿ, ಅವತರಿಸಿದ ಭಗವಂತನು, ಆ ಕಾರ್ತವೀರ್ಯಾರ್ಜುನನ ಸಾವಿರ ತೋಳುಗಳನ್ನು ತನ್ನ ಗಂಡುಗೊಡಲಿಯಿಂದ ತುಂಡರಿಸಿಬಿಟ್ಟನು.

ಆಳ್ವಾರರು ಹೇಳುತ್ತಾರೆ: ಅನ್ಯದೇವತೋಪಾಸಕರಾಗಿದ್ದು, ಕಡೆಗೆ ತಮ್ಮ ತಪ್ಪನ್ನರಿತು, ಸರ್ವೇಶ್ವರನಾದ ಭಗವಂತನನ್ನು ಆಶ್ರಯಿಸುವವರನ್ನು ಭಗವಂತನು ಅನುಗ್ರಹಿಸುತ್ತಾನೆ. ಅವರನ್ನು ತನ್ನ ಕಿಂಕರರನ್ನಾಗಿ ಮಾಡಿಕೊಳ್ಳುತ್ತಾನೆ. ದುಷ್ಟರಾದ ದರ್ಪಿಷ್ಠರಾದವರ ತೋಳ್ಬಲವನ್ನು ಅಡಗಿಸುತ್ತಾನೆ. ಅಂಥವನು ಈಗ ಕಳ್ಳತನದಿಂದ ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯಿಂದ ಕಟ್ಟಿಹಾಕಿಸಿಕೊಳ್ಳುವುದೇ?, ಇದೇನು ಮಾಯೆಯೋ?

7. படைத்திட்ட திவ்வையமுய்யமுனநாள்
பணிந்தேத்தவல்லார்துயராயவெல்லாம்,

துடைத்திட்டவரைத் தனக்காக்க என்னைத்
தெளியாவரக்கர் திறல்போயவிய,
மிடைத்திட்டெழுந்து குரங்கைப்படையா
விலங்கல் புகப்பாய்ச்சி விம்ம, கடலை
அடைத்திட்டவன் காண்மினின்றாய்ச்சியரால்
அளைவெண்ணெயுண்டாப்புண்டிருந்த
வனே.

ಪಡೈತ್ತಿಟ್ಟದಿವ್ವೈಯಮುಯ್ಯ ಮುನನಾಳ್
ಪಣಿನ್ದೇತ್ತವಲ್ಲಾರ್ ತುಯರಾಯವೆಲ್ಲಾಮ್,
ತುಡೈತ್ತಿಟ್ಟವರೈತ್ ತನಕ್ಕಾಕ್ಕ ಎನ್ನೈ
ತ್ತೆಳಿಯಾವರಕ್ಕರ್ ತಿಱಲ್ ಪೋಯವಿಯ,
ಮಿಡೈತ್ತಿಟ್ಟೆೞುನ್ದ ಕುರಙ್ಗೈಪ್ಪಡೈಯಾ
ವಿಲಙ್ಗಲ್ ಪುಗಪ್ಪಾಯ್ಚ್ಚಿ ವಿಮ್ಮ, ಕಡಲೈ
ಅಡೈತ್ತಿಟ್ಟವನ್ ಕಾಣ್ಮಿನಿನ್ಱಾಯ್ಚ್ಚಿಯರಾಲ್
ಅಳೈವೆಣ್ಣೆಯುಣ್ಡಾಪ್ಪುಣ್ಡಿರುನ್ದವನೇ.

ಪಡೈತ್ತಿಟ್ಟದು படைத்திட்டது = ಸೃಷ್ಟಿಸಿದ, ಇವ್ವೈಯಮ್ இவ்வையம் = ಈ ಲೋಕಗಳು, ಉಯ್ಯ உய்ய = ಉದ್ಧಾರಗೊಳ್ಳುವಂತೆ, ಮುನನಾಳ್ முன நாள் = ಹಿಂದೆ ಒಂದು ಕಾಲದಲ್ಲಿ, ಪಣಿನ್ದು பணிந்து = ಶರಣಾಗತರಾಗಿ ಎರಗಿ, ಏತ್ತವಲ್ಲಾರ್ ஏத்தவல்லார் = ಸ್ತುತಿಸಿ ಪೂಜಿಸಬಲ್ಲವರ, ತುಯರ್ ಆಯ ಎಲ್ಲಾಮ್ துயர் ஆயவெல்லாம் = ದುಃಖ ಸಂಕಟಗಳು ಆದವೆಲ್ಲವನ್ನೂ, ತುಡೈತ್ತಿಟ್ಟು துடைத்திட்டு = ತೊಡೆದು ಹಾಕಿ, ಅವರೈ அவரை = ಅವರನ್ನು, ತನಕ್ಕು தனக்கு = ತನಗೆ, ಆಕ್ಕ ಎನ್ನ ஆக்க என்ன = ಕಿಂಕರರನ್ನಾಗಿ ಮಾಡಿಕೊಳ್ಳಲು ಎಣಿಸಿದಾಗ, ತೆಳಿಯಾ தெளியா = ತಿಳುವಳಿಕೆಯಿಲ್ಲದ, ಅರಕ್ಕರ್ அரக்கர் = ರಾಕ್ಷಸರ, ತಿಱಲ್ திறல் = ಬಲಪರಾಕ್ರಮಗಳು, ಪೋಯ್ ಅವಿಯ போய் அவிய = ಹೋಗಿ (ಅವರು) ನಶಿಸುವಂತೆ, ಮಿಡೈತ್ತಿಟ್ಟು மிடைத்திட்டு = ಒಟ್ಟುಗೂಡಿ, ಎೞುನ್ದ எழுந்த = ಎದ್ದ, ಕುರಙ್ಗೈ குரங்கை = ವಾನರರನ್ನು, ಪಡೈಯಾ படையா = ಸೈನ್ಯವನ್ನಾಗಿ ಮಾಡಿಕೊಂಡು, ವಿಲಙ್ಗಲ್ விலங்கல் = ಬೆಟ್ಟಗಳನ್ನು, ಪುಗಪ್ಪಾಯ್ಚ್ಚಿ புகப்பாய்ச்சி = ನುಗ್ಗಿಸಿ, ವಿಮ್ಮ விம்ம = ನೆಟ್ಟಗೆ ನಿಲ್ಲಿಸಿ, ಕಡಲೈ கடலை = ಕಡಲನ್ನು, ಅಡೈತ್ತಿಟ್ಟವನ್ அடைத்திட்டவன் = ಅಡಗಿಸಿದವನು, ಕಾಣ್ಮಿನ್ காண்மின் = ಕಾಣಿರಿ, ಇನ್ಱು இன்று = ಇಂದು, ಅಳೈವೆಣ್ಣೆಯ್ ಉಣ್ಡು அளைவெண்ணெய் உண்டு = ಮೊಸರು

ಚೆನ್ನೆಯನ್ನುಂಡು, ಅಯಚ್ಚಿಯರಾಲ್ ஆய்ச்சியரால் = ಗೊಲ್ಲತಿಯರಿಂದ, ಆಪ್ಪುಣ್ಣು ಇರುಂದವನೇ ஆப்புண்டு இருந்தவனே = ಕಟ್ಟಿಹಾಕಿ ಕೊಂಡಿದ್ದವನೇ.

ಸೃಷ್ಟಿಸಿದ ಈ ಲೋಕಗಳು ಉದ್ಧಾರಗೊಳ್ಳುವಂತೆ, ಒಂದೆ ಬಂದುರಾಲದಲ್ಲಿ, ತನ್ನನ್ನು ಸೇರದ ಶಿಶುವಡಿಗಳಿಗೆ ಎರಗಿ ಸ್ತುತಿಸಿ ಪೂಜಿಸಬಲ್ಲವರ ದುಃಖ ಸಂಕಟಗಳೆಲ್ಲ ಹೋಗಲಾಡಿಸಿ ಅವರನ್ನು ತನಗೆ ಕಿಂಕರರನ್ನಾಗಿ ಮಾಡಿಕೊಳ್ಳಲು ಎಣಿಸಿದಾಗ, ಶಿಲ್ಪವಳಿಗೆ ದುಡಾಕಿ, ಅವರನ್ನು ತನಗೆ ಕಿಂಕರರನ್ನಾಗಿ ಮಾಡಿಕೊಳ್ಳಲು ಎಣಿಸಿದಾಗ, ಶಿಲ್ಪವಳಿಗೆ ಯಿಲ್ಲದ ರಾಕ್ಷಸರ ಬಲ ಪರಾಕ್ರಮಗಳು ಹೋಗಿ, ಅವರು ನಾಶವಾಮವಂತೆ, ಬಿಲ್ಲುಗಾ ಡಿಸಿದ್ದರಾದ ವಾನರರನ್ನು ಸೈನ್ಯವನ್ನಾಗಿ ಮಾಡಿಕೊಂಡು, ಬೆಟ್ಟಗಳನ್ನು ಸುರಿಸಿ ನಿಲ್ಲಿಸಿ ವಿಟ್ಟಿಸಿಕಡಲನ್ನು ಅದುಗಿಸಿದವನು ಕೋಟಿ, ಇಂದು ಮೊಸರು ಬೆಣ್ಣೆಯನ್ನುಂಡು ಗೊಲ್ಲತಿ (7)
ಯರಿಂದ ಕಟ್ಟಿ ಹಾಕಿಸಿಕೊಂಡಿದ್ದವನೇ.

ಈ ಪಾಶುರದಲ್ಲಿ ರಾಮಾವತಾರದ ಹಿರಿಮೆಯನ್ನು ವಿವರಿಸಲಾಗಿದೆ.

ಆಳ್ವಾರರು ಹೇಳುತ್ತಾರೆ: ತಾನೇ ಈ ಲೋಕಗಳನ್ನು ಸೃಷ್ಟಿಸಿದವನೂ, ಅವುಗಳು ಉದ್ಧಾರಗೊಳ್ಳುವಂತೆ ನಿರ್ವಹಿಸುತ್ತಿದ್ದವನೂ, ತನ್ನ ಭಕ್ತರ ದುಃಖ ಸಂಕಟ ಅವಮಾನಗಳನ್ನು, ಒಂದೆ ಗಳಿಗೆಯಲ್ಲಿ ನಾಶಗೊಳಿಸಿ, ಅವರನ್ನು ತನ್ನ ನಿತ್ಯ ಕಿಂಕರರನ್ನಾಗಿ ಮಾಡುವವನೂ, ಒಂದೆ ಗಳನ್ನೆಲ್ಲ ನಾಶಗೊಳಿಸಿ, ಅವರನ್ನು ತನ್ನ ನಿತ್ಯ ಕಿಂಕರರನ್ನಾಗಿ ಮಾಡುವವನೂ, ಬಂದುಗಲ, ರಾಕ್ಷಸರು ಎಲ್ಲೆಲ್ಲೂ ಪ್ರಬಲಿಸಿದ್ದಾಗ, ~~ಭಗವಂತನು~~ ಮಾನವನಾಗಿ ಅವತಾರವನ್ನೆತ್ತಿ ವಾನರರನ್ನು ಬಿಲ್ಲುಗಾಡಿಸಿ ಸೈನ್ಯವನ್ನು ಮಾಡಿಕೊಂಡು, ತಡಲಿಗೆ ಬೆಟ್ಟಗಳಿಂದ ಸೇತುವೆ ಕಟ್ಟಿ, ಲಂಕೆಯನ್ನು ಪ್ರವೇಶಿಸಿ, ರಾಕ್ಷಸರೆಲ್ಲರನ್ನೂ ನಿರ್ಮೂಲನಗೊಳಿಸಿದ ಸಮರ್ಥ, ~~ಇಂದು~~ ನೆನಿಸಿದನು. ಅವನೇ, ಇಂದು, ಕಳ್ಳತನದಿಂದ ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯರಿಂದ ಕಟ್ಟಿ ಹಾಕಿಸಿಕೊಳ್ಳುವುದೇ? ಇದೇನು ಮಾಯೆ? ಇದೇನು ವಿಚಿತ್ರ?

8. நெறித்திட்ட மென் கூழை நன்னெறி வாழையோடு
உடன்வில் ~~வ~~ன்ன வல்லேயதனை,
இறுத்திட்ட வளின் போட வணாந்திட்டு
இளங்கொற்ற வறுயத்து வாங்கதமுந்நீர்,
செறித்திட்டிலங்கை மலங்கவரக்கன்
செழுநீண்முடி தோளொடு தாள் துணிய,
அறுத்திட்டவன் காண்மின்னின்றாய்ச்சியரால்
அளைவெண்ணெயுண்டாப்புண்டிருந்தவனே

ನೆಱಿತ್ತಿಟ್ಟ ಮೆನ್ ಕೂೞೆ ನನ್ನೆಱಿ ವಾೞೆಯೋಡು
ಉಡನ್ ವಿಲ್ಲಿನ್ನ ವಲ್ಲೇಯದನ್ನೆ,
ಇಱುತ್ತಿಟ್ಟವಳಿನ್ ಪೋದ ವನಾಂದಿಟ್ಟು
ಇಳಙ್ಗೊಟ್ಟ್ರವಱುಯತ್ತು ವಾಙ್ಗದ ಮುನ್ನೀರ್,
ಶೆಱಿತ್ತಿಟ್ಟಿಲಙ್ಗೆ ಮಲಙ್ಗ ವರಕ್ಕನ್
ಶೆೞುನೀಣ್ಮುಡಿ ತೋಳೊಡು ತಾಳ್ ತುಣಿಯ,
ಅಱುತ್ತಿಟ್ಟವನ್ ಕಾಣ್ಮಿನಿನ್ಱಾಯ್ಚ್ಚಿಯರಾಲ್
ಅಳೈವೆಣ್ಣೆಯುಣ್ಡಾಪ್ಪುಣ್ಡಿರುನ್ದವನೇ.

ನೆಱಿತ್ತ நெறிக்கிட்ட = ಸುರುಳಿ ಸುತ್ತಿರುವ, ಮೆನ್ மென் = ಮೃದುವಾದ, ಕುೞಲೈ குழலை = ಕಲೆಗೂದಲನ್ನು, ನಲ್ நல் = ~~ಒಳ್ಳೆ~~ ಉತ್ತಮವಾದ, ನೇರ್ நேர் = ಸೊಗಸಾದ, ಇೞೈಯೋಡು இழையோடு = ಆಭರಣಗಳನ್ನು (ಉಳ್ಳವಳ), ಉಡನ್ ಆಯ உடன் ஆய = ಒಡನೆ ಇರುವುದಾದ, ಅಲ್ ಅನ್ನ ~~ಅ~~ அல் அன்ன = ಕಗ್ಗತ್ತಲ ಹಾಗಿರುವ, ವಿಲ್ ಅದನ್ನೆ வில் அதனை = ಆ ಬಿಲ್ಲನ್ನು, ~~ಇ~~ ಇಱುತ್ತು இறுக்கிட்டு = ಮುರಿದು, ಅವಳ್ அவள் = ಅವಳ (ಸೀತಾದೇವಿಯ), ಇನ್ಬಮ್ இன்பம் = ಪ್ರೇಮವನ್ನು, ಅನ್ಬೋಡು அன்போடு = ಪ್ರೀತಿಯಿಂದ, ಅಣೈತ್ತು அணைக்கிட்டு = ಬಂಧಿಸಿ, ಇಳಙ್ಕೋವನ್ ಆಯ್ இளங்கோவன் ஆய் = ಯುವರಾಜನಾಗಿ, ಕಲಙ್ಗಾದ கலங்காத = ಹೆದರದೆ ಇರುವ, ಮುನ್ನೀರ್ முந்நீர் = ಕಡಲನ್ನು, ಶೆಱಿತ್ತು செறிக்கிட்டு = ಅಡ್ಡಕಟ್ಟಿ, ಇಲಙ್ಗೈ ಮಲಙ್ಗ இலங்கை மலங்க = ಲಂಕೆಯು ಕಲಕಹೋಗುವಂತೆ, ಅರಕ್ಕನ್ அரக்கன் = ರಾಕ್ಷಸನ, ~~ಶೆ~~ செழு = ಸಮೃದ್ಧಿಯಾದ, ನೀಳ್ ಮುಡಿ நீள் முடி = ಉನ್ನತ ಕಿರೀಟಗಳನ್ನು, ತೋಳ್ தோள் = ತೋಳುಗಳನ್ನು, ತಾಳ್ தாள் = ಕಾಲುಗಳನ್ನು, ತುಣಿಯ துணிய = ~~ಕತ್ತರಿಸಲ್ಪಡುವಂತೆ~~, ತುಂಡಾಗುವಂತೆ, ಅಱುತ್ತವನ್ அறுக்கிட்டவன் = ಕತ್ತರಿಸಿ ಹಾಕಿದವನು, ಕಾಣ್ಮಿನ್ காண்மின் = ಕಾಣಿರಿ, ಇನ್ಱು இன்று = ಇಂದು, ಅಳೈ ವೆಣ್ಣೆಯ್ ಉಣ್ಡು அளை வெண்ணெய் உண்டு = ಮೊಸರು ಬೆಣ್ಣೆಯನ್ನುಂಡು, ಆಯ್ಚ್ಚಿಯರಾಲ್ ஆய்ச்சியரால் = ಗೊಲ್ಲತಿಯರಿಂದ, ಆಪ್ಪುಣ್ಡು ಇರುನ್ದವನೇ இருந்தவனே = ಕಟ್ಟಿ ಹಾಕಿಸಿಕೊಂಡವನೇ.

ಸುರುಳಿ ಸುತ್ತಿರುವ ಮೃದುವಾದ ಕಲೆಗೂದಲನ್ನೂ ಉತ್ತಮವಾದ ಸೊಗಸಾದ ಆಭರಣಗಳನ್ನೂ ಉಳ್ಳವಳ ಒಡನೆಯೇ ಇರುವುದಾದ ಕಗ್ಗತ್ತಲ ಹಾಗಿರುವ ಆ ಬಿಲ್ಲನ್ನು ಮುರಿದಿಟ್ಟು, ಅವಳ ಪ್ರೇಮವನ್ನು ಪ್ರೇಮದಿಂದ ಬಂಧಿಸಿಟ್ಟು, ಯುವರಾಜನಾಗಿ, ಹೆದರದಂತೆ ಇರುವ ಕಡಲನ್ನು ಅಡ್ಡಕಟ್ಟಿ, ಲಂಕೆಯು ಕಲಕಹೋಗುವಂತೆ ರಾಕ್ಷಸನ ಸಮೃದ್ಧಿಯಾದ ಉನ್ನತ ಕಿರೀಟಗಳನ್ನೂ, ತೋಳುಗಳನ್ನೂ ಕಾಲುಗಳನ್ನೂ ತುಂಡಾಗುವಂತೆ ಕತ್ತರಿಸಿ ಹಾಕಿದವನು ಕಾಣಿರಿ, ಇಂದು, ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯರಿಂದ ಕಟ್ಟಿ ಹಾಕಿಸಿಕೊಂಡವನೇ. (8)

ಆಳ್ವಾರರು ಹೇಳುತ್ತಾರೆ: ಸುಂದರವಾಗಿ ಸುರುಳಿ ಸುತ್ತಿರುವ ಮುಂಗುರುಳನ್ನೂ, ಮೃದುವಾದ ಕಲೆಗೂದಲನ್ನೂ ಉಳ್ಳವಳು ಪರಮಸುಂದರಿಯಾದ ಸೀತಾದೇವಿ. ಅವಳ ಮದುವೆಗೆ ಕಾರಣವಾಗಿ, ಅವಳನ್ನು ಮೇಯರ್ ಕಲ್ಯಾಣ ಮಾಡಿಕೊಂಡು, ಅವಳೊಡನೆಯೇ ಬೆಳೆದು ಬಂದದ್ದು ಶಿವಧನುಸ್ಸು:-

ಭಗವಂತನು ಶ್ರೀರಾಮನಾಗಿ ಅವತರಿಸಿದನು. ಅಜ್ಞೆಯ ಬೇಡಿದ
ಆ ಶಿವಧನುಸ್ಸನ್ನು ಎಡಗೈಯಿಂದ ಹಿಡಿದು, ಅದನ್ನು ಮುರಿದು ಹಾಕಿದನು.
ವಿದೇಹ ಕುಲದ ಸೀತಾದೇವಿಯನ್ನು ಮದುವೆಯಾದನು. ಶ್ರೀಮ
ತ್ತಿಕಸ್ಸ ಪ್ರೀತಿಯನ್ನು ಕೊಟ್ಟು ಶ್ರೀರಾಮನೂ ಸೀತೆಯೂ ಪರಸ್ಪರ ಬಂದು
ಗಾಢಿದರು. ಶ್ರೀರಾಮನು ಯುವರಾಜನಾಗಿ,
ತನ್ನ ಧರ್ಮಪತ್ನಿ ಸೀತಾದೇವಿಯನ್ನು ತಮ್ಮ ಲಕ್ಷ್ಮಣನನ್ನು ಕೂಡಿಕೊಂ
ಡು ಹನ್ನೆರಡು ವರ್ಷಗಳ ಕಾಲ ವನವಾಸ ನಡೆಸಿದನು. ಲಂಕೆಯ ರಾಜ
ನಾದ ರಾವಣಾಸುರನು ಸೀತೆಯನ್ನು ಅಪಹರಿಸಿಕೊಂಡು ಲಂಕೆಯ ಅಶೋ
ಕವನದಲ್ಲಿ ಸೆರೆಯಿಟ್ಟ ಕಾರಣದಿಂದ, ಶ್ರೀರಾಮನು ಅವಳನ್ನರಸುತ್ತ
ಕಿಷ್ಕಿಂಧೆಗೆ ಬಂದು, ಅಲ್ಲಿ ವಾನರರಾಜನಾದ ಸುಗ್ರೀವನ ಸಖ್ಯವನ್ನು ಪಡೆದು, ವಾನರಸೈನ್ಯ
ದೊಂದಿಗೆ ಕಡಲ ತೀರಕ್ಕೆ ಬಂದು, ಕಡಲಿಗೆ ಅಣೆಕಟ್ಟಿ, ಲಂಕೆಗೆ ದಾಳಿ
ಯಿಟ್ಟು, ರಾವಣಾಸುರನ ಹತ್ತು ತಲೆಗಳನ್ನು, ಇಪ್ಪತ್ತು ತೋಳುಗಳನ್ನು
ಕಾಲುಗಳನ್ನು ತುಂಡರಿಸಿ ಹಾಕಿದನು. ಶಾಂತಿಯಿಲ್ಲದ ಪರಾಕ್ರಮಿಯಾದ
ಅವನೇ ಇಂದು ಕಳ್ಳತನದಿಂದ ಬೆಣ್ಣೆಯನ್ನುಂಡು ಗೊಲ್ಲತಿ
ಯಿಂದ ಕಟ್ಟಿ ಹಾಕಿಸಿಕೊಂಡನಲ್ಲ! ಇದೇನು ಮಾಯೆ?

9. சுரிந்திட்ட செங்கேழுளைப் பொங்கரிமாத்
தொலையப்பிரியாது சென்றெய்தி, எய்தா
திரிந்திட்டிடங்கொண்டடங்காத்தன் வாய்
இருகூறுசெய்த பெருமான் முன்னாள்,
வரிந்திட்ட வில்லால் மரமேழுமெய்து
மலைபோலுருவத்தொரிராக்கதிமூக்கு,
அரிந்திட்டவன் காண்மின்இன்றாய்ச்சியரால்
அளைவெண்ணெயுண்டாப்புண்டிருந்தவனே

ಸುರಿನ್ದಿಟ್ಟ ಶೆಙ್ಗೇೞುಳೈಪ್ಪೊಙ್ಗರಿಮಾ
ತ್ತೊಲೈಯಪ್ಪಿರಿಯಾದು ಶೆನ್ಱೆಯ್ದಿ, ಎಯ್ದಾ
ತಿರಿನ್ದಿಟ್ಟಿಡಙ್ಗೊಣ್ಡಡಙ್ಗಾತ್ತನ್ ವಾಯ್
ಇರುಕೂಱುಶೆಯ್ದ ಪೆರುಮಾನ್ ಮುನ್ನಾಳ್,
ವರಿನ್ದಿಟ್ಟ ವಿಲ್ಲಾಲ್ ಮರಮೇೞುಮೆಯ್ದು
ಮಲೈಪೋಲುರುವತ್ತೊರಿರಾಕ್ಕದಿಮೂಕ್ಕು,
ಅರಿನ್ದಿಟ್ಟವನ್ ಕಾಣ್ಮಿನಿನ್ಱಾಯ್ಚ್ಚಿಯರಾಲ್
ಅಳೈವೆಣ್ಣೆಯುಣ್ಡಾಪ್ಪುಣ್ಡಿರುನ್ದವನೇ.

ಶುದ್ದಿಕ್ಕ ಸಾರ್ನ್ದಿಟ್ಟ = ಶುದ್ಧಿ ಕೊಂಡಿರುವ, ಶೆಮ್ ಉಡಂ = ಕೆಂಪಾದ
ಕೇಲಶ ಅಡಿಂಪ = ಹೊಳೆಯುವ, ಉಳ್ಳೆ ಉಗಿರ = ಕೇಸರವುಳ್ಳ, ಪೊಂಗು
ಉಪಾಂಗು = ಕೋಪವುಕ್ಕುತ್ತಿರುವ, ಅರಿಮಾ ಅರಿಮಾ = ಆಕರ್ಷಕವಾದ
ಸಿಂಹದರೆಯು, ಕೊಲ್ಲೆಯ ಉಡಾನಿಲಯ = ನಾಶವಾಗುವಂತೆ, ಪಿಂಡಯಾದು ಪಿರಿ
ಯಾಗ = ಅದರಿಂದ ಬೇರ್ಪಡೆಯೇ (ಬೇರ್ಪಡೆಯೇ), ಶೆನ್ಯಾಯು ಉಡಣ್ರು = ಹೋ
ಗಿ, ಎಯಿರ್ದ ನಾಯ್ಕ್ರಿ = ಹೇಲಿ (ಶತ್ರುಗಳ್ಳೂರಯು), ಎಯಿರ್ದ ನಾಯ್ಕ್ರಾ = ಹೋರಿ
ದಂತೆಯು, ಶಿದ್ದಿಕ್ಕ ತಿರ್ನ್ದಿಟ್ಟು = ಅಲದಾಡಿಸಿ, ಇಡಮುಶ್ಕೊಡ್ಡು ತಿಟಂ
ಉಕಾಣ್ಡು = ಅವಕಾಶವನ್ನುಂಟು ಮಾಡಿಕೊಂಡು, ಅಡಜ್ಞಾದ ಅಟಂಗಾಕ್ಕ =
ಅಡಗದೆ ಇರುವ (~~ಮುಚ್ಚದೆ~~ ಇರುವ), ಅದನ್ ವಾಯ್ ಅಕ್ಕಣ್ ಬಾಯ್ = ಅದ
ರ ಬಾಯನ್ನು, ಇರುಕೂಲು ತಿರು ಕೂರ್ರು = ಎರಡು ಭಾಗವಾಗಿ, ಶೆಯ್ದ ಉಶ
ಯ್ತ = ಮಾಡಿದ, ಪೆರುಮಾನ್ ಉಪೆರುಮಾಣ್ = ಭಗವಂತನು, ಮುನನಾಳ್
ಮುಣ್ನಾಳ್ = ಹಿಂದೆ ಒಂದು ಕಾಲದಲ್ಲಿ, ಶಿದ್ದಿಕ್ಕ ತಿರ್ನ್ದಿಟ್ಟ = ಪಡೆ
ಯೇಲಿಪಿದ, ವಿಲ್ಲಾಲ್ ವಿಲ್ಲಾಲ = ಬಿಲ್ಲಿನಿಂದ, ಮರಮಾ ವಿಲುಮಾ
ಮರಂ ಎಯ್ದ್ರಂ = ಏಳು ಮರಗಳನ್ನು, ಎಯಿರ್ದ ನಾಯ್ಕ್ರು = ಮುಂದುಗಾಕೆ,
ಮಲ್ಲೆ ಪ್ಪೋಲ್ ಮಲಿ ಪೋಲ = ಬೆಟ್ಟದಂತೆ, ಉರುವತ್ತು ಉರುವತ್ತು
= ರೂಪದ, ಒರು ಇರಾಕ್ಕದ ಇರು ತಿರಾಕ್ಕದ್ರಿ = ಒಬ್ಬ ರಾಕ್ಷಸಿಯ,
ಮೂಕ್ಕೂರಂಗು = ಮೂಗನ್ನು, ಅರಿದ್ದಿಕ್ಕವನ್ ಅರಿನ್ದಿಟ್ಟವಣ್ =
ಕತ್ತರಿಸಿದವನು, ಕಾಣ್ಮಿನ್ ಕಾಣ್ಮಿಣ್ = ಕಾಣಿರಿ, ಇನ್ಯಾಯು ತಿಣ್ರು =
ಇಂದು, ಅಲ್ಲೆ ವೆಣ್ಣೆಯ್ ಉಣ್ಡ ಅವಿ ಉಲ್ಲಾಣ್ ಉಣಾಯ್ ಉಣ್ಡು =
ಮೊಸರು ಬೆಣ್ಣೆಯನ್ನುಂಡು, ಆಯಚ್ಚಿ ಯರಾಲ್ ಆಯ್ಚ್ಚಿಯರಾಲ
= ಗೊಲ್ಲತಿಯರಿಂದ, ಆಪ್ಪುಣ್ಡು ಇರುನ್ದವನೇ ಆಪ್ಪುಣ್ಡು ಇರುನ್ದಯ
ಣೇ = ಕಟ್ಟಿಹಾಕಿಸಿಕೊಂಡವನೇ.

ಶುದ್ಧಿ ಕೊಂಡಿರುವ, ಕೆಂಪಾಗಿ ಹೊಳೆಯುವ ಕೇಸರವುಳ್ಳ, ಉಕ್ಕುತ್ತಿರುವ ಕೋಪದ, ಆಕರ್ಷಕವಾದ ಸಿಂಹದರೆಯು ನಾಶವಾಗುವಂತೆ, ಅದರಿಂದಲೇ ಹೋಗಿ, ಅದನ್ನು ಹೇಲಿಯು ಹೋರದಂತೆ ಅಲದಾಡಿಸಿ, ಅವಕಾಶವನ್ನು ಮಾಡಿಕೊಂಡು, ಮುಚ್ಚದೆ ಇರುವ ಅದರ ಬಾಯನ್ನು ಎರಡು ಭಾಗವಾಗಿ ಮಾಡಿದ ಭಗವಂತನು, ಹಿಂದೆ ಒಂದು ಕಾಲದಲ್ಲಿ, ಹೂಮಾಡಿದ್ದ (ಪಡೆಯೇಲಿಪಿದ) ಬಿಲ್ಲಿನಿಂದ ಏಳು ಮರಗಳನ್ನು ಮುಂದುಗಾಕೆದನು, ಬೆಟ್ಟದಂತೆ ರೂಪವುಳ್ಳ ಒಬ್ಬ ರಾಕ್ಷಸಿಯ ಮೂಗನ್ನು ಕತ್ತರಿಸಿದನು, ಕಾಣಿರಿ, ಇಂದು ಮೊಸರು ಬೆಣ್ಣೆಯನ್ನುಂಡು ಗೊಲ್ಲತಿಯರಿಂದ ಕಟ್ಟಿಹಾಕಿಸಿಕೊಂಡಿದ್ದವನೇ. (9)

ಈ ಪಾಶುರದಲ್ಲಿ ಕೃಷ್ಣಾವತಾರದ ಒಂದು ಪ್ರಸಂಗವನ್ನು ರಾಮಾವತಾರದ ಎರಡು ಪ್ರಸಂಗಗಳನ್ನೂ ಹೇಳಲಾಗಿದೆ.

'ಕೇಶಿ' ಎಂಬ ರಾಕ್ಷಸನನ್ನು ಕೊಂದದ್ದು ಬಾಲಕೃಷ್ಣನಾಗಿ. ಕಂಸನಿಂದ ಪ್ರೇರಿತನಾಗಿ, ಕೇಶಿ ಎಂಬ ರಾಕ್ಷಸನು ಆಕರ್ಷಕವಾದ ಕುದುರೆಯ ರೂಪದಲ್ಲಿ ಬಂದು ಬಾಲಕೃಷ್ಣನನ್ನು ಕೊಲ್ಲಲು ತೆರೆದ ಬಾಯಿಂದ ನುಗ್ಗಿ ಬಂದಾಗ, ಬಾಲಕೃಷ್ಣನು ಆ ಕುದುರೆಯ ಬಾಯಲ್ಲಿ ತನ್ನ ಕೈಗಳನ್ನು ತೂರಿಸಿ, ಅದು ಅದನ್ನು ~~ಸ~~ ಕಚ್ಚಿ

ಹೋದಾಗ, ಎರಡು ಕೈಗಳಿಂದಲೂ ಅದರ ಬಾಯನ್ನು ಒಡೆದು ಅಗಲಿಸಿ, ಸೀಳಿ ಅದನ್ನು (ರಾಕ್ಷಸನನ್ನು) ಕೊಂದು ಹಾಕಿದನು.

ಏಳು ಮರಗಳನ್ನು ಮುರಿದದ್ದು ರಾಮಾವತಾರದ ವಿಷಯ. ಕಿಷ್ಕಿಂಧೆಯಲ್ಲಿ ರಾಜ್ಯಭ್ರಷ್ಟನಾಗಿ ಅಲೆದಾಡುತ್ತಿದ್ದ ಸುಗ್ರೀವನಿಗೆ, ಅವನ ವೈರಿಯಾದ ವಾಲಿಯನ್ನು ಗೆಲ್ಲಲು ಸಾಧ್ಯವೆಂಬ ನಂಬಿಕೆಯನ್ನುಂಟು ಮಾಡುವುದಕ್ಕಾಗಿ, ಬೆಳೆದು ನಿಂತಿದ್ದ ಏಳು ಶಾಲೆಯ ಮರಗಳನ್ನೂ ಒಂದೇ ಬಾಣದಿಂದ ತುಂಡರಿಸಿ ಕೆಡಹಿದನು ಶ್ರೀರಾಮ.

ರಾಕ್ಷಸಿಯ ಮೂಗನ್ನು ಕೊಯ್ದದ್ದು ಶ್ರೀರಾಮಾವತಾರದಲ್ಲೇ. ರಾಮ ಸೀತೆ, ಲಕ್ಷ್ಮಣರು ವನವಾಸವನ್ನು ಅನುಭವಿಸುತ್ತಾ ಪಂಚವಟಿಯಲ್ಲಿದ್ದಾಗ, ರಾವಣನ ತಂಗಿಯಾದ ಶೂರ್ಪನಖಿಯು ಅಲ್ಲಿಗೆ ಬಂದಳು. ರಾಮನ ಅಪೂರ್ವ ಸೌಂದರ್ಯವನ್ನು ಕಂಡು ಮೋಹಿಸಿದಳು. ತನ್ನನ್ನು ಮದುವೆಯಾಗೆಂದು ಬಲವಂತ ಪಡಿಸಿದಳು. ಪ್ರಸಂಗವು ವಿಕೋಪಕ್ಕೆ ಹೋಗುವ ಮುನ್ನವೇ ರಾಮನ ಆಜ್ಞೆಯಂತೆ, ಲಕ್ಷ್ಮಣನು ಅವಳ ಕಿವಿ ಮೂಗುಗಳನ್ನು ಕತ್ತರಿಸಿ, ಓಡಿಸಿಬಿಟ್ಟನು.

10. நின்றார் முகப்புச் சிறிதும் நினையான்
வயிற்றை நிறைப்பான் உறிப்பால் தயிர்நெய்,
அன்றாய்ச்சியர் வெண்ணெய் விழுங்கி
உரலோடாப்புண்டிருந்த பெருமானடிமேல்,
நன்றாய தொல்சீர் வயல் மங்கையர் கோன்
கலியனொலி செய்த தமிழ் மாலை வல்லார்,
என்றும் மெய்த்தாரிடர் இன்பமெய்தி
இமையோர்க்கும் அப்பால் செலவெய்துவாரே

ನಿನ್ರಾರ್ ಮುಗಪ್ಪು ಚ್ಚಿರಿದುಮ್ ನಿನೈಯಾನ್
ವಯಿತ್ರೈ ನಿರೈಪ್ಪಾನ್ ಉರಿಪ್ಪಾಲ್ ತಯಿರ್ ನೆಯ್,
ಅನ್ರಾಯ್ಚ್ಚಿಯರ್ ವೆಣ್ಣೆಯ್ ವಿಝುಙ್ಗಿ
ಉರಲೋಡಾಪ್ಪುಣ್ಡಿರುನ್ದ ಪೆರುಮಾನಡಿಮೇಲ್,
ನನ್ರಾಯ ತೊಲ್ ಶೀರ್ ವಯಲ್ ಮಙ್ಗೈಯರ್ ಕೋನ್
ಕಲಿಯನೊಲಿ ಶೆಯ್ದ ತಮಿಝ್ ಮಾಲೈ ವಲ್ಲಾರ್,
ಎನ್ರೂನು ಮೆಯ್ ತಾರಿಡರ್ ಇನ್ಬಮೆಯ್ದಿ
ಇಮ್ಮೈಯೋರ್ಕ್ಕುಮಪ್ಪಾಲ್ ಶೆಲವೆಯ್ದುವಾರೇ.

ನಿನ್ರಾರ್ நின்றார் = ಎದುರಲ್ಲಿ ನಿಂತವರ, ಮುಗಪ್ಪು முகப்பு = ಎದುರಲ್ಲಿ, ಶಿರಿದುಮ್ சிறிதும் = ಸ್ವಲ್ಪವೂ, ನಿನೈಯಾನ್ நினையான் = ಯೋಚಿಸದವನು, ವಯಿತ್ರೈ வயிற்றை = ಹೊಟ್ಟೆಯನ್ನು, ನಿರೈಪ್ಪಾನ್ நிறைப்பான் = ತುಂಬುವವನು, ಉರಿ உறி = ನೆಲುವಿನಲ್ಲಿನ,

Garani Srinivasan

ಪಾಲ್ பால் = ಹಾಲನ್ನೂ, ತಯಿರ್ தயிர் = ಮೊಸರನ್ನೂ, ನೆಯ್ நெய் = ತುಪ್ಪವನ್ನೂ, ಅನ್ಱು அன்று = ಅಂದು, ಆಯ್ಚ್ಚಿಯರ್ ஆய்ச்சியர் = ಗೊಲ್ಲತಿಯರ, (ಅವರು ಕಾದಿಟ್ಟಿರುವ), ವೆಣ್ಣೆಯ್ வெண்ணெய் = ಬೆಣ್ಣೆಯನ್ನೂ, ವಿಳುಙ್ಗಿ விழுங்கி = ನುಂಗಿದಾಗ, ಉರಲೋಡು உரலோடு = ಒರಳಿಗೆ, ಆಪ್ಪುಣ್ಡು ಇರುನ್ದ ஆப்புண்டு இருந்த = ಕಟ್ಟಿಹಾಕಿಸಿಕೊಂಡಿದ್ದ, ಪೆರುಮಾನ್ பெருமான் = ಭಗವಂತನ, ಅಡಿಮೇಲ್ அடிமேல் = ತಿರುವಡಿಗಳ ಮೇಲೆ, ನನ್ಱಾಯ நன்றாய = ಉತ್ತಮವಾದ, ತೊಲ್ தொல் = ಪುರಾತನವಾದ (ಶಾಶ್ವತವಾದ), ಚೀರ್ சீர் = ಕೀರ್ತಿಯನ್ನುಳ್ಳ (ಭಾಗ್ಯವನ್ನುಳ್ಳ), ವಯಲ್ வயல் = ಗದ್ದೆ ಬಯಲುಗಳ, ಮಙ್ಗೈಯರ್ ಕೋನ್ மங்கையர் கோன் = ಮಂಗೈನಾಡಿನ ಜನರ ಒಡೆಯನಾದ, ಕಲಿಯನ್ கலியன் = ಕಲಿಯನು, ಒಲಿಶೆಯ್ದ ஒலிசெய்த = ಹಾಡಿದ, ತಮಿಳ್ ಮಾಲೈ தமிழ் மாலை = ತಮಿಳಿನ ಪಾಶುರ ಮಾಲೆಗಳನ್ನು, ವಲ್ಲಾರ್ வல்லார் = ಬಲ್ಲವರು, ಎನ್ಱಾನುಮ್ என்றும் = ಎಂದೆಂದಿಗೂ, ಎಯ್ದಾರ್ ಇಡರ್ எய்தார் இடர் = ದುಃಖ ಸಂಕಟಗಳನ್ನು ಹೊಂದುವುದಿಲ್ಲ, ಇನ್ಬಮ್ ಎಯ್ದಿ இன்பம் எய்தி = ನಿತ್ಯಾನಂದವನ್ನು ಪಡೆದು, ಇಮೈಯೋರ್ಕ್ಕು இமையோர்க்கு = ಪರಮಪದವಾಸಿಗಳಿಗೆ, ಅಪ್ಪಾಲ್ அப்பால் = ಆಚೆಗಿನ (ಹೆಚ್ಚಿನ), ಶೆಲ್ವಮ್ செல்வம் = ಭಾಗ್ಯವನ್ನು, ಎಯ್ದಿ ವಾಳ್ವಾರ್ வாழ்வார் = ಪಡೆಯುವವರೇ ಆಗುತ್ತಾರೆ.

ಎದುರಲ್ಲಿ ನಿಂತವರ ಮುಂದೆ ಸ್ವಲ್ಪವೂ ಲಜ್ಜಿಸದವನಾಗಿ, ಅಂದು, ಗೊಲ್ಲತಿಯರು ನೆಲುವಿನಲ್ಲಿ ಕಾದಿಟ್ಟಿರುವ ಹಾಲು, ಮೊಸರು, ತುಪ್ಪ, ಬೆಣ್ಣೆಗಳನ್ನು ನುಂಗಿ ಹೊಟ್ಟೆಯಲ್ಲಿ ತುಂಬಿಕೊಂಡವನಾಗಿ, ಒರಳಿಗೆ ಕಟ್ಟಿಹಾಕಿಸಿಕೊಂಡವನಾದ ಭಗವಂತನ ತಿರುವಡಿಗಳ ಮೇಲೆ ಉತ್ತಮವೂ ಪುರಾತನವೂ ಆದ (ಕೀರ್ತಿ) ಭಾಗ್ಯವನ್ನುಳ್ಳವನಾದ ಗದ್ದೆಬಯಲುಗಳ ತಿರುಮಂಗೈ ನಾಡಿನ ಜನರ ಒಡೆಯನಾದ ಕಲಿಯನು ಹಾಡಿದ ತಮಿಳಿನ ಪಾಶುರ ಮಾಲೆಯನ್ನು ಬಲ್ಲವರಿಗೆ ಎಂದೆಂದಿಗೂ ದುಃಖ ಸಂಕಟಗಳಿಲ್ಲ. ಅವರು ನಿತ್ಯಾನಂದವನ್ನು ಪಡೆದು ಪರಮಪದವಾಸಿಗಳಿಗಿಂತಲೂ ಹೆಚ್ಚಿನ ಭಾಗ್ಯವನ್ನು ಪಡೆಯುವವರೇ ಆಗುತ್ತಾರೆ. 10

ಈ ತಿರುಮೊಳಿಗೆ ಇದು ಕಡೆಯ ಪಾಶುರ. ಇದರಲ್ಲಿ ಮೂರು ಮುಖ್ಯಾಂಶ

Garani Srinivasan

ಮೂರು ವಿಷಯಗಳನ್ನು ಎತ್ತಿ ತೋರಿಸಲಾಗಿದೆ: ಭಗವಂತನ ಗುಣ ಕಥನ ಮತ್ತು ಅದರ ಹಿಂದೆ, ಅವನ ತಿರುವಡಿಗಳನ್ನು ಆಶ್ರಯಿಸಿರುವ ವಿಲಕ್ಷಣವಾದ ಭಾಗ್ಯವನ್ನು ಕಲಿಯನ ಹಾಡು, ಮತ್ತು ~~ಅವುಗಳನ್ನು~~ ಅದನ್ನು ಕಲಿತು ಹಾಡಬಲ್ಲವರ ಭಾಗ್ಯ.

ಭಗವಂತನು ಅನಂತ ಕಲ್ಯಾಣ ಗುಣನಿಧಿ. ಆ ಗುಣಗಳನ್ನು ಎಣಿಸಿ, ವಿಂಗಡಿಸಿ ವಿವರಿಸುವುದು ಸಾಧ್ಯವಲ್ಲದ ಕೆಲಸ. ಆದರೂ ಭಗವಂತನ ನಾನಾ ಗುಣಗಳನ್ನು ಎರಡು ಬಗೆಯಾಗಿ ವಿಂಗಡಿಸಿ ಹೇಳುವುದು ವಾಡಿಕೆ. ಪರಮಶ್ರೇಷ್ಠವಾದ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸುಗಳೆಂಬ ಷಡ್ಗುಣಗಳು. ಷಡ್ಗುಣ ಪೂರ್ಣನಾದ ಭಗವಂತನನ್ನು ಅರಿತುಕೊಳ್ಳಲು ಎಷ್ಟೆಷ್ಟು ಯತ್ನಿಸಿದರೂ, ಆ ಎಲ್ಲ ಯತ್ನಗಳೂ ಅಲ್ಪವೇ ಎನಿಸುತ್ತದೆ. ತಿಳಿವಳಿಕೆಯ ಅತ್ಯುನ್ನತ ಮಟ್ಟಕ್ಕಿಂತಲೂ ಮೀರಿದ ಈ ಗುಣಗಳನ್ನು ಭಗವಂತನ 'ಪರತ್ವ' ಗುಣಗಳು ಎನ್ನುತ್ತಾರೆ. ಪರತ್ವ ಗುಣಗಳ ಮೂಲಕವೇ ಭಗವಂತನನ್ನು ಅರಿತುಕೊಳ್ಳುವುದಂತೂ ದುಸ್ತರವೇ.

ಭಗವಂತನ ಮತ್ತೊಂದು ಬಗೆಯ ಗುಣಗಳು, ಪರತ್ವ ಗುಣಗಳಿಗೆ ಪೂರ್ಣ ವ್ಯತಿರಿಕ್ತವಾದವು. ಸೌಶೀಲ್ಯ, ಕಾರುಣ್ಯ, ವಾತ್ಸಲ್ಯ, ಮುಂತಾದ ಗುಣಗಳಿಂದಲೂ ಪೂರ್ಣನಾಗಿರುವ ಭಗವಂತನು ಎಲ್ಲರಿಗೂ ಸುಲಭ ಸಾಧ್ಯನಾಗಿದ್ದಾನೆ. ಆದ್ದರಿಂದ ಸ್ವಾಮಿಯ ಈ ಗುಣಗಳನ್ನು 'ಸೌಲಭ್ಯ' ಗುಣಗಳು ಎನ್ನುತ್ತಾರೆ.

ಈ ತಿರುಮೊಳಿಯಲ್ಲಿ ಭಗವಂತನ ಹಿಂದೆ ಯೋಚಿಸಿದ ಪರತ್ವ ಗುಣಗಳನ್ನೂ ಸೌಲಭ್ಯ ಗುಣಗಳನ್ನೂ ಪರಸ್ಪರ ಹೋಲಿಸಿಟ್ಟಿದ್ದಾರೆ, ಆಗ ತೋರಿಸಲಾಗಿದೆ. ವಾಙ್ಮನೋಗೋಚರನಾಗಿರುವ ಭಗವಂತನು ಎಷ್ಟು ದುಸ್ಸಾಧ್ಯನೋ, ಅಷ್ಟೇ ಅದಕ್ಕಿಂತಲೂ ಹೆಚ್ಚಾಗಿ ಸುಲಭನು ಎಂಬುದನ್ನು ನಿದರ್ಶನಗಳ ಮೂಲಕ ವಿವರಿಸಲಾಗಿದೆ. ಧ್ಯಾನ, ತಪಸ್ಸು, ಮೊದಲಾದವುಗಳಿಂದ ಭಗವಂತನನ್ನು ಒಲಿಸಿಕೊಳ್ಳುವುದಕ್ಕೆಂದು ಕಾದು ನಿಂತಿರುವವನಿಗೇ ಸುಲಭನಲ್ಲದವನು, ನೆಲುವುಗಳ ಮೇಲೆ ತೂಗುಬಿಟ್ಟಿರುವ ಹಾಲು, ಮೊಸರು, ಬೆಣ್ಣೆ, ತುಪ್ಪಗಳನ್ನುಂಡು ಶಿಕ್ಷೆಗೆ ಗುರಿಯಾಗುವುದು ವಿಚಿತ್ರವಲ್ಲವೇ? ಗೊಲ್ಲತಿಯಿಂದ ಬಿಗಿಸಿಕೊಂಡು ಕಟ್ಟಿ ಹಾಕಿಸಿಕೊಳ್ಳುವುದೇ? ಸಾಮಾನ್ಯ ಬಾಲಕನಂತೆ ಗೋಳಿಡುವುದೇ? ಇದಕ್ಕಿಂತ 'ಮಾಯೆ' ಎಂಬುದುಂಟೇ?

ಭಗವಂತನ ~~[illegible]~~ ತಿರುವಡಿಗಳನ್ನಾಶ್ರಯಿಸಿ, ಕಲಿಕನ್ರಿ ದಾಸನಾದವನು ತಿರುಮಂಗೈ ನಾಡಿನ ಒಡೆಯನಾದ ಕಲಿಯನು. ಈ ತಿರುಮೊಳಿಯ ಪಾಶುರಗಳ ಮೂಲಕ ಭಗವಂತನ ಪರತ್ವವನ್ನೂ ಸೌಲಭ್ಯವನ್ನೂ ಜೋಡಿ ಜೋಡಿಯಾಗಿ ವಿವರಿಸಿದ್ದಾನೆ. ಧರ್ಮ ನ್ಯಾಯಗಳನ್ನು ಅನುಷ್ಠಾನ ಪೂರ್ವಕವಾಗಿ ಜಗತ್ತಿಗೆ ತೋರಿಸುವುದು, ಲಯಕಾಲ ಬಂದಾಗ ತನ್ನ ಸೃಷ್ಟಿಯೆಲ್ಲವನ್ನೂ ತಬ್ಬಿಸಿ, ತನ್ನ ಹೊಟ್ಟೆಯಲ್ಲಿಟ್ಟುಕೊಂಡು ರಕ್ಷಿಸುವುದು, ದುಷ್ಟನಿಗ್ರಹ ಮಾಡುವುದು, ಶಿಷ್ಟರನ್ನು ರಕ್ಷಿಸುವುದು, ಪರಮೋಪಕಾರಿಯಾಗಿ, ಔದಾರ್ಯ

Gayani Srinivasan

ಗಣೆಯಾಗಿ, ತನ್ನನ್ನು ಆಶ್ರಯಿಸುವವರು ಯಾರೇ ಆಗಲಿ, ಅವರನ್ನು ವಾತ್ಸಲ್ಯದಿಂದ ಕಂಡು ಅವರನ್ನು ಅನುಗ್ರಹಿಸುವುದು, — ಇಂತಹ ಭಗವಂತನ ಗುಣಗಾನ ಮಾಡುತ್ತಾ ರಚಿಸಿರುವ ಪಾಶುರಗಳು.

ಕಲಿಯನು ರಚಿಸಿರುವ ತಮಿಳಿನ ಈ ಪಾಶುರಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದವರ ಇಹ ಜೀವನದ ದುಃಖ ಸಂಕಟಗಳು ಮಾಯವಾಗುವುವು. ಅವರಿಗೆ ಕೊನೆಗೆ ಪರಮ ಪದವೇ ಪ್ರಾಪ್ತವಾಗುವುದು. ಅಲ್ಲಿ ವಾಸಿಸುವ ನಿತ್ಯಸೂರಿಗಳೆಲ್ಲರಂತೆಯೂ ಮೇಲಾದ ಬಾಳ್ವೆಯೂ ನಿತ್ಯಾನಂದ ಸುಖವೂ ಲಭಿಸುವುದು. ಇದೇ ಈ ತಿರುಮೊಳಿಗೆ ಫಲಶ್ರುತಿ!

ಅಡಿಯವರ್: அடிவரவு:— ಎಳ್ಳುನುಮ நாங்காணும், ತಳರ್ನ್ದು தளர்ந்து, ಕನ್ಲು குன்று, ಉಳ್ಳನ್ದು உலாந்து, ಮಲೈತ್ತು பழிக்கிட்ட, ವಜ್ಞ து, ನೀಣ್ಣಾನ್ நீண்டான், ನಿನ್ನಾರ್ நின்றார் படை, ನೀಲ್ ஒருறி, ಶುರ சுரி,
(ಮಾನಮ மாணம்)

23.2.79

ಪೆರಿಯ ತಿರುಮೊೞಿ — ಹತ್ತನೆಯ ದಶಕ — ಏಳನೆಯ ತಿರುಮೊೞಿ.

பெரிய திருமொழி — பத்தாம் பத்து — ஏழாந் திருமொழி

7. ಮಾನಮುಡೈತ್ತು ಉಂಗಳ್ — மானமுடைத்துங்கள்

1. மானமுடைத்துங்களாயர்குலம்
அதனாற் பிறர்மக்கள் தம்மை,
ஊனமுடையன செய்யப்பெறாயென்
றிரப்பனுரப்பகில்லேன்,
நானுமுரைத்திலேன் நந்தன் பணித்திலன்
நங்கைகாள்! நானென் செய்கேன்,
தானுமோர் கன்னியுங் கீழையகத்துத்
தயிர் கடைகின்றான் போலும்.

ಮಾನಮುಡೈತ್ತು ಉಂಗಳಾಯರ್ ಕುಲಮ್ ಅದನಾಲ್ ಪಿಱರ್ ಮಕ್ಕಳ್ ತಮ್ಮೈ,
ಊನಮುಡೈಯನ ಶೆಯ್ಯಪ್ಪೆಱಾಯೆನ್ಱಿರಪ್ಪನ್ ಉರಪ್ಪಗಿಲ್ಲೇನ್,
ನಾನುಮುರೈತ್ತಿಲೇನ್ ನಂದನ್ ಪಣಿತ್ತಿಲನ್ ನಂಗೈಗಾಳ್! ನಾನೆನ್ ಶೆಯ್ಗೇನ್,
ತಾನುಮೋರ್ ಕನ್ನಿಯುಂ ಕೀೞೈಯಗತ್ತುತ್ ತಯಿರ್ ಕಡೈಗಿನ್ಱಾನ್ ಪೋಲುಮ್.

ಮಾನಮ್ ಉಡೈತ್ತು மானம் உடைத்து = ಗೌರವವನ್ನು ಉಳ್ಳ ಆಯರ್ ಕುಲಮ್ ஆயர்குலம் = ಮಾಡಿ, ಉಂಗಳ್ உங்கள் = ನಿಮ್ಮ, ಗೋವಳ ಕುಲಕ್ಕೆ, ಅದನಾಲ್ அதனால் = ಆ ಉತ್ತಮ ಕುಲದಲ್ಲಿ, ಪಿಱರ್ ಮಕ್ಕಳ್ ತಮ್ಮೈ பிறர் மக்கள் தம்மை = ಇತರರ ಮಕ್ಕಳನ್ನು, ಊನಮ್ ಉಡೈಯನ ஊனம் உடையன = ನಿಂದೆಗೆ ಆಸ್ಪದವಾದವನ್ನು, ಶೆಯ್ಯಪ್ಪೆಱಾಯ್ செய்யப் பெறாய் = ಮಾಡಬಲ್ಲನು (ಮಾಡಕೂಡದವನು) ಎನ್ಱು என்று = ಎಂದು, ಇರಪ್ಪನ್ இரப்பன் = ಬೇಡುವೆನು, ಉರಪ್ಪಗಿಲ್ಲೇನ್ உரப்பகில்லேன் = ಕೋಪದಿಂದ ಬೈಯ್ಯುವುದಿಲ್ಲ, ನಾನುಮ್ நானும் = ನಾನೂ ಕೂಡ, ಉರೈತ್ತಿಲೇನ್ உரைத்திலேன் = ಏನನ್ನೂ ಹೇಳುತ್ತಿಲ್ಲ (ಹೇಳಿಲ್ಲ), ನಂದನ್ நந்தன் = ನಂದಗೋಪನು, ಪಣಿತ್ತಿಲನ್ பணித்திலன் = ಕಟ್ಟುನಿಟ್ಟಾಗಿ ಮಾತನಾಡುವುದಿಲ್ಲ, (ಆಡಿಲ್ಲ), ನಂಗೈಗಾಳ್ நங்கைகாள் = ಹೆಣ್ಣುಮಕ್ಕಳೇ, ನಾನ್ நான் = ನಾನು, ಎನ್ ಶೆಯ್ಗೇನ್ என் செய்கேன் = ಏನು ಮಾಡಲಿ, ತಾನುಮ್ தானும் = ಅವನೂ, ಓರ್ ಕನ್ನಿಯುಮ್ ஓர் கன்னியும் = ಒಬ್ಬ ಕನ್ಯೆಯೂ, ಕೀೞೈ ಅಗತ್ತು கீழை அகத்து = ಕೆಳಗಿನ ಮನೆಯಲ್ಲಿ, ತಯಿರ್ தயிர் = ಮೊಸರನ್ನು, ಕಡೈಗಿನ್ಱಾನ್ ಪೋಲುಮ್ கடைகின்றான் போலும் =

ಮೊಸರು ಕಡೆಯುತ್ತಿದ್ದಾಳೆ ಎಂದು ತೋರುತ್ತದೆ.

ಹೆಣ್ಣು ಮಕ್ಕಳೇ, ನಿಮ್ಮ ಗೋವಳ ಕುಲಕ್ಕೆ ಗೌರವವನ್ನುಂಟು ಮಾಡಿದ್ದಾನೆ. ಆ ಉತ್ತಮ ಕುಲದಲ್ಲಿ ಇತರರ (ಹೆಣ್ಣು) ಮಕ್ಕಳನ್ನು ನಿಂದೆಗೆ ಗುರಿಯಾಗುವಂತೆ ಮಾಡಬಾರದು ಎಂದು ಬೇಡಿಕೊಳ್ಳುವೆನು, ಕೋಪಿಸಿಕೊಳ್ಳುವುದಿಲ್ಲ. ನಾನು ಏನನ್ನೂ ಹೇಳುತ್ತಿಲ್ಲ. ನಂದಗೋಪನೂ ಕಟ್ಟುನಿಟ್ಟಾಗಿ ಮಾತನಾಡುವುದಿಲ್ಲ. ನಾನೇನು ಮಾಡಲಿ? ಅವನೂ ಒಬ್ಬ ಕನ್ಯೆಯೂ ಕೆಳಗಿನ ಮನೆ (1) ಯಲ್ಲಿ ಮೊಸರು ಕಡೆಯುತ್ತಿದ್ದಾರೆಂದು ತೋರುತ್ತದೆ.

ತಾಯಿ ಯಶೋದೆಯ ಬಳಿಗೆ ನಂದಗೋಕುಲದ ಕೆಲವರು ಹೆಣ್ಣು ಮಕ್ಕಳು ಬರುತ್ತಾರೆ. ಕೃಷ್ಣನು ಮಾಡುವ ಬಗೆಬಗೆಯ ಚೇಷ್ಟೆಗಳನ್ನು ಹೇಳಿಕೊಳ್ಳುತ್ತಾರೆ. ಅವನನ್ನು ದಂಡಿಸಬೇಕೆಂದು ಅವರ ಆಶೆ. ತನ್ನ ಮುದ್ದು ಮಗನ ಮೇಲೆ ಎಲ್ಲರೂ ಇಷ್ಟೊಂದು ಚಾಡಿ ಹೇಳುತ್ತಾರಲ್ಲ ಎಂದು ತಾಯಿಗೆ ಸಂಕಟವಾಗುತ್ತದೆ. ಏನಾದರೂ ಮಾತುಗಳನ್ನಾಡಿ ಅವರನ್ನು ಸಂತೈಸಬೇಕೆಂದು ಬಯಸುತ್ತಾಳೆ. ಅವರ ದೂರಿನ ಜೊತೆಗೆ ತನ್ನದೂ ಒಂದು ದೂರನ್ನು (ದೂರಿನ ಪ್ರಸಂಗವನ್ನು) ಜೋಡಿಸಿ ಹೇಳುತ್ತಾಳೆ. ಅದೇನು ಅವರಿಗೆ ಸಮಾಧಾನದ ಮಾತೋ, ಮಗನ ವಿಷಯದ ದೂರೋ ತಾತ್ಪರ್ಯ ತಾನೇ.

ಯಶೋದೆ ಹೇಳುತ್ತಾಳೆ: ಹೆಣ್ಣು ಮಕ್ಕಳೇ, ನಿಮ್ಮದು ಗೋವಳರ ಕುಲ. ಭಗವಂತನು ಶ್ರೀಕೃಷ್ಣನಾಗಿ ಈ ಗೋವಳ ಕುಲದಲ್ಲಿ ಅವತರಿಸಿ, ~~ಈ~~ ಈ ಕುಲಕ್ಕೆ ಗೌರವ ತಂದಿದ್ದಾನೆ. ಇದನ್ನು ನೀವು ಮರೆಯಬಾರದು ಕಂಡಿರಾ! ಇಡಿಯ ನಂದಗೋಕುಲಕ್ಕೆ ಅವನು ಮುದ್ದಿನ ಮಗನಲ್ಲವೇ? ತಾಯಿಯಾಗಿ ನನಗೆ ಅವನಲ್ಲಿ ಕೋಪ ಮಾಡಿಕೊಳ್ಳಲು ಬರುವುದೇ ಇಲ್ಲ. ಗದರಿಸಿ ಒಂದು ಮಾತನ್ನೂ ಆಡುವವಳಲ್ಲ. ಮೊದಲಿಂದಲೂ ನಾನು ಹಾಗೆಯೇ. ಅವನು ಏನೇ ಮಾಡಲಿ, ನನಗೆ ಕೋಪ ಬರುವುದಿಲ್ಲ. ಅವನ ತಂದೆ ನಂದನೂ ಹಾಗೆಯೇ. ಎಂದಿಗೂ ಅವನನ್ನು ಕುರಿತು ~~ಒಂದು~~ ದಂಡನೆಯ ಒಂದು ಮಾತನ್ನೂ ಆಡುವುದಿಲ್ಲ. ಕಟ್ಟುನಿಟ್ಟಾಗಿ ಮಾತನಾಡುವುದಿಲ್ಲ. ನೀವೆಲ್ಲರೂ ಈ ಮುದ್ದು ಮಗನ ಮೇಲೆ ಬಗೆಬಗೆಯಾಗಿ ನೀವು ದೂರುತ್ತಿದ್ದೀರಿ. "ಬೇಡಪ್ಪ, ಕಂದ ಪರ ಹೆಣ್ಣು ಮಕ್ಕಳ ಜೊತೆಯಲ್ಲಿ, ಸಲ್ಲದ ಚೇಷ್ಟೆಗಳನ್ನು ಮಾಡಬಾರದಪ್ಪ. ಅವರನ್ನು ನಿಂದೆಗೆ ಗುರಿಮಾಡಬೇಡಪ್ಪ" – ಎಂದು ನಾನು ಅವನನ್ನು ಮೃದುವಾಗಿ (ನಯವಾಗಿ) ಬೇಡಿಕೊಳ್ಳಬಲ್ಲೆ, ಅಷ್ಟೇ. ನೋಡಿ, ಈ ಕ್ಷಣದಲ್ಲಿ, ಅವನು ಕೆಳಗಡೆ ಮನೆಯ ಹುಡುಗಿಯ ಜೊತೆಯಲ್ಲಿ ಮೊಸರನ್ನು ಕಡೆಯುತ್ತಿದ್ದಾನೆಂದು ತೋರುತ್ತದೆ. ಹೆಣ್ಣು ಮಕ್ಕಳೇ, ನಾನೇನು ಮಾಡಲಿ?

೨. காலையெழுந்து கடைந்தவிம் மோர் விற்கப்
போகின்றேன் கண்டே போனேன்,

Garani Srinivasan

மாலை நறுங்குஞ்சி நந்தன் மகனல்லால்
மற்று வந்தாருமில்லை,
மேலையகத்து நங்காய் வந்து காண்மின்கள்
வெண்ணெயேயன்றிருந்த,
பாலும் பதின் குடங்கண்டிலேன்
பாவியேனென் செய்கேன்? என் செய்கேனே.

ಕಾಲೈಯೆಳುನ್ದು ಕಡೈನ್ದ ಇಮ್ಮೋರ್ ವಿಱ್ಕಪ್ಪೋಹಿನ್ಱೇನ್ ಕಣ್ಡೇ ಪೋನೇನ್,
ಮಾಲೈ ನಱುಙ್ಗುಂಜಿ ನನ್ದನ್ ಮಗನಲ್ಲಾಲ್ ಮಱ್ಱು ವನ್ದಾರುಮಿಲ್ಲೈ,
ಮೇಲೈಯಹತ್ತು ನಙ್ಗಾಯ್ ವನ್ದು ಕಾಣ್ಮಿನ್ಗಳ್ ವೆಣ್ಣೆಯೇಯನ್ಱಿರುನ್ದ,
ಪಾಲುಮ್ ಪದಿನ್ ಕುಡಙ್ಗಣ್ಡಿಲೇನ್ ಪಾವಿಯೇನೆನ್ ಶೆಯ್‌ಗೇನ್? ಎನ್ ಶೆಯ್‌ಗೇನೇ.

ಕಾಲೈ காலை = ಮುಂಜಾನೆಯೇ, ಎಳುನ್ದು எழுந்து = ಎದ್ದು, ಕಡೈನ್ದ கடைந்த = ಕಡೆದ, ಇ-ಮ್ಮೋರ್ இ-மோர் = ಈ ಮಜ್ಜಿಗೆಯನ್ನು, ವಿಱ್ಕ விற்க = ಮಾರಲು, ಪೋಹಿನ್ಱೇನ್ போகின்றேன் = ಹೋಗುತ್ತಿರುತ್ತೇನೆ, ಕಣ್ಡೇ ಪೋನೇನ್ கண்டே போனேன் = ನೋಡಿಯೇ ಹೋದೆ, ಮಾಲೈ மாலை = ಮಾಲೆಯ, ನಱು நறு = ಪರಿಮಳತುಂಬಿದ, ಕುಂಜಿ குஞ்சி = ಕೇಶಾದಲಿನ, ನನ್ದನ್ நந்தன் = ನಂದಗೋಪನ, ಮಗನ್ ಅಲ್ಲಾಲ್ மகன் அல்லால் = ಮಗನಲ್ಲದೆ, ಮಱ್ಱು ವನ್ದಾರುಮ್ ಇಲ್ಲೈ மற்று வந்தாரும் இல்லை = ಬೇರೆ ಯಾರೂ ಬಂದವರಿಲ್ಲ, ಮೇಲೈ ಅಹತ್ತು மேலை அகத்து = ಮೇಲಣ ಮನೆಯ, ನಙ್ಗಾಯ್ நங்காய் = ಶ್ರೀಮಂತೆಯೇ (ಸಾಧ್ವಿಯೇ), ವನ್ದು ಕಾಣ್ಮಿನ್ಗಳ್ வந்து காண்மின்கள் = ಬಂದು ನೋಡಿರಿ, ವೆಣ್ಣೆಯ್ಯೇ வெண்ணெயே = ಬೆಣ್ಣೆಯೇ, ಅನ್ಱಿ அன்றி = ಅಲ್ಲದೆ, ಪಾಲುಮ್ பாலும் = ಹಾಲಿನ, ಪದಿನ್ பதின் = ಹತ್ತು, ಕುಡಙ್ಗಣ್ಡಿಲೇನ್ குடங்கண்டிலேன் = ಕೊಡಗಳನ್ನು ಕಾಣಲಿಲ್ಲ, ಪಾವಿಯೇನ್ பாவியேன் = ಪಾಪಿಷ್ಠಳು (ನಿರ್ಭಾಗ್ಯಳು) ನಾನು, ಎನ್ ಶೆಯ್‌ಗೇನ್ என் செய்கேன் = ಏನು ಮಾಡಲಿ, ಎನ್ ಶೆಯ್‌ಗೇನೇ என் செய்கேனே = ಏನು ಮಾಡಬಲ್ಲೆನೋ?

ಮೇಲಣ ಮನೆಯ ಸಾಧ್ವಿಯೇ, ಮುಂಜಾನೆಯೇ ಎದ್ದು ಕಡೆದ ಈ ಮಜ್ಜಿಗೆಯನ್ನು ಮಾರಲು ಹೋಗುತ್ತಿರುತ್ತೇನೆ. ನಾನು (ಎಲ್ಲವನ್ನು) ನೋಡಿಯೇ ಹೋದೆ. ಮಾಲೆಧರಿಸಿದ ಪರಿಮಳತುಂಬಿದ ಕೇಶಾದಲಿನ ನಂದಗೋಪನ ಮಗನಲ್ಲದೆ ಬೇರೆ ಯಾರೂ ಬಂದವರಿಲ್ಲ. ನೀವೇ ಬಂದು ನೋಡಿರಿ. ಬೆಣ್ಣೆಯೇ ಅಲ್ಲದೆ ಹಾಲಿನ ಹತ್ತು ಕೊಡಗಳನ್ನು ಕಾಣೆನಲ್ಲ! ನಿರ್ಭಾಗ್ಯಳು ನಾನು! ಏನು ಮಾಡಲಿ? ಏನು ಮಾಡಬಲ್ಲೆ? (2)

ಗೊಲ್ಲತಿಯೊಬ್ಬಳು ತಾಯಿ ಯಶೋದೆಯಲ್ಲಿ ದೂರು ಹೇಳುತ್ತಾಳೆ:
ಮೇಲಣ ಮನೆಯ ಸಾಧ್ವಿಯೇ, ಪ್ರತಿದಿನವೂ ನಾನು ಬೆಳಗ್ಗೆ ಹೊತ್ತಿಗೆ ~~ಮಜ್ಜಿಗೆ~~

ಮುಂಚೆ ಏಳುತ್ತೇನೆ. ಮೊಸರು ಕಡೆಯುತ್ತೇನೆ. ಬೆಣ್ಣೆಯನ್ನು ತೆಗೆಯುತ್ತೇನೆ. ಹಾಲನ್ನು ಕರೆಯುತ್ತೇನೆ. ಅನಂತರ ಬೆಣ್ಣೆಯನ್ನು ಹಾಲನ್ನು ಸರಿಯಾಗಿ ಭದ್ರಪಡಿಸಿ, ಮಜ್ಜಿಗೆಯನ್ನು ಮಾರಲು ಮಧುರಾಪಟ್ಟಣಕ್ಕೆ ಹೋಗುತ್ತೇನೆ. ಇದು ನನ್ನ ದಿನಚರಿ. ನಾನು ಹೋಗುವುದಕ್ಕೆ ಮುಂಚೆ, ಎಲ್ಲವನ್ನು ಸರಿಯಾಗಿ ಮುಚ್ಚಿಟ್ಟಿದ್ದೇನೆಯೋ ಇಲ್ಲವೋ ಎಂದು ನೋಡುವುದು ವಾಡಿಕೆ. ಈ ದಿನ ಬೆಳಗ್ಗೆಯೂ ಎಲ್ಲವನ್ನೂ ಸರಿಯಾಗಿ ಮುಚ್ಚಿಟ್ಟು, ಮತ್ತೊಂದು ಸಲ ನೋಡದೆಯೇ ಮಜ್ಜಿಗೆ ಮಾರಲು ಹೋದೆ. ~~ಮತ್ತೆ~~, ಮಜ್ಜಿಗೆಯನ್ನು ಮಾರಿಕೊಂಡು ಬಳಿಕ ಮನೆಗೆ ಬಂದು ನೋಡುತ್ತೇನೆ: ಭದ್ರಪಡಿಸಿದ್ದ ಬೆಣ್ಣೆಯೂ ಇಲ್ಲ! ಜೊತೆಗೆ, ಹತ್ತು ಕೊಡಗಳ ಹಾಲೂ ಇಲ್ಲ! ನಮ್ಮ ಮನೆಗೆ ಅಷ್ಟು ದಿಲಗಿಯಿಂದ ಧೈರ್ಯದಿಂದ ನುಗ್ಗಿ ಎಲ್ಲ ಬೆಣ್ಣೆಯನ್ನು ಹಾಲನ್ನು ನುಂಗುವ ಸಾಹಸಿ ಇನ್ನಾರಿದ್ದಾರೆ? ಹೂಮಾಲೆಯನ್ನು ಧರಿಸಿದ ಪರಿಮಳವುಳ್ಳ ತಲೆಗೂದಲಿನ ನಿಮ್ಮ ಮುದ್ದು ಮಗನಾದ ಕೃಷ್ಣನಲ್ಲದೆ ಬೇರೆಯಾರಿಗೂ ಸಾಧ್ಯವಿಲ್ಲ. ಬನ್ನಿ, ನೀವೇ ಬಂದು ನೋಡಿ. ನಾನು ಹೇಳುವ ಮಾತಿನ ಸತ್ಯಾಂಶ ನಿಮಗೇ ತಿಳಿಯುವುದು. ಎಲ್ಲವನ್ನು ಕಳೆದುಕೊಂಡಿರುವ ನಿರ್ಭಾಗ್ಯಳು ನಾನು! ನಾನೇನು ಮಾಡಲಿ? ಏನು ತಾನೆ ಮಾಡಬಲ್ಲೆ?

3. தெள்ளியவாய்ச் சிறியான் நங்கைகாள்
உறிமேலைத் தடாநிறைந்த,
வெள்ளிமலை யிருந்தாலொத்த
வெண்ணெயை வாரிவிழுங்கியிட்டு,
கள்வனுறங்குகின்றான் வந்துகாண்மின்கள்
கையெல்லாம் நெய் வயிறு,
பிள்ளைபரமன்றிவ்வேழுலகுங்கொள்ளும்
பேதையேனென்செய்கேனோ?

ತೆಳ್ಳಿಯವಾಯ್ ಚಿಱಿಯಾನ್ ನಙ್ಗೈಗಾಳ್
ಉಱಿ ಮೇಲೈತ್ತಡಾ ನಿಱೈನ್ದ,
ವೆಳ್ಳಿಮಲೈಯಿರುನ್ದಾಲೊತ್ತ
ವೆಣ್ಣೆಯ್ಯೈ ವಾರಿ ವಿೞುಙ್ಗಿಯಿಟ್ಟು,
ಕಳ್ವನುಱಙ್ಗುಗಿನ್ಱಾನ್ ವನ್ದು ಕಾಣ್ಮಿನ್ಗಳ್
ಕೈಯೆಲ್ಲಾಮ್ ನೆಯ್ ವಯಿಱು,
ಪಿಳ್ಳೈ ಪರಮನ್ಱಿವ್ವೇೞುಲಗುಙ್ಗೊಳ್ಳುಮ್
ಪೇದೈಯೇನೆನ್ ಶೆಯ್ಗೇನೋ.

Garani Srinivasan

ಶೆಳ್ಳಿಯ ವಾಯ್ ಪ್ಪೆಣ್ಣಿಯ ಮಾಯ್ = ಶುದ್ಧವಾದ ಬಾಯಿಯ, ಶೆಱು
ಯಾನ್ ಶಿಱಿಯಾನ್ = ಚಿಕ್ಕ ಮಗುವು (ಚಿಕ್ಕವನು), ನಲ್ಲೆಪ್ಪಾಳ್ ನಙ್ಗಾಗ
ಕಾಣ್ = ಶ್ರೀಮತಿಗಳೇ, ಉಱಿ ಮೇಲ್ತ್ತ ಉಱ್ಱಿ ಮೇಲ್ = ನೆಲುವಿನ ಮೇಲೆ
ಶಡಾ ಕ್ಕುಡಾ = ಬಾನೆಯಲ್ಲಿ (ದೊಡ್ಡ ಗಡಿಗೆಯಲ್ಲಿ), ನಿಱೈತ್ತ ಸ್ಱಿಱ್ಱಾಂಕ್ಕ = ತುಂ
ಬಿದ, ವೆಳ್ಳಿ ವೆಣ್ಣೆಯ್ = ಬೆಳ್ಳಿಯ, ಮಲ್ಲ್ತ ಇರುನ್ದಾಲ್ (ಮಲೈ ಇರುನ್ದಾಱ್ಪೋಲ್)
= ಬೆಟ್ಟವು ಇದ್ದಹಾಗೆ, ವೆಣ್ಣೆಯ್ಯ ವೆಣ್ಣೆವಾಯ = ಬೆಣ್ಣೆಯನ್ನು,
ವಾರಿ ಮಾರಿ = ಬಾಚಿ ಬಾಚಿ, ವಿೞುಙ್ಗಿಯುಟ್ಟು ವಿೞುನ್ದುಕ್ಕಿಯಿಟ್ಟು =
ನುಂಗಿಬಿಟ್ಟು, ಕಳ್ವನ್ ಕಣ್ವಳರ್ = ಮಾಯಗಾರನು, ಉಱಙ್ಗುಹಿನ್ಱಾನ್
ಉಱಙ್ಗುಕಿನ್ಱಾನ್ = ನಿದ್ರಿಸುತ್ತಿದ್ದಾನೆ, ವನ್ದು ಕಾಣ್ಣೀರ್ ದಳ್ ಮನ್ದುಕಾ
ಣ್ಣ ಮಿನ್ ಕಳ್ = ಬಂದು ನೋಡಿರಿ, ಕೈಯೆಲ್ಲಾಮ್ ನೆಯ್ ವಯಿಱ್ಱಿಲಾಂ = (ಇವನ
ಕೈಯೆಲ್ಲವು, ನೆಯ್ ಪ್ರಾಯ = ತುಪ್ಪವಾಗಿದೆ, ವಯಿಱು ಮಾಯಿಱು = ಮಗುವಿನ ವಯಸ್ಸಿನದು
ಹೊಟ್ಟೆಯೋ, ಪಿಳ್ಳೈ ಪರಮನ್ ಪಿನ್ ಪಾರಮ್ = ಮಗುವಿನ ವಯಸ್ಸಿನದು, ಇವಿಱು ಉಲಹುಮ್ ಶಿಱ ಉಲಕ
~~ವನು~~, ಅನ್ಱು ಅಣ್ಱಿ = ಅಲ್ಲದೆ, ಇವಿಱು ಉಲಹುವ ಕೊಣ್ಡಾಮ್ = ಹಿಡಿಸುತ್ತದೆ
ಮ್ = ಈ ಏಳು ಲೋಕಗಳನ್ನು, ಶೆಳ್ಳುಮ ಕೊಣ್ಡಾಮ್ = ನಿನಗೂ ಅರಿಯದವಳಲ್ಲ (ನಾನು), (ಬಡ
ಹೇಡೈಯೋನ್ ಪೇತೈಯೇನ್ = ನಿನಗೂ ಅರಿಯದವಳಲ್ಲ (ನಾನು), (ಬಡ
ವಳಲ್ಲ ನಾನು), ಏನ್ ಶೆಯ್ದೇನೋ ಎಣ್ ಶೆಯ್ಕೇಱೋ = ಏನು
ಮಾಡಬಲ್ಲೆನೋ?

ಸಾಧ್ವಿಗಳೇ, ಚಿಕ್ಕವನು ಶುದ್ಧವಾದ ಬಾಯುಳ್ಳವನು. ನೆಲುವಿನ
ಮೇಲೆ ದೊಡ್ಡ ಗಡಿಗೆಯಲ್ಲಿ (ಬಾನೆಯಲ್ಲಿ) ಬೆಳ್ಳಿಯ ಬೆಟ್ಟ ಇದ್ದಹಾಗೆ
ತುಂಬಿಟ್ಟಿದ್ದ ಬೆಣ್ಣೆಯನ್ನು ಬಾಚಿ ಬಾಚಿ ನುಂಗಿಬಿಟ್ಟು ಮಾಯಗಾರನು
ನಿದ್ರಿಸುತ್ತಿದ್ದಾನೆ. ಬಂದು ನೋಡಿರಿ. ಅವನ ಕೈಯೆಲ್ಲವೂ ತುಪ್ಪವಾಗಿದೆ.
ಅವನ ಹೊಟ್ಟೆಯೋ ಮಗುವಿನ ವಯಸ್ಸಿನದು. ಅಲ್ಲದೆ, ಈ ಏಳು ಲೋಕ
ಗಳನ್ನು ಹಿಡಿಸುತ್ತದೆ. ನಾನು ಬಡವಳಲ್ಲ! ಏನು ಮಾಡಬಲ್ಲೆನೋ? (3)

ಹೀಗೆ ತಾಯಿ ಯಶೋದೆ ತನ್ನ ಮುಂದೆ ನಿಂತಿರುವ ಗೋಪಿಯರಿಗೆ
ಈಗ ಶಾಯಿ ಯಶೋದೆ ತನ್ನ ಮುಂದೆ ನಿಂತಿರುವ ಹೆಂಗಳಿರ ದೂರನ್ನು ಹೇಳಿದೆ.
ಹೇಳುತ್ತಾಳೆ: ಸಾಧ್ವಿಯರೇ, ನಿಮ್ಮಲ್ಲಿ ಇಬ್ಬರು ಹೇಳಿದ ದೂರನ್ನು ನೋಡಿ. ಶುದ್ಧವಾಗಿದೆ, ನೋಡಿ.
ಬಂದು ನೋಡಿ. ನಮ್ಮ ಮಗುವಿನ ಬಾಯನ್ನು ನೋಡಿ. ತುಂಬ ಬೆಣ್ಣೆಯನ್ನಿಟ್ಟಿದ್ದೆ. ಅದು
ನಾನು ನೆಲುವಿನ ಮೇಲೆ ದೊಡ್ಡ ಬಾನೆಯಲ್ಲಿ ತುಂಬ ಬೆಣ್ಣೆಯನ್ನಿಟ್ಟಿದ್ದೆ. ಅದು
ಬೆಳ್ಳಿಯ ಬೆಟ್ಟದ ಹಾಗೆ ಅಲ್ಲಿ ಕಾಣುತ್ತಿತ್ತು. ಅವನು ಅದನ್ನೆಲ್ಲಾ ಬಾಚಿ
ಬಾಚಿ ನುಂಗಿಬಿಟ್ಟಿದ್ದಾನಲ್ಲ! ಈಗ ಅವನು ನಿದ್ದೆ ಮಾಡುತ್ತಿದ್ದಾನೆ. ಎಂಥ ಮಾಯ
ಗಾರ ಅವನು! ಅವನ ಕೈಯೆಲ್ಲಾ ತುಪ್ಪದ ವಾಸನೆ! ಅವನ ಹೊಟ್ಟೆಯೋ ಹಾಗಿದ್ದರೂ
ಚಿಕ್ಕ ಮಕ್ಕಳ ಹೊಟ್ಟೆಯೇ! ಆದರೆ, ಏಳು ಲೋಕಗಳೂ ಅದರಲ್ಲಿ ಹಿಡಿಸು
ತ್ತದೆಯಂತೆ! ಕಂಡಿರಾ! ನಾನು ನಿನಗೂ ಅರಿಯದವಳು. ಅಜ್ಞಾನಿ. ನಾನೇನು
ಮಾಡಬಲ್ಲೆ? ನನ್ನ ಮಗನ ಚಿತ್ರ ವಿಚಿತ್ರವಾದ ವರ್ತನೆಯನ್ನು ನಾನು
ಹೇಗೆ ಅರಿತುಕೊಳ್ಳಬಲ್ಲೆ? ಹೇಗೆ ತಡೆಯಬಲ್ಲೆ?

4. மைந்நம்பு வேற்கணல்லாள் முன்னம் பெற்ற
வளை வண்ண நன்மா மேனி,
தன்னம்பி நம்பியுமிங்கு வளர்ந்தது
அவனிவை செய்தறியான்,
பொய்ந்நம்பி புள்ளுவன் கள்வம் பொதியறை
போகின்றவா தவழ்ந்திட்டு,
இந்நம்பி நம்பியா ஆய்ச்சியர்க்குய் விஸ்லை
என் செய்கேன்? என் செய்கேனே.

ಮೈನ್ನಮ್ಬು ವೇಲ್ ಕಣ್ಣಲ್ಲಾಳ್ ಮುನ್ನಮ್ ಪೆತ್ತ
ವಳೈ ವಣ್ಣ ನನ್ ಮಾ ಮೇನಿ,
ತನ್ನಮ್ಬಿ ನಮ್ಬಿಯುಮ್ ಇಙ್ಙು ವಳರ್ನ್ದದು
ಅವನಿವೈ ಶೆಯ್ದಱಿಯಾನ್,
ಪೊಯ್ನ್ನಮ್ಬಿ ಪುಳ್ಳುವನ್ ಕಳ್ವನ್ ಪೊದಿಯಱೈ
ಪೋಗಿನ್ಱವಾ ತವಳ್ನ್ದಿಟ್ಟು,
ಇನ್ನಮ್ಬಿ ನಮ್ಬಿಯಾ ಆಯ್ಚ್ಚಿಯರ್ಕ್ಕುಯ್ ವಿಲ್ಲೈ
ಯೆನ್ ಶೆಯ್ದೇನ್? ಎನ್ ಶೆಯ್ದೇನೇ.

ಮೈ மை = ಕಾಡಿಗೆಯುಳ್ಳ, ನಮ್ಬು நம்பு = ಅಲಂಕರಿಸಿರುವ, ವೇಲ್ வேல் = ವೇಲಾಯುಧದಂತೆ, ಕಣ್ கண் = ಕಣ್ಣಿನವಳಾದ, ನಲ್ಲಾಳ್ நல்லாள் = ಸದ್ಗುಣವತಿಯು, ಮುನ್ನಮ್ முன்னம் = ಮೊದಲು, ಪೆತ್ತ பெற்ற = ಹಡೆದ, ವಳೈ ವಣ್ಣಮ್ வளை வண்ணம் = ಬಳೆಯ = ಶಂಖದ ಬಣ್ಣದ, ನಲ್ ಮಾ ಮೇನಿ நல் மா மேனி = ಸುಂದರವಾದ ದೇಹದ, ತನ್ ನಮ್ಬಿ ನಮ್ಬಿಯುಮ್ தன் நம்பி நம்பியும் = ತನ್ನ ಬಾಲಕನಾದ (ಬಲರಾಮ) ಸ್ವಾಮಿಯು, ಇಙ್ಙು இங்கு = ಇಲ್ಲಿಯೇ, ವಳರ್ನ್ದದು வளர்ந்தது = ಬೆಳೆದದ್ದು, ಅವನ್ அவன் = ಅವನು, ಇವೈ இவை = ಇವುಗಳನ್ನೆಲ್ಲಾ, ಶೆಯ್ದು ಅಱಿಯಾನ್ செய்து அறியான் = ಮಾಡುವುದನ್ನರಿಯನು, ಪೊಯ್ ನಮ್ಬಿ பொய் நம்பி = ಸುಳ್ಳು (ವೇಷದ) ಸ್ವಾಮಿಯು (ಬಾಲಕನು), ಪುಳ್ಳುವನ್ புள்ளுவன் = ಮಂತ್ರಕನು (ಕಾಣಿಕ್ಕಾರದಂತೆ), ಕಳ್ವನ್ கள்வன் = ಕಳ್ಳನು, ಪೊದಿ பொதி = ಅಡಗಿಕೊಳ್ಳುವವನು (ಬಚ್ಚಿಟ್ಟುಕೊಳ್ಳುವವನು), ಅಱೈ அறை = ಮಾಯಾವಿ, ಪೋಗಿನ್ಱ ಆ போகின்ற ஆ = ಹೋಗುತ್ತಿರುವ ಹಾಗೆಯೇ, ~~[illegible]~~ ತವಳ್ನ್ದಿಟ್ಟು தவழ்ந்திட்டு = ತಟ್ಟಾಡುವವನು, ಇ ನಮ್ಬಿ இ-

நம்பி = ಈ ಬಾಲಕನು, ನಮ್ಬಿ ஆ நம்பி ஆ = ನಂಬಲರ್ಹನಾಗಿ
ಆಯ್ಚ್ಚಿಯರ್ಕ್ಕು ஆய்ச்சியர்க்கு = ಗೊಲ್ಲತಿಯರಿಗೆ, ಉಯ್ಯುಮಾರಿಲ್ಲೈ
உய்யுமாறிலை = ಉದ್ಧಾರವಾಗಲಿಲ್ಲ, ಎನ್ ಶೆಯ್‌ಗೇನ್ என் செய்
கேன் = ಏನು ಮಾಡಲಿ? ಎನ್ ಶೆಯ್‌ಗೇನೋ என் செய்கே
னோ = ಏನು ಮಾಡಬಲ್ಲೆನೋ?

ಕಾಡಿಗೆಯಿಟ್ಟಿರುವ, ವೇಲಾಯುಧದಂತೆ ಕಣ್ಣಿನ, ಸದ್ಗುಣವತಿಯು ಮೊದಲು ಹಡೆದ ಶಂಖದ ಬಣ್ಣದ, ಸುಂದರವಾದ ಬಾಲಕನಾದ ನಂಬಿಯು ಇಲ್ಲಿಯೇ ಬೆಳೆದದ್ದು. ಅವನು ಇವುಗಳನ್ನೆಲ್ಲಾ ಮಾಡುವುದನ್ನು ಅರಿಯನು. ಸುಳ್ಳು (ವೇಷದ) ಬಾಲಕನು ವಂಚಕನು, ಕಳ್ಳನು, ಕಣ್ಣಿಗೆ ಬೀಳದಂತೆ ಅದನ್ನು ಕಸಕೊಳ್ಳುವವನು, ಮಾಯಾವಿ. ಹೋಗುತ್ತಿರುವಾಗಲೇ ಕಟ್ಟಾಟವಾಡುವನು. ಈ ಬಾಲಕನು ನಂಬಲರ್ಹನಾಗಿ ಗೊಲ್ಲತಿಯರಿಗೆ ಉದ್ಧಾರವಿಲ್ಲ. (4)
ಏನು ಮಾಡಲಿ? ಏನು ಮಾಡಬಲ್ಲೆನೋ?

ಈ ಪಾಶುರದಲ್ಲಿ ಯಶೋದೆಗೆ ಇಬ್ಬರು ಮಕ್ಕಳೆಂಬಂತೆಯೂ, ಮೊದಲು ಹಡೆದ 'ನಿಜ'ವಾದ ಮಗ ಬಲರಾಮನೆಂದೂ, ಅವನು ಗಂಭೀರ ಸ್ವಭಾವದವನೆಂದೂ, 'ಸುಳ್ಳಿ'ನ ಎರಡನೆಯ ಮಗ ಕೃಷ್ಣನೆಂದೂ, ಅವನು ಕಪಟ ಕಳ್ಳತನಗಳಲ್ಲಿ ನುರಿತವನೆಂದೂ ಹೇಳಲಾಗಿದೆ.

ನಂದಗೋಪನಿಗೆ ರೋಹಿಣಿ ಎಂಬ ಇನ್ನೊಬ್ಬ ಹೆಂಡತಿಯಲ್ಲಿ ಹುಟ್ಟಿದವನು ಬಲರಾಮ. ಯಶೋದೆಗೆ ನಿಜವಾಗಿ ಇವರಿಬ್ಬರೂ ಮಕ್ಕಳಲ್ಲ. 'ಸುಳ್ಳು' ಮಗನಾದ ಕೃಷ್ಣನು ವಸುದೇವ - ದೇವಕಿಯರಲ್ಲಿ ಜನಿಸಿ, ಯಶೋದೆಯ ಸಾಕುಮಗನಾಗಿ ಬೆಳೆದವನು ಅವನು. ಆದರೆ, ಅವನು ತನ್ನ ನಿಜವಾದ ಮಗನೇ ಎಂಬ ಪ್ರೇಮ ವಾತ್ಸಲ್ಯಗಳಿಂದ ಯಶೋದೆಗೆ ಹೆಚ್ಚು.

ಬಲರಾಮ ಕೃಷ್ಣರು ಅಣ್ಣ ತಮ್ಮಂದಿರಂತೆಯೇ ಬೆಳೆದು ಬಂದವರು. ಆದ್ದರಿಂದ ಈ ವಿವರಣೆ ಇರಬಹುದು.

ಗೊಲ್ಲತಿಯೊಬ್ಬಳು ಯಶೋದೆಯಲ್ಲಿ ದೂರು ಹೇಳುತ್ತಾಳೆ: ಸದ್ಗುಣವತಿಯೇ, ನೀನು ಹಡೆದ ಮೊದಲ ಮಗನೂ ಇಲ್ಲಿಯೇ, ಈ ನಂದಗೋಕುಲದಲ್ಲಿಯೇ ಬೆಳೆದವನು. ಶಂಖದಂತೆ ಬಿಳಿಯ ಬಣ್ಣದ, ಸುಂದರವಾದ ದೇಹದ ಅವನು ಯಾವ ಬಗೆಯ ಚೇಷ್ಟೆಗಳನ್ನು ಅರಿಯನು. ಎಲ್ಲ ಬಗೆಯಲ್ಲೂ ಸದ್ಗುಣವಂತನಾಗಿ ಬೆಳೆಯುತ್ತಿದ್ದಾನೆ. ಆದರೆ, ಈ ಮರೆಯಾಗಿರುವ ವೇಷದ ಬಾಲಕನಾದರೋ ವಂಚಕ, ಕಳ್ಳ, ಮಾಯಾವಿ. ಯಾರ ಕಣ್ಣಿಗೂ ಕಾಣದಂತೆ ಇದ್ದಲ್ಲಿಯೇ ಅದನ್ನು ಕಸಕೊಳ್ಳಬಲ್ಲವನು. ನಡೆದು ಹೋಗುತ್ತಿರುವಾಗಲೇ ಕೆಡವುವನು, ಕಟ್ಟಾಟವಾಡುವನು. ಇವರಿಬ್ಬರೂ ನಿನ್ನ ಮಕ್ಕಳಾಗಿ ನಂಬಿಕೆಗೆ ಅರ್ಹರಾದರೂ, ಈ ಎರಡನೆಯವನನ್ನು ನಂಬಿದ ಗೊಲ್ಲತಿಯರಿಗೆ ಉಳಿಗಾಲವಿಲ್ಲ, ಉದ್ಧಾರವಿಲ್ಲ! ನಾನೇನು ಮಾಡಲಿ? ಇವನ ಚೇಷ್ಟೆಗಳನ್ನು ಹೇಗೆ ತಡೆದುಕೊಳ್ಳುವುದು? ಅವುಗಳಿಂದ ಪಾರಾಗುವುದಾದರೂ ಹೇಗೆ? ನಾನೇನು ಮಾಡಬಲ್ಲೆ?

5. தந்தை புகுந்திலன் நானிங்கிருந்திலேன்
தோழிமாராருமில்லை,
சந்தமலர்க் குழலாள் தனியே
விளையாடுமிடங் குறுகி,
பந்து பறித்துத் துகில் பற்றிக் கீறிப்
படிறன் படிறு செய்யும்,
நந்தன் மதலைக்கிங்கென் கடவோம்
நங்காய் என் செய்கேன் என் செய்கேனே.

ತನ್ದೈ ಪುಗುನ್ದಿಲನ್ ನಾನಿಙ್ಗಿರುನ್ದಿಲೇನ್
ತೋೞಿಮಾರಾರುಮಿಲ್ಲೈ,
ಶನ್ದಮಲರ್ ಕ್ಕುೞಲಾಳ್ ತನಿಯೇ
ವಿಳೈಯಾಡುಮಿಡಙ್ಗುಱುಗಿ,
ಪನ್ದುಪಱಿತ್ತುತ್ತುಗಿಲ್ ಪಱ್ಱಿಕ್ಕೀಱಿ
ಪ್ಪಡಿಱನ್ ಪಡಿಱು ಶೆಯ್ಯುಮ್,
ನನ್ದನ್ ಮದಲೈಕ್ಕಿಙ್ಗೆನ್ ಕಡವೋಮ್,
ನಙ್ಗಾಯ್ ಎನ್ ಶೆಯ್ಗೇನೆನ್ ಶೆಯ್ಗೇನೇ.

ತನ್ದೈ தந்தை = ತಂದೆಯು, ಪುಗುನ್ದಿಲನ್ புகுந்து இலன் = ಮನೆಯನ್ನು ಪ್ರವೇಶಿಸಿಲ್ಲ, ನಾನ್ நான் = ನಾನು, ಇಙ್ಗು இங்கு = ಮನೆಯಲ್ಲಿ (ಇಲ್ಲಿ: ಗೋಕುಲದಲ್ಲಿ), ಇರುನ್ದಿಲೇನ್ இருந்து இலேன் = ಇರಲಿಲ್ಲ, ತೋೞಿಮಾರ್ தோழிமார் = ಜೊತೆಗಾತಿಯರು, ಆರುಮ್ ಇಲ್ಲೈ ஆரும் இல்லை = ಯಾರೂ ಇಲ್ಲ, ಶನ್ದಮ್ ಮಲರ್ சந்தம் மலர் = ಪರಿಮಳ ಕೂಡಿದ ಹೂಗಳನ್ನು ಮುಡಿದಿರುವ, ಕುೞಲಾಳ್ குழலாள் = ತಲೆಗೂದಲವಳು, ತನಿಯೇ தனியே = ಒಂಟಿಯಾಗಿ, ಇಡಮ್ இடம் = ವಿಳೈಯಾಡುಮ್ விளையாடும் = ಆಟವಾಡುವ ಸ್ಥಳಕ್ಕೆ, ಕುಱುಗಿ குறுகி = ಸೇರಿ, ಪನ್ದು ಪಱಿತ್ತು பந்து பறித்து = ಚೆಂಡನ್ನು ಕಿತ್ತುಕೊಂಡು, ತುಗಿಲ್ ಪಱ್ಱಿ துகில் பற்றி = ಸೀರೆ (ಬಟ್ಟೆ)ಯನ್ನು ಹಿಡಿದು, ಕೀಱಿ கீறி = ಹರಿದು, ಪಡಿಱನ್ படிறன் = ದುಷ್ಟನ, ಪಡಿಱು ಶೆಯ್ಯುಮ್ படிறு செய்யும் = ಕೆಟ್ಟ ಕೆಲಸಗಳನ್ನು ಮಾಡುವ, ನನ್ದನ್ ಮದಲೈಕ್ಕು நந்தன் மதலைக்கு = ನಂದಗೋಪನ ಮಗನಿಗೆ, ಎನ್ ಕಡವೋಮ್ என் கடவோம் = ಏನು ಇಙ್ಗು இங்கு = ಇಲ್ಲಿ, ಏನ್ ಕಡವೋಮ್ = ಏನು ಮಾಡಬಲ್ಲೆವು? ನಙ್ಗಾಯ್ நங்காய் = ಪ್ರಾಜ್ಞಳೇ, ಎನ್ ಶೆಯ್ಗೇನ್ ಎನ್ ಶೆಯ್ಗೇನೇ என் செய்கேன் என் செய்கேனே = ಏನು ಮಾಡಲಿ, ಏನು ಮಾಡಬಲ್ಲೆನೋ?

ತಂದೆಯು ಮನೆಗೆ ಬಂದಿರಲಿಲ್ಲ. ನಾನು ಇಲ್ಲಿ (ಈ ಗೋಕುಲದಲ್ಲಿ) ಇರಲಿಲ್ಲ. ಜೊತೆಗಾತಿಯರು ಯಾರೂ ಇರಲಿಲ್ಲ. ಪರಿಮಳ ತುಂಬಿದ ಹೂಗಳನ್ನು ಮುಡಿದಿರುವ ತಲೆಗೂದಲಿನವಳು ಒಂಟಿಯಾಗಿ ಆಟವಾಡುತ್ತಿದ್ದ ಸ್ಥಳಕ್ಕೆ ಹೋಗಿ ಸೇರಿ, ಚೆಂಡನ್ನು ಕಿತ್ತುಕೊಂಡು, ಸೀರೆಯನ್ನು ಹಿಡಿದು ಎಳೆದು ದುಷ್ಟನು ಮಾಡುವ ಕೆಟ್ಟ ಕೆಲಸಗಳನ್ನು ಮಾಡುವ ನಂದಗೋಪನ ಮಗನನ್ನು ಇಲ್ಲಿ ನಾವೇನು ಮಾಡಬಲ್ಲೆವು? (5)
ಸಾಧ್ವಿಯೇ, ಏನು ಮಾಡಲಿ? ಏನು ಮಾಡಬಲ್ಲೆನು?

ಯಶೋದೆಯ ಬಳಿ ಇನ್ನೊಬ್ಬ ಗೊಲ್ಲತಿಯು ಹೇಳುವ ದೂರು ಇದು: ಸಾಧ್ವಿಯೇ, ನನ್ನ ಮಗಳು ತಲೆಗೆ ಹೂ ಮುಡಿದು ಅಲಂಕರಿಸಿಕೊಂಡು ಮನೆಯಲ್ಲಿ ಒಂಟಿಯಾಗಿದ್ದಳು. ಅವಳ ತಂದೆ ಇನ್ನೂ ಮನೆಗೆ ಬಂದಿರಲಿಲ್ಲ. ನಾನಂತೂ ಈ ಗೋಕುಲದಲ್ಲೇ ಇರಲಿಲ್ಲ. ಅವಳ ಗೆಳತಿಯರು ಯಾರೂ ಇರಲಿಲ್ಲ. ಅಂತಹ ಸಮಯದಲ್ಲಿ ನಂದಗೋಪನ ಪ್ರೀತಿಯ ಮಗನಾದ ಕೃಷ್ಣನು ಅವಳು ಒಬ್ಬಳೇ ಆಟವಾಡುತ್ತಿದ್ದ ಸ್ಥಳಕ್ಕೆ ಬಂದನು. ಅವಳ ಬಳಿ ಸಾರಿದನು. ಅವಳ ಕೈಯಲ್ಲಿದ್ದ ಚೆಂಡನ್ನು ಕಿತ್ತುಕೊಂಡನು. ಅವಳ ಸೀರೆಯನ್ನು ಹಿಡಿದು ಎಳೆದಾಡಿದನು. ಅನಂತರ ದುಷ್ಟಜನರು ಮಾಡುವಂಥ ಕೆಟ್ಟ ಕೆಲಸವನ್ನೆಲ್ಲ ಮಾಡಿದನು. ನಂದಗೋಪನ ಮಗನೇ ಹೀಗೆ ಮಾಡಿದರೆ, ನಾವು ಏನು ತಾನೇ ಮಾಡಬಲ್ಲೆವು?

6. மண்மகள் கேள்வன் மலர்மங்கை நாயகன்
நந்தன் பெற்ற மதலை,
அண்ணலிலைக் குழலூதி நஞ்சேரிக்கே
அல்லிற்றான் வந்த பின்னை,
கண்மலர் சோர்ந்து முலைவந்து விம்மிக்
கமலச் செவ்வாய் வெளுப்ப,
என்மகள் வண்ண மிருக்கின்றவா நங்காய்
என் செய்கேனென் செய்கேனே.

ಮಣ್ ಮಗಳ್ ಕೇಳ್ವನ್ ಮಲರ್ ಮಙ್ಗೈನಾಯಕನ್
ನನ್ದನ್ ಪೆಱ್ಱ ಮದಲೈ,
ಅಣ್ಣಲ್ಲಿಲೈಕ್ಕುೞಲೂದಿ ನಂಜೇರಿಕ್ಕೇ
ಅಲ್ಲಿಱ್ಱಾನ್ ವನ್ದ ಪಿನ್ನೈ,
ಕಣ್ ಮಲರ್ ಶೋರ್ನ್ದು ಮುಲೈವನ್ದು ವಿಮ್ಮಿ
ಕ್ಕಮಲಚ್ಚೆವ್ವಾಯ್ ವೆಳುಪ್ಪ,
ಎನ್ ಮಗಳ್ ವಣ್ಣ ಮಿರುಕ್ಕಿನ್ಱವಾ ನಙ್ಗಾಯ್,
ಎನ್ ಶೆಯ್ ಕೇನೆನ್ ಶೆಯ್ ಕೇನೇ.

ಮಣ್ ಮಗಳ್ மண் மகள் = ಭೂದೇವಿಯ, ಕೇಳ್ವನ್ கேள்வன் = ಗಂಡನೂ, ಮಲರ್ ಮಗಳ್ மலர் மகள் = ಹೂವಿನಮಗಳ (ಶ್ರೀದೇವಿಯ), ನಾಯಗನ್ நாயகன் = ನಾಯಕನೂ, ನನ್ದಗೋಪನ್ நந்தகோபன் = ನಂದಗೋಪನ, ಪೆಟ್ರ பெற்ற = ಹಡೆದ, ಮದಲೈ மதலை = ಬಾಲಕನೂ, ಅಣ್ಣಲ್ அண்ணல் = ಭಗವಂತನೂ, ಇಲ್ಲೈ ಕುಲಲ್ ಎಲ್ಲಾ ಕುಳಲ್ = ಎಲ್ಲಾ ಕೊಳ್ಳಲನ್ನು, ಊದಿ ஊதி = ಊದಿಕೊಂಡು, ನಮ ಚೇರಿಕ್ಕೇ நம் சேரிக்கே = ನಮ್ಮ ಬೀದಿಗೇ, ಅಲ್ಲಿಲ್ ತಾನ್ அல்லில் தான் = ರಾತ್ರಿಯಲ್ಲೇ, ವನ್ದ ಪಿನ್ನೈ வந்த பின்னை = ಬಂದ ಬಳಿಕ, ಕಣ್ ಮಲರ್ கண் மலர் = ಹೂವಿನಂತೆ ಇರುವ (ಅರಳಿದ) ಕಣ್ಣುಗಳು, ಶೋರನ್ದು சோர்ந்து = ಸೊರಗಿ, ಮುಲೈ ವನ್ದು ವಿಮ್ಮಿ முலை வந்து விம்மி = ಮೊಲೆಗಳು ಗಾಳಿಯಂತೆ ಉಬ್ಬಿ, ಕಮಲಮ್ ಶೆವ್ವಾಯ್ கமலச் செவ்வாய் = ಕೆಂದಾವರೆಯಂತೆ ಕೆಂಪಾಗಿರುವ ತುಟಿಗಳು, ವೆಳುಪ್ಪ வெளுப்ப = ಬಿಳುಚಿಕೊಂಡು, ಎನ್ ಮಗಳ್ என் மகள் = ನನ್ನ ಮಗಳು, ವಣ್ಣಮ್ வண்ணம் = ಬಣ್ಣವು (ಆಕೃತಿಯು), ಇರುಕ್ಕುಮ್ ಆರು இருக்கும் ஆறு = ಇರುತ್ತಿರುವದಾಗಿ, ನಙ್ಗಾಯ್ நங்காய் = ಶ್ರೀಮತಿಯರೇ, ಎನ್ ಶೆಯ್ಗೇನ್, நான் செய்கேன் = ಏನು ಮಾಡಲಿ? ಎನ್ ಶೆಯ್ಗೇನೋ நான் செய்கேனோ = ಏನು ಮಾಡಬಲ್ಲೆನೋ?

ಭೂದೇವಿಯ ಗಂಡನೂ, ಶ್ರೀದೇವಿಯ ನಾಯಕನೂ, ನಂದಗೋಪನ ಹಡೆದ ಬಾಲಕನೂ, ಭಗವಂತನೂ ಆದ ಅವನು ಎಲ್ಲಾ ಕೊಳ್ಳಲನ್ನು ಊದುತ್ತಾ ನಮ್ಮ ಬೀದಿಗೇ ರಾತ್ರಿಯಲ್ಲಿ ಬಂದ ಬಳಿಕ ನನ್ನ ಮಗಳ ಹೂವಿನಂತಿರುವ ಅಂದವಾದ ಕಣ್ಣುಗಳು ಸೊರಗಿ, ಮೊಲೆಗಳು ಗಾಳಿಯಂತೆ ಉಬ್ಬಿ ಕೆಂದಾವರೆಯಂತೆ ಕೆಂಪಾಗಿರುವ ತುಟಿಗಳು ಬಿಳುಚಿಕೊಂಡು ಅವಳಿರುವ ಬಣ್ಣವೋ (ಆಕೃತಿಯೋ), ಶ್ರೀಮತಿಯರೇ, ನಾನೇನು ಮಾಡಲಿ? ನಾನೇನು ಮಾಡಬಲ್ಲೆ? (6)

ಮತ್ತೊಬ್ಬ ಗೋಪಿ ಹೇಳುತ್ತಾಳೆ: ಶ್ರೀಮತಿಯರೇ, ಶ್ರೀಭೂನಾಯಕನಾದ ಭಗವಂತನೇ ನಂದಗೋಪನ ಮಗನಾಗಿ ಅವತರಿಸಿದ್ದಾನೆಂದು ಕೇಳುತ್ತದೆ. ಅವನು ಒಂದು ರಾತ್ರಿ ನಮ್ಮ ಕೇರಿಗೆ ಬಂದನು. ಕೈಯಲ್ಲಿ ಹಿಡಿದ ಎಲ್ಲಾ ಕೊಳ್ಳಲನ್ನು ಊದುತ್ತಲೇ ಬಂದನು. ಎಲ್ಲರೂ ಓಡಿ ಬಂದ ನನ್ನ ಮಗಳು ಆ ಕೊಳಲ ದನಿಯನ್ನು ಕೇಳಿದಳು. ಆ ಬಳಿಕ, ಅವಳ ಬಣ್ಣವೇ ಬದಲಾಯಿತು. ಅಂದವಾದ ಕಣ್ಣಿನಲ್ಲಿ ಹೂವಿನಂತೆ ಅರಳಿದ ಅವಳ ಕಣ್ಣುಗಳು ಸೊರಗಿದವು. ಮೊಲೆಗಳು ಉಬ್ಬಿದವು. ಅವಳ ಕೆಂದುಟಿಗಳು ಬಿಳುಚಿಕೊಂಡವು. ಅವಳ ಬಾಳಿನ ಆಕೃತಿಯೇ ಬದಲಾಗಿಹೋಯಿತು. ಅವಳ ದುರವಸ್ಥೆಯನ್ನು ವರ್ಣಿಸಿ ಹೇಳಲಾಗದಲ್ಲ! ನಾನೇನು ಮಾಡಲಿ? ನಾನೇನು ತಾನೆ ಮಾಡಬಲ್ಲೆ!

ಭಗವಂತನೇ ಧರೆಗಿಳಿದು ನಂದನ ಮಗನಾಗಿ ಅವತರಿಸಿದರೆ, ಅವನು ನುಡಿಸುವ ಕೊಳಲು ಆಕರ್ಷಕವಾಗದೇ? ಅವನಲ್ಲಿ ಅನುರಕ್ತಳನ್ನಾಗಿ ಮಾಡದೇ?

Garani Srinivasan

116

ಅವನನ್ನು ಸೇರಬೇಕೆಂಬ ಹಂಬಲವೂ ಕಾರಣ ಉಂಟಾಗದೆ ಇರುವುದೇ? ಭಕ್ತನ ಉದ್ಧಾರಕ್ಕೆ ಕಾರಣವಾಗದೆ ಇರುವುದೇ?

7. ஆயிரங்கண்ணுடை யிந்திரனுக்கென்று
ஆயர் விழவெடுப்ப,
பாசன நல்லன பண்டிகளால்
புகப்பெய்த வதனை யெல்லாம்,
போயிருந்தங் கொருபூதவடிவு கொண்டு
உன்மகனின்று நங்காய்!,
மாயனதனை யெல்லாம் முற்றும்
வாரிவளைத்துண்டிருந்தான் போலும்.

ಆಯಿರಙ್ಗಣ್ಣುಡೈ ಯಿನ್ದಿರನುಕ್ಕೆನ್ರು
ಆಯರ ವಿೞವೆಡುಪ್ಪ,
ಪಾಶನ ನಲ್ಲನ ಪಣ್ಡಿಗಳಾಲ್
ಪುಗಪ್ಪೆಯ್ದ ವದನೈ ಯೆಲ್ಲಾಮ್,
ಪೋಯಿರುನ್ದಙ್ಗೊರು ಪೂದವಡಿವು ಕೊಣ್ಡು
ಉನ್ ಮಗನಿನ್ರು ನಙ್ಗಾಯ್!,
ಮಾಯನದನೈ ಯೆಲ್ಲಾಮ್ ಮುಱ್ರುಮ್
ವಾರಿ ವಳೈತ್ತುಣ್ಡಿರುನ್ದಾನ್ ಪೋಲುಮ್.

ಆಯಿರಮ್ ஆயிரம் = ಸಾವಿರ, ಕಣ್ಣುಡೈ கண்ணுடை = ಕಣ್ಣುಗಳುಳ್ಳ, ಇನ್ದಿರನಾರ್ಕ್ಕೆನ್ರು இந்திரனுக்கென்று = ದೇವೇಂದ್ರನಿಗೆ ಎಂದು, ಆಯರ್ ஆயர் = ಗೋವರು, ವಿೞವು ಎಡುಪ್ಪ விழவெடுப்ப = ಉತ್ಸವವನ್ನು ನಡೆಸುವುದಕ್ಕಾಗಿ, ಪಾಶನಮ್ பாசனம் = ಕೊಳ್ಗಗಳು, ನಲ್ಲನ நல்லன = ಉತ್ತಮವಾದವನ್ನು, ಪಣ್ಡಿಗಳಾಲ್ பண்டிகளால் = ಬಂಡಿಗಳಲ್ಲಿ, ಪುಗಪ್ಪೆಯ್ದ புகப்பெய்த = ತಂದು ಕಳ್ಳಿದ್ದ, ಅದನೈ ಎಲ್ಲಾಮ್ அதனை எல்லாம் = ಅದನ್ನೆಲ್ಲಾ, ಪೋಯ್ போய் = (ಮುಂಚೆಯೇ) ಹೋಗಿ, ಇರುನ್ದು இருந்து = ಇದ್ದು, ಅಙ್ಗು அங்கு = ಅಲ್ಲಿ, ಒರು ஒரு = ಒಂದು, (ಅಪರಿಮಿತವಾದ), ಪೂದವಡಿವು ಕೊಣ್ಡು பூதவடிவு கொண்டு = ಭೂತದ ರೂಪವನ್ನು ಧರಿಸಿ, ಉನ್ ಮಗನ್ உன் மகன் = ನಿನ್ನ ಮಗನು, ಇನ್ರು இன்று = ಇಂದು, ನಙ್ಗಾಯ್ நங்காய் = ಗಾಟ್ತಿಯೇ, ಮಾಯನ್ மாயன் = ಮಾಯಾವಿಯು, ಅದನೈ ಎಲ್ಲಾಮ್ அதனை எல்லாம் = ಅದನ್ನೆಲ್ಲವನ್ನೂ, ಮುಱ್ರುಮ್ முற்றும் =

Garani Srinivasan

ಪೂರ್ತಿಯಾಗಿ, ಪಾಠವಳ್ಳಿತ್ತು ಬಾರಿ ಬಂದಾತ್ತುದು = ಬಾಟಿಬಾಟಿ, ಬಿಟ್ಟಿರುವವನ ಹೋಲುವ உண்டிருந்தான் போலும் = ಉಂಡುಬಿಟ್ಟನಲ್ಲ!

ಸಾವಿರ ಕಣ್ಣುಗಳುಳ್ಳ ದೇವೇಂದ್ರನಿಗೆಂದು ಗೋವರು ಉತ್ಸವವನ್ನು ನಡೆಸುವುದಕ್ಕಾಗಿ ಉತ್ತಮವಾದ ದೊಡ್ಡದೊಡ್ಡ ಕೊಳಗಗಳನ್ನು ಬಂಡಿಗಳಲ್ಲಿ ತಂದು ಕಳಿಸಿದ್ದ ಅದನ್ನೆಲ್ಲಾ, ಮುಂಚೆಯೇ ಅಲ್ಲಿಗೆ ಹೋಗಿ ಅಪಾರವಾದ ಭೂತಾಕಾರ ರೂಪವನ್ನು ಧರಿಸಿ, ಮೊಸರನ್ನು ದನ್ನುವುದನು, ಹಾಲಿಯ, ಇಂದು, ಅದನ್ನೆಲ್ಲಾ ಉಂಡುಬಿಟ್ಟನಲ್ಲ! (7)

ಗೋವಳರ ವೃದ್ಧರಿಯಂತೆ, ನಂದಗೋಪಲನ ಗೋವಳರು ದೇವೇಂದ್ರನಿಗೆ ಎಡೆಗೆ ಬಿಟ್ಟು ಪೂಜಿಸುವ ಹಬ್ಬವನ್ನು ವರ್ಷಕ್ಕೊಂದುಬಾರಿ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಬಂದಿದಲ, ಆ ಹಬ್ಬದ ದಿವಸಕ್ಕೆ ನಡೆಯುತ್ತಿದ್ದಾಗ, ಬಾಲಕೃಷ್ಣನು ಆ ಹಬ್ಬವನ್ನು ದೇವೇಂದ್ರನಿಗಾಗಿ ಮಾಡಬೇಕಾಗಿಲ್ಲವೆಂದೂ, ಗೋವಳರಿಗೆ, ಅವರ ದನಕರುಗಳಿಗೆ ಗೋವರ್ಧನಗಿರಿಯೇ ಎಲ್ಲ ಬಗೆಯ ಒಳ್ಳೆಯ ರಕ್ಷಣೆ ಕೊಡುವುದೆಂದೂ, ಈ ಉತ್ಸವವನ್ನು ಗೋವರ್ಧನಗಿರಿಗಾಗಿಯೇ ನಡೆಸಿ, ಮಾಡುವ ಎಡೆಯನ್ನು ಅದಕ್ಕೇ ನೀಡಬೇಕೆಂದೂ ಹೇಳಿದನು. ಅವನ ಮಾತಿನಂತೆಯೇ ಗೋವಳರು ಮಾಡಿದ ಎಡೆಯನ್ನು ದೊಡ್ಡದೊಡ್ಡ ರಾಶಿಯಾಗಿ ಗೋವರ್ಧನಗಿರಿಯ ಬಳಿಗೆ ಸಾಗಿಸಿದರು. ಕೊಳಗಗಳಲ್ಲಿ ತುಂಬಿ, ಬಂಡಿಗಳಲ್ಲಿಟ್ಟು ಗೋವರ್ಧನಗಿರಿಯನ್ನು ಸೇರಿದ್ದ. ಅದಕ್ಕೆ ಸ್ವಲ್ಪ ಮುಂಚಿತವಾಗಿ ಕೃಷ್ಣನು ಗೋವರ್ಧನಗಿರಿಯನ್ನು ಸೇರಿದ್ದ, ~~ಅಲ್ಲಿಂದ~~ ಭೂತಾಕಾರವನ್ನು ತಳೆದು, ಅಲ್ಲಿಂದ ಹೊರಬಂದು, ನೀಡಿದ್ದ ಎಡೆಯನ್ನೆಲ್ಲಾ ಉಂಡುಬಿಟ್ಟ!

ಭಗವಂತನ ಈ ಅದ್ಭುತ ಲೀಲೆಯನ್ನು ಕಂಡು ಆಶ್ಚರ್ಯಗೊಂಡವರಲ್ಲಿ ಗೊಲ್ಲತಿಯೊಬ್ಬಳು ತಾನು ಕಂಡ ಅದ್ಭುತವನ್ನು ವಿವರಿಸಿ ಆನಂದಿಸುವ ಪಾಶುರವಿದು.

8. தோய்த்த தயிரும் நறுநெய்யும் பாலும்
ஓரோகுடம் துற்றிடுமென்று,
ஆய்ச்சியர் கூடி அழைக்கவும்
நாணி இதற்கெள்கி யுனை நங்காய்!,
சோத்தம் பிரானிவை செய்யப் பெறாயென்று
இரப்பன் உரப்பகில்லேன்,
பேய்ச்சிமுலையுண்ட பின்னை
யிப்பிள்ளையைப் பேசுவதஞ்சுவனே.

ತೋಯ್ತ್ತ ತಯಿರುಮ್ ನರುನೆಯ್ಯುಮ್ ಪಾಲುಮ್
ಓರೋಕುಡಮ್ ತುಟ್ರಿಡುಮೆನ್ರು,

ಆಯ್ಚ್ಚಿಯರ್ ಕೂಡಿ ಅಳೈಕ್ಕವುಮ್
ನಾನಿದರ್ಕೆಳ್ಕಿ ಇವನೈ ನಙ್ಗಾಯ್!,
ಶೋತ್ತಮ್ ಪಿರಾನಿವೈ ಶೆಯ್ಯಪ್ಪೆರಾಯೆನ್ರು
ಇರಪ್ಪನುರಪ್ಪಗಿಲ್ಲೇನ್,
ಪೇಯ್ಚ್ಚಿ ಮುಲೈಯುಣ್ಡ ಪಿಣ್ಣೈ
ಇಪ್ಪಿಳ್ಳೈ ಪೇಶುವದಂಜುವನೇ.

ತೋಯ್ತ್ತ தோய்த்த = ಹೆಪ್ಪುಗಟ್ಟಿದ, ತಯಿರುಮ್ தயிரும் = ಮೊಸರನ್ನು, ನಱು நறு = ಘಮಘಮಿಸುವ, ನೆಯ್ಯುಮ್ நெய்யும் = ತುಪ್ಪವನ್ನು, ಪಾಲುಮ್ பாலும் = ಹಾಲನ್ನು, ಒರೋ ಕುಡಮ್ ஓர் குடம் = ಒಂದೊಂದು ಕೊಡವನ್ನು, ತುಱ್ಱಿಡುಮ್ ಎನ್ರು துற்றிடும் என்று = ಉಂಡುಬಿಡುತ್ತಾನೆಂದು, ಆಯ್ಚ್ಚಿಯರ್ ಕೂಡಿ ஆய்ச்சியர் கூடி = ಗೊಲ್ಲತಿಯರು ಸೇರಿ, ಅಳೈಕ್ಕವುಮ್ அழைக்கவும் = (ನನಗೆ) ಕೂಗಿ ಹೇಳಿಕೊಳ್ಳಲು, ನಾನ್ நான் = ನಾನು, ಇದರ್ಕು இதற்கு = ಇದಕ್ಕೆ, ಎಳ್ಕಿ எள்கி = ವ್ಯಸನಪಟ್ಟು, ಇವನೈ இவனை = ಇವನನ್ನು, ನಙ್ಗಾಯ್ நங்காய் = ಸಾಧ್ವಿಯೇ, ಶೋತ್ತಮ್ சோத்தம் = ನಮಸ್ಕಾರ (ಶರಣು), ಪಿರಾನ್ பிரான் = ಸ್ವಾಮೀ, ಇವೈ இவை = ಇವುಗಳನ್ನೆಲ್ಲಾ, ಶೆಯ್ಯಪ್ಪೆರಾಯ್ செய்யப்பெறாய் = ಮಾಡದೆ ಇರಬೇಕು, ಎನ್ರು என்று = ಎಂದು, ಇರಪ್ಪನ್ இரப்பன் = ಬೇಡಿಕೊಳ್ಳುತ್ತೇನೆ, ಉರಪ್ಪಗಿಲ್ಲೇನ್ உரப்பகில்லேன் = ಕೋಪಗೊಳ್ಳುವುದಿಲ್ಲ, ಪೇಯ್ಚ್ಚಿ பேய்ச்சி = ರಾಕ್ಷಸಿಯ, ಮುಲೈ முலை = ಮೊಲೆಯನ್ನು, ಉಣ್ಡ ಪಿಣ್ಣೈ உண்ட பிண்ணை = ಉಂಡ ಬಳಿಕ, ಇಪ್ಪಿಳ್ಳೈಯ இப்பிள்ளை = ಈ ಬಾಲಕನೊಡನೆ, ಪೇಶುವದು பேசுவது = ಮಾತನಾಡುವುದಕ್ಕೆ, ಅಂಜುವನೇ அஞ்சுவனே = ಹೆದರುತ್ತೇನೆ.

ಹೆಪ್ಪುಗಟ್ಟಿದ ಮೊಸರನ್ನೂ ಘಮಘಮಿಸುವ ತುಪ್ಪವನ್ನೂ, ಹಾಲನ್ನೂ ಒಂದೊಂದು ಕೊಡವಾಗಿ ಉಂಡುಬಿಡುತ್ತಾನೆಂದು ಗೊಲ್ಲತಿಯರು ಕೂಡಿಕೊಂಡು ನನ್ನನ್ನು ಕರೆದು ನನಗೆ ಹೇಳಿಕೊಳ್ಳಲು, ನಾನು ಇದಕ್ಕೆ ವ್ಯಸನಪಟ್ಟು, ಸಾಧ್ವಿಯೇ, ಇವನನ್ನು ಕುರಿತು — ಕೈಮುಗಿಯುತ್ತೇನೆ ಸ್ವಾಮೀ, ಇವುಗಳನ್ನೆಲ್ಲಾ ಮಾಡದೆ ಇರಬೇಕು — ಎಂದು ಬೇಡಿಕೊಳ್ಳುತ್ತೇನೆ, ಕೋಪಗೊಳ್ಳುವುದಿಲ್ಲ. ರಾಕ್ಷಸಿಯ ಮೊಲೆಯನ್ನುಂಡ ಬಳಿಕ ಈ (8)
ಬಾಲಕನೊಡನೆ ಮಾತನಾಡುವುದಕ್ಕೆ ಹೆದರುತ್ತೇನೆ.

ಈ ರೀತಿ ಗೊಲ್ಲತಿಯರಿಗೆ ಯಶೋದೆಯು ಸಮಾಧಾನದ ಮಾತಿಗೆ ಎಂದಳು. ಯಶೋದೆ ಹೇಳುತ್ತಾಳೆ: ಸಾಧ್ವಿಯರೇ, ನೀವು ನಮ್ಮ ಬಾಲಕ ಕೃಷ್ಣನ ಮೇಲೆ ಬರಿ ಬರಿಯದಾಗಿ ದೂರು ಹೇಳುತ್ತಿದ್ದೀರಿ. ಹೆಪ್ಪು ಹಾಕಿದ ಮೊಸರನ್ನು ತಿಂದ, [illegible]

Garani Srinivasan

ವಕ್ಷಸ್ಥವನ್ನುಂಡು ಬಿಟ್ಟು, ಹಾಲನ್ನು ಕುಡಿದ- ಇಂದೊಂದನ್ನು ಕೇಳಿದ ಕಥೆಗಳನ್ನೇ
ಬಂದು ಮಾಡಿಬಿಟ್ಟು - ಎಂದು ಮುಂಚೆ ಹೇಳಿಕೊಳ್ಳುತ್ತಿದ್ದಿರಿ. ಅದನ್ನೆಲ್ಲ
ಕೇಳಿ ನನಗೆ ವ್ಯಸನವಾಗುತ್ತದೆ. ನಾನೇನು ಮಾಡಲಿ? ನಿಮಗೆ ಗೊತ್ತಿರುವ ಹಾಗೆ,
ಅವನು ಹಸುಗೂಸಾಗಿರುವಾಗಲೇ ರಾಕ್ಷಸಿಯ ವಿಷದ ಮೊಲೆಯನ್ನುಂಡು
ಅವಳನ್ನೇ ಕೊಂದು ಹಾಕಿಬಿಟ್ಟನಲ್ಲ! ಅಂದಿನಿಂದ, ಅವನನ್ನು ದಂಡಿಸಿ ಮಾತನಾಡು
ವುದಕ್ಕೆ ನನಗೆ ಭಯವಾಗುತ್ತದೆ." ಕ್ಷಮೆಯಾಚಿಸುತ್ತೇನೆ, ಸ್ವಾಮಿ. ಇಂಥ ಕೆಲಸ
ಗಳನ್ನೆಲ್ಲಾ ಮಾಡಬಾರದು" ಎಂದು ಮಾತ್ರ ನಮ್ರತೆಯಿಂದ ಬೇಡಿಕೊಳ್ಳಬಲ್ಲೆ,
ಅಷ್ಟೆ. ಅವನ ಮೇಲೆ ಕೋಪ ಮಾಡುವುದಿಲ್ಲ.

9. ஈடும் வலியுமுடைய இந்நம்பி
பிறந்த வெழு திங்களில்,
ஏடலர் கண்ணியினை வளர்த்தி
எமுனை நீராடப்போனேன்,
சேடன் திருமறுமார்பன் கிடந்து
திருவடியல், மலைபோல்
ஓடுஞ்சகடத்தைச்சாடியபின்னை
உரப்புவதஞ்சுவனே.

ಈಡುಮ ವಲಿಯುಮುಡೈಯ ಇನ್ನಮ್ಬಿ
ಪಿಱನ್ದ ವೆಳು ಶಿಙ್ಗಳಿಲ್,
ಏಡಲರ ಕಣ್ಣಿಯಿನಾನ್ನೈ ವಳರ್ತ್ತಿ
ಎಮುನ್ನೈ ನೀರಾಡಪ್ಪೋನೇನ್,
ಶೇಡನ್ ಶಿರುಮಱುಮಾರ್ಬನ್ ಕಿಡನ್ದು
ಶಿರುವಡಿಯಲ್, ಮಲೈಪ್ಪೋಲ್
ಓಡುಂಜಶಕಡತ್ತೈಚ್ಚಾಡಿಯ ಪಿನ್ನೈ
ಉರಪ್ಪುವದಂಜುವನೇ.

ಈಡುಮ ஈடும் = ದೇಹಬಲವನ್ನು, ವಲಿಯುಮ வலியும் =
ಸಾಮರ್ಥ್ಯವನ್ನು, ಉಡೈಯ உடைய = ಉಳ್ಳ, ಇ-ನಮ್ಬಿ இ-நம்பி
= ಈ ಬಾಲಕನು, ಪಿಱನ್ದ பிறந்த = ಹುಟ್ಟಿದ, ಎಳು ~~ಶಿ~~ ಶಿಙ್ಗಳಿಲ್
எழு திங்களில் = ಏಳನೆಯ ತಿಂಗಳಲ್ಲಿ, ಏಡು ಅಲರ್ ஏடு அல
ர் = ಬಂದ ದಳಗಳ ಹೂವಿನಂತೆ, ಇರುವ, ಕಣ್ಣಿಯಿನಾನ್ನೈ கண்ணியினை =
ಕಣ್ಣುಳ್ಳವನನ್ನು, ವಳರ್ತ್ತಿ வளர்த்தி = ನಿದ್ದೆ ಮಾಡಿಸಿ, ಎಮುನ್ನೈ எமுனை
= ಯಮುನಾನದಿಯಲ್ಲಿ, ನೀರಾಡ ಪ್ಪೋನೇನ್ நீராட போனேன் =
ಸ್ನಾನ ಮಾಡಲು ಹೋದೆ, ಶೇಡನ್ சேடன் = ಈ ದೊಡ್ಡ ಮನುಷ್ಯನು,
ಶಿರು, ಮಱು, ಮಾರ್ಬನ್ திரு, மறு, மார்பன் = ಶ್ರೀದೇವಿಯನ್ನು,

ಶ್ರೀವತ್ಸವೆಂಬ ಮಚ್ಚೆಯನ್ನು, ಎದೆಯಲ್ಲುಳ್ಳವನು, ಕಿಡನ್ದು கிடந்து = ಮಲಗಿಕೊಂಡೇ, ಶಿರುವಡಿಯಲ್ சிறுவடியால் = ಶಿರುವಡಿಯಿಂದ, ಮಲೈ ಪ್ಪೋಲ್ மலை போல = ಬೆಟ್ಟದ ಹಾಗಿರುವ, ಓಡುಮ್ சகடம் = ಓಡುವ, ಶಕಡತ್ತೈ சகடத்தை = ಶಕಟವನ್ನು, ಶಾಡಿಯ ಪಿನ್ನೈ சாடிய பின்னை = ಝಾಡಿಸಿದ (ಒದೆದ) ಬಳಿಕ, ಉರಪ್ಪುವದು உரப்புவது = ಕೋಪಿಸಿಕೊಳ್ಳುವುದಕ್ಕೆ, ಅಂಜುವನೇ அஞ்சுவனே = ಅಂಜುತ್ತೇನೆ.

ದೇಹಬಲವನ್ನು ಸಾಮರ್ಥ್ಯವನ್ನು ಉಳ್ಳವನಾದ ಈ ಬಾಲಕನು ಹುಟ್ಟಿದ ಏಳನೆಯ ತಿಂಗಳಲ್ಲಿ ಬಂದ ದಳ್ಳಗಳ ಹಾವಿನಂತೆ ಇರುವ ಕಣ್ಣುಗಳುಳ್ಳವನನ್ನು ನಿದ್ದೆ ಮಾಡಿಸಿ, ಯಮುನೆಯಲ್ಲಿ ಸ್ನಾನಮಾಡಲು ಹೋದೆನು. ಈ ದೊಡ್ಡ ಮನುಷ್ಯನು, ಶ್ರೀದೇವಿಯನ್ನು ಶ್ರೀವತ್ಸವೆಂಬ ಮಚ್ಚೆಯನ್ನು ಎದೆಯಲ್ಲುಳ್ಳವನು, ಮಲಗಿರುವ ಹಾಗೆಯೇ ಅವನ ಶಿರುವಡಿಯಿಂದ ಬೆಟ್ಟದ ಹಾಗಿರುವ, ಓಡುತ್ತಿರುವ, ಶಕಟವನ್ನು ಝಾಡಿಸಿದ (ಒದೆದ) ಬಳಿಕ, ನಾನು ಕೋಪಿಸಿಕೊಳ್ಳುವುದಕ್ಕೆ ಅಂಜುತ್ತೇನೆ. (9)

ಗೊಲ್ಲತಿಯು ಕೂಡನೆ ಯಶೋದೆ ತನ್ನ ಮಾತನ್ನು ಮುಂದುವರಿಸುತ್ತಾಳೆ: ಸಾಧ್ವಿಯರೇ, ಈ ಬಾಲಕನು ಸಾಮಾನ್ಯ ಬಾಲಕರಂತೆ ಅಲ್ಲ. ಎಳೆಯ ಮಗುವಾದರೂ ಇವನಿಗೆ ಅಪಾರವಾದ ದೇಹಬಲವಿದೆ. ಇವನನ್ನು ಹಿಂಸಿಸಲು ಬರುವ ಯಾರೇ ಆಗಲಿ, ಅವರನ್ನು ಎದುರಿಸುವ ಧೈರ್ಯ ಸ್ಥೈರ್ಯ, ಸಾಮರ್ಥ್ಯಗಳು ಇವನಲ್ಲುಂಟು. ಒಂದು ನಿದರ್ಶನ ಕೊಡುತ್ತೇನೆ ಕೇಳಿ. ಇವನಿಗೆ ಇನ್ನೂ ಏಳು ತಿಂಗಳು ತುಂಬಿರಲಿಲ್ಲ. ಒಂದು ದಿನ, ನಾನು ಇವನನ್ನು ನಿದ್ದೆ ಮಾಡಿಸಿ, ಯಮುನಾನದಿಗೆ ಸ್ನಾನ ಮಾಡಿ ಬರಲು ಹೋದೆ. ಸ್ನಾನ ಮಾಡಿದ ಬಳಿಕ ಬಂದು ನೋಡುತ್ತೇನೆ, ದೊಡ್ಡ ಬಂಡಿಯೊಂದು ಚೂರುಚೂರಾಗಿ ಬಿದ್ದಿದೆ! ಮಗುವು ಮಾತ್ರ ತನ್ನ ಕೈಕಾಲುಗಳನ್ನಾಡಿಸುತ್ತಾ ಆನಂದದಿಂದ ಆಡಿಕೊಳ್ಳುತ್ತಿದೆ! ಕಂಡಿರಾ! ಇದೆಯಾ ಹೇಳುವವರೇ ಈ ಅದ್ಭುತ ಸಾಹಸಕ್ಕೆ ಆಶ್ಚರ್ಯಗೊಂಡಿರಲ್ಲ! ಯಾರೂ ಇಲ್ಲದ ವೇಳೆಯಲ್ಲಿ, ಬೆಟ್ಟದಂತೆ ಬಲು ದೊಡ್ಡದಾ, ಓಡುತ್ತ ವೇಗವಾಗಿ ಇವನ ಮೇಲೆ ಹರಿದು ಹೋಗಲು ಮುನ್ನುಗ್ಗಿದ ಆ ಬಂಡಿಯನ್ನು ಇವನು ತನ್ನ ಪುಟ್ಟಕಾಲನ್ನು ಝಾಡಿಸುತ್ತಾ ಆಡುತ್ತಿದ್ದಹಾಗೆಯೇ, ಒದೆದು ಪುಡಿಪುಡಿ ಮಾಡಿಬಿಟ್ಟನಲ್ಲ! ಅಂದಿನಿಂದ ನಾನು ಇವನ ಮೇಲೆ ಕೋಪಿಸಿಕೊಳ್ಳುವುದೇ ಇಲ್ಲ. ಕೋಪಗೊಳ್ಳಲಾರದೆ ಅಂಜುತ್ತೇನೆ, ಕಂಡಿರಾ!

Garani Srinivasan

10. அஞ்சுவன் சொல்லியழைத்திட நங்கைகாள்
ஆயிரநாழி நெய்யை,
பஞ்சிய மெல்லடிப்பிள்ளைகளுண்கின்று
பாகந்தான் வையார்களே,
கஞ்சன் கடியன் கறவெட்டுநாளில்
என் கைவலத்தாதுமில்லை,
நெஞ்சத்திருப்பன செய்துவைத்தாய் நம்பீ
என் செய்கேனென் செய்கேனோ?

ಅಂಜುವನ್ ಶೊಲ್ಲಿಯಳೈತ್ತಿಡ ನಙ್ಗೈಗಾಳ್
ಆಯಿರನಾೞಿ ನೆಯ್ಯೈ,
ಪಂಜಿಯ ಮೆಲ್ಲಡಿಪ್ಪಿಳ್ಳೈಗಳುಣ್ಗಿನ್ಱು
ಪಾಗನ್ದಾನ್ ವೈಯ್ಯಾರ್ಗಳೇ,
ಕಂಜನ್ ಕಡಿಯನ್ ಕಱವೆಟ್ಟುನಾಳಿಲ್
ಎನ್ ಕೈವಲತ್ತಾದುಮಿಲ್ಲೈ,
ನೆಂಜತ್ತಿರುಪ್ಪನ ಶೆಯ್ದುವೈತ್ತಾಯ್ ನಂಬೀ
ಎನ್ ಶೆಯ್ಗೇನೆನ್ ಶೆಯ್ಗೇನೇ.

ಅಂಜುವನ್ அஞ்சுவன் = ಹೆದರುತ್ತೇನೆ, ಶೊಲ್ಲಿ சொல்லி = ಹೇಳಿ, ಅಳೈತ್ತಿಡ அழைத்திட = ಕೂಗಿ ಕರೆದು, ದಂಡಿಸಲು, ನಙ್ಗೈಗಾಳ್ நங்கைகாள் = ಸಾಧ್ವಿಯರೇ, ಆಯಿರಮ್ ನಾೞಿ ஆயிரம்நாழி = ಒಂದು ಸಾವಿರ ಅಳತೆಯ (ಸೇರಿನ), ನೆಯ್ಯೈ நெய்யை = ತುಪ್ಪವನ್ನು, ಪಂಜಿಯ பஞ்சிய = ಹತ್ತಿಯಂತೆ, ಮೆಲ್ಲಡಿ மெல்லடி = ಮೆತ್ತನೆಯ ಪಾದಗಳ, ಪಿಳ್ಳೈಗಳ್ பிள்ளைகள் = ಮಕ್ಕಳು, ಉಣ್ಗಿನ್ಱು உண்கின்று = ಉಂಡು, ಪಾಗಮ್ ತಾನ್ பாகம் தான் = ಸ್ವಲ್ಪ ಭಾಗವನ್ನಾದರೂ, ವೈಯ್ಯಾರ್ಗಳೇ வையார்களே = ಮಿಗಿಸಲಿಲ್ಲವಲ್ಲ, ಕಂಜನ್ கஞ்சன் = ಕಂಸನು, ಕಡಿಯನ್ கடியன் = ಕ್ರೂರ, ಕಱವು கறவு = ಕಪ್ಪವು, ಎಟ್ಟು ನಾಳಿಲ್ எட்டுநாளில் = ಎಂಟು ದಿನಗಳು, ಎನ್ ಕೈವಲತ್ತು என் கைவலத்து = ನನ್ನ ಕೈಯಲ್ಲಿ, ಆದುಮ್ ಇಲ್ಲೈ ஆதும் இல்லை = ಏನೊಂದೂ ಇಲ್ಲ, ನೆಂಜತ್ತು நெஞ்சத்து = ಮನಸ್ಸಿನಲ್ಲಿ, ಇರುಪ್ಪನ இருப்பன = ಇರುವುದನ್ನು, ಶೆಯ್ದು ವೈತ್ತಾಯ್ செய்து வைத்தாய் = ಮಾಡಿಬಿಟ್ಟೆ, ನಂಬೀ நம்பீ = ಸ್ವಾಮೀ, ಎನ್ ಶೆಯ್ಗೇನ್ என் செய்கேன் = ಏನು ಮಾಡಲಿ, ಎನ್ ಶೆಯ್ಗೇ

ಗಾಣಗಾಪುರ ಕ್ಷೇತ್ರ: ಏನು ಮಾಡಬಲ್ಲೆನೋ?

ಸ್ವಾಮಿಯರೇ, ~~[illegible]~~ ಕೂಗಿ ಕರೆದು ಹೇಳಿ ದಂಡಿಸಲು ಬೇಡಿರುತ್ತೇನೆ! ಶಕ್ತಿಯಂತೆ ಮೃದುವಾದ ಪಾದಗಳನ್ನುಳ್ಳ (ಇಲ್ಲಿಯ) ~~[illegible]~~ ಮಕ್ಕಳು ಒಂದು ಸಾವಿರ ಅಳತೆಯ (ಸೇರಿನ) ತುಪ್ಪವನ್ನು ತಿನ್ನುವಾಗ, ಒಂದು ಸ್ವಲ್ಪ ಭಾಗವನ್ನು ಮುಗಿಸಿದರಲ್ಲ. ತಪ್ಪಿದವಿಲ್ಲಕಿಗೆ ವಿಳುಂಬನವಾಗಿದೆ. ಕಂದನು ಕ್ರೂರಿ. ನನ್ನ ಕೈಯಲ್ಲಿ ಏನೊಂದೂ ಇಲ್ಲ. ಮನಸ್ಸಿನಲ್ಲಿರುವುದನ್ನು ಮಾಡಿಬಿಟ್ಟೆಯಲ್ಲ, (10) ಸ್ವಾಮೀ. ನಾನೇನು ಮಾಡಬಲ್ಲೆ? ನಾನೇನು ಮಾಡಲಿ?

ಗೊಲ್ಲತಿಯರು ಮಾಡುವ ದೂರಿಗೆ ಯಶೋದೆಯ ಮರುಮಾತು ಹಿಂದಿನ ಎರಡು ಪಾಶುರಗಳಿಂದಲೂ ಬರುತ್ತಿದೆ. ಅವುಗಳಲ್ಲಿ ಮುಖ್ಯವಾಗಿ 'ನಾನು ನನ್ನ ಮಗನಿಗೆ ಹೇಳುವುದಕ್ಕೂ ದಂಡಿಸುವುದಕ್ಕೂ ಅಂಜುತ್ತೇನೆ.' ಎಂಬುದನ್ನು ಹೇಳುತ್ತಾಳಷ್ಟೆ. ಆ ಮಾತನ್ನೇ ಮತ್ತೆ ಪುಷ್ಟೀಕರಿಸುತ್ತಾಳೆ ಈ ಪಾಶುರದಲ್ಲಿಯೂ. ಇನ್ನೊಂದು ವಿಷಯವನ್ನು ಒಂದು ನಿದರ್ಶನವಾಗಿ ತೆಗೆದುಕೊಂಡು ತನ್ನ ಕಷ್ಟವನ್ನು ತೋರಿಸಿಕೊಳ್ಳುತ್ತಾ ಯಶೋದೆ ಹೇಳುತ್ತಾಳೆ: ತಪ್ಪೆಲ್ಲ ತನ ಮಗನಾದ ಕೃಷ್ಣನದೇ ಅಲ್ಲ. ಅವನ ಜೊತೆಗೆ ನಂದಗೋಕುಲದ ಬಾಲಕರೆಲ್ಲರೂ ಸೇರಿಕೊಂಡು ಈ ಬಗೆಯ ಲೂಟಿಯನ್ನು ಎಲ್ಲ ಮನೆಗಳಲ್ಲೂ ಮಾಡುತ್ತಿದ್ದಾರೆ. ಆ ಮಕ್ಕಳನ್ನು ಅಂತೆಯೇ ಲಕ್ಷ್ಯ ಕೊಳ್ಳುವುದು ಎಲ್ಲ ತಾಯಂದಿರಿಗೂ ಹೇಳಿದ್ದಲ್ಲವೇ. — ಈ ವಿಷಯವನ್ನು ಬಹಳ ಸ್ವಾರಸ್ಯವಾಗಿ ಅವಳ ತೋರಿಸಿಕೊಡುತ್ತಿದ್ದಾಳೆ.

ಯಶೋದೆ ಹೇಳುತ್ತಾಳೆ: ಸ್ವಾಮಿಯರೇ. ನನ್ನ ಮಗನನ್ನು ಕೂಗಿ, ಕರೆದು ಹೀಗೆಲ್ಲ ಮಾಡಬೇಡ ಎಂದು ಹೇಳಿ, ಅವನನ್ನು ದಂಡಿಸಲು ನನಗೆ ಅಂಜಿಕೆಯಾಗುತ್ತದೆ. ನಾನು ಒಂದು ಸಾವಿರ ಅಳತೆಯಷ್ಟು (ಸೇರು, ಕೊಳಗ ಇತ್ಯಾದಿಯಾವುದೋ ಒಂದು ಗೊತ್ತಾದ ಅಳತೆ) ತುಪ್ಪವನ್ನು ಕಾಯಿಸಿ ಇಟ್ಟಿದ್ದೆ. ಕಂದನಿಗೆ ನಾವು ಕಲ್ಲಿಸಬೇಕಾದ ತುಪ್ಪ ಅದು. ಆ ತುಪ್ಪವನ್ನು ಒಂದು ವಾರದಲ್ಲಿಯೇ ಸಲ್ಲಿಸಿ ಬಿಡಬೇಕಿ-. ಕಂದನು ಕೆಟ್ಟವನು, ಕ್ರೂರಿ. ನೋಡಿ ನಂದಗೋಕುಲದ ಮಕ್ಕಳೆಲ್ಲರೂ ಕೂಡಿಕೊಂಡು ಒಂದು ಸಾವಿರ ಅಳತೆಯ ತುಪ್ಪವನ್ನು ತಿಂದುಬಿಟ್ಟಿದ್ದಾರೆ! ಅವುಗಳಲ್ಲಿ ಒಂದು ಸ್ವಲ್ಪ ಭಾಗವನ್ನಾದರೂ ಮಿಗಿಸಬೇಡವೇ? ಏನೇನೂ ಮಿಗಿಸದಂತೆ ತಿಂದುಬಿಟ್ಟಿದ್ದಾರಲ್ಲ! ನಾನೇನು ಮಾಡಲಿ? ತಪ್ಪನ್ನು ಪಾವತಿ ಮಾಡುವುದಕ್ಕೆ ನನ್ನಲ್ಲಿ ಬೇರೆ ಏನೂ ಇಲ್ಲವಲ್ಲ! ಮನಸ್ಸಿಗೆ ಬಂದ ಹಾಗೆಯೇ ಸ್ವಾಮಿಯು ಮಾಡಿಬಿಟ್ಟಿದ್ದಾನಲ್ಲ! ನಾನೇನು ಮಾಡಬಲ್ಲೆ!

Garani Srinivasa

11\. அங்ஙனுந் தீமைகள் செய்வர்களோ
நம்பி! ஆயர் மடமக்களை,
பங்கயநீர் குடைந்தாடுகின்றார்கள்
பின்னே சென்றொளித்திருந்து,
அங்கவர் பூந்துகில் வாரிக்கொண்டிட்டு
அரவேரிடையாரிரப்ப,
மங்கைநல்[illegible]லீர் வந்துகொண்மினென்று
மரமேறியிருந்தாய் போலும்.

ಅಙ್ಙನುನ್ದೀಮೈಗಳ್ ಶೆಯ್ವರ್ಗಳೋ
ನಮ್ಬೀ! ಆಯರ್ ಮಡಮಕ್ಕಳೈ,
ಪಙ್ಗಯನೀರ್ ಕುಡೈನ್ದಾಡುಗಿನ್ರಾರ್ಗಳ್
ಪಿನ್ನೇ ಶೆನ್ರೊಳಿತ್ತಿರುನ್ದು,
ಅಙ್ಗವರ್ ಪೂನ್ದುಗಿಲ್ ವಾರಿಕ್ಕೊಣ್ಡಿಟ್ಟು
ಅರವೇರಿಡೈಯಾರಿರಪ್ಪ,
ಮಙ್ಗೈನಲ್ಲೀರ್ ವನ್ದುಕೊಣ್ಮಿನೆನ್ರು
ಮರಮೇರಿಯಿರುನ್ದಾಯ್ ಪೋಲುಮ್.

ಅಙ್ಙನುಮ್ அங்ஙனும் = ಹೀಗೆಲ್ಲಾ, ತೀಮೈಗಳ್ தீமைகள் = ಕಂಟಕಗಳನ್ನು, ಶೆಯ್ವರ್ಗಳೋ செய்வர்களோ = ಮಾಡುತ್ತಾರೆಯೇ, ನಮ್ಬೀ நம்பி = ಸ್ವಾಮೀ? ಆಯರ್ ஆயர் = ಗೋವಳರ, ಮಡಮ್ ಮಕ್ಕಳೈ மடம் மக்களை = ಮುಗ್ಧರಾದ ಹೆಣ್ಣು ಮಕ್ಕಳನ್ನು, ಪಙ್ಗಯಮ್ ನೀರ್ பங்கயம் நீர் = ತಾವರೆಗಳಿರುವ ನೀರ್ಕೊಳಗಳಲ್ಲಿ ಕುಡೈನ್ದು ಆಡುಗಿನ್ರಾರ್ಗಳ್ குடைந்து ஆடுகின்றார்கள் = ಜಲಕ್ರೀಡೆಯಾಡುತ್ತಿರುವವರ, ಪಿನ್ನೈ பின்னை = ಹಿಂದೆಯೇ, ಶೆನ್ರು சென்று = ಹೋಗಿ, ಒಳಿತ್ತು ಇರುನ್ದು ஒளித்து இருந்து = ಮರೆಯಾಗಿದ್ದುಕೊಂಡು, ಅಙ್ಗು அங்கு = ಅಲ್ಲಿ, ಅವರ್ அவர் = ಅವರ, ಪೂ பூ = ಸುಂದರವಾದ, ತುಗಿಲ್ துகில் = ಸೀರೆಗಳನ್ನು, ವಾರಿಕ್ಕೊಣ್ಡಿಟ್ಟು வாரிகொண்டிட்டு = ಬಾಚಿಕೊಂಡು ಬಿಟ್ಟು, ಅರವು ಏರ್ அரவு ஏர் = ಹಾವಿನಂತೆ (ಇರುವ), ಇಡೈಯಾರ್ இடையார் = ನಡುವುಳ್ಳವರು, ಇರಪ್ಪ இரப்ப = ಬೇಡಿಕೊಳ್ಳಲು, ಮಙ್ಗೈನಲ್ಲೀರ್ மங்கைநல்[illegible]லீர் = ಒಳ್ಳೆಯ

ಹೆಣ್ಣು ಮಕ್ಕಳೇ, வந்தொருந்து = ಬಂದು, ಕೊಣ್ಮಿನ್ கொண்மின் = ಕರೆದುಕೊಳ್ಳಿರಿ, ಎನ್ಱು என்று = ಎಂದು, ಮರಮೂ ಏಱಿ மரம் ஏறி = ಮರವನ್ನೇರಿ, ಇರುನ್ದಾಯ್ ಪೋಲುಮ் இருந்தாய் போலும் = ಇದ್ದೀಯಂತೆಯಲ್ಲ!

ಹೀಗೆಲ್ಲಾ ತಂಟೆಗಳನ್ನು ಮಾಡುತ್ತೀಯೇ, ಸ್ವಾಮೀ? ಗೋವಳರ ಮುಗ್ಧರಾದ ಹೆಣ್ಣು ಮಕ್ಕಳನ್ನು, ತಾವರೆಗಳಿರುವ ನೀರ್ಗೊಳಗಳಲ್ಲಿ ಜಲಕ್ರೀಡೆಯಾಡುತ್ತಿರುವವರ ಹಿಂದೆಯೇ ಹೋಗಿ ಅಡಗಿಕೊಂಡಿದ್ದು, ಅಲ್ಲಿ ಅವರ ಅಂದವಾದ ಸೀರೆಗಳನ್ನೆಲ್ಲಾ ಬಾಚಿಕೊಂಡು, ಆ ಹಾವಿನಂತೆ ನಡುವುಳ್ಳವರು ಬೇಡಿಕೊಳ್ಳಲು, ಬಳ್ಳಿಯ ಹೆಣ್ಣು ಮಕ್ಕಳೇ ಬಂದು ಕರೆದುಕೊಳ್ಳಿರಿ ಎಂದು ಮರವನ್ನೇರಿ ಇದ್ದೀಯಂತಲ್ಲ! (11)

ತಾಯಿ ಯಶೋದೆ ತನ್ನ ಮಗನಾದ ಬಾಲಕೃಷ್ಣನಿಗೆ ಬುದ್ಧಿ ಹೇಳುವ ವಿಷಯ ಇಲ್ಲಿದೆ. ಅಲ್ಲದೆ. ಗೋಪೀ ವಸ್ತ್ರಾಪಹರಣದ ಪ್ರಸಂಗವನ್ನು ಇಲ್ಲಿ ವಿವರವಾಗಿ ಎತ್ತಿಕೊಳ್ಳಲಾಗಿದೆ.

ಯಶೋದೆ ಹೇಳುತ್ತಾಳೆ: ಸ್ವಾಮೀ, ನೀನು ಗೋವಳರ ಅರಿಯದ ಹೆಣ್ಣುಮಕ್ಕಳನ್ನು ಹಿಂಬಾಲಿಸಿ ಹೋದೆಯಂತೆ. ಅವರು ಹೋಗುವ ತಾವರೆಕೊಳದವರೆಗೆ ಅವರ ಕಣ್ಣಿಗೆ ಬೀಳದಂತೆಯೇ ಮರೆಯಾಗಿದ್ದೀಯಂತೆ. ಅವರು ತಮ್ಮ ತಮ್ಮ ಬಟ್ಟೆಗಳನ್ನು ಬಿಚ್ಚಿ, ದಡದ ಮೇಲಿಟ್ಟು, ನೀರಿನಲ್ಲಿಳಿದು, ಜಲಕ್ರೀಡೆಯಲ್ಲಿ ಮಗ್ನರಾದರಂತೆ. ಆ ಸಮಯದಲ್ಲಿ ಅವರ ಬಟ್ಟೆಗಳನ್ನೆಲ್ಲ ಬಾಚಿಕೊಂಡು ಮರವನ್ನೇರಿ ಕುಳಿತೆಯಂತೆ. ಜಲಕ್ರೀಡೆಯ ನಂತರ, ಅವರು ತಮ್ಮ ಬಟ್ಟೆಗಳನ್ನು ಕಾಣದೆ, ಈ ಬಗೆಯ ಚೇಷ್ಟೆಯೆಲ್ಲ ನಿನ್ನದೇ ಎಂದು ಭಾವಿಸಿ, ಕಣ್ಣು ಹೊರಳಿಸಿ ನೋಡಿ, ಮರದ ಮೇಲಿರುವ ನಿನ್ನನ್ನು ಕಂಡುಕೊಂಡರಂತೆ. ತಮ್ಮ ತಮ್ಮ ಸೀರೆಗಳನ್ನು ಕೊಡೆಂದು ನಿನ್ನನ್ನು ಅವರು ಬೇಡಿಕೊಂಡರಂತೆ. "ಇಕೋ, ನಿಮ್ಮ ಸೀರೆಗಳು ಇಲ್ಲಿಯೇ ಇವೆ. ಬನ್ನಿ. ಬಂದು ಕರೆದುಕೊಳ್ಳಿ" ಎಂದು ನೀನು ಹೇಳಿ ಅವರನ್ನು ಗೋಳಾಡಿಸಿದೆಯಂತೆ. ಸ್ವಾಮೀ, ಹೀಗೆಲ್ಲಾ ಹೆಣ್ಣುಮಕ್ಕಳ ಮಾಡಬಾರದ ಚೇಷ್ಟೆಗಳನ್ನು ಮಾಡುತ್ತೀಯೇ? ಅವರನ್ನು ಗೋಳಾಡಿಸುತ್ತೀಯೇ? ಹೀಗೆಲ್ಲ ಮಾಡಿ, ನೀನು ಚಾಡಿಗೆ ಗುರಿಯಾಗಬೇಡಪ್ಪ.

12. அச்சந்தினைத்தனையில்லை யிப்பிள்ளைக்கு
ஆண்மையுஞ் சேவகமும்,
உச்சியில்முத்தி வளர்த்தெடுத்தேனுக்கு
உரைத்திலன் தானின்று போய்,
பச்சிலை பூங்கடம்பேறி விசை கொண்டு
பாய்ந்து புக்கு, ஆயிர வாய்
நச்சழற் பொய்கையின் நாகத்தினோடு
பிணங்கி நீ வந்தாய் போலும்.

ಅಚ್ಚನ್ತಿನೈತ್ತನೈಯಿಲ್ಲೈ ಯಿಪ್ಪಿಳ್ಳೈಕ್ಕು
ಆಣ್ಮೈಯುಂ ಶೇವಗಮುಮುಣ್ಡು,
ಉಚ್ಚಿಯಿಲ್ ಮುತ್ತಿ ವಳರ್ತ್ತೆಡುತ್ತೇನುಕ್ಕು
ಉರೈತ್ತಿಲನ್ ತಾನಿನ್ದು ಪೋಯ್,
ಪಚ್ಚಿಲೈ ಪ್ಪೂಙ್ಗಡಮ್ಬೇರಿ ವಿಶೈಕೊಣ್ಡು
ಪಾಯ್ನ್ದು ಪುಕ್ಕು, ಆಯಿರವಾಯ್
ನಚ್ಚ ~~ಅೞಲ್~~ ಅೞಲ್ ಪೊಯ್ಗೈಯಿಲ್ ನಾಗತ್ತಿನೋಡು
ಪಿಣಙ್ಗಿ ನೀ ವನ್ದಾಯ್ ಪೋಲುಮ್.

ಅಚ್ಚಮ್ அச்சம் = ಭಯವೆಂಬುದು, ತಿನೈತ್ತನೈ தினைத்தனை = ಎಳ್ಳಷ್ಟೂ (ಸ್ವಲ್ಪವಾದರೂ), ಇಲ್ಲೈ இல்லை = ಇಲ್ಲ, ಇ-ಪ್ಪಿಳ್ಳೈಕ್ಕು இப்பிள்ளைக்கு = ಈ ಬಾಲಕನಿಗೆ, ಉಚ್ಚಿಯಿಲ್ உச்சியில் = ನಡುನೆತ್ತಿಯಲ್ಲಿ, ಮುತ್ತಿ முத்தி = ಮುದ್ದಿಸಿ (ಮೂಸಿ), ವಳರ್ತ್ತೆಡುತ್ತೇನುಕ್ಕು வளர்த்தெடுத்தேனுக்கு = ಎತ್ತಿ ಬೆಳೆಸಿದ ನನಗೆ, ಉರೈತ್ತಿಲನ್ உரைத்திலன் = (ಏನನ್ನೂ) ಹೇಳುವುದಿಲ್ಲವಲ್ಲ! ತಾನ್ தான் = ಅವನು, (ನೀನು) ಇನ್ದು இன்று = ಇಂದು, ಪೋಯ್ போய் = ಹೋಗಿ, ಪಚ್ಚಿಲೈ பச்சிலை = ಹಸುರೆಲೆಗಳ, ಪೂ பூ = ಹೂವಿನ (ಸುಂದರವಾದ), ಕಡಮ್ಬು ಏರಿ கடம்பு ஏறி = ಕದಂಬ ಮರವನ್ನೇರಿ, ವಿಶೈಕೊಣ್ಡು விசை கொண்டு = ವೇಗವಾಗಿ, ಪಾಯ್ನ್ದು பாய்ந்து = ಹಾರಿ, ಪುಕ್ಕು புக்கு = (ಮಡುವನ್ನು) ಹೊಕ್ಕು, ಆಯಿರವಾಯ್ ஆயிரம் வாய் = ಸಾವಿರ ಬಾಯುಳ್ಳ (ಹೆಡೆಗಳ), ನಚ್ಚು நச்சு = ವಿಷವನ್ನು, ಅೞಲ್ அழல் = ಉಗುಳುವ, ಪೊಯ್ಗೈಯಿಲ್ பொய்கையில் = ಮಡುವಿನಲ್ಲಿ, ನಾಗತ್ತಿನೋಡು நாகத்தோடு = ಸರ್ಪದೊಡನೆ, ಪಿಣಙ್ಗಿ பிணங்கி = ಹೋರಾಡಿ, ನೀ நீ = ನೀನು, ವನ್ದಾಯ್ ಪೋಲುಮ್ வந்தாய் போலும் = ಬಂದೆಯಂತಲ್ಲ!

ಈ ಬಾಲಕನಿಗೆ ಭಯವೆಂಬುದು ಎಳ್ಳಷ್ಟೂ ಇಲ್ಲ. ನಡುನೆತ್ತಿಯನ್ನು ಮೂಸಿ ಮುದ್ದಿಸಿ ಎತ್ತಿ ಬೆಳೆಸಿದ ನನಗೆ (ಇವನು) ಏನನ್ನೂ ಹೇಳುವುದಿಲ್ಲವಲ್ಲ! ~~ಇವನು~~ ನೀನು ಇಂದು ಹೋಗಿ, ಹಸುರೆಲೆಗಳೂ ಹೂಗಳೂ ಇರುವ ಸುಂದರವಾದ ಕದಂಬ ಮರವನ್ನೇರಿ, ವೇಗವಾಗಿ ಹಾರಿ, ಮಡುವನ್ನು ಹೊಕ್ಕು ಸಾವಿರ ಬಾಯುಳ್ಳ (ಹೆಡೆಗಳ) ವಿಷವನ್ನುಗುಳುವ ಸರ್ಪದೊಡನೆ ಮಡುವಿನಲ್ಲಿ ನೀನು ಹೋರಾಡಿ ಬಂದೆಯಂತಲ್ಲ! (12)

ಬಾಲಕೃಷ್ಣನ ಮತ್ತೊಂದು ಸಾಹಸವನ್ನು ಕುರಿತು ಇಲ್ಲಿ ಹೇಳಲಾಗಿದೆ. ಯಮುನಾನದಿಯಲ್ಲಿ ಕಾಳಿಂದಿ ಎಂಬುದೊಂದು ಮಡು. ಅಲ್ಲಿ ಕಾಳೀಯನೆಂಬ ವಿಷಸರ್ಪ ವಾಸವಾಗಿತ್ತು. ಮಡುವಿನ ನೀರು ವಿಷಮಯವಾಗಿ ದನಕರುಗಳು ಕುಡಿಯಲು ಆಗುತ್ತಿರಲಿಲ್ಲ. ಬಾಲಕೃಷ್ಣನಿಗೆ ವಿಷಯ ತಿಳಿಯಿತು. ಎಂದ

Garani Srinivasan

ನಂತರ ಗೋವಳ ಬಾಲಕರ ಸಂಗಡ ದನಕರುಗಳ ಜೊತೆ, ಯಮುನಾ ತೀರಕ್ಕೆ
ಕೃಷ್ಣನು ಆದಿನವೂ ಹೋದನು.. ದಡದಲ್ಲಿ ಬೆಳೆದು ನಿಂತಿದ್ದ ಕದಂಬ ಮರವನ್ನೇರಿ,
ಅಲ್ಲಿಂದ ನೇರವಾಗಿ ಮಡುವಿನೊಳಕ್ಕೆ ಧುಮುಕಿದನು. ಹಾಯಾಗಿ ವಾಸಿಸುತ್ತಿದ್ದ
ಕಾಳಿಯನನ್ನು ಕೆಣಕಿ, ಹೋರಾಡಿ, ಅದರ ಹೆಡೆಯ ಮೇಲಕ್ಕೆ ಹಾರಿಕೊಂಡು, ಚಿತ್ರ
ವಿಚಿತ್ರವಾಗಿ ನರ್ತನ ಮಾಡುತ್ತಾ, ಕಾಳಿಯ ದರ್ಪವನ್ನು ಹತ್ತಿಕ್ಕಿದನು.

ಕೃಷ್ಣನ ಕಾಳಿಯದಮನದ ವಿಷಯವು ನಂದಗೋಕುಲದಲ್ಲಿ ಹರಡಿತು.
ಎಲ್ಲರನ್ನೂ ಆಶ್ಚರ್ಯಗೊಳಿಸಿತು, ಬೆರಗುಮಾಡಿತು.

ಈ ವಿಷಯವನ್ನು ಯಶೋದೆ ಇತರಗೋಪಿಕೆಯರ ಹೇಳುತ್ತಾಳೆ!
ಈನಮ್ಮ ಬಾಲಕನಿಗೆ ಭಯವೆಂಬುದೇ ಇಲ್ಲ, ನೋಡಿ. ಬಾಯಿಂದ ಹೇಳಿ
ಕೊಳ್ಳಲಾರದಷ್ಟು ವಾತ್ಸಲ್ಯದಿಂದ ಎತ್ತಿ ಬೆಳೆಸಿದ ನನಗಾದರೂ ಹೇಳಬೇಕವೇ?
ಇವನು ಏನನ್ನೂ ಹೇಳುವುದಿಲ್ಲವಲ್ಲ! ಮಗೂ, ನೀನು ಕಾಳಿ[illegible] ಮಡು
ಮಡುವಿನ ಬಳಿ ಇರುವ, ಹಸುರೆಲೆ ಹೂಗಳಿಂದ ಸುಂದರವಾದ, ಕದಂಬಮರ
ವನ್ನೇರಿದೆಯಂತೆ! ನೇರವಾಗಿ ಅಲ್ಲಿಂದ ಮಡುವಿನೊಳಕ್ಕೆ ಧುಮುಕಿದೆಯಂ
ತೆ! ಬಳಿಕ ಅದರಲ್ಲಿದ್ದ ವಿಷಸರ್ಪದೊಡನೆ ಹೋರಾಡಿ, ಸುಖವಾಗಿ ಹೊರಕ್ಕೆ
ಬಂದೆಯಂತೆ! ಎಂಥ ಭಯವಿಲ್ಲದ ಮಗು ನೀನು!

13. தம்பரமல்லன வாண்மைகளைத்
தனியே நின்று தாம் செய்வரோ?
எம்பெருமான்! உன்னைப்பெற்ற வயிறுடையேன்
இனியானென் செய்கோன்?
அம்பரமேழு மதிரு மிடிகுரல்
அங்கணற் செங்கணுடை,
வம்பவிழ் கானத்து மால்விடையோடு
பிணங்கிநீ வந்தாய் போலும்.

ತಮ್ಬರಮಲ್ಲನವಾಣ್ಮೈಗಳೈ
ತನಿಯೇ ನಿನ್ರು ತಾಮ ಶೆಯ್‌ವರೋ?
ಎಮ್ಬೆರುಮಾನ್! ಉನ್ನೈಪ್ಪೆತ್ರ ವಯಿರುಡೈಯೇನ್
ಇನಿಯಾ ನೆನ್ ಶೆಯ್‌ಹೇನ್?
ಅಮ್ಬರ ಮೇೞು ಮದಿರು ಮಿಡಿ ಕುರಲ್
ಅಙ್ಗಣಲ್ ಶೆಙ್ಗಣುಡೈ,
ವಮ್ಬವಿೞ್ ಕಾನತ್ತು ಮಾಲ್ ವಿಡೈಯೋಡು
ಪಿಣಙ್ಗಿನೀ ವನ್ದಾಯ್ ಪೋಲುಮ್.

ತಮ್ ಪರಮ್ தம் பரம் = ತನಗೆ ತಕ್ಕ, ಅಲ್ಲನ அல்லன = ಅಲ್ಲದ

ಆಣ್ಮೈದಲ್ಲಿ [illegible] = ಪೌರುಷ ಕಾರ್ಯವನ್ನು, ಕನಿಯೇ
ಕಣ್ಣಿಯೇ = ಒಂಟಿಯಾಗಿ, ನಿನ್ರು [illegible] = ನಿಂತು (ಇರುತ್ತಾ),
ಶಾಮ ಕ್ರಾಮ್ = ಶಾವು (ನೀನು), ಶೆಯ್ ವರೋ [illegible] =
ಮಾಡುತ್ತೀಯೋ (ಮಾಡುವುದೋ)? ಎಮ್ಪೆರುಮಾನ್ [illegible]
ಮಾಣ್ = ನನ್ನ ದೇವರೇ, ಉನ್ನೈ [illegible] = ನಿನ್ನನ್ನು, ಹೆತ್ತ
[illegible] = ಹೆತ್ತ, ವಯಿರ್ ಉಡೈಯಾಳ್ ವಯಿರ್ ಉಡೈಯೇ
[illegible] = ಹೊಟ್ಟೆಯನ್ನುಳ್ಳವಳು (ನಾನು), ಇನಿ [illegible] = ಇನ್ನು, ಯಾ
ನ್ ಯಾನ್ = ನಾನು, ಎನ್ ಶೆಯ್ ಹೇನ್ [illegible] =
ಏನು ಮಾಡಲಿ? ಅಮ್ಪರಮೇ ಏಳುಮ್ ಅಮ್ಪರಮ್ [illegible] =
ಏಳು ಆಕಾಶಗಳೂ (ಏಳು ಸಾಗರಗಳೂ), ಅದಿರುಮ್ ಅ[illegible] = ಬಿಡಿಲಿನ ಧ್ವನಿ
ನಡುಗಿಸುವಂಥ, ಇಡಿ ಕುರಲ್ [illegible] = ಬೆಂಕಿ
ಯುಳ್ಳ, ಅಜ್ಞಿ ಅಂಗು = ಅಲ್ಲಿ, ಅನಲ್ ಅಣಲ್ = ಬೆಂಕಿ
ಯಂತೆ, ಶೆಮ್ ಕಣ್ = ಕೆಂಪಾದ, ಕಣ್ ಉಡೈ [illegible]
ಯಂತೆ, ಶೆಮ ಕಣ್ = ಕೆಂಪಾದ, [illegible] = ಬಿಸಿಯುಳ್ಳ,
ಉಡೈ = ಕಣ್ಣುಗಳುಳ್ಳ, ವೆಮ್ಬು ವೆಮ್ಬು = ಬಿಸಿಯುಳ್ಳ,
ಅವಿಯ ಅವಿಯ = ಮರಡುತ್ತಿರುವ, ಕಾನನತ್ತು [illegible]
ತ್ತು = ಕಾಡಿನಲ್ಲಿ, ಮೂಲ್ ವಿಡೈಯೋಡು [illegible]
(ಗಿ) = ಚಿಟ್ಟದಂಥ ಗೂಳಿಯೊಡನೆ, ಪಿಣಂಗಿ [illegible] =
ಹೋರಾಡಿ, ನೀನ್ = ನೀನು, ವನ್ದಾಯ್ ಪೋಲುಮ್ [illegible]
ಪೋನ್ದುಮ್ = ಬಂದೆಯಂತಲ್ಲ!

ಕಮನೆ ಕಷ್ಟದಲ್ಲಿದ ಪೌರುಷ ಕಾರ್ಯಗಳನ್ನು ಶಾವು ಒಂಟಿಯಾಗಿ ನಿಂತು ಮಾಡುವುದೇ? ನನ್ನ ದೇವರೇ, ನಿನ್ನನ್ನು ಹೆತ್ತ ಹೊಟ್ಟೆಯನ್ನುಳ್ಳವಳಲ್ಲವೇ ನಾನು! ಇನ್ನು ನಾನೇನು ಮಾಡಲಿ? ಏಳು ಲೋಕಗಳನ್ನು ನಡುಗಿಸುವಂಥ ಬಿಡಿಲಿನ ಧ್ವನಿಯುಳ್ಳ ಬೆಂಕಿಯಂತೆ ಕೆಂಗಣ್ಣಿನ ಚಿಟ್ಟದಂಥ ಗೂಳಿಯೊಡನೆ, ಬಿಸಿಯುಳ್ಳ ಮರಡುತ್ತಿರುವ ಕಾಡಿನಲ್ಲಿ ನೀನು ಹೋರಾಡಿ ಬಂದೆಯಲ್ಲವೇ? (13)

ಬಾಲಕೃಷ್ಣನ ಮತ್ತೊಂದು ಸಾಹಸ ವಿವರ ಇದರಲ್ಲಿ ಬರುತ್ತದೆ. ಗೋವಳ ಬಾಲಕರ ಜೊತೆಯಲ್ಲಿ ಬಾಲಕೃಷ್ಣನು ದನಕರುಗಳನ್ನು ಮೇಯಿಸಲು ಕಾಡಿಗೆ ಹೋಗುತ್ತಿದ್ದನಷ್ಟೆ. ಒಂದು ದಿನ, ಕಂಸನಿಂದ ಪ್ರೇರಿತನಾಗಿ, ವೃಷಭಾಸುರನೆಂಬುವನು ದೊಡ್ಡ ಗೂಳಿಯ ರೂಪದಲ್ಲಿ

Garani Srinivasan

ಬರುವ ದನಗಳ ಮುಂದೆಯಲ್ಲಿ ನಿಂತಿದ್ದನು. ಕೃಷ್ಣನನ್ನು ಕೊಲ್ಲಬೇಕೆಂಬುದು ಅವನ ಉದ್ದೇಶ. ಇತರ ಪ್ರಾಣಿಗಳಂತೆ ಹುಲ್ಲನ್ನು ಮೇಯುತ್ತಾ, ಮೆಲ್ಲ ಮೆಲ್ಲನೆ ನಡೆಯುತ್ತಾ, ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕೆ ಬದಲಾಗಿ ಈ ಗೂಳಿಯು ಮುಂಗಾಲುಗಳ ಗೊರಸಿನಿಂದ ನೆಲವನ್ನು ಕೆರೆಯುತ್ತಾ, ಧೂಳನ್ನೆಬ್ಬಿಸುತ್ತಾ, ಬುಸುಗುಟ್ಟುತ್ತಾ, ಗುಟುರು ಹಾಕುತ್ತಾ, ಕೆಂಗಣ್ಣುಗಳಿಂದ ಕೃಷ್ಣನನ್ನೇ ನೋಡುತ್ತಾ ಬರುತ್ತಿದ್ದುದನ್ನು ಕೃಷ್ಣನು ಕಂಡನು. ಅದರ ಇಂಗಿತವನ್ನರಿತು, ಅವನು ಅದನ್ನು ಕೆಣಕಿ, ಅದರ ಕೊಂಬುಗಳನ್ನು ಹಿಡಿದು ದಿಟ್ಟತನದಿಂದ ಹೋರಾಡಿ, ಅದನ್ನು ಕೊಂದು ಹಾಕಿದನು. ಇದು ವೃಷಭಾಸುರ ವಧೆ.

ಯಶೋದೆ, ಇತರ ಗೊಲ್ಲತಿಯರ ಎದುರಲ್ಲಿ, ತನ್ನ ಮಗನಾದ ಬಾಲಕೃಷ್ಣನಿಗೆ ಹೇಳುತ್ತಾಳೆ: ನನ್ನ ದೇವರೇ, ಯಾರಾದರೂ ತನ್ನ ಶಕ್ತಿಗೆ ಮೀರಿದ, ತನಗೆ ಶಕ್ಯವಲ್ಲದ, ಪೌರುಷ ಕಾರ್ಯಗಳಲ್ಲಿ ಒಂಟಿಯಾಗಿ ತೊಡಗಬಹುದೇ? ನಾನು ನಿನ್ನನ್ನು ಹೊತ್ತು ಹೆತ್ತವಳಲ್ಲವೇ? ನಿನ್ನ ಕ್ಷೇಮ ಚಿಂತನೆ ನನಗಿಲ್ಲವೇ? ನಿನಗೇನಾದರೂ ಅಪಾಯ ಸಂಭವಿಸೀತೆಂಬ ಯೋಚನೆ ನನಗೆ ಇಲ್ಲವೇ? ನನ್ನ ಮನಸ್ಸಿಗೆ ಹೇಗೆಲ್ಲಾ ನೋವನ್ನುಂಟು ಮಾಡುವ ಸಾಹಸಗಳಲ್ಲಿ ನೀನು ಕೈಹಾಕಬಹುದೇ? ನಿನಗೆ ಒಳ್ಳೆಯ ಮಾತನ್ನಾಡಿ, ನಿನ್ನನ್ನು ಬೇಡಿಕೊಳ್ಳುವುದನ್ನು ಬಿಟ್ಟರೆ, ನಾನು ಬೇರೆ ಏನನ್ನು ಮಾಡಬಲ್ಲೆ? ನಿನ್ನನ್ನು ಸರಿಯಾದ ದಾರಿಗೆ ಹೇಗೆ ತರಬಲ್ಲೆ? ಏಳುಲೋಕಗಳನ್ನೇ ನಡುಗಿಸುವಂಥ, ಸಿಡಿಲಿನಂತೆ ಭಯಂಕರವಾದ ಆರ್ಭಟದ, ಕೆಂಡದಂತಿರುವ ಕಣ್ಣುಗಳಲ್ಲಿ ರೋಷವನ್ನು ತುಂಬಿಕೊಂಡಿರುವ, ಬೆಟ್ಟದಷ್ಟು ದೊಡ್ಡದಾದ ಗೂಳಿಯೊಡನೆ, ನೀನು ಒಂಟಿಯಾಗಿ ಕಾಡಿನಲ್ಲಿ ಹೋರಾಡಿ ಬರುವೆಯಂತೆ? ಹೀಗೆಲ್ಲ ಮಾಡಬಹುದೇ ಸ್ವಾಮಿ?

14. அன்னநடை மடவாய்ச்சி வயிறடித்
துஞ்ச அருவரைபோல்,
மன்னுகருங்களிற்றாருயிர் வவ்விய
மைந்தனை மாகடல்சூழ்,

கன்னி நன் மாமதிள் மங்கையர் காவலன்
காமரு சீர்க் கலி கன்றி,
இன்னிசை மாலை கள் ஈரேழும் வல்லார்க்கு
ஏதுமிடரில்லையே.

ಅನ್ನನಡೈ ಮಡವಾಯ್ಚ್ಚಿ ವಯಿಱಡಿ
ತ್ತಂಜ ಅರುವರ್ತ್ತಿ ಪೋಲ್,
ಮನ್ನು ಕರುಙ್ಗಳಿಱ್ಱಾರುಯಿರ್ ವವ್ವಿಯ
ಮೈನ್ದನ್ ಮಾಕಡಲ್ ಶಂಲರ್,
ಕನ್ನಿನನ್ ಮಾ ಮದಿಳ್ ಮಙ್ಗೈಯರ್ ಕಾವಲನ್
ಕಾಮರು ಶೀರ್ಕ್ಕಲಿಕನ್ಱಿ,
ಇನ್ನಿಶೈ ಮಾಲೈಗಳ್ ಈರೇಳುಮ್ ವಲ್ಲಾರ್ಕ್ಕು
ಏದುಮಿಡರಿಲ್ಲೈಯೇ.

ಅನ್ನಮಾ அன்னம் = ಹಂಸದ, ನಡೈ நடை = ನಡಿಗೆಯುಳ್ಳ,
ಮಡಮಾ மடம் = (ಮಾನ ಮರ್ಯಾದೆ ಮುಂತಾದ) ಗುಣಗಳು ಹಿರಿಯಾದ, ವಯಿಱು அடித்து வயிறு
ಆಯ್ಚ್ಚಿ ஆய்ச்சி = ಗೊಲ್ಲತಿಯು, ವಯಿಱು ಅಡಿತ್ತು
ಅಡಿತ್ತು = ಹೊಟ್ಟೆಯನ್ನು ಹೊಡೆದು, ಅಂಜ அஞ்ச = (ಆಕೆ) ಅಂ
ಜುವಂತೆ, ಅರು அரு = ಅಪಾರವಾದ, ವರ್ತ್ತಿ ಪೋಲ್ வளர
ಪೋல் = ಬೆಳ್ಳದ ಹಾಗೆ, ಮನ್ನು மன்னு = ನಿಶ್ಚಲವಾಗಿ ನಿಂತಿರುವ,
ಕರು கரு = ಕಪ್ಪನೆಯ, ಕಳಿಱು களிறு = ಆನೆಯ (ದಳದ),
ಆರ್ ಉಯಿರ್ ஆர் உயிர் = ಕುಂಬು ಜೀವವನ್ನು, ವವ್ವಿಯ
ವವ್ವಿಯ = ನಾಶಮಾಡಿದ, ಮೈನ್ದನ್ ಮಾಕ್ಕಡಲ್ = ಪರಾಕ್ರಮ
ಯನ್ನು ಕಂಡು, ಮಾಕಡಲ್ ಶೂಲರ್ மா கடல் சூழ் = ಬಲುದೊಡ್ಡ
ಕಡಲಿನಿಂದ ಸುತ್ತುವರಿದ, ಕನ್ನಿ கன்னி = ಶಾಶ್ವತವಾದ, ನಲ್ ನಲ =
ಶ್ರೇಷ್ಠವಾದ, ಮಾ ಮದಿಳ್ மா மதிள் = ಎತ್ತರವಾದ ಕೋಟೆಯು
ಳ್ಳ, ಮಙ್ಗೈಯರ್ மங்கையர் = ತಿರುಮಂಗೈ ನಾಡಿನ ಜನರ,
ಕಾವಲನ್ காவலன் = ರಕ್ಷಕನೂ, ಕಾಮರು ಶೀರ್ காமரு
சீர் = ಆಶಿಸುವಂಥ ಕೀರ್ತಿಯುಳ್ಳವನೂ, ಕಲಿಕನ್ಱಿ கலி
கன்றி = ಕಲಿಕನ್ಱಿಯೂ, ಇನ್ இன் = ಮಧುರವಾದ, ಇಶೈ
இசை = ಗಾನದಿಂದ ಕೂಡಿದ, ~~ಮಾ~~ (ಹಾಡಬಲ್ಲ), ಮಾಲೈ மாலை =
ಪಾಶುರ ಮಾಲೆಯಾದ, ~~ಈರೇಳುಮ್~~ ஈ ரேழும் = ಹದಿನಾಲ್ಕನ್ನು

ವಲ್ಲಾರ್ಕಳ್ ಉಲರಾಕ್ಕು = ಬಲ್ಲವರಿಗೆ, ಎದುವಾಗಿಲುಂ = ಯಾ
ವುದೂ, ಇಡರ್ ಇಡರ್ = ದುಃಖ ಸಂಕಟಗಳೂ, ಇಲ್ಲೈಯೇ
ಇಲ್ಲೈಯೇ = ಇಲ್ಲವೇ ಇಲ್ಲ.

ಹಂಸದ ನಡಗೆಯುಳ್ಳ ನಿಮ್ಮ ಪ್ರಾಣ ಸಖಿಯಾದ ಗೊಲ್ಲತಿಯ
ಹೊಟ್ಟೆಯನ್ನು ಸೀಳಿದು, ಆತ ಅಂಜುವಂತೆ ಅಪಾರವಾದ
ಬೆಟ್ಟದ ಹಾಗೆ ನಿಶ್ಚಲವಾಗಿ ನಿಂತಿರುವ ಕರಿಯ ನೀಲಗದ ತುಂಬು
ಜೀವವನ್ನು ನಾಶಪಡಿಸಿದ ಮಹಾಪರಾಕ್ರಮಿಯನ್ನು ಕೂಡು
ಬಲುದೊಡ್ಡ ಕಡಲಿನಿಂದ ಸುತ್ತುವರಿದ ಶಾಶ್ವತವಾದ ಉತ್ತಮವಾದ
ವಿಸ್ತಾರವಾದ ಕೋಟೆಯುಳ್ಳ ತಿರುಮಂಗೈ ನಾಡಿನ ಜನರ ರಕ್ಷಕನಾ
ಆಶ್ರಿತವಂದ್ಯ ಶೀಲಶಿರಿಯುಳ್ಳವನೂ ಆದ ಅಧ್ವಿಟಿಯೂ ಆದವನು
ಮಧುರವಾಗಿ ಹಾಡಿದ ಈ ಪಾಶುರಮಾಲೆಯಾದ ಹಾಡಿನಾಳ್ವನ್ನು
ಬಲ್ಲವರಿಗೆ ಯಾವುದೂ ದುಃಖ ಸಂಕಟಗಳೂ ಇಲ್ಲವೇ ಇಲ್ಲ. (14)

ಇದು ಈ ತಿರುಮೊಳಿಗೆ ಕಡೆಯ ಪಾಶುರ. ವಿಷಯ ಭಗವಂತನು ಬಾಲ
ಕೃಷ್ಣನಾದಾಗ, ಅವನು ನಡೆಸಿದ ಅದ್ಭುತವೂ ಆಶ್ಚರ್ಯಕರವೂ ವಯಸ್ಸು ಮೀರಿದ್ದೂ
ಆದ ಅತಿಮಾನುಷ ಕಾರ್ಯಗಳು. ತಾಯಿ ಯಶೋದೆಯ ಬಳಿಗೆ ನಂದಗೋಕುಲ
ದ ಗೊಲ್ಲತಿಯರು ಬರುತ್ತಾರೆ. ಬಾಲಕೃಷ್ಣನ ಮೇಲೆ ಬಗೆಬಗೆಯ ದೂರನ್ನು
ಹೇಳುತ್ತಾರೆ. ಯಶೋದೆಗೆ ಸಂಕಟವಾಗುತ್ತದೆ, ದಿಟ. ಆದರೆ ಅವಳೇನು
ಮಾಡಿಯಾಳು? ಅವಳಿಗೂ ಗೊತ್ತಿದೆ, ಶ್ರೀಕೃಷ್ಣ ಚೇಷ್ಟೆಗಳೇನೆಂದು. ಅವ
ನನ್ನು ದಂಡಿಸುವುದಕ್ಕೆ ಅವಳಿಗೆ ಸಾಧ್ಯವಿಲ್ಲ. ಕಾರಣ, ಅವನು ಅವಳ
ಮುದ್ದು ಮಗು. ಅವನ ಮೇಲೆ ಕೈಮಾಡಲು ಹೆದರಿಕೆ. ಅವನು ನಡೆಸಿ
ದ ಅದ್ಭುತ ಸಾಹಸಗಳನ್ನು ಕಂಡು ಕೇಳಿ ಅವಳು ಬೆರಗಾಗಿದ್ದಾಳೆ. ಆದ್ದರಿಂ
ದ ಅವನೊಡನೆ ಮೃದುವಾಗಿ ಮಾತನಾಡಿ, ಹೀಗೆಲ್ಲ ಮಾಡಬಾರದೆಂದು
ಅವನನ್ನು ಮರ್ಯಾದೆಯಿಂದ ಬೇಡಿಕೊಳ್ಳುವುದೊಂದೇ ಅವಳಿಗೆ ಉಳಿದ
ಮಾರ್ಗವೆನ್ನುತ್ತಾಳೆ. ಅಲ್ಲದೆ, ತನ್ನ ಹೆತ್ತ ಹೊಟ್ಟೆಯನ್ನು ಹೇಗೆ ನೋಯಿ
ಸಿದ್ದಾನೆಂದು, ಗೊಲ್ಲತಿಯರ ದೂರುಗಳನೂ ದನಿಗೂಡಿಸಿ, ಅವನ
ತಪ್ಪು ಹಾದಿಗಳನ್ನು ವರ್ಣಿಸುತ್ತಾ, ತನಗೆ ಆ ಕಾರಣಗಳಿಂದಲೇ
ಅವನನ್ನು ದಂಡಿಸಲು ಅಂಜಿಕೆಯೆನ್ನುತ್ತಾಳೆ. ಎಳೆಯ ಮಗುವಾಗಿರು
ವಾಗಲೇ, ವಿಷದ ಹಾಲನ್ನು ಕುಡಿಸಿದ ಪೂತನಿಯೆಂಬ ರಾಕ್ಷಸಿಯನ್ನು ಅವನು
ಹೇಗೆ ಕೊಂದನೋ, ಅದನ್ನು ನೆನೆದರೆ ತನಗೆ ಅಂಜಿಕೆಯಾಗುತ್ತದೆಯೆನ್ನು
ತ್ತಾಳೆ. ಹಾಗೆಯೇ, ಅವನು ತನ್ನ ಪುಟ್ಟಕಾಲನ್ನು ಝಾಡಿಸಿದ್ದರಿಂದಲೇ ಅವನ ಮೇ
ಲೆ ನುಗ್ಗಿ ಬಂದು ಅವನನ್ನು ಕೊಲ್ಲಬೇಕೆಂಬ ಶಕಟಾಸುರನನ್ನು ನುಚ್ಚು
ನೂರು ಮಾಡಿದನಲ್ಲ ಎನ್ನುತ್ತಾಳೆ. ಇನ್ನೂ ಕೆಲವು ಅವನ ಅದ್ಭುತ ಸಾಹಸಗಳನ್ನು

Garani Srinivasan

ಗೊಲ್ಲತಿಯರಿಗೆ ಯಶೋದೆ ನೆನಪು ಮಾಡಿಕೊಡುತ್ತಾಳೆ. ಗೋವರ್ಧನ ಪೂಜೆಯ ಸಂದರ್ಭದಲ್ಲಿ ಗೋವಳರು ಬಡಿಸಿದ ಎಲ್ಲ ಎಡೆಯನ್ನು ಅವನು ಬಂದು ತಿಂದು ಹಾಕಿದ್ದು, ಕಾಳಿಂದೀ ಮಡುವಿನಲ್ಲಿ ಅಡಗಿದ್ದ ಕಾಳೀಯನನ್ನು ತುಳಿದು, ಹೊಡೆದಾಡಿ, ಆ ವಿಷದರ್ಪವನ್ನು ದಮನ ಮಾಡಿದ್ದು, ಭಯಂಕರವಾಗಿ ಬುಸುಗುಟ್ಟುತ್ತಾ ಅಬ್ಬರಿಸುತ್ತಾ, ಮುನ್ನುಗ್ಗಿ ಬರುತ್ತಿದ್ದ ಎತ್ತಿನ ರೂಪದ ವೃಷಭಾಸುರನನ್ನು ಹಿಡಿದು ಕೊಂದದ್ದು, ಬೆಟ್ಟದಂತೆ ನಿಶ್ಚಲವಾಗಿ ಮಧುರೆಯ ಹೆಬ್ಬಾಗಿಲಲ್ಲಿ ಬಾಲಕೃಷ್ಣನನ್ನು ಕೊಲ್ಲಲು ನಿಂತಿದ್ದ ಕುವಲಯಾಪೀಡವೆಂಬ ಆನೆಯನ್ನು ಧ್ವಂಸ ಮಾಡಿದ್ದು- ಇವುಗಳನ್ನೆಲ್ಲಾ ಹೇಳುತ್ತಾ, ತಾಯಿ ಯಶೋದೆ ತನ್ನ ಹೆತ್ತ ಹೊಟ್ಟೆಗೆ ಬಾಲಕೃಷ್ಣನಿಂದ ಎಷ್ಟು ಸಂಕಟವಾಯಿತು, ತನ್ನ ವಯಸ್ಸಿಗೆ ಮೀರಿದ ಸಾಹಸಗಳನ್ನು ಅವನು ತೋರಿದನಲ್ಲ ಎಂಬ ಭಯ ~~ಉಂಟಾಯಿತು~~ ಎಂದು ಅವರಲ್ಲಿ ಹೇಳಿಕೊಳ್ಳುತ್ತಾಳೆ. ಯಶೋದೆ ಸದ್ಗುಣವತಿ. ಮೃದುವಾಗಿ ಗೊಲ್ಲತಿಯರಿಗೆ ~~[illegible]~~ಯಾಲರ ಸದುಪದೇಶ ಮಾಡುತ್ತಾಳೆ. ತನ್ನ ಮಗನ ಬಗ್ಗೆ ದೂರು ಮಮತೆ ತರವಲ್ಲವೆಂದೂ, ಗೋಕುಲದ ಎಲ್ಲ ಮಕ್ಕಳ ಮೇಲೂ ಅವುಗಳಿದ್ದೆ ಯೆಂದೂ ಹೇಳುತ್ತಾ ಒಂದು ನಿದರ್ಶನವನ್ನು ಕೊಡುತ್ತಾಳೆ. ಅವಳು ಒಂದು ಸಾರಿ ಅಳತೆಯಿಲ್ಲದಷ್ಟು ತುಪ್ಪವನ್ನು ಕೊಡುತ್ತಿದ್ದಳಂತೆ. ಕಂದನಿಗೆ ಅದಷ್ಟನ್ನು ತಪ್ಪಾಗಿ ಕೊಡುವುದಕ್ಕಾಗಿ. ಒಂದು ಸಾರದಲ್ಲಿ ಅವನಿಗೆ ತಪ್ಪನ್ನು ನಿಲ್ಲಿಸಬೇಕು- ಗೋಕುಲದ ಎಳೆಯ ಬಾಲಕರೆಲ್ಲರೂ ಕೂಡಿಕೊಂಡು ಅಷ್ಟು ತುಪ್ಪವನ್ನು, ಒಂದು ತುಪ್ಪವನ್ನು ಮುಗಿಸಿ ತಿಂದು ಬಿಟ್ಟರಲ್ಲ. ನಾನೇನು ಮಾಡಬೇಕು, ಎನ್ನುತ್ತಾಳೆ. ಎಲ್ಲ ತಾಯಂದಿರೂ ತಮ್ಮ ತಮ್ಮ ಮಕ್ಕಳನ್ನು ಅಂಕೆಯಲ್ಲಿಡಲು ಯುಕ್ತಿ ಬೇಕು. ಆದರೆ, ಅವರನ್ನು ಮೃದುವಾದ ಮಾತುಗಳಿಂದಲೇ ದಾರಿಗೆ ತರಬೇಕೆನ್ನುತ್ತಾಳೆ.

ಸಂಗ್ರಹವಾಗಿ, ಈ ತಿರುವಾಯ್ಮೊಳಿಯ ವಿಷಯವಿದು.

ಭಗವಂತನ ದಿವ್ಯ ಬಾಲ್ಯದ ಲೀಲೆಗಳನ್ನು ತಾಯಿ ಯಶೋದೆಯಂತೆ ಕಣ್ಣಾರೆ ಕಂಡು ಆನಂದಿಸಿದಳೋ ಹಾಗೆಯೇ ಅವುಗಳನ್ನು ಭಾವಿಸಿಕೊಂಡು ಅನುಭವಿಸಿ ಆನಂದಿಸಿದವನು ~~[illegible]~~ ಸುಭದ್ರವಾದ ಕೋಟೆಕೊತ್ತಲಗಳಿಂದ ರಂಜಿತವಾದ ತಿರುಮಂಗೈ ನಾಡಿನ ಒಡೆಯನಾಗಿ, ಎಲ್ಲರೂ ಆಶಿಸುವ ಅನುಕರಣೀಯ ಸುಗುಣನಿಧಿಯಾಗಿ ಇರುವ ಕಲಿಯನು. ಮಧುರ ಮನೋಹರವಾದ ಈ ಭಗವದ್ವಿಷಯವನ್ನು ಇಂಪಾಗಿ ಹಾಡುವುದಕ್ಕೆ ತಕ್ಕಂತೆ ತಮಿಳಿನಲ್ಲಿ ಈ ಹದಿನಾಲ್ಕು ಪಾಶುರಗಳ ಮಾಲೆಯನ್ನು ಅವನು ರಚಿಸಿ, ಭಗವಂತನ ಅಡಿದಾವರೆಗಳಲ್ಲಿ ಹಾಡಿ, ಸಮರ್ಪಿಸಿದ್ದಾನೆ. ಈ ಪಾಶುರಗಳನ್ನು ಚೆನ್ನಾಗಿ ಕಲಿತು, ಅನುಭವ (ಭಾವ) ಪೂರ್ಣವಾಗಿ ಹಾಡಬಲ್ಲವರು ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರರಾಗುತ್ತಾರೆನ್ನುತ್ತಾನೆ.

Garani Srinivasan

ಇದ್ದರಿಂದ ಅವರು ಇದೇ ಜೀವನದಲ್ಲಿ ಯಾವ ಬಗೆಯಾದ ಕಷ್ಟ ಬಂದರೂ ಗಳಿಗೆ ಬಿಳುಗಾದವರುವಲ್ಲವೆಂದೂ, ಮರು ಜನ್ಮಕ್ಕೆ ಎಡೆಕೊಡದಂತೆ, ಅವರಿಗೆ ಪರಮಪದವಾದ ಪ್ರಾಪ್ತಿಯಾಗುವುದೆಂದೂ, ಅಲ್ಲಿ ಅವರು ನಿತ್ಯಾನಂದವನ್ನು ವನ್ನನುಭವಿಸುವರೆಂದೂ ಕಲಿಯುಗವನ್ನೇ ಕೊನೆದುಕಾಣಿಸಿ ಬಂಗದೆ ಶಿರುವಾಲಿಗೆ ಕುಲ ಶ್ರುತಿ.

ಅಡಿಯನಡೆ: அடிவரவு:- ಮಾನವೆ மானம், ಕಾಲ್ಕೆ காலை, ತಂದೆ தந்தை, ಮಣ್ ಮಹಳ್ மண் ಶಿಷ್ಯ தெள்ளி, ಮೈ மை, ಶನ್ದೆ தந்தை, ಮಗಳ್ ಮಹಳ್ மண் ಶಿಷ್ಯ தெள்ளி, ಮಗನ್ மகன், ಸಾವಿರವೆ ஆயிரம், ಕೊಯ್ದ தோய்த்த, ಅಜ್ಞನವೆ அங்கே ந., ಅಂಜುವನ್ அஞ்சுவன், ಅಚ್ಚವೆ அச்சம், ಶಮ್ಬರವೆ தம்பரம், ಅನ್ನವೆ அன்னம், (ಕಾದಲ್, காதில்)

ಪೆರಿಯ ತಿರುಮೊೞಿ - ಪತ್ತನೆಯ ಪತ್ತು - ಎಂಟನೆಯ ತಿರುಮೊೞಿ.
பெரிய திருமொழி - பத்தாம் பத்து - எட்டாந் திருமொழி.

8. ಕಾದಿಲ್ ಕಡಿಪ್ಪಿಟ್ಟು - காதிற் கடிப்பிட்டு.

1. காதிற் கடிப்பிட்டுக் கலிங்க முடுத்து,
தாது நல்ல தண்ணந் துழாய் கொடணிந்து,
போது மறித்துப் புறமே வந்து நின்றீர்,
ஏதுக் கிதுவென்? இதுவென் இதுவென்னோ?

ಕಾದಿಲ್ ಕಡಿಪ್ಪಿಟ್ಟು ಕ್ಕಲಿಙ್ಗ ಮುಡುತ್ತು,
ತಾದು ನಲ್ಲ ತಣ್ಣನ್ದುೞಾಯ್ ಕೊಡಣಿನ್ದು,
ಪೋದು ಮಱಿತ್ತುಪ್ಪುಱಮೇ ವನ್ದು ನಿನ್ಱೀರ್,
ಏದುಕ್ಕಿದುವೆನ್? ಇದುವೆನ್ ಇದುವೆನ್ನೋ?

ಕಾದಿಲ್ காதில் = ಕಿವಿಯಲ್ಲಿ, ಕಡಿಪ್ಪು கடிப்பு = ಕುಂಡಲವನ್ನು, ಇಟ್ಟು இட்டு = ಧರಿಸಿ (ಇಟ್ಟುಕೊಂಡು), ಕಲಿಙ್ಗಮ್ கலிங்கம் = ವಸ್ತ್ರವನ್ನು (ಪೀತಾಂಬರವನ್ನು), ಉಡುತ್ತು உடுத்து = ಉಟ್ಟು, ತಾದು தாது = ಪರಿಮಳದ, ಅಮ್ அம் (ತುಂಬಿದ), ನಲ್ಲ நல்ல = ಒಳ್ಳೆಯ, ತಣ್ தண் = ತಂಪಾದ, ಕೊಡು ಅಣಿನ್ದು கொ = ಸುಂದರವಾದ, ತುೞಾಯ್ துழாய் = ತುಲಸಿಯನ್ನು, ಪೋದು போது = ಕಾಲವನ್ನು (ಹಗಲನ್ನು), டு அணிந்து = ಧರಿಸಿಕೊಂಡು, ಪುಱಮೇ புறமே = ಮಱಿತ್ತು மறித்து = ಮರೆಸಿ (ನಿದಾನಮಾಡಿ), ಮುಂದುಗಡೆಯಲ್ಲಿ, ವನ್ದು ನಿನ್ಱೀರ್ வந்து நின்றீர் = ಬಂದು ನಿಂತಿರುವಿರಲ್ಲ (ನಿಲ್ಲುವಿರಲ್ಲ), ಏದುಕ್ಕು ஏதுக்கு = ಏಕೆ? ಇದು ಎನ್ இது என் = ಇದೇಕೆ, ಇದು ಎನ್ನೋ என் = ಇದೇನು? ಇದು ಎನ್ இது என் இது என்னோ = ಇದೇನು ಕಾರಣವೋ?

ಕಿವಿಯಲ್ಲಿ ಕುಂಡಲವನ್ನು ಇಟ್ಟುಕೊಂಡು, ವಸ್ತ್ರವನ್ನು (ಪೀತಾಂಬರವನ್ನು ಉಟ್ಟುಕೊಂಡು, ಪರಿಮಳದ ಒಳ್ಳೆಯ ತಂಪಾದ ಸೊಬಗಿನ ತುಲಸಿಯನ್ನು ಧರಿಸಿ, ಕಾಲವನ್ನು ಮರೆಸಿ, ಬಂದು ಮುಂದುಗಡೆ ನಿಂತಿರುವಿರಲ್ಲ! ಏಕೆ? ಇದೇನು? ಇದೇಕೆ? ಇದೇನು ಕಾರಣವೋ? (1)

ಬಾಲಕೃಷ್ಣನ ಸೊಬಗಿನ ಅಲಂಕಾರದ ಸುಂದರವಾದ ವರ್ಣನೆಗೆ ಇದು ಮೊದಲನೆಯ ಪಾಶುರ. ಕೃಷ್ಣನು ಕಿವಿಗೆ ಕುಂಡಲವನ್ನಿಟ್ಟಿದ್ದಾನೆ. ಆಕರ್ಷಕವಾದ ವಸ್ತ್ರವನ್ನು ಉಟ್ಟುಕೊಂಡಿದ್ದಾನೆ. ಪರಿಮಳ ತುಂಬಿದ ಸೊಗಸಾದ ಒಳ್ಳೆಯ ತುಲಸಿಯ ಮಾಲೆಯನ್ನು ಧರಿಸಿದ್ದಾನೆ. ಇವು ಹಿಂದು ಮುಂದುಗಳಲ್ಲಿ ಅಂದವನ್ನು ಕೊಡುತ್ತಾ, ಬಾಲಕೃಷ್ಣನನ್ನು ಅತ್ಯಾಕರ್ಷಕನನ್ನಾಗಿಸುತ್ತವೆ.

ಹೀಗೆ, ಚೆನ್ನಾಗಿ ಅಲಂಕರಿಸಿಕೊಂಡು, ಬಾಲಕೃಷ್ಣನು ತಾಯಿಯ ಜೊತೆ
ಯ ಮುಂದೆ ಬಂದು ನಿಲ್ಲುತ್ತಾನೆ. ತಾಯಿ ನಿಜವಾಗಿ ಅವನ ಅಂದವನ್ನು
ನೋಡಿ ನಲಿಯುತ್ತಾಳೆ, ದಿಟ. ಆದರೆ, ಅವಳು ತಾಯಿಯಲ್ಲವೇ? ಪ್ರತ್ಯೇ
ಈ ಮನೆಗೆ ಬಂದ ಮಗನನ್ನು ದಂಡಿಸಬೇಡವೇ? ಹೀಗೆಲ್ಲ ಶೃಂಗರಿಸಿಕೊಂಡು
ತನ್ನ ಮಗನನ್ನು ಎಲ್ಲೆಲ್ಲಿ ಅಲೆದು ಬಿಟ್ಟನೋ? ಏನೇನು ಮಾಡಿದನೋ? ಎಷ್ಟು
ದೃಷ್ಟಿಯಾಯಿತೋ? ಬೆಳಗಿನಿಂದ ಅಲೆದಾಡಿ, ಮುದುಕುಮುಚ್ಚಿನಲ್ಲಿ ಕಣ್ಣ
ಮುಂದೆ ಬಂದು ನಿಲ್ಲುವುದೇ? ಈ ಬಗೆಯ ಯೋಚನೆಗಳಲ್ಲಿ ಅವಳ ಮನ
ಸ್ಸನ್ನು ಕಲಕಿಬಿಟ್ಟಿತು. ಅದಕ್ಕೇ ಈ ಪ್ರಶ್ನೆಗಳ ಸುರಿಮಳೆ!

2. துவராடை யுடுத்தொரு செண்டு சிலுப்பி,
கவராக முடித்துக் கலிக்கச்சுக் கட்டி,
சுவரார் கதவின் புறமே வந்து நின்றீர்,
இவரார்? இதுவென்? இதுவென்? இதுவென்னோ

ತುವರಾಡೈಯುಡುತ್ತೊರು ಶೆಣ್ಡು ಶಿಲುಪ್ಪಿ,
ಕವರಾಗ ಮುಡಿತ್ತುಕ್ ಕಲಿಕ್ಕಚ್ಚುಕ್ ಕಟ್ಟಿ,
ಶುವರಾರ್ ಕದವಿನ್ ಪುಱಮೇ ವನ್ದು ನಿನ್ಱೀರ್,
ಇವರಾರ್? ಇದುವೆನ್? ಇದುವೆನ್? ಇದುವೆನ್ನೋ.

ತುವರ್ ಆಡೈ துவர் ஆடை = ಕಾವಿ ಬಟ್ಟೆಯನ್ನು, ಉಡುತ್ತು உடு
ತ್ತு = ಉಟ್ಟುಕೊಂಡು, ಒರು ಶೆಣ್ಡು ஒரு செண்டு = ಒಂದು ಚೆಂಡನ್ನು,
ಶಿಲುಪ್ಪಿ சிலுப்பி = ಆಡಿಸುತ್ತಾ, ಕವರ್ ಆಗ கவர் ஆக =
ಕವಲು ಆಗುವಂತೆ, ಮುಡಿತ್ತು முடித்து = ಗಂಟಿಟ್ಟು, ಕಲಿಕಚ್ಚು ಕಟ್ಟಿ
கலிக்கச்சுக் கட்டி = ವೀರಗಚ್ಚೆ ಕಟ್ಟಿ, ಶುವರ್ சுவர் = ಗೋ
ಡೆಯ, ಆರ್ ஆர் = ತುಂಬ, ಕದವಿನ್ கதவின் = ಬಾಗಿಲಿನ,
ಪುಱಮೇ புறமே = ಮುಂದೆಯೇ, ವನ್ದು வந்து = ಬಂದು, ನಿನ್
ಱೀರ್ நின்றீர் = ನಿಂತಿದ್ದೀರಿ, ಇವರ್ ಆರ್ இவர் ஆர் = ಇವ
ರು ಯಾರು? ಇದು ಎನ್ இது என் = ಇದೇನು? ಇದುವೆನ್
இதுவென் = ಇದೇನು (ಇದೇಕೆ?)? ಇದು ಎನ್ನೋ இது என்
ஓ = ಇದೇಕೆಕ್ಕೋ?

ಕಾವಿ ಬಟ್ಟೆಯನ್ನು ಉಟ್ಟುಕೊಂಡು, ಒಂದು ಚೆಂಡನ್ನು ಆಡಿಸುತ್ತ,
ಕವಲಾಗುವಂತೆ ಗಂಟಿಕ್ಕಿ ವೀರಗಚ್ಚೆಯನ್ನು ಕಟ್ಟಿ, ಗೋಡೆಯ
ತುಂಬ ಇರುವ ಬಾಗಿಲಿನ ಮುಂದೆಯೇ ಬಂದು ನಿಂತಿದ್ದೀರಲ್ಲ, ಇವರು
ಯಾರು? ಇದೇನು? ಇದೇನು? ಇದೇಕೆಕ್ಕೋ? (2)

ಈ ಪಾಶುರದಲ್ಲಿ ಬಾಲಕೃಷ್ಣನ ಮತ್ತೊಂದು ಅವತಾರದ (ಅಲಂಕಾರ
ದ) ವಿವರಣೆ ಕಂಡುಬರುತ್ತದೆ. ಹಿಂದಿನ ಪಾಶುರದ ಆಕಸ್ಮಿಕವಾ

ಅಲಂಕಾರಕ್ಕೂ, ಇಲ್ಲಿ ವಿವರಿಸಿರುವುದು ಶಬ್ದಸಿದ್ಧ! ಈಗ ಕಾವಿ ಬಟ್ಟೆ ಉಟ್ಟುಕೊಂಡು, ವೀರಗಚ್ಚೆಯನ್ನು ಕಟ್ಟಿಕೊಂಡು, ಕೈಯಲ್ಲಿ ಚೆಂಡನ್ನು ಹಿಡಿದು ಆಡಿಸುತ್ತಾ, ತಾಯಿ ಯಶೋದೆಯ ಮನೆಯ ಹೆಬ್ಬಾಗಿಲಿನ ಮುಂದೆ ಬಂದು ನಿಂತುಕೊಂಡಿದ್ದಾನೆ. ಯಶೋದೆಗೆ ಸಂಶಯ ಬರುವಂತಾಯಿತು. ಯಾರಿವನು? ಕೃಷ್ಣನೇ ನಿಜವಾಗಿ? ಏನಿದು ಇವನ ವೇಷ? ಏಕೆ ಹೀಗೆ? ಏತಕ್ಕಾಗಿ? ಎಂದು ಮುಂತಾದ ಪ್ರಶ್ನೆಗಳ ಸುರಿಮಳೆಗೆ ಅವಕಾಶವಾಯಿತಷ್ಟೆ! ಕೃಷ್ಣನೇನು ಮಾಯಾವಿಯೇ ಅಲ್ಲವೇ?

3. கருளக்கொடியொன்றுடையீர்! தனிப்பாகீர்!,
உருளச்சகடமது உறக்கில் நிமிர்ந்தீர்,
மருளைக்கொடுபாடிவந்தில்லம்புகுந்தீர்,
இருளத்திதுவென்? இதுவென்? இதுவென்னோ?

ಕರುಳಕ್ಕೊಡಿಯೊನ್ರುಡೈಯೀರ್! ತನಿಪ್ಪಾಹೀರ್!,
ಉರುಳಚ್ಚಗಡಮದು ಉರಕ್ಕಿಲ್ ನಿಮಿರ್ನ್ದೀರ್,
ಮರುಳೈಕ್ಕೊಡುಪಾಡಿವನ್ದಿಲ್ಲಮ್ ಪುಗುನ್ದೀರ್,
ಇರುಳತ್ತಿದುವೆನ್? ಇದುವೆನ್? ಇದುವೆನ್ನೋ?

ಕರುಳನ್ கருளன் = ಗರುಡನ, (ಗರುಡನ), ಕೊಡಿ ಒನ್ರು கொடி ஒன்று = ಅಪರೂಪವಾದ ಧ್ವಜವನ್ನು, ಉಡೈಯೀರ್ உடையீர் = ಉಳ್ಳವರೇ, ತನಿಪ್ಪು ಆಹೀರ್ தனிப்பு ஆகீர் = ಏಕಪ್ರಾಧಾನ್ಯತೆಯೇ ಆಗಿರುವವರೇ, ~~ಉರುಳ~~ ಉರುಳ உருள = ಉರುಳಿ ಬೀಳುವಂತೆ, ಶಕಟವೂ ಅದು சகடம் அது = ಶಕಟವನ್ನು, ಉರಕ್ಕಿಲ್ உறக்கில் = ನಿದ್ದೆಯಲ್ಲಿ, ನಿಮಿರ್ನ್ದೀರ್ நிமிர்ந்தீர் = (ಕಾಲನ್ನು) ಚಾಚಿದವರೇ, ಮರುಳ மருள = ಮೋಹಕವಾಗಿ, ~~[illegible]~~ ~~[illegible]~~ ಕೊಡು ಪಾಡಿ கொடு பாடி = ಹಾಡಿಕೊಂಡು, ವನ್ದು வந்து = ಬಂದು, ಇಲ್ಲಮ್ இல்லம் = ಮನೆಯನ್ನು, ಪುಗುನ್ದೀರ್ புகுந்தீர் = ಪ್ರವೇಶಿಸಿದವರೆ, ಇರುಳತ್ತು இருளத்து = ರಾತ್ರಿಯಲ್ಲಿ, ಇದುವೆನ್ இதுவன் = ಇದೇನು? ಇದು ಎನ್ இதுவன் = ಇದು ಏನು? ಇದುವೆನ್ನೋ இதுவென்னோ = ಇದೇನು ಕಾರಣವೋ?

ಅಪರೂಪವಾದ ಗರುಡಧ್ವಜವುಳ್ಳವರೇ, ಏಕಪ್ರಾಧಾನ್ಯತೆಯೇ ಆಗಿರುವವರೇ, ಶಕಟವು ಉರುಳಿ ಬೀಳುವಂತೆ ಅದನ್ನು ನಿದ್ದೆಯಲ್ಲಿಯೇ ಝಾಡಿಸಿದವರೇ, ಮೋಹಕವಾಗಿ ಹಾಡಿಕೊಂಡು ಬಂದು ಮನೆಯನ್ನು ಪ್ರವೇಶಿಸಿದವರೇ, ರಾತ್ರಿಯಲ್ಲಿ ಇದೇನು? ಇದೇನು? ಇದೇನು ಕಾರಣ? (3)

ಭಗವಂತನು ~~ಗರುಡನನ್ನು~~ ತನ್ನ ವಾಹನವೂ ನೆಚ್ಚಿನ ಕಿಂಕರನಾದ ಗರುಡನನ್ನು ಧ್ವಜದ ಲಾಂಛನವಾಗಿ ಉಳ್ಳವನು. ಸ್ವಯಂ ಏಕಪ್ರಾಧಾನನು. ದರ್ಪನಿಮರ್ದನನು. ಪರಮ ಶ್ರೇಷ್ಠನು. ಸರ್ವೋನ್ನತನು. ಶ್ರೀಕೃಷ್ಣನಾ

Garani Srinivasan

ಎಳೆಯುವುದುವಾಗ
ಅವರಾಸುರನು ಅವನನ್ನು ಕೊಲ್ಲಲು ಹವಣಿಸುತ್ತಾ ಬಂಡಿಯ ರೂಪದಲ್ಲಿ ಉರುಳುತ್ತಾ ಬಂದು ಅವನ ಮೇಲೆ ನುಗ್ಗಿ ಬಂದ ಶಕಟಾಸುರನನ್ನು, ಅವನು ನಿದ್ದೆ ಮಾಡುತ್ತಿರುವ ಹಾಗೆಯೇ ತನ್ನ ಕಾಲನ್ನು ಝಾಡಿಸಿ ಕೊಂದು ಹಾಕಿದನು.
ಕತ್ತಲಲ್ಲಿ, ಮನಮೋಹಕವಾಗಿ ಹಾಡುತ್ತಾ, ಮನೆಯನ್ನು ಪ್ರವೇಶಿಸಿದ ಬಾಲಕೃಷ್ಣನನ್ನು ತಾಯಿ ಯಶೋದೆ ಹೊಗಳುವಂತೆ ಮಾತನಾಡುತ್ತಾ, ದಂಡಿಸುತ್ತಾಳೆ. ಅದಕ್ಕಾಗಿಯೇ ಈ ಪ್ರಶ್ನೆಗಳು, ಬಂದಾದ ಮೇಲೆಯೂ.

4. நாமம்பலவுமுடை நாரணநம்பீ,
தாமத்துளபம்மிக நாறிடுகின்றீர்,
காமனைப் பாடி வந்தில்லம் புகுந்தீர்,
ஏமத்திருவென்? இதுவென்? இதுவென்னோ?

ನಾಮಮ್ ಪಲವುಮುಡೈ ನಾರಣ ನಮ್ಬೀ,
ತಾಮತ್ತುಳಬಮ್ ಮಿಗ ನಾಱಿಡುಗಿನ್ಱೀರ್,
ಕಾಮನೆನಪ್ಪಾಡಿ ವನ್ದಿಲ್ಲಮ್ ಪುಗುನ್ದೀರ್,
ಏಮತ್ತಿರುವೆನ್? ಇದುವೆನ್? ಇದುವೆನ್ನೋ?

ನಾಮಮ್ நாமம் = ಹೆಸರುಗಳು, ಪಲವುಮ್ பலவும் = ಅನೇಕವನ್ನು, ಉಡೈ உடை = ಉಳ್ಳ, ನಾರಣ ನಮ್ಬೀ நாரண நம்பீ = ಶ್ರೀಮನ್ನಾರಾಯಣಸ್ವಾಮಿಯೇ, ತಾಮಮ್ ತುಳಬಮ್ தாமம் துளபம் = ತುಳಸಿಯ ಮಾಲೆಯನ್ನು, ಮಿಗ ನಾಱು மிக நாறு = ಬಹಳವಾಗಿ ಪರಿಮಳಿಸುವುದನ್ನು, ಇಡುಗಿನ್ಱೀರ್ இடுகின்றீர் = ಧರಿಸಿದ್ದೀರಿ, ಕಾಮನ್ ಎನ காமன் என = ಮನ್ಮಥನೇ ಎನ್ನುವಂತೆ ಇದ್ದೀರಿ, ಪಾಡಿ பாடி = ಹಾಡುತ್ತಾ, ವನ್ದು வந்து = ಬಂದು, ಇಲ್ಲಮ್ இல்லம் = ಮನೆಯನ್ನು, ಪುಗುನ್ದೀರ್ புகுந்தீர் = ಪ್ರವೇಶಿಸಿದಿರಿ, ಏಮತ್ತು ஏமத்து = ಸಂತೋಷದ, ಇದು ಎನ್ இது என் = ಇದೇನು? ಇದು ಎನ್ இது என் = ಇದು ಏನು?. ಇದು ಎನ್ನೋ இது என்னோ = ಇದು ಏತಕ್ಕೋ?

ಅನೇಕಾನೇಕ ಹೆಸರುಗಳನ್ನುಳ್ಳ ಶ್ರೀಮನ್ನಾರಾಯಣಸ್ವಾಮಿಯೇ, ತುಂಬ ಪರಿಮಳಿಸುತ್ತಿರುವ ತುಲಸಿಯ ಮಾಲೆಯನ್ನು ಧರಿಸಿರುವವರೇ, ಸಾಕ್ಷಾತ್ ಮನ್ಮಥನಂತೆ ಇರುವವರೇ, ಹಾಡುತ್ತಾ ಬಂದು ಮನೆಯನ್ನು ಪ್ರವೇಶಿಸುತ್ತಿರುವವರೇ, ಸಂತೋಷದ ಇದು ಏನು? ಇದಕ್ಕೇನು ಕಾರಣವೋ? (4)

ಭಗವಂತನಿಗೆ ಅನಂತ ನಾಮಗಳು. 'ಸಹಸ್ರನಾಮ'ದಲ್ಲಿಯನಲ್ಲವೇ

ಸ್ವಾಮಿ? ಯಾವ ದೇವರನ್ನು ಹಿಡಿದು ಕೊಂಡರೂ ಅದು ಅವನಿಗೇ ಸೇರುತ್ತದೆ
ಪರಿಮಳದಿಂದ ತುಂಬಿದ ತುಲಸಿಯ ಹಾರವೆಂದರೆ ಭಗವಂತನಿಗೆ ಪರಮ
ಭೋಗ್ಯ! ಮನ್ಮಥನೇ ಪರಮಸುಂದರನೆಂದರೆ, ಭಗವಂತನು ಮನ್ಮಥನಿಗೆ
ಮನ್ಮಥನಿದ್ದಂತೆ! ಭಗವಂತನು ಆನಂದಸ್ವರೂಪಿ, ಆನಂದಮಯನೇ.

ಹೊರತ್ತು ಮಿಂದು ಮನೆಗೆ ಬಂದ ಬಾಲಕೃಷ್ಣನನ್ನು ತಾಯಿ ಯಶೋ
ದೆ ದಂಡಿಸುತ್ತಾಳೆ: ಸ್ವಾಮೀ, ಬಗೆಬಗೆಯ ಶೃಂಗಾರಗಳುಳ್ಳವನೇ,
ತುಲಸಿಯ ಹಾರವನ್ನು ಧರಿಸಿರುವವನೇ, ಸಾಕ್ಷಾತ್ ಮನ್ಮಥನಂತೆ ಮೆರೆ
ಯುತ್ತಿರುವವನೇ, ಕತ್ತಲಾಗುವವರೆಗೆ ನಿಮಗೆ ಅಲೆದಾಡಿ ಸಾಕಾಯಿ
ತೇ? ಎಲ್ಲಿ ಅಲೆದಾಡಿದಿರಿ? ಹಿಡಿಸಲಾರದ ನಿಮ್ಮ ಸಂತೋಷಕ್ಕೆ ಕಾರಣ
ವೇನು? ವಸ್ತ್ರ ಮರೆತು ಆನಂದದಿಂದ ಹಾಡುತ್ತಾ ಮನೆಯನ್ನು ಪ್ರವೇ
ಶಿಸುತ್ತಿದ್ದೀರಿ! ಏನು ವಿಷಯ? ಏನು ಸಮಾಚಾರ? ಎಲ್ಲಿಗೆ ಹೋಗಿದ್ದಿರಿ?

5. சுற்றுங்குழல் தாழச்சுரிகையணிந்து,
மற்றும் பலமாமணி பொன் கொடணிந்து,
முற்றம் புகுந்து முறுவல் செய்து நின்றீர்,
எற்றுக்கிதுவென்? இதுவென்? இதுவென்னோ?

ಸುಟ್ರುಙ್ಗುೞಲ್ ತಾೞಚ್ಚುರಿಕೈಯಣಿನ್ದು,
ಮಟ್ರುಮ್ ಪಲಮಾಮಣಿ ಪೊನ್ ಕೊಡಣಿನ್ದು,
ಮುಟ್ರಮ್ ಪುಗುನ್ದು ಮುಱುವಲ್ ಸೆಯ್ದು ನಿನ್ಱೀರ್,
ಎಟ್ರುಕ್ಕಿದುವೆನ್? ಇದುವೆನ್? ಇದುವೆನ್ನೋ?

ಸುಟ್ರುಮ್ ಕುೞಲ್ சுற்றும் குழல் = ಗುಂಗುರು ಕೂದಲನ್ನು, ತಾೞ தாழ = ತೂಗಾಡುವ, ಚುರಿಕೈ சுரிகை = ಸಣ್ಣ ಕತ್ತಿಯನ್ನು, ಅಣಿನ್ದು அணிந்து = ಅಲಂಕರಿಸಿಕೊಂಡು, ಮಟ್ರುಮ್ மற்றும் = ಇನ್ನೂ, ಪಲ பல = ಹಲವಾರು, ಮಾಮಣಿ ಪೊನ್ மாமணி பொன் = ಮಹಾರತ್ನಗಳನ್ನೂ ಚಿನ್ನವನ್ನೂ (ಬಗೆಬಗೆಯ ರತ್ನಾಭರಣಗಳನ್ನು), ಕೊಡಣಿನ್ದು கொடணிந்து = ಧರಿಸಿಕೊಂಡು, ಮುಟ್ರಮ್ முற்றம் = ಅಂಗಳವನ್ನು, ಪುಗುನ್ದು புகுந்து = ಪ್ರವೇಶಿಸಿ, ಮುಱುವಲ್ ಸೆಯ್ದು முறுவல் செய்து = ಮುಗುಳ್ನಗೆ ನಗುತ್ತಾ (ಮಂದಹಾಸವನ್ನು ಬೀರುತ್ತಾ), ನಿನ್ಱೀರ್ நின்றீர் = ನಿಲ್ಲುವವರೇ, ಎಟ್ರುಕ್ಕು எற்றுக்கு = ಏತಕ್ಕೆ? ಇದುವೆನ್ இதுவென் = ಇದೇನು? ಇದುವೆನ್? ಇದುವೆನ್ನೋ?

ಗುಂಗುರು ಕೂದಲನ್ನು ತೂಗಾಡುವ ಸಣ್ಣ ಕತ್ತಿಯನ್ನು, ಬಗೆಬಗೆಯ

Garani Srinivasan

ರತ್ನಾಭರಣಗಳನ್ನು ಅಲಂಕರಿಸಿಕೊಂಡು, ಮನೆಯ ಅಂಗಳವನ್ನು ಪ್ರವೇಶಿಸಿ, ಮಂದಹಾಸವನ್ನು ಬೀರುತ್ತಿರುವವರೇ, ಏಕಕ್ಕೆ? ಏನಿದು? ಏಕಕ್ಕಾಗಿ? (5)

ಯಶೋದೆ ಬಾಲಕೃಷ್ಣನಿಗೆ ಹೇಳುತ್ತಾಳೆ: ಸ್ವಾಮೀ, ನಮ್ಮ ಕೂದಲನ್ನು ಗುಂಗುರು ಗುಂಪಾಗಿ ಬಾಚಿಕೊಂಡಿದ್ದೀರಿ. ಸೊಂಟಕ್ಕೆ ಬಿಗಿದ ಶಕ್ತಿಯನ್ನು ಕಟ್ಟಿ ತೂಗಾಡಿಸುತ್ತಿದ್ದೀರಿ. ಬಗೆಬಗೆಯ ಉತ್ತಮವಾದ ರತ್ನಗಳ, ಚಿನ್ನದ, ಒಡವೆಗಳನ್ನು ಅಂದವಾಗಿ ತೊಟ್ಟಿದ್ದೀರಿ. ಬಂದು ಮನೆಯ ಅಂಗಳದಲ್ಲೇ ನಿಂತಿದ್ದೀರಿ. ಮುಸಿಮುಸಿ ನಗುತ್ತಿದ್ದೀರಿ. ಹೀಗೆಲ್ಲಾ ಏಕಕ್ಕೆ? ಏನಿದು ನಮ್ಮ ಈ ಆಟ? ಇದರ ಅರ್ಥವಾದರೂ ಏನು?

6. ஆனாயருமாநிரையுமங்கொழிய,
கூனாயதோர் கொற்றவில்லொன்றுகையேந்தி,
போனாரிருந்தாரையும்பார்த்துப்புகுதீர்,
ஏனோர்கள்முன்னென்? இதுவென்? இதுவென்னோ?

ಆನಾಯರುಮಾನಿರೈಯುಮಙ್ಙೊಳಿಯ,
ಕೂನಾಯದೋರ್ ಕೊಱ್ಱವಿಲ್ಲೊನ್ಱುಕೈಯೇನ್ದಿ,
ಪೋನಾರಿರುನ್ದಾರೈಯುಮ್ ಪಾರ್ತ್ತುಪ್ಪುಹುದೀರ್,
ಏನೋರ್ಹಳ್ ಮುನ್ನೆನ್? ಇದುವೆನ್? ಇದುವೆನ್ನೋ?

ಆನ್ ಆಯರುಮ್ ஆன் ஆயரும் = ಗೋವಳರನ್ನೂ, ಆ ನಿರೈಯುಮ್ ஆநிரையும் = ದನಕರುಗಳ ಮಂದೆಗಳನ್ನೂ, ಅಙ್ಙು அங்கு = ಅಲ್ಲಿ, ಒಳಿಯ ஒழிய = ಬಿಟ್ಟು, ಕೂನ್ ಆಯದು கூன் ஆயது = ಬಗ್ಗಿರುವ, ಓರ್ ஓர் = ~~ಅನನ್ಯವಾದ~~ ಅಸದೃಶವಾದ, ಕೊಱ್ಱಮ್ ವಿಲ್ கொற்றம் வில் = ಸಮರ್ಥವಾದ ಬಿಲ್ಲು, ಒನ್ಱು ஒன்று = ಒಂದನ್ನು, ಕೈ ಯೇನ್ದಿ கை ஏந்தி = ಕೈಯಲ್ಲಿ ಹಿಡಿದು, ಪೋನಾರ್ போனார் = ಹೋಗುವವರನ್ನು, ಇರುನ್ದಾರೈಯುಮ್ இருந்தாரையும் = ಇರುವವರನ್ನು, ಪಾರ್ತ್ತು பார்த்து = ನೋಡಿಕೊಂಡು, ಪುಹುದೀರ್ புகுதீர் = ಒಳಕ್ಕೆ ಬರುತ್ತೀರಿ, ಏನೋರ್ಹಳ್ ಮುನ್ ஏனோர்கள் முன் = ಏನೆನ್ನುವವರ ಮುಂದೆ, ಎನ್ ನಾಣ್ = ಏನು? ಇದುವೆನ್? ಇದುವೆನ್ನೋ = ಏನೆನ್ನೋ?

ಗೋವಳರನ್ನೂ ಗೋವುಗಳ ಹಿಂಡುಗಳನ್ನೂ ಅಲ್ಲಿ ಬಿಟ್ಟು ಬಗ್ಗಿರುವ ಅಸದೃಶವಾದ ಬಲವಾದ ಬಿಲ್ಲನ್ನು (ಬಿಲ್ಲೊಂದನ್ನು) ಕೈಯಲ್ಲಿ ಹಿಡಿದು, ಹೋಗುವವರನ್ನೂ ಇರುವವರನ್ನೂ ಗಮನಿಸುತ್ತಾ ಒಳಕ್ಕೆ ಬರುತ್ತೀರಿ. ಏನೆನ್ನುವವರ ಮುಂದೆ ಏನು? ಇದೇನು? ಏಕಕ್ಕೆ? (6)

ಯಶೋದೆ ಬಾಲಕೃಷ್ಣನಿಗೆ ಹೇಳುತ್ತಾಳೆ: ಸ್ವಾಮೀ, ಗೋವು

ಗಳನ್ನೂ ಹೋಲವಳರನ್ನೂ ರಕ್ಷಿಸುವ ಕ್ಷೋಣಿಗಾರಿ ನಿಮ್ಮದಲ್ಲವೇ? ಎಲ್ಲವನ್ನೂ ಕೈಬಿಟ್ಟು ಈ ವಿಚಿತ್ರ ವೇಷದಲ್ಲಿ ನೀವು ಇಲ್ಲಿಗೆ ಬಂದಿದ್ದೀರಲ್ಲ! ನಿಮ್ಮ ಕೈಯಲ್ಲಿ ಬಲವಾದ ಬಿಲ್ಲೊಂದಿದೆ! ಅದನ್ನು ಬಗ್ಗಿಸಿ, ಹೆದೆಯೇರಿಸಿ ಸಿದ್ಧಮಾಡಿಕೊಂಡಿದ್ದೀರಿ! ಬರುವವರನ್ನೂ ಇಲ್ಲಿರುವವರನ್ನೂ ಕಾಮ ಭುಕ್ತರೇ ಮನೆಯೊಳಕ್ಕೆ ಬರುತ್ತೀರಿ. ಇದರ ಅರ್ಥವೇನೆನ್ನುವುದು ಎಲ್ಲರಿಗೂ ತಿಳಿಯುವುದು ಹೇಗೆ? ಸಂಶಯ ಪಡುವ ಜನ ಇದನ್ನು ಕಂಡರೆ ಏನೆಂದಾರು? ನಿಮ್ಮ ನಡತೆಯೇ ವಿಚಿತ್ರವಾಗಿದೆಯಲ್ಲ!

7. மல்லே பொருதிறடோள் மணவாளீர்!,
அல்லேயறிந்தோம் நும் மனத்தின் கருத்தை,
சொல்லாதொழியீர் சொன்னபோதில்வாரீர்,
எல்லே! யிதுவென்? இதுவென்? இதுவென்னோ?

ಮಲ್ಲೇ ಪೊರುದಿರಡೋಳ್ ಮಣವಾಳೀರ್!,
ಅಲ್ಲೇಯಱಿನ್ದೋಮ ನುಮ ಮನತ್ತಿನ್ ಕರುತ್ತೈ,
ಶೊಲ್ಲಾದೊಳಿಯೀರ್ ಶೊನ್ನಪೋದಿನಾಲ್ ವಾರೀರ್,
ಎಲ್ಲೇ, ಯಿದುವೆನ್? ಇದುವೆನ್? ಇದುವೆನ್ನೋ?

ಮಲ್ಲೇ மல்லே = ಮಲ್ಲರೊಡನೆಯೇ, ಪೊರುದ பொருத = ಹೋರಾಡಿದ, ತಿರಳ್ ತೋಳ್ திரள் தோள் = ಬಲಿಷ್ಠವಾದ ತೋಳುಗಳುಳ್ಳ, ಮಣವಾಳೀರ್ மணவாளீர் = ಸ್ವಾಮಿಯೇ, ಅಲ್ಲೇ அல்லே = (ಈ) ರಾತ್ರಿಯೇ, ಅಱಿನ್ದೋಮ ಅறிந்தோம் = ಅರಿತುಕೊಂಡಿದ್ದೇವೆ, ನುಮ ನும் = ನಿಮ್ಮ, ಮನತ್ತಿನ್ மனத்தின் = ಮನದ, ಕರುತ್ತೈ கருத்தை = ಅಭಿಪ್ರಾಯವನ್ನು, ಶೊಲ್ಲಾದು சொல்லாது = ಹೇಳದೆಯೇ, ಒಳಿಯೀರ್ ஒழியீர் = ಹೋಗಬೇಡಿರಿ, ಶೊನ್ನ சொன்ன = ಹೇಳಿದ, ಪೋದಿನಾಲ್ போதில் = ಹೊತ್ತಿನಲ್ಲಿ (ಹೊತ್ತಿಗೆ ಸರಿಯಾಗಿ), ವಾರೀರ್ வாரீர் = ಬನ್ನಿರಿ, ಎಲ್ಲೇ எல்லே = ಅಯ್ಯೋ, ಇದು ಎನ್ இதுஎன் = ಇದೇನು? ಇದು ಎನ್? ಇದು ಏನ್ನೋ?

ಮಲ್ಲರೊಡನೆಯೇ ಹೋರಾಡಿದಂಥ ಬಲಿಷ್ಠ ತೋಳುಗಳುಳ್ಳ ಸ್ವಾಮಿಯೇ, (ಈ) ರಾತ್ರಿಯೇ ನಿಮ್ಮ ಮನಸ್ಸಿನ ಅಭಿಪ್ರಾಯವನ್ನು ಅರಿತುಕೊಂಡಿದ್ದೇವೆ (ನಾವುಗಳ) ಹೇಳದೆ ಹೋಗಬೇಡಿರಿ. ಹೇಳಿದ ಹೊತ್ತಿಗೆ ಸರಿಯಾಗಿ ಬನ್ನಿರಿ. ಅಯ್ಯೋ ಇದೇನು? ಇದೇನು? ಇದೇನೋ?

Garani Srinivasan

ಯಶೋದೆ ಬಾಲಕೃಷ್ಣನಿಗೆ ಹೇಳುತ್ತಾಳೆ: ಮುಷ್ಟಿಕ ಚಾಣೂರಾದಿ ಸುಂದರ ಮಲ್ಲರೊಡನೆ ಹೋರಾಡಿದ ಬಲಿಷ್ಠವಾದ ಬಾಹುಗಳುಳ್ಳ ಸ್ವಾಮಿಯೇ, ಇಂದೇ, ಈ ರಾತ್ರಿಯೇ, ನಿಮ್ಮ ಮನಸ್ಸಿನಲ್ಲಿರುವ ಅಭಿಪ್ರಾಯವಲ್ಲೇನೆಂದು ನಮಗೆ ಅರ್ಥವಾಗದೆ. ತಾಯಿಗೆ ಹೇಳದಂತೆ ಇನ್ನು ಮುಂದೆ ಅಲೆದಾಡಲು, ನಿಮ್ಮ ಅದ್ಭುತ ಪಾದಗಳನ್ನು ನಡೆಸಲು, ಎಲ್ಲಿಗೂ ಹೋಗಬೇಡ. ತಾಯಿ ಹೇಳಿದ ಮಾತನ್ನೇ ಕೇಳಿ. ತಾಯಿ ಹೇಳಿದ ಹೊತ್ತಿಗೆ ಸರಿಯಾಗಿ ಮನೆಗೆ ಬಂದುಬಿಡು. ಅಯ್ಯೋ, ಇದೇನು ನಿಮ್ಮ ವಿಚಿತ್ರ ವೇಷ? ಇದೇನು ನಿಮ್ಮ ವಿಚಿತ್ರ ವರ್ತನೆ? ಏತಕ್ಕಾಗಿ ಇದು? ಏತಕ್ಕಾಗಿ ಇದಲ್ಲ? ಯಾರನ್ನು ಮೆಚ್ಚಿಸುವುದಕ್ಕೆ? ಯಾರನ್ನು ಮರುಳು ಮಾಡುವುದಕ್ಕಾಗಿ?

8. புக்காடரவம் பிடித்தாட்டும் புனிதீர்!,
இக்காலங்கள் யாமுமக்கே ஒன்றுமல்லோம்,
தக்கார் பலர் தேவிமார் சாலவுடையீர்,
எக்கே! யிதுவென்? இதுவென்? இதுவென்னோ?

ಪುಕ್ಕಾಡರವಮ್ ಪಿಡಿತ್ತಾಟ್ಟುಮ್ ಪುನಿದೀರ್!,
ಇಕ್ಕಾಲಙ್ಗಳ್ ಯಾಮುಮಕ್ಕೇ ಒನ್ಱುಮಲ್ಲೋಮ್,
ತಕ್ಕಾರ್ ಪಲರ್ ದೇವಿಮಾರ್ ಶಾಲವುಡೈಯೀರ್,
ಎಕ್ಕೇ! ಯಿದುವೆನ್? ಇದುವೆನ್? ಇದುವೆನ್ನೋ?

ಪುಕ್ಕು புக்கு = ಪ್ರವೇಶಿಸಿ, ಆಡುಮ್ ஆடும் = ಹೆಡೆಯಾಡಿಸುವ, ಅರವಮ್ அரவம் = ಸರ್ಪವನ್ನು, ಪಿಡಿತ್ತು பிடித்து = ಹಿಡಿದು, ಆಟ್ಟುಮ್ ஆட்டும் = ಆಟವಾಡಿಸುವ, ಪುನಿದೀರ್ புனிதீர் = ಪವಿತ್ರನೇ, ಇಕ್ಕಾಲಙ್ಗಳ್ இக்காலங்கள் = ಈಗ (ಈ ಸಮಯದಲ್ಲಿ), ಯಾಮ್ யாம் = ನಾವು, ಉಮಕ್ಕು உமக்கு = ನಿಮಗೆ, ಒನ್ಱುಮ್ ಅಲ್ಲೋಮ್ ஒன்றும் அல்லோம் = ಯಾವುದಕ್ಕೂ ಸರಿವಲ್ಲ, ತಕ್ಕಾರ್ தக்கார் = ತಕ್ಕವರು, ಪಲರ್ பலர் = ಹಲವರು, ದೇವಿಮಾರ್ தேவிமார் = ದೇವಿಯರು, ಶಾಲ சால = ಚೆನ್ನಾಗಿ (ಬಹಳ), ಉಡೈಯೀರ್ உடையீர் = ಉಳ್ಳವರಾಗಿದ್ದೀರಿ, ಎಕ್ಕೇ எக்கே = ಎಂಥ ಕಷ್ಟಕಾಲ? ಇದು ಎನ್? ಇದುವೆನ್? ಇದು ಎನ್ನೋ?

ಪ್ರವೇಶಿಸಿ, ಹೆಡೆಯಾಡಿಸುವ ಸರ್ಪವನ್ನು ಹಿಡಿದು ಆಡಿಸುವಂಥ ಪವಿತ್ರಸ್ವಾಮಿಯೇ, ಈಗ, ಈ ಸಮಯದಲ್ಲಿ, ನಾವು ನಿಮಗೆ ಯಾವುದಕ್ಕೂ ಸರಿವಲ್ಲ. ತಕ್ಕವರು ಹಲವರು ದೇವಿಯರನ್ನು ಚೆನ್ನಾಗಿ ಉಳ್ಳವರಾಗಿದ್ದೀರಿ. ಎಂಥ ಕಷ್ಟಕಾಲ ಇದು? ಇದೇನು? ಇದೇಕೋ ಹೀಗೆ? (8)

ಯಶೋದೆ ಬಾಲಕೃಷ್ಣನಿಗೆ ಹೇಳುತ್ತಾಳೆ: ಸ್ವಾಮೀ, ಪರಮ ಪವಿತ್ರನೇ,
ನಿಮಗೆ ನಮ್ಮಂಥವರು ಯಾವುದಕ್ಕೂ ಹೋಲಿಕೆಗೆ ಬಾರದವರಾಗಿದ್ದೇವೆ. ನಿಮ್ಮ
ರೂಪವನ್ನು ಗುಣವನ್ನು ಕಂಡು ಬೆರಗಾಗಿ, ನಿಮ್ಮನ್ನು ಮೆಚ್ಚಿ, ವರಿಸಿ, ಮದುವೆ
ಯಾದ ದೇವಿಯವರು ಹಲವರು ನಿಮ್ಮ ಸೇವೆ ಮಾಡುವುದಕ್ಕೆ
ಸಿದ್ಧವಾಗಿದ್ದಾರಲ್ಲ! ಈಗ, ನೀವು 'ಯಶೋದೆಯ ಮಗ' ನೆನಿಸಿಕೊಂಡಿರು
ವ ಈ ಸಮಯದಲ್ಲಿ, ನಾನು ನಿಮಗೆ ಯಾವುದಕ್ಕೂ ಕರವಲ್ಲ, ಹೌದೇ?
ತಾಯಿ ಎನಿಸಿಕೊಂಡವಳ ಮಾತಿಗೆ ಲಕ್ಷ್ಯಕೊಡದೆ, ಅವಳಿಗೆ ನಿಮ್ಮ ಯೋಗಕ್ಷೇ
ಮ ವಿಷಯವನ್ನು ತಿಳಿಸದೆ, ನೀವು ನಡೆದು ಹೋಗುತ್ತೀರಲ್ಲವೇ? ಕಾಳಿಂ
ದಿ ಮಡುವಿನೊಳಕ್ಕೆ ಹಾರಿಕೊಂಡು, ಜಲಕ್ಕೆ ಅಡಗಿದ್ದ ಕಾಳೀಯನೆಂಬ
ಹೆಡೆಗಳುಳ್ಳ ವಿಷಸರ್ಪವನ್ನು ಕೆಣಕಿ, ಅದರೊಡನೆ ಹೋರಾಡಿ, ಅದನ್ನು
ಹಣ್ಣು ಮಾಡಿ, ಅದಕ್ಕೆ ಬುದ್ಧಿ ಕಲಿಸಿದವರಲ್ಲವೇ ನೀವು? ತಾಯಿಗೆ
ಮಕ್ಕಳು ಗೌರವ ಕೊಡದೆ ಇರುವ ಈ ಕಾಲ ಎಂಥ ಕೆಟ್ಟ ಕಾಲ!

9. ஆடியசைந்து ஆய்மடவாரொடு நீ போய்,
கூடிக்குரவை பிணை கோமளப்பிள்ளாய்,
தேடித்திருமாமகள் மண்மகள் நிற்ப,
ஏடி! யிதுவென்? இதுவென்? இதுவென்னோ?

ಆಡಿಯಶೈನ್ದು ಆಯ್ ಮಡವಾರೊಡು ನೀ ಪೋಯ್,
ಕೂಡಿಕ್ಕುರವೈ ಪ್ಪಿಣೈ ಕೋಮಳಪ್ಪಿಳ್ಳಾಯ್,
ತೇಡಿ ತ್ತಿರುಮಾಮಗಳ್ ಮಣ್ಮಗಳ್ ನಿಱ್ಪ,
ಏಡಿ! ಯಿದುವೆನ್? ಇದುವೆನ್? ಇದುವೆನ್ನೋ?

ಆಡಿ ஆடி = ಆಡಿಕೊಂಡು, (ಕುಣಿದಾಡಿ), ಅಶೈನ್ದು அசைந்து =
ಅಲ್ಲಾಡಿಕೊಂಡು (ಕೂಗಾಡುತ್ತಾ), ಆಯ್ ಮಡವಾರೊಡು ஆய்மடவா
ரொடு = ಗೊಲ್ಲಬಾಲೆಯರೊಡನೆ, ನೀ நீ = ನೀನು, ಪೋಯ್
போய் = ಹೋಗಿ, ಕೂಡಿ கூடி = ಸೇರಿ (ಕೂಡಿಕೊಂಡು), ಕುರ
ವೈ ಪ್ಪಿಣೈ குரவை பிணை = ರಾಸಕ್ರೀಡೆಯನ್ನಾಡುವ, ಕೋಮಳ
ಪ್ಪಿಳ್ಳಾಯ್ கோமள பிள்ளாய் = ಸುಂದರನಾದ ಮಗುವೇ,
ತೇಡಿ தேடி = ಹುಡುಕುತ್ತಾ, ತಿರುಮಾಮಗಳ್ திருமாமகள் =
ಶ್ರೀದೇವಿಯೂ, ಮಣ್ಮಗಳ್ மண் மகள் = ಭೂದೇವಿಯೂ,
ನಿಱ್ಪ நிற்ப = ಇರಲಾಗಿ, ಏಡಿ ஏடி = ಏನೇ (ಸಖಿ), ಇದು
ಎನ್ இது என் = ಇದೇನು ವಿಚಿತ್ರ? ಇದುವೆನ್? ಇದುವೆನ್ನೋ?

ಗೊಲ್ಲಬಾಲೆಯರೊಡನೆ ಕೂಡಿಕೊಂಡು, ಆಡುತ್ತಾ ಅಲೆದಾಡುತ್ತಾ
ಇರುವ ನೀನು ಹೋಗಿ, ಅವರೊಡನೆ ರಾಸಕ್ರೀಡೆಯನ್ನಾಡುವ ಸುಂದರ

Garani Srinivasan

ಬಾಲಕನೇ, ಶ್ರೀದೇವಿಯೂ ಭೂದೇವಿಯೂ (ನಿನಗಾಗಿ) ದುಃಖ ಪಡುತ್ತಾ ಇರಲಾಗಿ, ಇದೇನು ವಿಚಿತ್ರ ಕೆಲಸ ನಿನ್ನದು? ಏಕೆ ನನಗೆ ಹೀಗೆಲ್ಲ ಮಾಡು (9)
ತ್ತಿರುವೆ?

ಹಿಂದಿನ ಪಾಶುರದಲ್ಲಿ "ನಿನ್ನ ದೇವಿಯರು ನಿನ್ನ ಸೇವೆಗೆ ಸಿದ್ಧರಾಗಿದ್ದಾರೆಂದೂ, ಆ ಕಾರಣದಿಂದ ಇಹಲೋಕದ ಜನರ (ಭಕ್ತರ) ವಿಷಯದಲ್ಲಿ ನಿನಗೆ ಅಪೇಕ್ಷೆಯಿಲ್ಲವೇ" ಎಂದು ಹೇಳಲಾಗಿತ್ತು. ಹಿಂದಿನ ಪಾಶುರದ ಅಭಿಪ್ರಾಯವನ್ನೇ ಈ ಪಾಶುರದಲ್ಲಿ ಮುಂದುವರಿಸಿದರೂ, ಅದಕ್ಕೆ ವಿರುದ್ಧವಾದ ಮಾತನ್ನು ಇಲ್ಲಿ ಸಮರ್ಥಿಸಲಾಗಿದೆ.

ಯಶೋದೆ ಬಾಲಕೃಷ್ಣನಿಗೆ ಹೇಳುತ್ತಾಳೆ: ಪರಮಸುಂದರನಾದ ಬಾಲಕನೇ, ನಿನ್ನನ್ನು ಕಾಣದವರಾಗಿ, ನಿನ್ನನ್ನು ಹುಡುಕುತ್ತಾ, ಶ್ರೀದೇವಿಯೂ ಭೂದೇವಿಯೂ ಅಲೆದಾಡುತ್ತಿದ್ದಾರೆ. ಹಾಗಿರುವಾಗ, ನೀನು ಅವರನ್ನು ಅವರ ಎಡೆಬಿಡದ ಸೇವೆಯನ್ನು ಅಲಕ್ಷಿಸಿ, ಗೋಕುಲದ ಗೋವಳ ಬಾಲಕಿಯರೊಡನೆ ಕೂಡಿಕೊಂಡು, ಆನಂದದಿಂದ ರಾತ್ರಿಇಡೀ ಆಡುತ್ತಿರುವೆಯಲ್ಲಾ! ಇದೇನು ನಿನ್ನ ವಿಚಿತ್ರ ವರ್ತನೆ? (ನಿನಗೆ ಭೂಲೋಕ ಭಕ್ತರೇ ಬೇಕಾದರೇ? ನಿನ್ನನ್ನು ವರಿಸುವ ನಿನ್ನ ದೇವಿಯರಿಂತಲೂ ಇವರು ಹೆಚ್ಚೇ? ಎಂದು ಭಾವ).

10. அல்லிக்கமலக்கண்ணனை அங்கோராய்ச்சி,
எல்லிப்பொழுதூட்டிய ஊடற்றிறத்தை,
கல்லின் மலிதோள் கலியன் சொன்னமாலை,
சொல்லித்துதிப்பாரவர் துக்கமிலரே.

ಅಲ್ಲಿಕ್ಕಮಲಕ್ಕಣ್ಣನೈ ಅಙ್ಗೋರಾಯ್ಚ್ಚಿ,
ಎಲ್ಲಿಪ್ಪೊಳುದೂಟ್ಟಿಯ ಊಡಲ್ತ್ತಿರತ್ತೈ,
ಕಲ್ಲಿನ್ ಮಲಿ ತೋಳ್ ಕಲಿಯನ್ ಶೊನ್ನಮಾಲೈ,
ಶೊಲ್ಲಿತ್ತುದಿಪ್ಪಾರವರ್ ತುಕ್ಕಮಿಲರೇ.

ಅಲ್ಲಿ அல்லி = ಎಸಳುಗಳಿಂದ ತುಂಬಿದ, ಕಮಲ ಎಂಬ கமலம் = ಕೆಂದಾವರೆಯಂತೆ, ಕಣ್ಣಿನ கண்ணனை = ಕಣ್ಣುಳ್ಳವನನ್ನು, ಅಙ್ಗು அங்கு = ಗೋಕುಲದಲ್ಲಿ, ಓರ್ ಆಯ್ಚ್ಚಿ ஓர் ஆய்ச்சி = ಹೋಲಿಕೆಯಿಲ್ಲದ ಗೊಲ್ಲತಿಯು, ಎಲ್ಲಿಪ್ಪೊಳುದು எல்லிப்பொழுது = ರಾತ್ರಿಯ ಕಾಲ (ಸಮಯ)ದಲ್ಲಿ, ಊಟ್ಟಿಯ ஊட்டிய = ನಡುವೆ ಉಂಟಾದ, ಊಡಲ್ ஊடல் = ಪ್ರೇಮಕಲಹದ, ತಿರತ್ತೈ திறத்தை = ವಿಷಯವನ್ನು ಕುರಿತು, ಕಲ್ಲಿನ್ ಮಲಿ கல்லின் மலி =

ಬೆಟ್ಟದಷ್ಟು ಶಕ್ತಿಯುಳ್ಳ, ಕೋಲ್ ಕ್ಕೋನ್ = ಕೋಲುಗಳುಳ್ಳ, ಕಲಿಯನ್
ಕಲಿಯನ್ = ಕಲಿಯನು, ಶೊನ್ನ ಉಕಾಣ್ಣ = ಹೇಳಿದ (ಹಾಡಿದ).
ಮಾಲೈ ಮಾಲೈ = ಪಾಶುರ ಮಾಲೆಯನ್ನು, ಶೊಲ್ಲ ವಲ್ಲಾರ್ = ಹೇಳುವರು,
ಪತಿಪ್ಪಾರ್ ಅವರ್ ತುಕ್ಕಿಪ್ಪಾರ್ ಅವರ್ = ನಿತ್ಯಶ್ರೀಶಕ್ತ್ಯವರು, ಭಕ್ತರು
ಇಲರೇ ತುಕ್ಕಮ್ ಇಲರೇ = ಯಾವ ಬಗೆಯ ದುಃಖವೂ ಇಲ್ಲದವರಾಗು
ತ್ತಾರೆ.

ಪರಾಗಗಳಿಂದ ತುಂಬಿದ ಕೆಂದಾವರೆಯಂತೆ ಕಣ್ಣುಳ್ಳವನನ್ನು ಗೋಕು
ಲದಲ್ಲಿ ಪಾಟಿಯಿಲ್ಲದ ಗೊಲ್ಲತಿಯೊಬ್ಬಳು ರಾತ್ರಿಯ ಸಮಯದಲ್ಲಿ ನಡುವೆ
ಉಂಟಾದ ಪ್ರೇಮ ಕಲಹದ ವಿಷಯವನ್ನು ಕುರಿತು ಬೆಟ್ಟದಷ್ಟು ಶಕ್ತಿಯು
ಳ್ಳ ಕೋಲುಗಳ ಕಲಿಯನು ಹೇಳಿದ (ಹಾಡಿದ) ಪಾಶುರ ಮಾಲೆಯನ್ನು
ಹೇಳುವರು ನಿತ್ಯಶ್ರೀಶಕ್ತ್ಯವರು ಯಾವ ಬಗೆಯ ದುಃಖವೂ ಇಲ್ಲದವರಾಗು (10)
ತ್ತಾರೆ.

ಅರಳಿದ ಕೆಂದಾವರೆಯಂತೆ ಕಣ್ಣುಳ್ಳವನು, ವೃಂದಾವನ ಎಂಬ
ಹೆಸರಾಂತ ಜನವಂಶನು, ನಂದಗೋಕುಲದಲ್ಲಿ ಯಶೋದೆಯ ಮಗನಾಗಿ,
ಶ್ರೀಕೃಷ್ಣನಾಗಿ ಅವತರಿಸಿದನಷ್ಟೆ. ಬಾಲಕೃಷ್ಣನು ಇಡಿಯ ನಂದಗೋಕುಲ
ಕ್ಕೇ ಕಣ್ಣಾಗಿ ಬೆಳೆದನು. ಒಂದು ದಿನ ಅವನು ಹೊತ್ತು ಮೀರಿ, ಕತ್ತಲೆ
ಕವಿದ ಮೇಲೆ ಮನೆಗೆ ಬಂದನೆಂದು, ತಾಯಿಯು ಕಣ್ಣನ್ನು ಮಾಡಿದ
ಮಾಡಿಕೊಂಡು ಮನೆಗೆ ಬಂದನೆಂದು, ತಾಯಿಯು ಕಣ್ಣನ್ನು ಮಾಡಿದ
ಯಶೋದೆಯು ಅವನನ್ನು ದಂಡಿಸಿ ಮಾತನಾಡಿದಳು. ದಂಡನೆಯ ಆ ಮಾತು
ಗಳಲ್ಲೂ ಸಹ ತಾಯಿ-ಮಗನ ನಡುವಣ ಅಳತೆಗೆ ಎಟುಕದ ಪ್ರೇಮ-
ವಾತ್ಸಲ್ಯಗಳು ಉಕ್ಕಿ ಹರಿಯುತ್ತವೆ. ಇದನ್ನೇ ಈ ಕಿರುಮೊಳಿಯ ವಿಷಯ
ವನ್ನಾಗಿ ಮಾಡಿಕೊಂಡು ಸುಂದರವಾದ ಹತ್ತು ಪಾಶುರಗಳನ್ನು ರಚಿಸಿ ಹಾಡಿ
ದವನು ಬೆಟ್ಟದಷ್ಟು ಕೋಲುಳ್ಳ ಕಲಿಯನು. ಅವನು ಭಕ್ತಿಪೂರ್ವಕ
ವಾಗಿ ಹಾಡಿದ ಪವಿತ್ರವಾದ ಈ ಪಾಶುರಗಳನ್ನು ಹಾಡಿ ಜನವಂಶ
ನನ್ನು ಸ್ತುತಿಸುವ ಭಕ್ತರು ಸಾಂಸಾರಿಕವಾದ ಎಲ್ಲ ಬಗೆಯ ದುಃಖಗಳಿಂ
ದ ಬಿಡುಗಡೆ ಹೊಂದಿ ಸುಖಿಸುತ್ತಾರೆ ಎಂಬುದು ಇಲ್ಲಿಯ ಫಲಶ್ರುತಿ!
ಕಟುಗಳಿಂದಲೂ ಪಾರಾಗುತ್ತಾರೆ ಎಂಬುದು ಇಲ್ಲಿಯ ಫಲಶ್ರುತಿ!

ಅಡಿಯ ನಡೆ: ಅಡಿವರವು: — ಕಾದಿಲ್ ಕಾತ್ತಿಲ್, ತುವರ್ ತುವರ್,
ಕರುಳ್ ಕಟ್ಟುನ್, ನಾಮಮಾ ನಾಮಮ್, ಶುಟ್ಟು ಸುಟ್ರು, ಆನಾಯರ್
ಕರುಳ್ ಕಟ್ಟುನ್, ನಾಮಮಾನಾಮಮ್, ಶುಟ್ಟು ಸುಟ್ರು, ಆನಾಯರ್
ಆಯ್ಚ್ಚಿಯರ್, ಮಲ್ಲೈ ಮಲ್ಲೈ, ಪಿಳ್ಳೈ 4 ಕ್ರೆ, ಆಡಿ ಆಡಿ. ಅಲ್ಲಿ
ಅಲ್ಲಿ, (ಪಿಳ್ಳೈ 4 ಣ್ ಕ್ರೆ).

19.3.79

ಪೆರಿಯ ತಿರುಮೊೞಿ - ಪತ್ತಾಮ್ ಪತ್ತು - ಒಂಬತ್ತಾಮ್ ತಿರುಮೊೞಿ.

பெரிய திருமொழி - பத்தாம்பத்து - ஒன்பதாந் திருமொழி

9. ಪುಳ್ಳುರುವಾಗಿ - புள்ளுருவாகி.

1. புள்ளுருவாகி நள்ளிருள் வந்த
பூதனை மாள, இலங்கை
ஒள்ளெரிமண்டியுண்ணப் பணித்த
ஊக்கமதனை நினைந்தோ?,
கள்ளவிழ் கோதை காதலுமெங்கள்
காரிகைமாதர் கருத்தும்,
பிள்ளை தங்கையிற் கிண்ணமேயாக்கப்
பேசுவதெந்தை பிரானே!

ಪುಳ್ಳುರುವಾಗಿ ನಳ್ಳಿರುಳ್ ವನ್ದ
ಪೂದನೈ ಮಾಳ, ಇಲಙ್ಗೈ
ಒಳ್ಳೆರಿ ಮಣ್ಡಿಯುಣ್ಣಪ್ ಪಣಿತ್ತ
ಊಕ್ಕಮದನೈ ನಿನೈನ್ದೋ?,
ಕಳ್ಳವಿೞ್ ಕೋದೈ ಕಾದಲುಮೆಙ್ಗಳ್
ಕಾರಿಗೈ ಮಾದರ್ ಕರುತ್ತುಮ್,
ಪಿಳ್ಳೈ ತಙ್ಗೈಯಿಲ್ ಕಿಣ್ಣಮೇ ಯಾಕ್ಕ
ಪೇಸುವದೆನ್ದೈ ಪಿರಾನೇ!

ಪುಳ್ புள் = ಪಕ್ಷಿಯ, ಉರು ಆಗಿ உரு ஆகி = ರೂಪವಾಗಿ, ನಳ್ நள் = ನಡು, ಇರುಳ್ இருள் = ರಾತ್ರಿ, ವನ್ದ வந்த = ಬಂದ, ಪೂದನೈ பூதனை = ಪೂತನಿಯು, ಮಾಳ மாள = ಸಾಯುವಂತೆ, ಇಲಙ್ಗೈ இலங்கை = ಲಂಕೆಯನ್ನು, ಒಳ್ ஒள் = ಒಳ್ಳೆಯ, ಎರಿ எரி = ಉರಿಯು, ಮಣ್ಡಿ மண்டி = ದಟ್ಟವಾಗಿ ವ್ಯಾಪಿಸಿ, ಉಣ್ಣ உண்ண = ಉಣ್ಣುವಂತೆ, ಪಣಿತ್ತ பணித்த = ಮಾಡಿದ, ಊಕ್ಕಮ್ ಅದನೈ உக்கம் அதனை = ಉತ್ಸಾಹವನ್ನು, ನಿನೈನ್ದೋ நினைந்தோ = ಸ್ಮರಿಸಿಕೊಂಡೋ, ಕಳ್ கள் = ಮಧುಗಳು, ಅವಿೞ் அவிழ் = ಸೋರಬರುವ, ಕೋದೈ கோதை = ತಲೆಗೂದಲನವರ, ಕಾದಲುಮ್ காதலும் = ಆಸೆಯನ್ನೂ, ಎಙ್ಗಳ್ எங்கள் = ನಮ್ಮ, ಕಾರಿಗೈ காரிகை = ಸುಂದರಿಯರಾದ, ಮಾದರ್ மாதர் = ಸ್ತ್ರೀಯರ, ಕರುತ್ತುಮ್ கருத்தும் = ಮನಸ್ಸೂ

Garani Srinivasan

ಭಾಸವಾಗುತ್ತಿದ್ದರೋ, ಅಷ್ಟೇ ಸುಲಭವಾಗಿ ಅಷ್ಟೇ ಅಸಡ್ಡೆಯಿಂದ ಸುಂದರ ಯುವತಿಯರು ನಿಮ್ಮ
ಇಟ್ಟಿರುವ ಪ್ರೇಮಾಭಿಲಾಷೆಯನ್ನು ಕುರಿತು ಮಾತನಾಡುತ್ತಿಲ್ಲ! ಮಗು
ವಿನ ಕೈಯಲ್ಲಿರುವ ಬಟ್ಟಲಿನ ಹಾಗೆ, ಅದು ನಿಮಗೆ ಬೆಲೆಯಿಲ್ಲದ್ದಾಗಿ ತೋರು
ವುದೇ?

"ಪಿಳ್ಳೈ ಕ್ಕೈಯಿಲ್ ಕಿಣ್ಣಮ್ ಪೆಳ್ಳವೇ ಕೊಳ್ಳಲಾಮ್ — பிள்ளை
கையில் கிண்ணம் மென்னவே கொள்ளலாம்" - ಎಂಬ
ಒಂದು ಗಾದೆ. ಅಂದರೆ ಮಗುವಿನ ಕೈಯಲ್ಲಿರುವ ವಸ್ತುವನ್ನು ಯಾರು
ಬೇಕಾದರೂ ಸುಲಭವಾಗಿ ಕಸಿದುಕೊಳ್ಳಬಹುದು. ಆ ಮಗುವೇ ಅದನ್ನು
ಅಲಕ್ಷಿಸಿ ಬಿಡಲೂಬಹುದು. ಮಗುವಿಗೆ ಆ ವಸ್ತುವಿನ ಬಗೆಗೆ ಅಷ್ಟು
ಅಸಡ್ಡೆ! ಈ ಗಾದೆಯ ಒಂದು ಭಾಗವನ್ನು ಪಾಶುರದಲ್ಲಿ ಬಳಸಲಾಗಿದೆ.
ಇನ್ನೊಂದು ಭಾಗ ಪಾಶುರದ ವಿಷಯಕ್ಕೆ ಅನ್ವಯಿಸುವುದಿಲ್ಲವಾಗಿದೆ.
ಮಗುವಾದ ಕೃಷ್ಣನಿಗೆ (ಬಾಲಕೃಷ್ಣನಿಗೆ) ಸುಂದರ ಸ್ತ್ರೀಯರ ಪ್ರೇಮಾ
ಭಿಲಾಷೆಯೆಂಬುದು ಬೆಲೆಬಾಳುವ ಬಟ್ಟಲಂತೆ ಆದರೂ, ಅಲ್ಪವೇ
ಸರಿ!

2. மன்றின் மலிந்து கூத்து வந்தாடி
மால் விடை யேழு மடர்த்தாயர்,
அன்று நடுங்க ஆநிரை காத்த
ஆண்மை கொலோ! வறியேனான்,
நின்ற பிரானே நீள் கடல் வண்ணா!
நீயிவள் தன்னை நின் கோயில்,
முன்றிலெழுந்த முருங்கையிற்றேனா
முன்கைவளை கவர்ந்தாயே.

ಮನ್‌ಱಿನ್ ಮಲಿನ್ದು ಕೂತ್ತು ವನ್ದಾಡಿ
ಮಾಲ್ ವಿಡೈ ಯೇೞು ಮಡರ್‌ತ್ತಾಯರ್,
ಅನ್ಱು ನಡುಙ್ಗ ಆನಿರೈ ಕಾತ್ತ
ಆಣ್ಮೈ ಕೊಲೋ ವಱಿಯೇನಾನ್,
ನಿನ್ಱ ಪಿರಾನೇ ನೀಳ್ ಕಡಲ್ ವಣ್ಣಾ
ನೀ ಯಿವಳ್ ತನ್ನೈ ನಿನ್ ಕೋಯಿಲ್,
ಮುನ್ಱಿಲೆೞುನ್ದ ಮುರುಙ್ಗೈಯಿಲ್ ತೇನಾ
ಮುನ್ಕೈವಳೈ ಕವರ್ನ್ದಾಯೇ.

ಮನ್ಱಿನ್ மன்றின் = ರಸ್ತೆಯ ಚೌಕಗಳಲ್ಲಿ, ಮಲಿನ್ದು
மலிந்து = ನಿಂತಿದ್ದು, ಕೂತ್ತು கூத்து = ಕುಣಿದಾಟವನ್ನು,
ಉವನ್ದು உவந்து = ಹರ್ಷದಿಂದ, ಆಡಿ ஆடி = ಆಡಿದ,
ಮಾಲ್ மால் = ಕಪ್ಪನೆಯ, ವಿಡೈ விடை = ವೃಷಭಗಳು,

ಮಲುಮಗಾ(ೞ)ಂ = ಮೆಳ್ಳನ್ನು, ಅದರ್‌ತ್ತು ಅಡರ್‌ತ್ತು = ಅದಗಿಸಿದ,
, ಆಯರ್ ಆಯರ್ = ಗೋವಳ್ಳರು, ಅನ್ನಾಯು ಅಣ್ಣಾಱು = ಅಂದು,
ನಡುಙ್ಗ ನ(ಡು)ಙ್ಗ = (ಭಯದಿಂದ) ನಡುಗಲು, ಆ ನಿರೈ ಆನಿರೈ
ಗೋವ್ವಗಳ ಹಿಂಡವನ್ನು. ಕಾತ್ತ ಕಾತ್ತ = ಕಾಯ್ದ (ರಕ್ಷಿಸಿದ),
ಆಣ್ಮೈ ಕೇಳೋ ಆಣ್ಣಾಮ ಕೋಲೋ = ಪೌರುಷವಿರ
ಬಲ್ಲದೇ, ಅಡಿಯೇನ್ ನಾನ್ ಅಱಿಯೇನ್ ನಾಣ = ನನಗೆ
ತಿಳಿಯದು, ನಿನ್ನು ಪಿರಾನೇ ನಿಣ್ಱ ಪಿರಾನೇ = ನಿಂತಿರುವ
ಸ್ವಾಮಿಯೇ, ನೀಳ್ ಕಡಲ್ ವಣ್ಣಾ ನೀಳ್ ಕಡಲ್ ವಣ್ಣಾ =
ವಿಸ್ತಾರವಾದ ಕಡಲಿನ ಬಣ್ಣವುಳ್ಳವನೇ, ನೀಙ್ಗೋ = ನೀನು, ಇವಳ್‌ತ್ತೆ
ಇವಳ್ ಕುಣ್ಣೈ = ಇವಳ (ದೇವಸ್ಥಾನ), ನಿನ್ ಕೋಯಿಲ್ ನಿಣ್ ಕೋಯಿ
ಲ್ = ನಿನ್ನ ಪವಿತ್ರವಾದ ಮನೆಯ (ದೇವಮಂದಿರದ), ಮುನ್ನಿಲ್
ಲ್ = ಬೆಳೆದು ನಿಂತಿ
ಮುಣ್ಱಿಲ್ = ಅಂಗಳದಲ್ಲಿ, ಎಲುಮ್ಬ ಗಾ(ೞ)ನಕ್ಕ = ನುಗ್ಗೆಯ ಮ
ರದ, ಮುರುಙ್ಗೈಯಿನ್ ಮುರುಙ್ಗೈಯಿನ್ = ನುಗ್ಗೆ ಮರ, ಮುನ್ನ್ ತ್ತೈವಳ್ಳೈ
ರದ, ಕೇನ್ ಆ ಪೂಣ್ ಆ = ಮಧ್ಯವಿನಂತೆ, ಮುನ್ ತ್ತೈ ವಳ್ಳೈ ಕವರ್ನ್ದಾಯೇ
ಮುಣ್ಣಾಕಬಿಲಾ = ಮುಂಗೈ ಬಳೆಯನ್ನು, ಕವರ್ನ್ದಾಯೇ
ಕವರ್ನ್ದಾಯೇ = ಕಸಿದುಕೊಂಡೆಯಲ್ಲ!

ರಕ್ಷೆಯ ಚಿಂತೆಗಳಲ್ಲಿ ನಿಂತಿದ್ದು, ದರ್ಪದಿಂದ (ಉತ್ಸಾಹದಿಂದ) ಕೂಡಿದ ಬ
ವನ್ನು ಹಿಡಿದ, ಕ್ರೂರವಾದ (ಕಪ್ಪನೆಯ) ಮೆಳ್ಳುವುಷಭಗಳನ್ನು ಅದಗಿಸಿದ, ಅಂದು
ಗೋವಳ್ಳರು ಭಯದಿಂದ ನಡುಗುತ್ತಿರಲು ಗೋವ್ವಗಳ ಹಿಂಡವನ್ನು ರಕ್ಷಿಸಿದ
ಪೌರುಷವೇ ಯಾರ ಕೆಲಸ? (ನಾನರಿಯೆ), ನಿಂತಿರುವ ಸ್ವಾಮಿಯೇ, ವಿಶಾಲ
ವಾದ ಕಡಲಿನ ಬಣ್ಣದವನೇ, ನೀನು ನಿನ್ನ ಪವಿತ್ರವಾದ (ದೇವ)ಮಂದಿರ
ದ ಅಂಗಳದಲ್ಲಿ ಬೆಳೆದು ನಿಂತಿರುವ ನುಗ್ಗೆಯ ಮರದ ಮಧ್ಯವಿನಂತೆ, ಇವಳ (2)
ಮುಂಗೈ ಬಳೆಯನ್ನು ಕಸಿದುಕೊಂಡೆಯಲ್ಲ!

ಈ ದಿನ ಪಾಶುರದಲ್ಲಿ ಭಗವಂತನು ಸುಂದರ ಯುವತಿಯ ಪ್ರೇಮಾಭಿ
ಲಾಷೆಯನ್ನು ಉಪೇಕ್ಷಿಸಿ ಮೋಸಮಾಡುವನೆಂದು, ಹಾಗೆ ಮಾಡುವುದು ಸ್ವಾಮಿ
ಗೆ ತರವಲ್ಲವೆಂದೂ ಹೇಳಲಾಗಿದೆ.

ಹೀಗೆ, ಪೌರುಷವಂತನೂ, ಆಕರ್ಷಕನೂ, ಉದಾರಿಯೂ, ರಕ್ಷಕ
ನೂ ಆದ ಭಗವಂತನಿಗೆ ಈ ಸುಂದರ ಯುವತಿಯ ಬಗೆಗೆ ಕನಿಕರ ಬೇಡವೇ?
ಸ್ತ್ರೀಯರ ಬಗೆಗೆ ಮರ್ಯಾದೆಯನ್ನುಲ್ಲಂಘಿಸಿ ನಡೆದುಕೊಳ್ಳುವುದು ಉಚಿತವೇ?
ಯುವತಿಯ ಮುಂಗೈಯ ಬಳೆಯನ್ನು ಕಸಿದುಕೊಳ್ಳಬಹುದೇ? ಎನ್ನಲಾಗುತ್ತಿದೆ.

ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದಾಗ, ಸಂಜೆಯ ವೇಳೆಯಲ್ಲಿ
ರಕ್ಷೆಯ ಚಿಂತೆಗಳಲ್ಲಿ ನಿಂತಿದ್ದು ಗೋಪಿಯರನ್ನೆಲ್ಲ ಆಕರ್ಷಿಸಿ, ಅವರ
ಮನಸ್ಸಿನಲ್ಲಿ ಹರ್ಷೋದ್ರೇಕಗಳನ್ನು ತುಂಬುತ್ತಿದ್ದನು.

Garani Srinivasa

ಅಲ್ಲದೆ ಕೊಡದ ಕುಣಿತದಲ್ಲಿ ವಿಶಿಷ್ಟ ರೀತಿಯಲ್ಲಿ ತನ್ನ ಪ್ರಾವೀಣ್ಯತೆಯನ್ನೂ ಕೌಶಲವನ್ನೂ ತೋರಿಸಿ, ಎಲ್ಲರನ್ನೂ ಆನಂದಗೊಳಿಸುತ್ತಿದ್ದನು.

ನಪ್ಪೈ ಎಂಬವಳನ್ನು ಮದುವೆಯಾಗಲು ಪಣವಾಗಿ ಇಟ್ಟಿದ್ದ ಕೊಬ್ಬಿ ಬೆಳೆದಿದ್ದ ಏಳು ಗೂಳಿಗಳನ್ನು ಅವನೊಬ್ಬನೇ ಎದುರಿಸಿ, ಅವುಗಳನ್ನು ಅಡಗಿಸಿಬಿಟ್ಟಿದ್ದನು.

ತನ್ನ ಪೂಜೆ ನಡೆಯಲಿಲ್ಲವೆಂಬ ಕಡುಕೋಪದಿಂದ ದೇವೇಂದ್ರನು ಇಡೀ ನಂದಗೋಕುಲವನ್ನೇ ನಾಶಮಾಡಿಬಿಡುವುದಾಗಿ ಬಗೆದು, ಸತತವಾದ ಬಿರುಸು ಮಳೆಯನ್ನು ಏಳು ದಿನಗಳ ಕಾಲ ಸುರಿಸತೊಡಗಿದನು. ಆಗ ಗೋವಳರು ನಡುನಡುಗಿದರು. ಬಾಲಕೃಷ್ಣನು ಅವರಿಗೆ ಧೈರ್ಯ ಹೇಳುತ್ತಾ, ಗೋವರ್ಧನಗಿರಿಯನ್ನೇ ಎತ್ತಿ, ಕೊಡೆಯಂತೆ ಹಿಡಿದು, ಅದರಡಿಯಲ್ಲಿ ಗೋವಳರನ್ನೂ ಗೋವುಗಳನ್ನೂ ರಕ್ಷಿಸಿದನು.

ಇವೆಲ್ಲವೂ ಭಗವಂತನ ಆಣ್ಮೈಗೆ (ಪೌರುಷಕ್ಕೆ) ನಿದರ್ಶನಗಳು. ಇಂತಹ ಪೌರುಷವಂತನಾದ ಭಗವಂತನು ಅವನಲ್ಲಿ ಅನನ್ಯವಾಗಿ (ಅವಳು) ಅನುರಕ್ತಳಾದ ಸುಂದರಯುವತಿಯ ಹರ್ಷೋತ್ಕರ್ಷಗಳನ್ನು ಹೀಗೆ, ಕೊರಗಿ ಕೃಶವಾಗುವಂತೆ ಮಾಡಬಹುದೇ? ಅವಳನ್ನು ಉಪೇಕ್ಷಿಸಬಹುದೇ? ಅವಳ ಕೈಬಳೆಗಳು ಕಳಚಿ ಬೀಳುವಂತೆ ಮಾಡಬಹುದೇ? ಇದನ್ನೂ ಸ್ವಾಮಿಯ ಆಣ್ಮೈ ಎನ್ನಬಹುದೇ?

ನುಗ್ಗೆಯ ಮರದಲ್ಲಿ ತುಂಬಿರುವ ಸಾರಪುಷ್ಪವು (ಮಧುವು) ~~[illegible]~~ ಬಲಿತಾಗ ಬೆಂಡಾಗಿ ಹೋಗುವುದು. ದರೆ. ಅದು ನೋಡುವುದಕ್ಕೆ ದಪ್ಪನಾಗಿ ಕಂಡರೂ, ಹಾಗೆಯೇ ಸುಂದರಯುವತಿಯ ಪ್ರೇಮಾಭಿಲಾಷೆ ಪೂರ್ಣಗೊಳ್ಳಲು ಅವಕಾಶ ಕೊಡದಿದ್ದರೆ, ಅವಳೂ ನುಗ್ಗೆಯ ಮರದ ಹಾಗೆ ಬೆಂಡಾಗುವುದು ಸಹಜವೇ — ಎಂಬುದು ಉಪಮಾನ.

3. ஆர்மலியாழி சங்கொடு பற்றி
ஆற்றலையாற்றல் மிகுந்து,
கார்முகில் வண்ண கஞ்சனை முன்னங்
கடந்தநின் கடுந்திறல் தானோ?
நேரிழை மாதை நித்திலத் தொத்தை
நெடுங்கடலமுதனையாளை,
ஆரெழில் வண்ண அங்கையில் வட்டாம்
இவளெனக் கருதுகின்றாயே.

ಆರ್ ಮಲಿಯಾಳಿ ಶಙ್ಗೊಡು ಪಟ್ರಿ
ಆಟ್ರಲೈಯಾಟ್ರಲ್ ಮಿಗುತ್ತು,

ಗಳವನ್ನು, ಪಿಳ್ಳೈ ತನ್ பிரானை தன் = ಮನುಷ್ಯನ, ಕೈಯಿಲ್ ஆழி
ಯುಳ್ = ಕೈಯಲ್ಲಿರುವ, ಕಣ್ಣಾಮೇ ಒಕ್ಕ கிண்ணாமே ஒக்க = ಒಕ್ಕ
ಅಗೆ ದಮನಾಗಿ, ಹೇಳುವದು பேசுவது = ಮಾತನಾಡುವುದು, ಎನ್ನೆ
ಪಿರಾನೇ எந்தை பிரானே = ನಮ್ಮ ಸ್ವಾಮಿಯೇ.

ವಿಷಯ ರೂಪದಲ್ಲಿ ನಟ್ಟಿರುಳಲ್ಲು ಬಂದ ಪೂತನಿಯು ತಾಯಿಯಂ ತೆಯೂ, ಒಳ್ಳೆಯ ಉರಿಯು ದಟ್ಟವಾಗಿ ವ್ಯಾಪಿಸಿ ಲಂಕೆಯನ್ನು ನಾಶಂ ಕ್ರಿಯೂ ಮಾಡಿದ ಉತ್ಸಾಹವನ್ನು ಸ್ಮರಿಸಿಕೊಂಡರೇ, ನಮ್ಮ ಸ್ವಾಮಿಯೇ, ದುಂ ಬಿಗಳು ಹೊರ ಬರುತ್ತಿರುವ ಕಲೆಗಾದ ಅನವರತ ಆಸೆಯನ್ನು (ಪ್ರೇಮವನ್ನು) ಮನುಷ್ಯನ ಕೈಯಲ್ಲಿ ನಮ್ಮ ಸುಂದರಿಯರಾದ ಸ್ತ್ರೀಯರ ಮನಸೆಳೆತವನ್ನು ರುವ ಒಬ್ಬ ಅಗೆ ದಮನಾಗಿ ಮಾತನಾಡುವುದು? (1)

ಒಳ್ಳೆಯ ನಡತೆಯವರು ಯಾರೂ ನಟ್ಟಿರುಳಲ್ಲಿ ಸುಳಿದಾಡುವುದು ವಿರಳ. ಒಳ್ಳೆಯ ನಡತೆಯವರು ಆಗ ಚಟುವಟಿಕೆ ಮಾಡದೆ ದುಷ್ಟರೂ ಕೆಟ್ಟ ಕೆಲಸಗಳಲ್ಲಿ ತೊಡಗಿರುವವರೂ ಆಗ ಬೇರೆ ಬೇರೆ ವಾದನ ಕ್ಕಾಗಿ. ಯಮಭಟರು ಬೇರೆ ಬೇರೆ ರೂಪಗಳನ್ನು ತಳೆದರೇ, ಬೇರೆ ಬೇರೆ ಸ್ತ್ರೀ ಗಳ ಮೇಲೆಯೇ ನಡುರಾತ್ರಿಗಳಲ್ಲಿ, ತಾಯಿಯವರು ಮಲಗಿರುವ ಸ್ಥಳಗಳಲ್ಲಿ ಪೂತನಿ ಸುಳಿವಿಲ್ಲದಂತೆ ಪ್ರವೇಶಿಸುತ್ತಾರೆಂಬುದು ನಂಬಿಕೆ. ಅವನಿಗೆ ಯಮನಸ್ತ್ರೀ ಯೆಂಬ ರಾಕ್ಷಸಿಯೂ ಕಂದನಾದ ಕೃಷ್ಣನ ಬಳಿಗೆ, ಮನುಷ್ಯಳ್ಳಿಯೂ ಕೋಪವೇ ಇಲ್ಲದ ಳೇ ಆಗಿ, ಅವನನ್ನು ಕೊಲ್ಲಲು ಬಂದಳು. ತಾಯಿಯೂ ತೋರದೆ ಇಲ್ಲದ ಸುಳಿ ಳೇ ಆಗಿ, ಅವನನ್ನು ತಾನು ಅಪ್ಪವಡಿಸಿಕೊಂಡು, ಸುಳಿ ದಮಯವನ್ನಿತ್ತು, ಅವಳ ಹಾಲವನ್ನೇ ತಾನು ಅಪ್ಪವಡಿಸಿಕೊಂಡು, ಆದರವನ್ನು ನಟಿಸುತ್ತಾ ವಿಲ್ಲದೆ ಬಂದು, ಹಸುಗೂಸಾದ ಕೃಷ್ಣನನ್ನೆತ್ತಿಕೊಂಡು, ಮೊಲೆಯನ್ನುಣ್ಣ ಲು ಕನ್ನ ಮೊಲೆಯನ್ನುಣಿಸಲು ಯತ್ನಿಸಿದಳಷ್ಟೆ. ಮೊಲೆಯನ್ನುಣ್ಣುವ ಉತ್ಸಾಹದಿಂದಲೇ ಕೃಷ್ಣನು ಅವಳ ಪ್ರಾಣಗಳನ್ನು ಹೀರಿಬಿಟ್ಟನು.

ಲಂಕೆಗೆ ಬೆಂಕಿಯಿಟ್ಟು ರಾಕ್ಷಸರಲ್ಲಿ ಭಯ ಹುಟ್ಟಿಸಿದವನು ರಾಮದೂ ತನಾದ ಹನುಮಂತ. ಅನಂತರ, ಶ್ರೀರಾಮನು ವಾನರಸೈನ್ಯದೊಡನೆ ಕಡಲನ್ ದಾಟಿ ಸೇತುವೆ ಕಟ್ಟಿ, ಲಂಕೆಯನ್ನು ಪ್ರವೇಶಿಸಿ, ಅಲ್ಲಿ ರಾವಣನೇ ಮೊದಲಾಗಿ ಎಲ್ಲ ದುಷ್ಟರಾಕ್ಷಸರನ್ನು ಕೊಂದು ಹಾಕಿದನು. ಮೊದಲು ಇಟ್ಟ ಬೆಂಕಿಯನ್ನು ಚೆನ್ನಾಗಿ ಹರಡಿಸಿ, ಪ್ರಜ್ವಲಿಸಿ ಉರಿದು ಲಂಕೆಯನ್ನು ನಿರ್ನಾಮಗೊಳಿ ಸಿತಷ್ಟೆ! ಹೀಗೆ ಮಾಡಿದ್ದು ಶ್ರೀರಾಮನಲ್ಲಿ ತುಂಬಿದ್ದ ಉತ್ಸಾಹ!

ಶ್ರೀಕೃಷ್ಣನಾಗಿ ಪೂತನಿಯನ್ನು ಸಂಹರಿಸಿದ್ದು, ಶ್ರೀರಾಮನಾಗಿ ಲಂಕೆಯ ರಾಕ್ಷಸ ವಂಶವನ್ನು ನಿರ್ನಾಮಗೊಳಿಸಿದ್ದು ಭಗವಂತನಿಗೆ ಬಹಳ ಸುಲಭವಾದ ಕೆಲಸವಂತೆ. ಹಿಂಸುಳಿಯುವ ಕಲೆಗಾದ ಅನ ಸುಂದರ ಯುವತಿಯರ ಮನದಾಸೆಯನ್ನು ನಿರಾಕರಿಸಿ ಅಸಡ್ಡೆಯಿಂದ ಮಾತನಾಡು ವುದೂ ಭಗವಂತನಿಗೆ ಅಷ್ಟೇ ಸುಲಭವಾಗಬಲ್ಲುದೇ?

ಆಳ್ವಾರರು ಹೇಳುತ್ತಾರೆ: ನಮ್ಮ ಸ್ವಾಮಿಯೇ, ನೀವು ಪೂತನಿ ಯ ಪ್ರಾಣಗಳನ್ನು ಹಿಷ್ಟು ಉತ್ಸಾಹದಿಂದ ಹೀರಿದಿರೋ, ಲಂಕೆಯನ್ನು ಸುಟ್ಟು

Garani Srinivasan

ಕಾರ್ ಮುಂಲ್ ವಣ್ಣಾ ಕಂಜನೈ ಮುನ್ನಮಾ
ಕಡನ್ದ ನಿನ್ ಕಡುನ್ದಿರಲ್ ಕಾಣೋ?
ನೇರಿಲ್ಲಯ್ಯ ಮಾದೈ ನಿತ್ತಿಲತ್ತೊತ್ತೈ
ನೆಡುಙ್ಗಡಲಮುದನ್ನೆಯಾಳೈ,
ಆರಮೆಲ್ ವಣ್ಣಾ ಅಜ್ಗೈಯಿಲ್ ವಟ್ಟಾಮಾ
ಇವಳ್ಎನಕ್ಕರುದುಂ ಅನ್ಯಾಯಲೇ.

ಕಾರ್ (ಮುಗಿ) ಆರ್ ಮುಗಿಲ್ = ಬಹಳ ದಟ್ಟವಾದ, ಆಲಿ ಆಳಿ = ಚಕ್ರಾಯುಧವನ್ನು, ಶಜ್ಗಡು ಶಙ್ಗೊಡು = ಶಂಖವನ್ನೂ, ವಿಟ್ರ ಪರ್ರಿ = ಹಿಡಿದು, ಅಟ್ರಲ್ ಆರ್ರಲು = ಶಕ್ತಿಸಾಮರ್ಥ್ಯಗಳನ್ನು, ಆರ್ರಲ್ ಮಿಗ್ಗ ಮಿಕುನ್ದ = ನಡೆಯುವುದರಲ್ಲಿ ಮೀರಿಸಿ, ಕಾರ್ಮುಗಿಲ್ ಕಾರ್ (ಮುಗಿಲ್) ಆರ್ರಲ್ ಮಿಕುನ್ದ = ನಡೆಯುವುದರಲ್ಲಿ ಮೀರಿಸಿ, ಕಂಜನೈ ಕಞ್ಜನೈ = ಕಂಸನ ವಣ್ಣಾ = ಕಾರ್ಮುಗಿಲ ಬಣ್ಣದವನೇ, ಕಂಜನೈ ಕಞ್ಜನೈ = ಕಂಸನನ್ನು, ಮುನ್ನಮಾ ಮುನ್ನಮ್ = ಹಿಂದೆ, ಕಡನ್ದ ಕಡನ್ದ = ಕೊಲಲ್ಪಟ್ಟದ್ದು, ನಿನ್ ನಿನ್ = ನಿನ್ನ, ಕಡುಕಿರಲ್ ಕಾಣೋ ಕಡುಂದಿರಲ್ ಕಾಣೋ = ಬಲಿಷ್ಟನ ಪರಾಕ್ರಮ (ಸಾಮರ್ಥ್ಯ)ವೇ ಅಲ್ಲವೇ?, ನೇರ್ ನೇರ್ = ಶುದ್ಧವಾದ, ಇಲ್ಲೈ ಇಳೈ = ಆಭರಣಗಳ ಮಾದೈ ಮಾದರ್ = ಹೆಣ್ಣನ್ನು, ನಿತ್ತಿಲಮ್ ತೊತ್ತೈ = ಮುತ್ತಿನ ಹಾರವನ್ನು, ಅಮುದು ನೆಡು ಕಡಲ್ ನೆಡುಙ್ಗಡಲ್ = ಆಳವಾದ ಕಡಲಿನ, [illegible] ಅಮುದು ಅಮುದು = ಅಮೃತವನ್ನು ಅನ್ನೆಯಾಳೈ ಅನೈಯಾಳೈ = ಹೋಲುವವನ್ನು, ಆರ ಮೆಲ್ ವಣ್ಣಾ ಆರ್ ಶಾಳಿ ವಣ್ಣ = ಪೂರ್ಣ ಸೌಂದರ್ಯದವನೇ, ಅಮ ಅಮ್ = ಸುಂದರವಾದ, ಕೈಯಿಲ್ ಕೈಯಿಲ್ = ಕೈಯಲ್ಲಿ (ಇರುವ), ವಟ್ಟು ವೈಟ್ಟ = ಪಗಡೆಯ ಬಟ್ಟು (ಕಾಯಿ), ಆಮ = ಹೌದು, ಇವಳ್ ಎನಕ್ಕು ಇವಳ್ ಎನ = ಇವಳು ಎನ್ನುವಂತೆ, ಕರುದುಮ್ ಅನ್ಯಾಯಲೇ ಕರುದುಕಿಣ್ರಯೇ = ಭಾವಿಸುತ್ತಿರುವೆಯಲ್ಲ!

ಕಾರ್ಮುಗಿಲ ಬಣ್ಣದವನೇ, ಬಹಳ ದಟ್ಟವಾದ ಚಕ್ರಾಯುಧವನ್ನು ಶಂಖವನ್ನೂ ಹಿಡಿದು, ಶಕ್ತಿ ಸಾಮರ್ಥ್ಯಗಳನ್ನು ನಡೆಯುವುದರಲ್ಲಿ ಮೀರಿಸಿ, ಹಿಂದೆ, ಕಂಸನನ್ನು ಕೊಲಲ್ಪಟ್ಟದ್ದು ನಿನ್ನ ಬಲಿಷ್ಟನ ಪರಾಕ್ರಮ (ಸಾಮರ್ಥ್ಯ)ವೇ ಅಲ್ಲವೇ? ಪೂರ್ಣಸುಂದರನೇ, ಶುದ್ಧವಾದ ಆಭರಣವಾದ ಈ ಹೆಣ್ಣನ್ನು, ಮುತ್ತಿನ ಹಾರವನ್ನು, ಆಳವಾದ ಕಡಲಿನ ಅಮೃತವನ್ನು ಹೋಲುವವಳನ್ನು, (ನಿನ್ನ) ಸುಂದರವಾದ ಕೈಯಲ್ಲಿರುವ ಪಗಡೆಯಕಾಯಿಯಂತಿರುವವಳು ಇವಳು ಎನ್ನುವಂತೆ ಭಾವಿಸುತ್ತಿರುವೆಯಲ್ಲ! (3)

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನೀನು ದಟ್ಟವಾದ ಚಕ್ರಾಯುಧವನ್ನು ದಿವ್ಯವಾದ ಶಂಖವನ್ನೂ ಹಿಡಿದಿರುವವನು. ಹುಟ್ಟಿದಾಗಲೇ ಶಂಖಚಕ್ರ

ದ್ಧಾಂತವಾಗಿ ನಿನ್ನ ತಂದೆ. ತಾಯಿಯರಿಗೆ ದರ್ಶನವಿತ್ತೆ. ಹುಟ್ಟಿದಂದಿನಿಂದಲೂ
ನೀನು ಪರಮ ಸಮರ್ಥನೆಂದೂ, ಅದ್ವಿತೀಯನಾದ ಬಲಶಾಲಿಯೆಂದೂ
ತೋರಿಸಿಕೊಂಡಿದ್ದೀ. ನೀನು ನಡೆಸಿದ ಅದ್ಭುತ ಸಾಹಸಗಳು ಹೇಳಲಾರ
ದಷ್ಟು. ಅಂದರೆ, ನೀನು ಕಂಸನನ್ನು ಕೊಲ್ಲುವುದಕ್ಕೆ ಮುಂಚಿತವಾಗಿ
ನಡೆಸಿದ ಸಾಹಸಗಳೆಲ್ಲವೂ ಇದಕ್ಕೆ ಸಾಕ್ಷಿ. ಪೂರ್ಣಸುಂದರನು ನೀನು.
ನಿನ್ನಲ್ಲಿ ಅನುರಕ್ತಳಾಗಿರುವ ಈ ಹೆಣ್ಣು ಶ್ರೀಚರಣಗಳಿಂದಲೂ ವಿಶು
ದ್ಧಳು. ಸದ್ಗುಣವಂತಳು. ಶ್ರೇಷ್ಠವಾದ ಆಭರಣದಂತೆ, ಆನೆಮುತ್ತಿ
ನ ಹಾರದಂತೆ ಧರಿಸಲು ಯೋಗ್ಯವಾದವಳು. ಆಳವಾದ ಕಡಲಿನಲ್ಲಿ
ಹುಟ್ಟಿದ ಅಮೃತದಂತೆ ಭೋಗ್ಯವಾದವಳು. ಇಂಥವಳನ್ನು ನೀನು
ನಿನ್ನ ಸುಂದರವಾದ ಕೈಯಲ್ಲಿರುವ ಪಗಡೆಯ ಕಾಯಿಯಂತೆ ಭಾವಿ
ಸಬಹುದೇ? ನಿನ್ನಿಷ್ಟಬಂದಂತೆ ನಡೆಸಬಹುದೇ? ಇವಳನ್ನು ಉದ್ಧ
ರಿಸುವುದು ನಿನ್ನ ಸೌಜನ್ಯಕ್ಕೆ ತಕ್ಕದ್ದಲ್ಲವೇ?

4. மல்கிய தோளும் மானுரியதளு
முடையவர் தமக்கு மோர்பாகம்,
நல்கியுநலமோ? நரகனைத் தொலைத்த
காதலத்தமைதியின் கருத்தோ,
அல்லியங்கோதையணி நிறங்கொண்டு
வந்து முன்னே நின்று போகாய்,
சொல்லியென்? நம்பி யிவளை நீயுங்கள்
தொண்டர்கைத் தண்டென்றவாறே.

ಮಲ್ಗಿಯ ತೋಳುಮ್ ಮಾನುರಿಯದಳು
ಮುಡೈಯವರ್ ತಮಕ್ಕುಮೋರ್ ಪಾಗಮ್,
ನಲ್ಗಿಯ ನಲಮೋ? ನರಗನೈತ್ತೊಲೈತ್ತ
ಕಾದಲತ್ತಮೈದಿಯಿನ್ ಕರುತ್ತೋ,
ಅಲ್ಲಿಯಙ್ಗೋದೈಯಣಿ ನಿಱಙ್ಗೊಣ್ಡು
ವನ್ದು ಮುನ್ನೇ ನಿನ್ಱು ಪೋಗಾಯ್,
ಸೊಲ್ಲಿಯೆನ್? ನಮ್ಬಿ ಯಿವಳೈ ನೀಯುಙ್ಗಳ್
ತೊಣ್ಡರ್ಗೈತ್ತಣ್ಡೆನ್ಱವಾಱೇ.

ಮಲ್ಗಿಯ மல்கிய = ಬಲಿಷ್ಠವಾಗಿ (ಪುಷ್ಟವಾಗಿ) ಬೆಳೆದ, ತೋಳು
ಮ್ தோளும் = ತೋಳುಗಳನ್ನೂ, ಮಾನ್ ಉರಿ மான் உரி =
ಜಿಂಕೆಯಿಂದ ಸುಲಿದ, ಅದಳುಮ್ அதளும் = ಚರ್ಮವನ್ನೂ, ಉಡೈಯ

ವರ್ ಶಮಕ್ಕು உடையவர்க்கு = ಉಳ್ಳವನಿಗೆ, ಓರ್ ಬಾಗಮ
ஓர் பாகம் = ಒಂದು ಭಾಗವನ್ನು, ನಲ್ಗಿಯ நல்கிய = ಕರುಣಿಸಿದ,
ನಲಮೋ நலமோ = ನಿಗ್ರಹವೋ, ನರಕನ್ನೈ நரகனை = ನರಕಾಸುರನನ್ನು
ತೊಲೈತ್ತ தொலைத்த = ನಾಶಪಡಿಸಿದ, ಕಾದಲತ್ತು காதலத்து = ರಕ್ಷ
ಣೆಯ, ಅಮೈತಿಯಿನ್ அமைதியின் = ಶಾಂತಿಯ, ಕರುತ್ತೋ கரு
த்தோ = ಅಭಿಪ್ರಾಯವೋ, ಅಲ್ಲಿ அல்லி = ಹೂವಿನ ಪಿಂ
ಕ್ಕೋದೈ = ಅಭಿಪ್ರಾಯವೋ, ಅಲ್ಲಿ = ... ಕೋದ್ದೈ கோதை = ಕಲೆ
ಮುಳ್ಳ ಕೊಂಬಿದ, ಅಮ್ அம் = ಸುಂದರವಾದ, ಕೋದೈ கோதை = ಕಲೆ
ಗೂದಲನವಳ, ಅಣಿ அணி = ಒಪ್ಪವಂಥ (ತ್ಯಾಗನ), ನಿಱಮ
நிறம் = ಬಣ್ಣವನ್ನು, ಕೊಣ್ಡು கொண்டு = ಅವಿದಲ್ಲಿ, ವನ್ದು ವந்து
= ಬಂದು, ಮುನ್ನೇ முன்னே = ಮುಂದುಗಡೆ, ನಿನ್ಱು நின்று = ನಿಂ
ತಿದ್ದು, ಪೋದಾಯ್ போகாய் = ಹೋಗುವುದಿಲ್ಲವಲ್ಲ, ಕೊಲ್ಲಿ ಎನ್
ಕೊಲ್ಲಿ ನಾಣ್ = ಹೇಳುವಿನುಬಿಲ?, ನಮ್ಬಿ நம்பி = ಪಿಂಪ್ರಾಣ
ನೇ, ಇವಳ್ಳೈ இவளை = ಇವಳನ್ನು, ನೀ நீ = ನೀನು, ಉನ್ನ್ ಉನ
ಕಣ್ = ನಿನ್ನ, ಕೊಣ್ಡರ್ கொண்டர் = ಚಕ್ರ, ಕೈ ... கை = ಕೈಯ,
ಕೊಣ್ಡು கண்டு = ಕೋಲು (ದಂಡ), ಎನ್ನ ಆಲೋ ನಾಣ್ಱಾರ್ರೇ
= ಎಂದಾಗಿಯೂ ಅಲ್ಲವೇ?

ಪೃಷ್ಠದಾ ಬೆಳೆದ ಕೋಲುಗಳನ್ನು ಸುಲಿದ ಜಿಂಕೆಯ ಚರ್ಮ
ವನ್ನು ಉಳ್ಳವನಿಗೆ ಒಂದು ಭಾಗವನ್ನು ಕರುಣಿಸಿದ ನಿಗ್ರಹವೋ,
ನರಕಾಸುರನನ್ನು ನಾಶಪಡಿಸಿದ ರಕ್ಷಣೆಯ ಶಾಂತಿಯ ಅಭಿಪ್ರಾಯ
ವೋ (ಭಾವನೆಯೋ), ಹೂವಿನ ಪಿಂ ಮುಳ್ಳ ಕೊಂಬಿದ ಸುಂದರವಾದ ಕಲೆ
ಗೂದಲನವಳ ಒಪ್ಪವಂಥ ತ್ಯಾಗನ ಬಣ್ಣವನ್ನು ಅವಿದಲ್ಲಿ, ಬಂದು
ಮುಂದುಗಡೆ ನಿಂತಿದ್ದು ಹೋಗುವುದಿಲ್ಲವಲ್ಲ! ಹೇಳುವಿಲವೇನು? ಪಿಂ (ದಂತೆ)
ಪ್ರಾಣನೇ, ಇವಳನ್ನು ನೀನು ನಿನ್ನ ಚಕ್ರ ಕೈಯ ದಂಡ (4)
ಎಂದಾಗಿಯೂ ಅಲ್ಲವೇ?

ಶಿವನಿಗೆ ಒದಗಿ ಬಂದ ಬ್ರಹ್ಮಹತ್ಯಾದೋಷದಿಂದ ಅವನನ್ನು ಪಾರು
ಮಾಡುವುದಕ್ಕೆ ಯಾರಿಂದಲೂ ಸಾಧ್ಯವಾಗಲಿಲ್ಲ. ಕಡೆಗೆ ಶಿವನು ಭಗವಂತ
ನಲ್ಲಿ ಮೊರೆಯಿಟ್ಟನು. ಆಗ ಸ್ವಾಮಿಯು ತನ್ನ ಮೈಯಿಂದ ರಕ್ತವನ್ನು ಕೊಟ್ಟು
ಶಿವನನ್ನು ಅವನ ಸಂಕಟದಿಂದ ಪಾರುಮಾಡಿದನು. ಇದು ಭಗವಂತನ
ಕಾರುಣ್ಯ ಮತ್ತು ಔದಾರ್ಯ. ಅವನನ್ನು ಆಶ್ರಯಿಸಿದವರನ್ನು ಎಂದಿಗೂ
ಕೈಬಿಡದೆ ಉದ್ಧರಿಸುವನು.

ನರಕಾಸುರನು ತನ್ನ ತಪಶ್ಶಕ್ತಿಯಿಂದ ಬ್ರಹ್ಮನಿಂದಲೂ ಶಿವನಿಂದ
ಲೂ ನಾನಾ ವರಗಳನ್ನು ಪಡೆದುಕೊಂಡು 'ಅಜೇಯ' ನಾದನು. ಶಿವನನ್ನೇ
ತನ್ನ ರಕ್ಷಕನನ್ನಾಗಿ ಮಾಡಿಕೊಂಡನು. ಇದರಿಂದ ಕೊಬ್ಬಿದವನಾಗಿ,

Garani Srinivasan

ಮೂರು ಲೋಕಗಳನ್ನೂ ಹಿಂಸಿಸುತ್ತಾ, ಸುಂದರ ಯುವತಿಯರನ್ನೆಲ್ಲಾ ತಂದು ತಂದು ಸೆರೆಹಾಕಿಕೊಂಡಿದ್ದನು. ಅವನ ಹಿಂಸೆಯನ್ನು ತಾಳಲಾರದೆ ದೇವೇಂದ್ರನು ಭಗವಂತನಲ್ಲಿ ಮೊರೆಯಿಟ್ಟನು. ಶ್ರೀಕೃಷ್ಣನಾಗಿ ಅವತರಿಸಿದ ಭಗವಂತನು, ನರಕನನ್ನು ನಿಗ್ರಹಿಸಿ, ಹದಿನಾರು ಸಾವಿರದ ಒಂದುನೂರು ಯುವತಿಯರನ್ನು ಸೆರೆಯಿಂದ ಬಿಡಿಸಿದನು. ದುಷ್ಟನಿಗ್ರಹವೂ ಶಿಷ್ಟಪರಿಪಾಲನೆಯೂ ಭಗವಂತನ ಧರ್ಮವಾದ ಹಠವು.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಶಿವನಿಗೆ ಒದಗಿದ ಸಂಕಟವನ್ನು ನೀಗಿದಲು, ~~…~~ ನಿನ್ನ ದೇಹದ ಒಂದು ಭಾಗವನ್ನೇ ಕರುಣಿಸಿದ ಉದಾರಿ ನೀನು. ನರಕಾಸುರನ ಸೆರೆಯಲ್ಲಿದ್ದ ಹದಿನಾರು ಸಾವಿರದ ಒಂದು ನೂರು ಯುವತಿಯರನ್ನು ಬಿಡಿಸಿ, ಅವರ ರಕ್ಷಕನಾದೆ. ನಿನ್ನಲ್ಲೇ ಅನುರಕ್ತೆಯಾಗಿರುವ ಈ ಒಬ್ಬ ಸುಂದರಿಯ ವಿಷಯದಲ್ಲಿ ನಿನ್ನ ಉಪೇಕ್ಷೆಯೇಕೆ? ಅವರಂತೆ ಪರಿಮಳಿಸುವ ಕಲೆಗಾದಲಿನವಳಾದ ಇವಳ ಸೌಭಾಗ್ಯವನ್ನು ಇವಳಿಗೆ ಒದಗುವುದಿಲ್ಲದ್ದೇ. ಇವಳ ಮುಂದೆಯೇ ಸದಾ ನಿಂತಿದ್ದು, ಇವಳು ನಿನಗಾಗಿ ಕೊರಗಿ ಕೊರಗಿ ಕೃಶಳಾಗಿದ್ದಾಳೆ. ನಿನ್ನ ಧ್ಯಾನದಲ್ಲೇ ಇದ್ದಾಳೆ. ಇವಳ ವಿರಹವನ್ನು ನೀನು ನೀಗಿಸಬೇಡವೇ? ನೀನೇಕೆ ಹೀಗೆ ನಿರ್ದಯನಾದೆ? ಇವಳನ್ನು ನಿನ್ನ ಭಕ್ತರಕ್ಷೆಯ ದಂಡವನ್ನಾಗಿ (ಕೋಲನ್ನಾಗಿ) ಮಾಡಿದಂತೆಯೇ ಅಲ್ಲವೇ? ಕೃಪೆಮಾಡಿ ಇವಳನ್ನು ಉದ್ಧರಿಸು.

"ಭಕ್ತರಕ್ಷೆ ಕೋಲು" — ಕೋಲು ಒಂದು ಆಯುಧ. ದುಷ್ಟರಶಿಕ್ಷೆಯಲ್ಲಿ ಅದು ಕೆಟ್ಟದ್ದು. ಹಿಂಸೆಗೆ, ಶಿಕ್ಷೆಗೆ ಉಪಯೋಗ. ಭಕ್ತರಕ್ಷೆಯಲ್ಲಿ ಅದು ಅವರಿಗೆ ಆಶ್ರಯವಾಗಿ, ಅವರ ಆಶ್ರಯವನ್ನು ಬಿಡದೆ ಎಡೆಬಿಡದೆ ಅವರ ಸಹವಾಸದಲ್ಲಿಯೇ ಇರುತ್ತದೆ. ಸದಾಶ್ರಯದಿಂದ ಖಂಡಿತವಾಗಿ ಅದಕ್ಕೆ ಧನ್ಯತೆಯುಂಟಾಗುತ್ತದೆ.

ಭಗವಂತನ ನೇರವಾದ ಆಶ್ರಯ ದೊರೆಯುವುದಕ್ಕೆ ಮುಂಚೆ ಭಕ್ತರ ಆಶ್ರಯದಲ್ಲಿದ್ದು ಭಕ್ತಿಯಲ್ಲಿ ನುರಿತು ಭಾಗವತ ಶೇಷತ್ವ ಸಾಧಿಸುವುದು ಒಂದು ಒಳ್ಳೆಯ ಮಾರ್ಗ ಎಂದು ಇಲ್ಲಿ ಸೂಚಿತವಾಗಿ ಕಂಡು ಬರುತ್ತದೆ ಎನ್ನಬಹುದು.

5. செருவழியாத மன்னர்கள் மாளத்
தேர்வலங்கொண்டவர் செல்வும்,
அருவழி வானமதர் படக்கண்ட
ஆண்மைகொலோ வறியேன்,
திருமொழியெங்கள் தேமலர்க்கோதை
சீர்மையை நினைந்திலையந்தோ

பெருவழிநாவற் கனியினு மெளியள்
இவளெனப் பேசுகின்றதே.

ಶೆರುವಱಿಯಾದ ಮನ್ನರ್‌ದಳ್ ಮಾಳ
ಶ್ಶೇರ್‌ವಲಜ್ಜೊಣ್ಡವರ್ ಶೆಲ್ಲುಮ್,
ಅರುವಱಿವಾನ ಮದರ್ ಪಿಡಕ್ಕೊಣ್ಡ
ಆಣ್ಮೈತ್ತ ಕೋಲೇ ವಱಿಯೇನಾನ್,
ಶಿರುವೀಱಿ ಯೆಜಳ್ ಶೇಮಲರ್‌ಕ್ಕೋದೈ
ಶೇರ್‌ಮೈಯೈತ್ತ ನಿನ್ಱಿದಿಲ್ತೈಯುನ್ದೋ!
ಪೆರುವಱಿ ನಾವಱ ಕನಿಯುನು ಮೆಳಿಯಳ್
ಇವಳೆನಪ್ಪೇಶುಂ ಅಲರಾಯೇ.

ಶೆರು செரு = ಯುದ್ಧರಂಗದಲ್ಲಿ, ಅಱಿಯಾದ அறியாத = ಅರಿಯದ, ಮನ್ನರ್‌ದಳ್ மன்னர்கள் = ರಾಜರು, ಮಾಳ ಅಪಜಯ ಹೊಂದದ, ಮನ್ನರ್‌ದಳ್ ಮಣ್ಣಾರ್ಕಳ್ ಶೇರ್‌ವಲಮ್ ಕೊಣ್ಡು ஷேர் வலம் ಮಾಣ = ನಾಶಹೊಂದುವಂತೆ, ಶೇರ್‌ವಲಮ್ ಕೊಣ್ಡು = ಶೇರಿದ ಬಲದಿಂದಲೇ, ಅವರ್ அவர் = ಅವರು, ಶೆಲ್ಲು ஙொண்டு = ಶೇರಿದ ಬಲದಿಂದಲೇ, ಅವರ್ அவர் = ಅವರು, ಅರುವಱಿ அருவழி = ಅಪಾಯ ಮಾ செல்லும் = ಹೋಗುವ, ಅರುವಱಿ அருவழி = ಅಪಾರ ಮಾ செல்லும் = ಹೋಗುವ, ಅರುವಱಿ வானம் = ವೀರಸ್ವರ್ಗವು, ಅದರ್ ಪಿಡ ವಾದ ದಾರಿಯು, ವಾನಮ್ வானம் = ವೀರಸ್ವರ್ಗವು, ಕೊಣ್ಡ கண்ட = ಮಾಡಿದ, அகற்பட = ನಿಯಮಕ್ಕೆ ಒಳಪಡುವಂತೆ, ಕೊಣ್ಡ கண்ட = ಮಾಡಿದ, ಆಣ್ಮೈತ್ತ ಕೋಲೇ ஆண்மை ஙகா லோ = ಪೌರುಷ ವಿರಬಹುದೇ, ಅಱಿಯೇನಾನ್ அறியேன் நான் = ನನಗೆ ಶಿಳಿಯದು, ಶಿರು ವೀಲಿ சிறு மொழி = ಶ್ರೇಷ್ಠ ಇಲಿಯಲ್ಲಿ ಮಾಶನಾಡುವವಳಾದ, ಎಜ್ಜಳ್ எங்கள் = ನಮ್ಮ, ಶೇನ್ ಮಲರ್ தேன் மலர் = ಮಧು ಎಜ್ಜಳ್ எங்கள் = ನಮ್ಮ, ಶೇನ್ ಮಲರ್ தேன் மலர் = ಮಧು ತುಂಬುವ ಹೂ ಮುಡಿದ, ಕೋದೈ கோதை = ಶಲೆಗೂದಲಿನವಳ, ಶೇರ್‌ಮೈಯೈತ್ತ சீர்மையை = ಗುಣಸೌಂದರ್ಯಗಳ ಹಿಂಪೆಯನ್ನು, ನಿನ್ಱಿದಿಲ್ತೈ நினைந்திலை = ಗಮನಿಸಿಲ್ಲ, ಅನ್ದೋ அந்தோ = ಅಯ್ಯೋ, ಪೆರುವಱಿ பெருவழி = ದೊಡ್ಡರಸ್ತೆಯ, ನಾವಲ್ ಕನಿಯ ನುಮ್ ನಾவಲ் கனியினும் = ನೇರಳೆಹಣ್ಣಿಗಿಂತಲೂ, ಎಳಿಯ ಳ್ எளியள் = ಕೀಳು, (ಕೀಳಾದವಳು), ಇವಳ್ இவள் = ಇವ ಳು, ಎನ ಎನ = ಎಂಬಂತೆ, ಪೇಶುಂ ಅಲರಾಯೇ பேசுகின் றதே = ಮಾತನಾಡುತ್ತಿರುವೆಯಲ್ಲ!

ಯುದ್ಧರಂಗದಲ್ಲಿ ಸೋಲಿಲ್ಲದ ರಾಜರು ನಾಶಹೊಂದುವಂತೆ ಶೇರಿದ ಬಲದಿಂದಲೇ ಅವರ ಹೋಗುವ ಅಪಾಯವಾದ ದಾರಿಯು ವೀರಸ್ವರ್ಗವು ನಿಯಮಕ್ಕೆ ಒಳಪಡುವಂತೆ ಮಾಡಿದ ಪೌರುಷವೋ, ನಾನರಿಯೆ. ಶ್ರೇಷ್ಠ

ವಾದ ರೀತಿಯಲ್ಲಿ ಮಾತನಾಡುವವಳಾದ ನಮ್ಮ ಜೇನು ಸುರಿಯುವ ಹೂವನ್ನು
ಮುಡಿದ ತಲೆಗೂದಲಿನವಳ ಗುಣ ಸೌಂದರ್ಯಗಳ ಬಗ್ಗೆಯನ್ನು
ಗಮನಿಸಿಲ್ಲ, ಅಯ್ಯೋ; ದೇವದ್ವರಸ್ತ್ರೀಯ ನೇತ್ರಗಳ ಹಾಗೆ ಸಂಗಳೂ
ಇವಳು ಕೀಳಾದವಳು ಎನ್ನುವಂತೆ ಮಾತನಾಡುತ್ತಿರುವೆಯಲ್ಲ! (5)

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಇವಳು ನಮ್ಮವಳು. ಸೊಗಸಾದ ತಲೆಗೂದಲುಳ್ಳವಳು. ಪರಿಮಳ ತುಂಬಿದ ಜೇನು ಸುರಿಯುವ ಹೂಗಳನ್ನು ಮುಡಿದಿರುವವಳು. ಮೃದು ಮಧುರವಾಗಿ ಮಾತನಾಡತಕ್ಕವಳು. ಸುಂದರಿ. ಗುಣದಲ್ಲಿಯೂ, ಶೋಭನದಲ್ಲಿಯೂ, ನಡತೆಯಲ್ಲಿಯೂ ಅತ್ಯುತ್ತಮ ಳೆಂದು ಒಲವೆಗೊಂಡವಳು. ಇವಳನ್ನು ಕುರಿತ ಇಷ್ಟು ಯಾವುದೂ ನಿನ್ನ ಗಮನಕ್ಕೆ ಬರಲಿಲ್ಲವಲ್ಲ! ಅಯ್ಯೋ! ಯುದ್ಧರಂಗದಲ್ಲಿ ಎಂದೆಂದಿಗೂ ಸೋಲನ್ನರಿಯದ ವೀರರನ್ನು ವಧಿಸಿ ಯಮಕ್ಕೆ ಅನಾಯಾಸವಾಗಿ ಸ್ವರ್ಗದ ಹಾದಿಯನ್ನು ಹಿಡಿಯುವಂತೆ ಮಾಡಿದ ಪೌರುಷ ನಿನ್ನದಲ್ಲವೇ? ಸದ್ಗುಣವತಿಯೂ ಸುಂದರಿಯೂ ಆದ ಇವಳನ್ನು ಕೈಬಿಡಬಹುದೇ? ಬುದ್ಧಿ ಆಗಬೇಡವೇ?

ಮಹಾಭಾರತ ಯುದ್ಧದಲ್ಲಿ, ಅಪಜಯವನ್ನೇ ಅರಿಯದ ವೀರರಾದ ಭೀಷ್ಮ ದ್ರೋಣಾದಿಗಳನ್ನು, ಪಾಂಡವರ ಪಕ್ಷವನ್ನು ವಹಿಸಿ, ಅರ್ಜುನನ ಸಾರಥಿಯಾಗಿ, ಕಾಲಗತಿಗೆ ಅನಾಯಾಸವಾಗಿ ಮರಣವನ್ನಪ್ಪುವಂತೆ ಮಾಡಿದವನು, ನ್ಯಾಯ ಧರ್ಮಗಳಿಗೆ ಜಯಗಳಿಸಿಕೊಟ್ಟವನು ಶ್ರೀಕೃಷ್ಣನಾಗಿದ್ದ ಭಗವಂತ. ಸಾಮಾನ್ಯರಾದ ಅನನ್ಯಭಕ್ತರನ್ನು ಕೈಬಿಡದಿರಲು ಬುದ್ಧಿ ಆಗಬೇಕೆಂದು ಇಲ್ಲಿ ಪ್ರಾರ್ಥನೆಯಿದೆ.

6. அரக்கியாரகம் புல்லென வில்லால்
அணிமதிளிலங்கையர் கோனை,
செருக்களித்தமரர் பணியமுன்னின்ற
சேவகமோ செய்ததின்று,
முருக்கிதழ் வாய்ச்சிமுண்ணகை வண்ண சங்கங்கு
கொண்டு முன்னே நின்று போகாய்,
எருக்கிலைக்காக வெறிமழுவோச்சல்
என் செய்வதைத்தை பிரானே.

ಅರಕ್ಕಿಯರಹಮ ಪುಲ್ಲೆನ ವಿಲ್ಲಾಲ್
ಅಣಿಮದಿಳಿಲಙ್ಗೈಯರ್ ಕೋನೈ,
ಶೆರುಕ್ಕಳತ್ತಮರರ್ ಪಣಿಯ ಮುನ್ನಿನ್ರ
ಶೇವಹಮೋ ಶೆಯ್‌ದದಿನ್ರು,

Garani Srinivasan

ಮುರುಕ್ಕದಲರ್ವಾಚ್ಚಿಮುನ್ಕ್ಕೈ ವಣ್ ಶಙ್ಗಮ್
ಕೊಣ್ಡು ಮುನ್ನೇ ನಿನ್ರಾಯ್ ಪೋಲದಾಯ್,
ಎರುಕ್ಕಿಲ್ಲೈಕ್ಕಾದ ವಾಲಿ ಮುಲೈ ಪೋಟ್ಟಿಲ್
ಎನ್ ಶೆಯ್ವದನ್ನೈ ಪಿರಾನೇ.

ಅರಕ್ಕಿಯರ್ அரக்கியர் = ರಾಕ್ಷಸಿಯರ, ಆಹಮ್ ஆகம் = ಎದೆಯು, ಪ್ಪುಲ್ ಎನ புல் என = ಹುಲ್ಲಿನಂತೆ (ಹುಲ್ಲಿಗೆ ಸಮನಾಗಿ) ಮಾಡಿ, ~~[illegible]~~ ವಿಲ್ಲಾಲ್ வில்லால் = ಬಿಲ್ಲಿನಿಂದ, ಅಣಿ அணி = ಸುಂದರವಾದ, ಮದಿಳ್ மதிள் = ಕೋಟೆಯ, ಇಲಙ್ಗೈಯರ್ இலங்கையர் = ಲಂಕೆಯವರ, ಕೋನ್ கோன் = ರಾಜನ, ಶಿರುಕ್ಕ [illegible] = ಕೊಂಬನ್ನು, ಅಟ್ಟಿಕ್ಕ ಅழிக்கு = ಮುರಿದು (ನಾಶಪಡಿಸಿ), ಅಮರರ್ அமரர் = ದೇವತೆಗಳು (ವಿದ್ವಾಂಸರು), ವಣಂಗಿಯ பணிய = ಮುಂಭಾಗದಲ್ಲಿ, ನಿನ್ಱ நின்ற = ನಮಸ್ಕರಿಸುವಂತೆ, ಮುನ್ முன் = ಮುಂಭಾಗದಲ್ಲಿ, ನಿನ್ಱ நின்ற = ನಿಂತ, ಶೇವಹಮೋ சேவகமோ = ಪರಾಕ್ರಮವೋ (ವೀರತ್ವವೋ), ಶೆಯ್ದದು செய்தது = ಮಾಡಿದ್ದು, ಇನ್ಱು இன்று = ಇಂದು, ಮುರುಕ್ಕು முருக்கு = ಮುತ್ತುಗದ, ಇದಳ್ [illegible] = ಇಂದು, ಮುರುಕ್ಕ முருக்கு = ಮುತ್ತುಗದ, ಶೆಟಿ ಗಳನ್ನು ಕ್ಕೆ ವಳೆ, ಮುನ್ ಎದೆಗಳಂತೆ, ವಾಯ್ಚ್ಚಿ வாய்ச்சி = ಸುಂದರವಾದ, ಕ್ಕೈ முன் கை = ಮುಂಗೈಯ, ವಣ್ ವண் = ಬಿಳಿ, ಶಙ್ಗಮ್ சங்கம் = ಬಳೆಗಳನ್ನು, ಕೊಣ್ಡು கொண்டு = ಕಸಿದುಕೊಂಡು, ಮುನ್ನೇ முன்னே = (ಅವಳ) ಮುಂದೆಯೇ (ಎದುರಿಗೆ), ನಿನ್ಱಾಯ್ நின்றாய் = ನಿಂತಿದ್ದು, ಪೋಲದಾಯ್ போகா = ಹೋಗದೆ ಅಲ್ಲಿಯೇ), ನಿನ್ರಾಯ್ நின்றாய் = ನಿಂತಿದ್ದು, ಪೋಲದಾಯ್ போகா = ಹೋಗದಿರುವುದರಿಂದ (ಕಣ್ಮರೆಯಾಗುವುದಿಲ್ಲವಲ್ಲ), ಎರುಕ್ಕು = ಹೋಗದಿರುವುದಿಲ್ಲವಲ್ಲ (ಕಣ್ಮರೆಯಾಗುವುದಿಲ್ಲವಲ್ಲ), ಇಲ್ಲೈಕ್ಕ ಆದ ಎருக்கு இலைக்கு ஆக = ಎಕ್ಕದ ಎಲೆಗಾಗಿ, ವಾಲಿ ಮುಲೈ ಪೋಟ್ಟಿಲ್ ತೊಟ್ಟಿಲ್ = ಹೊಡೆತ, ಮುಲೈ ಮழு = ಕೊಡಲಿ, ಪೋಟ್ಟಿಲ್ ಶೆಯ್ವದು ಎನ್ ಶೆಯ್ವದು என் செய்வது = ನೀನು (ಮುಂತಾದವು), ಎನ್ ಶೆಯ್ವದು என் செய்வது = ನನ್ನಯ್ಯಾ, ಎನ್ನೈ ಪಿರಾನೇ என்னை பிரானே = ನನ್ನ ಸ್ವಾಮಿ ಪರಕ್ಕಾಗಿ, ಎನ್ನೈ ಪಿರಾನೇ என் பிரானே = ನನ್ನ ಸ್ವಾಮಿಯೇ.

ರಾಕ್ಷಸಿಯರ ಎದೆಯನ್ನು ಹುಲ್ಲಿಗೆ ಸಮನಾಗಿ ಭಾವಿಸಿ, ಬಿಲ್ಲಿನಿಂದ ಸುಂದರವಾದ ಕೋಟೆಯ ಲಂಕೆಯವರ ರಾಜನ ಕೊಂಬನ್ನು ನಾಶಪಡಿಸಿ, ದೇವತೆಗಳು ನಮಸ್ಕರಿಸುವಂತೆ ಅವರ ಎದುರಲ್ಲಿ ನಿಂತ ವೀರತ್ವವೋ ಇಂದು ಮಾಡಿದ್ದು? ಮುತ್ತುಗದ ಹೂವಿನ ಎದೆಗಳಂತೆ ಶೆಟಿಗಳನ್ನು ಕ್ಕೆ ವಳೆ ಸುಂದರವಾದ ಮುಂಗೈ ಬಳೆಗಳನ್ನು ಕಸಿದುಕೊಂಡು ಅವಳ ಮುಂದೆಯೇ ~~ಹೋಗದಂತೆ~~ ಕಣ್ಮರೆಯಾಗದಂತೆ ನಿಂತಿರುವುದು? ಎಕ್ಕದ

ಎಲೆಗಾಗಿ ಹೊಡೆತವಾಗಲಿ, ಕೊಡಲಿಯಾಗಲಿ, ಬಿಲ್ಲುಬಾಣವಾಗಲಿ ಏತಕ್ಕಾಗಿ? ನನ್ನ ಸ್ವಾಮಿಯೇ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಹಿಂದೆ, ನೀನು ಶ್ರೀರಾಮನಾಗಿ ಅವತರಿಸಿ, ಸುಭದ್ರವಾದ ಕೋಟೆಯುಳ್ಳ ಲಂಕೆಯ ವರ ರಾಜನಾದ ರಾವಣಾಸುರನ ಕೊಬ್ಬನ್ನು, ನಿನ್ನ ಕೋದಂಡದ ಸಹಾಯದಿಂದಲೇ, ಅಡಗಿಸಿದೆ. ಅವನ ಜೊತೆಯಲ್ಲೇ ಲೆಕ್ಕವಿಲ್ಲದಷ್ಟು ಮಂದಿ ರಾಕ್ಷಸರನ್ನೂ ನಿರ್ಮೂಲಗೊಳಿಸಿದೆ. ರಾಕ್ಷಸಕುಲವನ್ನೇ ನಾಶಮಾಡಿದ್ದಕ್ಕಾಗಿ, ದೇವತೆಗಳೆಲ್ಲರೂ ನಿನಗೆ ಕೃತಜ್ಞತೆಯ ನಮಸ್ಕಾರಗಳನ್ನು ಅರ್ಪಿಸಿದರು. ಅದಕ್ಕೆ ಅವರ ಮುಂದೆ ನೀನು ನಿಂತುಕೊಂಡೆ. ದುಷ್ಟರನ್ನು ನಿಗ್ರಹಿಸುವುದು ನಿನ್ನ ಕರ್ತವ್ಯವೆಂದು ಭಾವಿಸಿದ ನಿನಗೆ ಅವರ ಪತ್ನಿಯರಾದ ರಾಕ್ಷಸಿಯರ ಹೃದಯ ವೇದನೆಗೆ ~~[illegible]~~ ಮರುಕ ಹುಟ್ಟಲಿಲ್ಲ. ಇದು ನಿನ್ನ ಪೌರುಷಕ್ಕೆ ನಿಜವಾದ ಒಂದು ನಿದರ್ಶನ. ಆದರೆ, ಇಂದು ನೀನು ಮಾಡಿದ್ದೇನು, ಗೊತ್ತೇ? ಮುತ್ತುಗದ ಹೂವಿನಂತೆ ಕೆಂದುಟಿಯುಳ್ಳ ಇವಳ ಮುಂದೆ ನೀನು ಸುಳಿದಾಡಿ, ನಿನ್ನಲ್ಲಿ ಇವಳಿಗೆ ವ್ಯಾಮೋಹವುಂಟಾಗುವಂತೆ ಮಾಡಿದೆ. ಇವಳ ಮುಂಗೈಗಳನ್ನು ಅಲಂಕರಿಸಿದ್ದ ಸುಂದರವಾದ ಇವಳ ಕೈಬಳೆಗಳನ್ನು ಕಸಿದುಕೊಂಡೆ (ನಿನ್ನ ವ್ಯಾಮೋಹದಿಂದ ಇವಳು ಕೃಶಳಾದಳು. ಇದರಿಂದ, ಇವಳ ಕೈಬಳೆಗಳು ಕಳಚಿಕೊಂಡವು). ಅಲ್ಲದೆ, ಇವಳ ಕಣ್ಣ ಮುಂದೆ ಎಡೆಬಿಡದೆ ನಿಂತುಕೊಂಡೆ. ಕಣ್ಮರೆಯಾದರೆ, ನಿನ್ನನ್ನು ಮರೆಯಬಹುದೇ ಎಂದು ಇವಳು ಯೋಚಿಸುವುದಕ್ಕೂ ಆಗದಂತೆ, ನೀನು ಇಲ್ಲಿಂದ ಕದಲುವುದೇ ಇಲ್ಲವಲ್ಲ! ಸ್ವಾಮೀ, ಅಬಲೆಯಾದ ಇವಳನ್ನು ಹೀಗೆಲ್ಲ ಗೋಳಾಡಿಸುವುದೂ ನಿನ್ನ ನಿಜವಾದ ಪೌರುಷವೇ? ತಾನಾಗಿ ಉದುರಿ ಬೀಳುವ ಸ್ಥಿತಿಯಲ್ಲಿರುವ ಎಕ್ಕದ ಎಲೆಯನ್ನು ಉದುರಿಸಲು, ~~[illegible]~~ ಅದನ್ನು ಕೋಲಿನಿಂದ ಹೊಡೆಯಬೇಕೇ? ಕೊಡಲಿಯನ್ನು ಪ್ರಯೋಗಿಸಬೇಕೇ? ಎಳೆದು, ಬಲಪ್ರಯೋಗ ಮಾಡಿ, ಬಲವಂತದಿಂದ ಅದನ್ನು ಉದುರಿಸಲು ಯತ್ನಿಸಬೇಕೇ?

7. ஆழியந்திண் டேராசர் வந்திறைஞ்ச
அலைகடலுலகமுன்றுண்ட,
பாழியந்தோளோராயிரம் வீழப்
படைமழுப்பற்றிய வலியோ,
மாழைமென்னோக்கி மணிநிறங்கொண்டு
வந்துமுன்னே நின்று போகாய்,

கோழி வெண் முட்டைக்கு என் செய்வது எந்தாய்
குறுந்தடி நெடுங்கடல் வண்ணா!

ಆೞಿಯನ್ದಿಣ್ಡೇರರಶರ್ ವನ್ದಿಱೈಂಜ
ಅಲೈಕಡಲುಲಹಮುನ್ನಾಣ್ಡ,
ಪಾೞಿಯನ್ದೋಳೋರಾಯಿರಮ್ ವೀೞ
ಪ್ಪಡೈಮೞುಪ್ಪಟ್ರಿಯ ವಲ್ಲಾನೇ,
ಮಾೞೈ ಮೆನ್ನೋಕ್ಕಿ ಮಣಿನಿಱಙ್ಗೊಣ್ಡು
ವನ್ದು ಮುನ್ನೇ ನಿನ್ಱು ಪೋಹಾಯ್,
ಕೋೞಿವೆಣ್ ಮುಟ್ಟೈಕ್ಕೆನ್ ಶೆಯ್ವದೆನ್ದಾಯ್
ಕುಱುನ್ದಡಿ ನೆಡುಙ್ಗಡಲ್ ವಣ್ಣಾ!

ಆೞಿಯ ஆழிய = ಚಕ್ರಗಳಿಂದ ಕೂಡಿದ, ಅಮ್ அம் =
ಸುಂದರವಾದ, ತಿಣ್ திண் = ಬಲಿಷ್ಠವಾದ, ತೇರ್ தேர் = ತೇರು,
ಅರಶರ್ அரசர் = ರಾಜರು, ವನ್ದು வந்து = ಬಂದು, ಇಱೈಂಜ
இறைஞ்ச = ಪ್ರಾರ್ಥಿಸಲು, ಅಲೈಕಡಲ್ அலைகடல் = ಅಲೆ
ಯಿಂದ ತುಂಬಿದ ಕಡಲುಗಳಿಂದ ಸುತ್ತುವರಿದ, ಉಲಹಮ್ உலகம்
= ಲೋಕಗಳನ್ನು, ಮುನ್ முன் = ಹಿಂದೆ, ಆಣ್ಡ ஆண்ட = ಆಳು
ತ್ತಿದ್ದ, ಪಾೞಿ பாழி = ಬಲಿಷ್ಠವಾದ, ಅಮ್ அம் = ಸೊಗಸಾದ,
ತೋಳ್ தோள் = ತೋಳುಗಳು, ಓರ್ ಆಯಿರಮ್ ஓர் ஆயி
ರம் = ಒಂದು ಸಾವಿರವು, ವೀೞ வீழ = ಬೀಳುವಂತೆ, ಪಡೈ
படை = ಆಯುಧವಾದ, ಮೞು மழு = ಗಂಡುಗೊಡಲಿಯನ್ನು,
ಪಟ್ರಿಯ பற்றிய = ಹಿಡಿದ, ವಲ್ಲಾನೇ வலியோ = ಶೂರ, ಮೆನ್ மென் = ಮೃದು
[illegible], ಮಾೞೈ மாழை = ಜಿಂಕೆಯ, ನೋಕ್ಕಿ நோக்கி = ~~[illegible]~~ ನೋಟವುಳ್ಳವಳ್, ಮಣಿ
ವಾದ (ಚಂಚಲವಾದ), ನೋಕ್ಕಿ நோக்கி = ನೋಟವುಳ್ಳವಳ್, ಮಣಿ
ನಿಱಮ್ மணிநிறம் = ಸುಂದರವಾದ (ರತ್ನದಂತ) ಬಣ್ಣವನ್ನು,
ಕೊಣ್ಡು கொண்டு = ಆಕರ್ಷಿಸಿಕೊಂಡು, ವನ್ದು வந்து = ಬಂ
ದು, ಮುನ್ನೇ முன்னே = ಅವಳ ಮುಂಭಾಗದಲ್ಲಿಯೇ, ನಿನ್ಱು
நின்று = ನಿಂತಿದ್ದು, ಪೋಹಾಯ್ போகாய் = ಹೋಗುವುದಿಲ್ಲ
ವಲ್ಲ, ಕೋೞಿ கோழி = ಕೋಳಿಯ, ವೆಣ್ ಮುಟ್ಟೈಕ್ಕು வெ
ண் முட்டைக்கு = ಬಿಳಿಯ ಮೊಟ್ಟೆಗೆ, ಎನ್ ಶೆಯ್ವದು என்
செய்வது = ಏನು ಮಾಡುತ್ತದೆ? ಎನ್ದಾಯ್ எந்தாய் = ನನ್ನ
ಸ್ವಾಮಿಯೇ, ಕುಱು குறு = ಚಿಕ್ಕ, ತಡಿ தடி = ಕೋಲಾದರೂ,

(ಏನು ಮಾಡುವುದು?), ನೆಡುಂ ಕಡಲ್ ವಣ್ಣಾ நெடுங்கடல் வண்
ணா = ವಿಸ್ತಾರವಾದ ಕಡಲಿನ ಬಣ್ಣದವನೇ.

ಚಕ್ರಗಳಿಂದ ಕೂಡಿದ ಸುಂದರವಾದ ಮತ್ತು ಬಲಿಷ್ಠವಾದ ತೇರುಗಳುಳ್ಳ ರಾಜರು ಬಂದು ಪ್ರಾರ್ಥಿಸಲು, ಅಲೆಗಳಿಂದ ತುಂಬಿದ ಕಡಲುಗಳಿಂದ ಸುತ್ತುವರಿದಿರುವ ಲೋಕಗಳನ್ನು, ಹಿಂದೆ ಆಳುತ್ತಿದ್ದ ಸೊಗಸಾದ ಬಲಿಷ್ಠವಾದ ಒಂದು ಸಾವಿರ ತೋಳುಗಳ ಬಾಳು ವಂಕೆ ಗಂಡುಗೊಡಲಿಯನ್ನು ಆಯುಧವನ್ನಾಗಿ ಹಿಡಿದ ಪೌರುಷವೋ, ಜಿಂಕೆಯ ಮೃದುವಾದ (ಚಂಚಲವಾದ) ನೋಟವುಳ್ಳವಳ ರಕ್ತದಂಥ ಬಣ್ಣವನ್ನು ಆಕರ್ಷಿಸಿಕೊಂಡು, ಬಂದು ಅವಳ ಎದುರಲ್ಲಿಯೇ ನಿಂತಿದ್ದು ಹೋಗುವುದಿಲ್ಲವಲ್ಲ! ನನ್ನ ಸ್ವಾಮಿಯೇ, ವಿಸ್ತಾರವಾದ ಕಡಲಿನ ಬಣ್ಣದವನೇ, ಕೋಳಿಯು ಬಿಳಿಯ ಮೊಟ್ಟೆಗೆ ಏನು (7)
ಮಾಡುತ್ತದೆ? ಚಕ್ರ ಕೋಲಾದರೂ ಏನು ಮಾಡುವುದು?

ಆಳ್ವಾರರು ಹೇಳುತ್ತಾರೆ: ಸ್ವಾಮೀ, ವಿಸ್ತಾರವಾದ ಕಡಲ ಬಣ್ಣವುಳ್ಳವನೇ, ಹಿಂದೆ, ಕಾರ್ತವೀರ್ಯಾರ್ಜುನನು ಮೂರು ಲೋಕಗಳ ರಾಜರುಗಳಿಗೆ ಚಿತ್ರಹಿಂಸೆ ಕೊಡುತ್ತಿದ್ದ. ಅವರೆಲ್ಲರೂ ನಿನ್ನ ಬಳಿಗೆ ಬಂದು ಬೇಡಿಕೊಂಡಾಗ, ನೀನು ಗಂಡುಗೊಡಲಿಯನ್ನೇ ಆಯುಧವನ್ನಾಗಿ ಮಾಡಿಕೊಂಡು, ಅವನ ಒಂದು ಸಾವಿರ ಬಲವಾದ ಸೊಗಸಾದ ತೋಳುಗಳನ್ನು ತುಂಡರಿಸಿಹಾಕಿದೆ. ಇದು ನಿನ್ನ ಪೌರುಷವೇ ಅಲ್ಲವೇ? ಈಗ, ಜಿಂಕೆಯಂತೆ ಮೃದುವಾದ ಚಂಚಲವಾದ ನೋಟದವಳಾದ ಈ ಹೆಣ್ಣಿನ ರಕ್ತದಂಥ ಮೈಬಣ್ಣವನ್ನು ಹೀರಿಬಿಟ್ಟು, ಕಣ್ಮರೆಯಾಗದಂತೆ ಅವಳ ಎದುರಲ್ಲಿಯೇ ಎದೆಬಡದೆ ನಿಂತಿರುವುದೂ ನಿನ್ನ ಪೌರುಷಕ್ಕೆ ತಕ್ಕದ್ದೇ? ಅನನ್ಯವಾಗಿ ನಿನ್ನನ್ನು ಪ್ರೇಮಿಸುವ ಇವಳನ್ನು ಹಿಂಸೆಗೆ ಹೀಗೆ ಈಡುಮಾಡುವುದೇ? ಇವಳಿಗೆ ಆಶ್ರಯವನ್ನು ಕೊಡಬೇಡವೇ? ಸ್ವಾಮೀ, ಕೋಳಿಯು ತನ್ನ ಬಿಳಿಯ ಮೊಟ್ಟೆಗೆ ಏನು ಮಾಡುತ್ತದೆ? ಅದನ್ನು ತನ್ನ ಹತ್ತಿರದಲ್ಲಿ ಜೋಪಾನವಾಗಿಟ್ಟುಕೊಂಡು, ತನ್ನ ಮೈ ಶಾಖವನ್ನು ಅದಕ್ಕೆ ಕೊಟ್ಟು, ಮರಿಯಾಗುವುದಕ್ಕೆ ಒತ್ತಾಸೆ ಕೊಡುವುದಿಲ್ಲವೇ? ಚಕ್ರ ಕೋಲಿನಿಂದ ಅದನ್ನು ಬಡಿದು, ಒಡೆದು ಹಾಕುವುದೇ?

8. பொருந்தலனாகம் புள்ளுவந்தேற
வள்ளுகிராற் பிளந்தன்று,
பெருந்தகைக்கிரங்கி வாலியை முனிந்த
பெருமைகொலோ? செய்கின்று,

பெருந்தடங்கண்ணி சுரும்புறு கோதை
பெருமையை நினைந்திலை பேசில்,
கருங்கடல் வண்ணா! கவுள் கொண்ட நீராம்
இவளைக் கருதுகின்றாயே.

ಪೊರುನ್ದಲನಾಹಮ್ ಪುಳ್ಳುವನ್ದೇಱ
ವಳ್ಳುಗಿರಾಲ್ ಪಿಳನ್ದನ್ಱು,
ಪೆರುನ್ದಹೈಕ್ಕಿರಙ್ಗಿ ವಾಲಿಯೈ ಮುನಿನ್ದ
ಪೆರುಮೈಕೊಲೋ? ಶೆಯ್ದದಿನ್ಱು,
ಪೆರುನ್ದಡಙ್ಗಣ್ಣಿ ಶುರುಮ್ಬುಱು ಕೋದೈ
ಪೆರುಮೈಯೈ ನಿನೈನ್ದಿಲೈ ಪೇಶಿಲ್,
ಕರುಙ್ಗಡಲ್ ವಣ್ಣಾ! ಕವುಳ್ಕೊಣ್ಡ ನೀರಾಮ್
ಇವಳೈಕ್ಕರುದುಗಿನ್ಱಾಯೇ.

ಪೊರುನ್ದಲನ್ பொருந்தலன் (ಹಿರಣ್ಯನ) = ವೈರಿಯ, ಆಹಮ್ ஆகம் = ಎದೆಯನ್ನು, ಪುಳ್ புள் = ಪಕ್ಷಿಗಳು, ಉವನ್ದು உவந்து = ಹರ್ಷದಿಂದ, ಏಱ ஏற = ಹತ್ತುವಂತೆ, ವಳ್ ಉಗಿರಾಲ್ வள் உகிரால் = ಹರಿತವಾದ ಉಗುರಿಂದ, ಅನ್ಱು அன்று = ಅಂದು, ಪಿಳನ್ದು பிளந்து = ಸೀಳಿಹಾಕಿ, ಶ್ರೇಷ್ಠನಾದ ಸುಗ್ರೀ ಪೆರುನ್ದಹೈಕ್ಕು பெருந்தகைக்கு (ಸುಗ್ರೀವನಿಗೆ) = ವನಿಗೆ, ಇರಙ್ಗಿ இரங்கி = ಅನುಗ್ರಹಿಸಿ, ವಾಲಿಯೈ வாலியை = ವಾಲಿಯನ್ನು, ಮುನಿನ್ದ முனிந்த = ಕೋಪಿಸಿಕೊಂಡ, ಪೆರುಮೈಕೊಲೋ பெருமைகொலோ = ಹಿರಿಮೆಯೋ, ಶೆಯ್ದದು செய்தது = ಮಾಡಿದ್ದು, ಇನ್ಱು இன்று = ಇಂದು, ಪೆರುನ್ದಡಙ್ಗಣ್ಣಿ பெருந்தடங்கண்ணி = ಬಹುದೊಡ್ಡ ವಿಶಾಲವಾದ ಕಣ್ಣುಗಳುಳ್ಳವಳು, ಶುರುಮ್ಬು சுரும்பு = ದುಂಬಿಗಳು, ಉಱು உறு = ತುಂಬಿರುವ, ಕೋದೈ கோதை = ಮುಡಿಯುಳ್ಳವಳ, ಪೆರುಮೈಯೈ பெருமையை = ಹಿರಿಮೆಯನ್ನು, ನಿನೈನ್ದಿಲೈ நினைந்திலை = ಯೋಚಿಸಲಿಲ್ಲ, ಪೇಶಿಲ್ பேசில் = ಮಾತನಾಡಿದರೆ, ಕರುಙ್ಗಡಲ್ ವಣ್ಣಾ கருங்கடல் வண்ணா = ಕಪ್ಪು ಕಡಲಿನ ಬಣ್ಣದವನೇ, ಕವುಳ್ ಕೊಣ್ಡ கவுள் கொண்ட = ಕಬ್ಬಳಿಸಿ

ಮೇಲೆ ಬಂದ, ನೀರ್ ಆಮೋ நீர் ஆம் = ನೀರೇ ಹರಿದು, ಇವಳ್
என இவள் ನಾಣಾ = ಇವಳು ಎಂಬಂತೆ, ಕರುದುಹನ್ ಉಗಾಂಡೇ
கருதுகின்றாயே = ಭಾವಿಸಿರುವೆಯಲ್ಲ!

ವೈರಿಗಳ ದೇಹವನ್ನು ಪಕ್ಷಿಗಳು ಹರ್ಷದಿಂದ ಹರಿತ್ತುವಂತೆ ಹರಿತವಾದ ಬಾಣಗಳಿಂದ ಸೀಳಿದಾಗ, ಅಂದು, ಶ್ರೇಷ್ಠವಾದ ಬಿದ್ದುದಕ್ಕೆ ಅನುಗ್ರಹಿಸಿ (ಕೃಪೆದೋರಿ) ವಾಲಿಯನ್ನು ಕೋಪಿಸಿಕೊಂಡ ಹಿರಿಮೆಯೊಳಗೆ ಕಾಣೆ, ಇಂದು ಮೊಟಕದ್ದು. ಬಲುದೊಡ್ಡ ವಿಶಾಲವಾದ ಕಣ್ಣುಗಳುಳ್ಳವಳ, ದುಂಬಿಗಳು ಮುತ್ತಿರುವ ಕಲೆಗೂದಲಿನವಳ, ಹಿರಿಮೆಯನ್ನು, ಹೇಳಹೋದರೆ, ಅದು ಮುಗಿಯದ ಕಡಲ ಬಣ್ಣದವನೇ, ಇವಳು ಕಣ್ಣಿಗೆ ಕಾಣಲಿಲ್ಲ (ಗಮನಿಸಲಿಲ್ಲ) ವಲ್ಲ! ಕಡಲ ಬಣ್ಣದವನೇ, ಇವಳು ಕಣ್ಣೀರಿನ ಮೇಲೆ ಬಂದ ನೀರೇ ಎಂಬಂತೆ ಭಾವಿಸಿರುವೆಯಲ್ಲ! (8)

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಹಿಂದೆ, ಮಹಾವಿರಾಟ್ರೂಪ ಎನಿಸಿದ್ದ ಹಿರಣ್ಯಕಶಿಪುವನ್ನು, ನೀನು ನರ-ಹರಿಯಾಗಿ ಅವತರಿಸಿ, ನಿನ್ನ ಹರಿತವಾದ ಉಗುರುಗಳಿಂದಲೇ ಸೀಳಿ ಕೊಂದು ಹಾಕಿದೆ. ಅವನ ಕಳೇಬರ ವನ್ನು ಪಕ್ಷಿಗಳು ನಿರ್ಭಯವಾಗಿ ಕಿತ್ತು ತಿನ್ನುವಂತಾಯಿತು. ಮತ್ತೆ, ನೀನು ಶ್ರೀರಾಮನಾಗಿ ಅವತರಿಸಿ, ಸುಗ್ರೀವನ ಬಿದ್ದುದಾನಗಳಿಗೆ ಕೃಪೆದೋರಿ, ಅವನಿಗೆ ದ್ರೋಹ ಬಗೆದಿದ್ದ ವಾಲಿಯನ್ನು ನಿಗ್ರಹಿಸಿದೆ. ಇವು ನಿನ್ನ ಪೌರುಷದ ಹಿರಿಮೆ. ಆದರೆ, ಇಂದು ನೀನು ಮಾಡಿದ್ದು ನಿನ್ನ ಹಿರಿಮೆಗೆ ತಕ್ಕುದೇ? ವಿಶಾಲವಾದ ಕಣ್ಣುಗಳ, ಸುಂದರವಾದ ಕಲೆಗೂದಲಿನ ಈ ಯುವತಿಯ ಬಿದ್ದುದಾನಗಳನ್ನು ಗಮನಿಸದೆ ಹೋದೆ. ಕಣ್ಣಿನ ಮೇಲೆ ಇಳಿಯುವ ನೀರನ್ನು ನೋಡುವುದು ನಿನಗೆ ಸರಿಯೇ? ಕಣ್ಣಿನ ಮೇಲೆ ಇಳಿಯುವ ನೀರನ್ನು ನೀನು ಇವಳ ವಿಷಯದಲ್ಲಿ ಅಲಕ್ಷ್ಯದಿಂದ ಬರಸಿ ಬಿಡುವಂತೆ, ನೀನು ಇವಳ ವಿಷಯದಲ್ಲಿ ನಡೆದುಕೊಂಡೆಯಲ್ಲ! (ಬಾಯಿಗಳಿಂದ ಹೋಲಿಸಿದ ನೀರನ್ನು ಸುಮ್ಮನೆ ದಕ್ಕಿಬಿಡಲಾಗ, ಅದನ್ನು ಉಗುಳಿಬಿಡುವುದೇ?

9. நீரழல்வானாய் நெடுநிலங்காலாய்
நின்ற நின்னீர்மையை நினைந்தோ?
சீர்கெழு கோதையென்னலதிலளாள்
என்னதோர் தேற்றன்மை தானே?
பார்கெழுபவ்வத்தாரமுதனைய
பாவையைப் பாவஞ்செய்தேனுக்கு,
ஆரழலோம்புமந்தணன் தோட்டமாக
நின்மனத்து வைத்தாயே.

ನೀರಳಲ್ ವಾನಾಯ್ ನೆಡುನಿಲಙ್ಗಾಲಾಯ್
ನಿನ್ರ ನಿನ್ನೀರ್ಮೈಯ್ಯ ನಿನೈನ್ದೋ?

ಶೀರ್ ಕೊಳು ಶೋದ್ವೈ ಯೆನ್ನಲದಿಲಳ್ಗಿನ್
ಅನ್ನದೋರ್ ಶೀಱ್ರನ್ವೈ ಶಾನ್ಱೇ?
ಪಾರ್ ಕೊಳು ಪವ್ವತ್ತಾರಮುದನ್ನೈಯ
ಪಾವೈಯ್ತ್ ಪ್ಪಾವಂ ಜೆಯ್ದೇನುಕ್ಕು,
ಆರಲಲೋಮ್ಬು ಮನ್ದಣನ್ ಶೋಟ್ಟಮಾದ
ನಿನ್ ಮನಶ್ತು ವೈತ್ತಾಯೇ.

ನೀರ್, ಅಬಿಲ್, ವಾನ್ ಆಯ್ நீர், அழல், வான் ஆய் = ನೀರು,
ಬೆಂಕಿ, ಆಕಾಶಗಳು ಆಗಿ, ನೆಡು நெடு = ವಿಶಾಲವಾದ, ನಿಲಮು, ಕಾಲ್
ಆಯ್ நிலம் கால் ஆய் = ನೆಲ, ಗಾಳಿಗಳಾಗಿ, ನಿನ್ಱ நின்
ற = ಇರುವ, ನಿನ ನೀರ್ಮೈಯ್ನಿ நின் நீர்மையை = ನಿನ್ನ ಸಹಜ ಸ್ವಭಾವವನ್ನು,
ನಿನೈನ್ದೋ நினைந்தோ = ನೆನೆದೋ, (ಯೋಚಿಸಿಯೋ), ಶೀರ್ ಕೊಳು
சீர் கொ(ள்) = ಬಹಳ ಸೊಗಸಾದ, ಶೋದ್ವೈ கோதை = ಕಲೆಗಾದಲನವಳು
ಎನ್ ಅಲದು ಇಲಳ್ என் அலது இலள் = ನನ್ನನ್ನು ಹೊರತು ಬೇರೆ
ಇಲ್ಲದವಳು, ಎನ್ಱು என்று = ಎಂದು, ಅನ್ನದು அன்னது =
ಅಂಥ, ಓರ್ ஓர் = ಒಂದು (ಅಲ್ಪವಾದ), ಶೀಱ್ರನ್ವೈ சீற்ற
ண்ணம் = ದೃಢ ನಿಶ್ಚಯವೇ, ಶಾನ್ಱೇ சான்றே = ಅಲ್ಲವೇ, ಪಾರ್ ಕೊಳು
பார் கொ(ள்) = ಸಮುದ್ರದಿಂದ ಸುತ್ತುವರಿದ, ಪವ್ವತ್ತು பவ்வத்து
ಅಮುದು ಅನ್ನೈಯ அமுது அன்னைய = ಅಮೃತ
= ಭೂಮಿಯ. ಸಮಾನವಾದ, ಪಾವೈಯ್ತ್ ಪಾவையை = ಕುಮಾರಿಯನ್ನು, ಪಾವ
ಮಾ ಶೆಯ್ದೇನುಕ್ಕು பாவம் செய்தேனுக்கு = ಪಾಪವನ್ನು
ಮಾಡಿದ ನನಗೆ, ಆರ್ ಅಬಿಲ್ ஆர் அழல் = ಉಂಬು ಬೆಂಕಿಯನ್ನು,
ಓಮ್ಬುಮ ஓம்பும் = ಪೂಜಿಸುವ, ಅನ್ದಣನ್ அந்தணன் =
ಬ್ರಾಹ್ಮಣನ, ಶೋಟ್ಟಮಾ ಆದ கோட்டம் ஆக = ಶೋಟ್ಟವಾಗಿ,
ನಿನ್ ಮನತ್ತು நின் மனத்து = ನಿನ್ನ ಮನದಲ್ಲಿ, ವೈತ್ತಾಯೋ
வைத்தாயோ = ಇಟ್ಟುಕೊಂಡಿರುವೆಯೋ.

ನೀರು, ಬೆಂಕಿ, ಆಕಾಶಗಳಾಗಿ, ವಿಶಾಲವಾದ ಭೂಮಿ ಗಾಳಿಗಳಾಗಿ
ಇರುವ ನಿನ್ನ ಸಹಜ ಸ್ವಭಾವವನ್ನು ಯೋಚಿಸಿಯೋ, ಬಹಳ ಸೊಗ
ಸಾದ ಕಲೆಗಾದಲನವಳು ನನ್ನ ಹೊರತು ಬೇರೆ ಇಲ್ಲದವಳು ಎಂಬಂಥ
ಒಂದು ಅಲ್ಪವಾದ ದೃಢ ನಿಶ್ಚಯವೇ ಯೋ, ಸಮುದ್ರದಿಂದ ಸುತ್ತು
ವರಿದ ಭೂಮಿಯ ಅಮೃತ ಸಮಾನಳಾದ ಕುಮಾರಿಯನ್ನು ಪಾಪಿಷ್ಠ
ನಾದ ನನಗೆ, ಉಂಬು ಬೆಂಕಿಯನ್ನು ಪೂಜಿಸುವ ಬ್ರಾಹ್ಮಣನ ಶೋಟ್ಟ
ವಾಗಿ ನಿನ್ನ ಮನದಲ್ಲಿ ಇಟ್ಟುಕೊಂಡಿದ್ದೀಯೋ? (9)

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನೀರು, ಬೆಂಕಿ, ಗಾಳಿ, ನೆಲ, ಬಾನು ಎಂಬ ಪಂಚಭೂತಗಳಾಗಿ, ಸರ್ವವ್ಯಾಪಿಯಾಗಿ, ನೀನು ಬೆಳಗುತ್ತೀ. ನೀನು ಎಲ್ಲಾ ವಸ್ತುಗಳೂ ಆಗಿ, ಎಲ್ಲಾ ವಸ್ತುಗಳನ್ನು ಸೃಷ್ಟಿಸುವವನೂ ಆಗಿ, ಎಲ್ಲಾ ವಸ್ತುಗಳ ಅಂತರಾತ್ಮವೂ ಆಗಿ, ಅವುಗಳ ನಿರ್ವಾಹಕನೂ ಆಗಿದ್ದೀ. ನಿನ್ನ ಸಹಜ ಸ್ವಭಾವವೇ ಇದು. ಈ ಹೆಂಬಗಿನ ಕಲೆಗಾದಲನವಳೂ ನೀನು ಸೃಷ್ಟಿಸಿರುವ (ನೀನೇ ಆಗಿರುವ) ಪಂಚಭೂತಗಳಿಂದಲೇ ಆದವಳಲ್ಲವೇ? ನಿನ್ನ ಹೊರತು ಇವಳು ಬೇರೆಯಲ್ಲ. ನಿನ್ನ ಹೊರತು ಇವಳಿಗೆ ಬೇರೆ ನಿರ್ವಾಹಕರಿಲ್ಲ. ಇವಳು ನಿನ್ನನ್ನೇ ನಂಬಿದ್ದಾಳೆ. ನಿನ್ನನ್ನೇ ಪ್ರಾಣವಾಗಿ ಅನನ್ಯವಾಗಿ ಆಶ್ರಯಿಸಿದ್ದಾಳೆ. ಇವಳನ್ನು ನೀನು ಉದ್ಧರಿಸುವುದು ನಿನ್ನ ಕರ್ತವ್ಯವಲ್ಲವೇ? ಅಗ್ನಿಹೋತ್ರಿಗಳಾದ ವೈದಿಕ ಬ್ರಾಹ್ಮಣರು ತಮ್ಮ ಅಗ್ನಿಯನ್ನು ಚೆನ್ನಾಗಿ ಬೆಳಗಿಸುವುದರಲ್ಲಿಯೇ ನಿರತರಾಗಿರುತ್ತಾರೆ. ಅವರು ಕೋಟವನ್ನು ಬೆಳಗಬೇಕೆಂದರೆ ಅಷ್ಟೇ ಶ್ರದ್ಧೆಯನ್ನು ವಹಿಸುವರೇ? ವಹಿಸಲು ಅವರಿಗೆ ಸಾಧ್ಯವೇ? ಒಂದು ವೇಳೆ ಕೋಟವನ್ನು ಬೆಳಗಬೇಕಾದರೆ, ಅದಕ್ಕೆ ಅವರು ವಹಿಸುವ ಶ್ರದ್ಧೆ ಬದಲಾಗದೆಯೇ. ಹಾಗೆಯೇ, ಭೂಲೋಕದಲ್ಲಿ ಅವ್ಯಕ್ತಸ್ವರೂಪಳಾದ ಇವಳನ್ನು ಉಜ್ಜೀವನಗೊಳಿಸುವುದರ ಬದಲಾಗಿ, ನೀನು ಅಶ್ರದ್ಧೆಯಿಂದ ನೋಡುವೆಯಾ? ಇವಳನ್ನು ಕೈಬಿಡಬೇಡ.

10. வேட்டத்தைக் கருதாதடியிணை வணங்கி
மெய்ம்மை நின்றெம்பெருமானை,
வாட்டிறற்றுனை மங்கையர் தலைவன்
மானவேற்கலியன் வாயொலிகள்,
தோட்டலர் பைந்தார் சுடர்முடியானைப்
பழமொழியாற் பணிந்துரைத்த,
பாட்டிவை பாடப் பத்திமை பெருகிச்
சித்தமுந் திருவொடு மிகுமே.

ವೇಟ್ಟತ್ತೈಕ್ಕರುದಾದಡಿಯಿಣೈ ವಣಙ್ಗಿ
ಮೆಯ್ಮ್ಮೈ ನಿನ್ಱೆಂಬೆರುಮಾನ್ನೈ,
ವಾಟ್ಟಿಱಱ್ಱಾನ್ನೈ ಮಙ್ಗೈಯರ್ ತಲೈವನ್
ಮಾನವೇಱ್ಕಲಿಯನ್ ವಾಯೊಲಿಗಳ್,
ತೋಟ್ಟಲರ್ ಪೈನ್ದಾರ್ ಶುಡರ್ ಮುಡಿಯಾನ್ನೈ
ಪ್ಪಳಮೊಳಿಯಾಱ್ ಪಣಿನ್ದುರೈತ್ತ,
ಪಾಟ್ಟಿವೈ ಪಾಡಪ್ಪತ್ತಿಮೈ ಪೆರುಗಿ
ಚ್ಚಿತ್ತಮುನ್ದಿರುವೊಡು ಮಿಗುವೇ.

ವೇಟ್ಕೈ வேட்டக்கை = (ಬಗೆಬಗೆಯ) ಆಸೆಗಳನ್ನು, ಕರುದಾದು கருதாது = ಬೇಡದೆ, ಅಡಿ ಇಣೈ அடிஇணை = ಎರಡು ಪಾದಗಳನ್ನು (ತಿರುವಡಿಗಳನ್ನು), ವಣಂಗಿ வணங்கி = ನಮಸ್ಕರಿಸಿ (ಆಶ್ರಯಿಸಿ), ಮೆಯ್ ಮೆಯ್ಯೆ மெய்ம்மை = ನಿತ್ಯಸಿದ್ಧರಾಗಿ, ನಿನ್ಱು நின்ற = ಇರುವ, ಎಮ್ಪೆರುಮಾನ್ಯೆ நம்பெருமானை = ಭಗವಂತನನ್ನು, ವಾಳ್ ತಿಱಲ್ ಕೋನ್ಯೆ வாள் திறல் கோனை = ಕ್ಷತ್ರಿಯ ಬಲವನ್ನುಳ್ಳ ಸೇನೆಯುಳ್ಳವನಾದ, ಮಙ್ಗೈಯರ್ ತಲೈವನ್ மங்கையர் தலைவன் = ತಿರುಮಂಗೈ ನಾಡಿನ ಜನರ ಒಡೆಯನಾದ, ಮಾನಮ ವೇಲ್ மாணம் வேல் = ಹಂಡೆಯ ವೇಲಾಯುಧವುಳ್ಳ, ಕಲಿಯನ್ கலியன் = ಕಲಿಯನು, ವಾಯ್ ಒಲಿಗಳ್ வாய் ஒலிகள் = ಬಾಯ ಮಾತುಗಳು, ತೋಡು தோடு = ದಳಗಳು, ಅಲರ್ அலர் = ಅರಳಿದ, ಪೈಂ பைம் = ಸುಂದರವಾದ, ತಾರ್ தார் = ಹೂವಿನ ಮಾಲೆಯು, ಶುಡರ್ சுடர் = ಪೂರ್ಣತೇಜಸ್ಸಿನ, ಮುಡಿಯಾನ್ಯೆ முடியானை = ಕಿರೀಟವನ್ನುಳ್ಳವನನ್ನು, ಪಳಮೊಳಿಯಾಲ್ பழமொழியால் = ಗಾದೆಗಳ ಮೂಲಕ, ಪಣಿನ್ದು பணிந்து = ನಮ್ರತೆಯಿಂದ, ಉರೈತ್ತ உரைக்க = ಹೇಳಿದ, ಪಾಟ್ಟು ಇವೈ பாட்டு இவை = ಈ ಪಾಡುಗಳನ್ನು (ಪಾಶುರಗಳನ್ನು), ಪಾಡ பாட = ಹಾಡಲು, ಪತ್ತಿ ಮೆಯ್ತ್ತ பக்தியாம = ಭಕ್ತಿಯು, ಪೆರುಂ பெருகி = ವೃದ್ಧಿಯಾಗಿ, ಚಿತ್ತಮುಮ್ சித்தமும் = ಚಿತ್ತವಾದದ, ತಿರುವೊಡು ಮಿಗ್ಗಾವೇ மிகு திருவொடு = ದೈವಪಕ್ಷದೊಡನೆ, ಮೇ = ಅತಿಶಯವಾಗುತ್ತದೆ.

ಬಗೆಬಗೆಯ ಆಸೆಗಳನ್ನು ಅಪೇಕ್ಷಿಸದೆ, ಭಗವಂತನ ಎರಡು ತಿರುವಡಿಗಳನ್ನು ಆಶ್ರಯಿಸಿ, ನಿತ್ಯಸ್ಥರಾಗಿರುವ (ನಿತ್ಯಸಿದ್ಧರಾಗಿರುವ) ಭಗವಂತನನ್ನು, ಕ್ಷತ್ರಿಯ ಬಲವನ್ನುಳ್ಳ ಸೇನೆಯವನಾಗಿ, ತಿರುಮಂಗೈ ನಾಡಿನ ಜನರ ಒಡೆಯನಾಗಿ, ಹಂಡೆಯ ವೇಲಾಯುಧವನ್ನು ಹಿಡಿದವನಾದ ಕಲಿಯನ ಬಾಯ ಮಾತುಗಳು ದಳಗಳು ಬಿರಿದಿರುವ ಸುಂದರವಾದ ಹೂವಿನ ಮಾಲೆಯ ಪೂರ್ಣತೇಜಸ್ಸಿನ ಕಿರೀಟವನ್ನಾಗಿ ಉಳ್ಳವನನ್ನು ಗಾದೆಗಳ ಮೂಲಕ ನಮ್ರತೆಯಿಂದ ಹೇಳಿದ ಈ ಪಾಶುರಗಳನ್ನು ಹಾಡುವುದರಿಂದ ಭಕ್ತಿಯು ವೃದ್ಧಿಯಾಗುತ್ತದೆ. ಚಿತ್ತವಾದದ ದೈವಪಕ್ಷದೊಡನೆ ಕೂಡ ಅತಿಶಯವಾಗುತ್ತದೆ. (10)

ಭಗವಂತನು ಪರಮಕಾರುಣಿಕ. ಅವನನ್ನು ಆಶ್ರಯಿಸಿದವರನ್ನು ಎಂದಿಗೂ ಕೈಬಿಡುವುದಿಲ್ಲ! ಸ್ವಾಮಿಯನ್ನು ಅವರು ಏನೇ ಬೇಡಲಿ, ಅದನ್ನು ಕರುಣಿಸುತ್ತಾನೆ. ಆದರೆ, ಭಗವಂತನಲ್ಲಿ ನಿಜವಾಗಿ ಬೇಡತಕ್ಕದ್ದು

Gargi Srinivasan

ಯಾವುದು, ಅದು ತನಗೆ ಶಾಶ್ವತವಾದ ಸುಖಸಂತೋಷಗಳನ್ನು ತರುವುದೇ, ಇಲ್ಲವೇ ಕ್ಷಣಿಕವಾದ ಫಲವನ್ನು ಕೊಡುವುದೇ ಎಂಬುದನ್ನು ಬೇಡತಕ್ಕವರು ವಿವೇಚಿಸತಕ್ಕದ್ದು. ಇಹಲೋಕದ ಐಶ್ವರ್ಯಾದಿಗಳು ಸ್ವರ್ಗಲೋಕದ ಸುಖಸಂತೋಷಗಳು — ಇವು ಒಂದಕ್ಕಿಂತ ಒಂದು ಮೇಲೆನಿಸಿದರೂ, ಇವು ಶಾಶ್ವತವೇನಲ್ಲ. ಭಕ್ತಿ ಸಾಧನೆಗೆ ಬದಲು ಶ್ರೀಯಃಪತಿಯಾದ ಆತನೆಯೆಂದರೆ (ಬೇಡಿಕೊಂಡರೆ) ಭಗವಂತನ ತಿರುವಡಿಗಳ ಆಶ್ರಯವನ್ನು ಕೋರುವುದು. ಸತ್ಪ್ರಾಪ್ತಿಗಾಗಿ, ದಾಸ್ಯವನ್ನೇ ತನ್ನ ಸಹಜ ಸ್ವಭಾವವನ್ನಾಗಿ ಬಲ್ಲ ಭಗವಂತನ ಅಡಿದಾವರೆಗಳನ್ನು ಹಿಡಿದು, ಭಕ್ತಿಯಿಂದ ಭಜಿಸಿ ಪೂಜಿಸಿದರೆ, ಎಂದೆಂದಿಗೂ ಅಳಿಯದ ಅಮರತ್ವ ದಕ್ಕುವುದು ಖಂಡಿತ. ಅದು ಶಾಶ್ವತಾನಂದವನ್ನು ತರುವುದು.

ಈ ತಿರುಮೊಳಿಯನ್ನು ರಚಿಸಿ ಹಾಡಿದ ಕಲಿಯನು ಸಾಮಾನ್ಯನಲ್ಲ. ಅವನು ವೇಲಾಯುಧವನ್ನು ಹಿಡಿಯಲು ಸುಟಿಯಾಗಿ ಪ್ರಯೋಗಿಸುವುದರಲ್ಲಿ ನಿಪುಣನೆಂದು ಹೆಸರಾಂತವನು. ತಿರುಮಂಗೈ ನಾಡಿನ ಜನರ ಒಡೆಯನು. ಪ್ರತಿಷ್ಠಿತವಾದ ಸೇನಾಬಲವನ್ನುಳ್ಳವನು. ಎಲ್ಲಕ್ಕೂ ಮಿಗಿಲಾಗಿ ಭಗವದ್ಭಕ್ತನು. ಇಹಲೋಕದ ಸುಖಸಂತೋಷಗಳಿಗಾಗಲಿ, ಸ್ವರ್ಗಸುಖಕ್ಕಾಗಲಿ, ಅವನು ಆಸೆಪಡಲಿಲ್ಲ. ತನ್ನ ಎಲ್ಲ ಬಗೆಯ ಆಸೆ ಆಕಾಂಕ್ಷೆಗಳನ್ನು ನಿಗ್ರಹಿಸಿ, ಭಗವಂತನ ತಿರುವಡಿ ~~ತಿರುವ~~ ಗಳ ಸೇವೆಯನ್ನೇ ದೃಢವಾಗಿ ಕೋರಿ, ಆಶ್ರಯಿಸಿದವನು.

ತಿರುಮೊಳಿಯ ಒಂದೊಂದು ಪಾಶುರದಲ್ಲಿಯೂ ಒಂದೊಂದು ನಾಣ್ಣುಡಿಯನ್ನು ಬಳಸಿಕೊಂಡು, ಕಲಿಯನು, ತಾನು ಭಗವಂತನನ್ನು ತನ್ನ ಪತಿಯಾಗಿ ವರಿಸಿದ ದೃಢವಾದ ~~ಪ್ರೇ~~ ಶುದ್ಧವಾದ ಪ್ರೇಮವುಳ್ಳ ಸುಂದರಯುವತಿಯೆಂದು ಭಾವಿಸಿಕೊಂಡು, ತನ್ನನ್ನು ಕೈಬಿಡದೆ ಉದ್ಧರಿಸಬೇಕೆಂದು ಭಗವಂತನಲ್ಲಿ ಅತ್ಯಂತ ಪ್ರೀತಿಯಿಂದ ತನ್ನ ಪ್ರಾರ್ಥನೆಯನ್ನು ಈ ಮೂಲಕ ಸಲ್ಲಿಸುತ್ತಾನೆ. ಭಕ್ತನ ಹೃದಯಾಂತರಾಳದಿಂದ ಉಕ್ಕಿ ಹರಿದು ಬರುವ ಈ ಭಕ್ತಿ ವಾಹಿನಿಯನ್ನು ಯಾರು ತಿಳಿಯುವರೋ, ಯಾರು ಚೆನ್ನಾಗಿ ಬಳಸಿಕೊಳ್ಳುವರೋ, ಕಲಿತು ಹಾಡುವರೋ ಅವರ ಭಕ್ತಿ ವೃದ್ಧಿ ಹೊಂದುತ್ತದೆ. ಅವರ ಚಿತ್ತವು ಚಾಂಚಲ್ಯಕ್ಕೆ ಎಡೆಗೊಡದಂತೆ ನೆಮ್ಮದಿಗೊಳ್ಳುತ್ತದೆ. ಸದ್ಭಾವನೆಗಳನ್ನು ತುಂಬಿಕೊಳ್ಳುತ್ತದೆ. ದೈವತ್ವದೊಂದಿಗೆ ಕೂಡಿಕೊಳ್ಳುತ್ತದೆ. ಶಾಶ್ವತಾನಂದವನ್ನು ಗಳಿಸಿಕೊಳ್ಳುತ್ತದೆ. ಇಂತಹದ್ದು ಈ ತಿರುಮೊಳಿಗೆ ಫಲಶ್ರುತಿ!

— o —

ಅಡಿವರವು: அடிவரவு: — ಪುಳ್ புள், ಮನ್ಱಿಲ್ மன்றில், ಆರ್ ஆர், ಮಲ್ಗಿಯ மல்கிய, ತಿರು திரு, ಅರಕ್ಕಿಯರ್ அரக்கியர், ಆಳಿ ஆழி, ಪೊರುನ್ದವನ್ பொருந்தவன், ನೀರ್ நீர், ವೆಟ್ಟತ್ತೈ வெட்டத்தை. (ತಿರುತ್ತಾಯ್ திருத்தாய்)

Garani Srinivasan

21.3.79

ಪೆರಿಯ ತಿರುಮೊಳಿ - ಹತ್ತನೆಯ ದಶಕ - ಹತ್ತನೆಯ ತಿರುಮೊಳಿ.
பெரிய திருமொழி - பத்தாம்பத்து - பத்தாந்திருமொழி.

10. ತಿರುತ್ತಾಯ್ - திருத்தாய்

1. திருத்தாய் செம்போத்தே!,
திருமாமகள் தன் கணவன்,
மருத்தார் தொல்புகழ் மாதவனை வர,
திருத்தாய் செம்போத்தே.

ತಿರುತ್ತಾಯ್ ಶೆಮ್ಬೋತ್ತೇ!
ತಿರುಮಾಮಗಳ್ ತನ್ ಕಣವನ್,
ಮರುತ್ತಾರ್ ತೊಲ್ಪುಗಳ್ ಮಾದವನೈ ವರ,
ತಿರುತ್ತಾಯ್ ಶೆಮ್ಬೋತ್ತೇ.

ಶೆಮ್ಬೋತ್ತೇ செம்போத்தே = ಕೆಂಬೂತವೇ (ಸುಂದರವಾದ ಪಕ್ಷಿಯೇ), ತಿರುಮಾಮಗಳ್ ತನ್ திருமாமகள் தன் = ಶ್ರೀದೇವಿಯ, ಕಣವನ್ கணவன் = ಪತಿಯಾದ, ಮರುತ್ತಾರ್ மருத்தார் = ಪರಿಮಳಿಸುವ ಹಾರವನ್ನು ಧರಿಸಿರುವ, ತೊಲ್ಪುಗಳ್ தொல்புகழ் = ಸ್ವಭಾವಸಿದ್ಧವಾದ (ಸಹಜವಾದ) ಕೀರ್ತಿಯನ್ನುಳ್ಳ, ಮಾದವನೈ மாதவனை = ಮಾಧವನನ್ನು, ವರ வர = (ಇಲ್ಲಿಗೆ) ಬರುವಂತೆ, ತಿರುತ್ತಾಯ್ திருத்தாய் = ಕೂಗುತಿರು.

ಕೆಂಬೂತವೇ, (ಸುಂದರವಾದ ಪಕ್ಷಿಯೇ), ಶ್ರೀದೇವಿಯ ಪತಿಯಾದ, ಪರಿಮಳಿಸುವ ಹಾರವನ್ನು ಧರಿಸಿರುವ, ಸ್ವಭಾವಸಿದ್ಧವಾದ ಕೀರ್ತಿವಂತನಾದ ಮಾಧವನನ್ನು ನನ್ನ ಬಳಿಗೆ ಬರುವಂತೆ ಕೂಗುತಿರು. (1)

ಭಗವಂತನನ್ನು ಅನನ್ಯವಾಗಿ ಭಜಿಸಿ ಪೂಜಿಸುವ ಭಕ್ತನಿಗೆ (ಆಳ್ವಾರರಿಗೆ) ಭಗವತ್ಸನ್ನಿಧ್ಯದ ಬಯಕೆ ಬರಬರುತ್ತ ಅತಿಶಯವಾಗುತ್ತದೆ. ತನ್ನ ಸ್ವಾಮಿಯನ್ನು ಎಂದೆಂದಿಗೆ ಕಾಣುವೆನು, ಕಣ್ಣು ತುಂಬ ಅನುಭವಿಸುವೆನು, ಎಂದೆಂದಿಗೆ ಕೂಡಿಕೊಂಡೇನು ಎಂಬುದೇ ಹೆಬ್ಬಯಕೆಯಾಗಿರುತ್ತದೆ. ಪ್ರೇಮಿಗಳ [illegible], ಭಕ್ತನೂ ಭಗವಂತನಿಂದ ಬೇರೆಯಿರಲಾರದ ಸ್ಥಿತಿ ಬರುತ್ತದೆ. ಪ್ರೇಮಿಗಳಂತೆ ಭಕ್ತನಿಗೂ ವಿರಹವೇದನೆ ಬರಬರುತ್ತ ತಡೆಯಲಾರದಂತಾಗುತ್ತದೆ. ಅಂಥ ಒಂದು ಸಮಯದಲ್ಲಿ, ಭಕ್ತನು ಉನ್ಮತ್ತನಾಗಿ, ಕಂಡ ಕಂಡ ಪಕ್ಷಿಗಳನ್ನೆಲ್ಲಾ ಸಂಬೋಧಿಸುತ್ತಾನೆ. ಪಕ್ಷಿಯಾಗಿ, ಅದು ಸ್ವೇಚ್ಛೆಯಿಂದ ಎಲ್ಲಿಗೆ ಬೇಕೆಂದರಲ್ಲಿಗೆ ಹಾರಿ ಹೋಗಬಲ್ಲದು. ಆದ್ದರಿಂದ ಅದು ಭಗವಂತನಿರುವಲ್ಲಿಗೂ ಹಾರಿ ಹೋಗುವುದು ಸಾಧ್ಯವಲ್ಲವೇ? ಭಗವಂತನನ್ನು ಸಮೀಪಿಸಿ, ಅದು ಭಕ್ತನ ಮನೋವೇದನೆಯನ್ನು ಸ್ವಾಮಿಗೆ ಶ್ರುತಪಡಿಸಬೇಕೆಂದೂ, ಭಕ್ತನ

ಬಳಿಗೆ ಬರದಾ, ಅವನನ್ನು ದಿಂಕಬಲಿಂದ ಬಿದ್ದಿಸಬೇಕೆಂದೂ ಭಕ್ತನ ವಿರಹಾ ಕರೆತರಬೇಕೆಂದೂ ಇಲ್ಲಿ ಹೇಳಲಾಗುತ್ತಿದೆ.

ಕೆಂಬೂತ — ಕಾಗೆಯು ಜಾತಿಗೆ ಸೇರಿದರೂ, ಕೆಂಬಣ್ಣದ ಗರಿಗಳನ್ನುಳ್ಳ ಸುಂದರವಾದ ಹಕ್ಕಿ — ನವಿಲಿನಂತೆ ತನ್ನ ಗರಿಗಳ ಬಗ್ಗೆ ಅದಕ್ಕೆ ಹೆಮ್ಮೆ.

ಶ್ರೀದೇವಿಯ ಕಥೆ:— ಸಮುದ್ರ ಮಥನ ಕಾಲದಲ್ಲಿ ಕ್ಷೀರಸಮುದ್ರದಲ್ಲಿ ಅನೇಕ ಬೆಲೆಬಾಳುವ ವಸ್ತುಗಳು ಹುಟ್ಟಿದವಷ್ಟೆ. ಶ್ರೀದೇವಿಯೂ ಹಾಗೆಯೇ ಉದ್ಭವಿಸಿದಳು. ಅಲ್ಲಿ ನೆರೆದಿದ್ದವರೆಲ್ಲರನ್ನೂ ವೀಕ್ಷಿಸಿ, ನಿತ್ಯಯೌವನ ಸುಂದರನೂ, ಸರ್ವರಕ್ಷಕನೆಂಬ (ಆಶ್ರಿತರಕ್ಷಕನೆಂಬ) ಸ್ವಾ ಜರಾದ, ಸ್ವಭಾವಸಿದ್ಧವಾದ ಕೀರ್ತಿಯನ್ನುಳ್ಳವನೂ, ಎಂದೆಂದಿಗೂ ಬಾಡದ ತಿರುಮಲ್ಲಿಗೆ ವನಮಾಲೆಯನ್ನು ಧರಿಸಿರುವವನೂ ಆದ ನಾರಾಯಣನನ್ನು ಶ್ರೀದೇವಿಯು ವರಿಸಿದಳು. ಆದ್ದರಿಂದ ನಾರಾಯಣನು 'ಶ್ರೀಪತಿ', 'ಮಾಧವ' ಎಂದಾದನು.

2. கரையாய் காக்கைப் பிள்ளாய்!
கருமாமுகில் போல் நிறத்தன்,
உரையார் தொல்புகழ் உத்தமனை வர
கரையாய் காக்கைப் பிள்ளாய்.

ಕರೈಯಾಯ್ ಕಾಕ್ಕೈ ಪಿಳ್ಳಾಯ್!
ಕರುಮಾಮುಗಿಲ್ ಪೋಲ್ ನಿಱತ್ತನ್,
ಉರೈಯಾರ್ ತೊಲ್ ಪುಗಳುತ್ತಮನ್ನೈ ವರ,
ಕರೈಯಾಯ್ ಕಾಕ್ಕೈ ಪಿಳ್ಳಾಯ್.

ಕಾಕ್ಕೈ ಪಿಳ್ಳಾಯ್ காக்கை பிள்ளாய் = ಕಾಗೆಯ ಮರಿಯೇ, ಕರು ಮಾ ಮುಗಿಲ್ கருமாமுகில் = ಕರಿಯ ದೊಡ್ಡ ಮುಗಿಲಿನ, ಪೋಲ್ போல் = ಹಾಗೆ, ನಿಱತ್ತನ್ நிறத்தன் = ಬಣ್ಣದವನಾದ, ಉರೈ உரை = ಮಾತುಗಳಲ್ಲಿ, ಆರ್ ஆர் = ತುಂಬಿರುವವನಾದ, ತೊಲ್ ಪುಗಳ್ தொல்புகழ் = ಶಾಶ್ವತವಾದ ಕೀರ್ತಿಯುಳ್ಳವನಾದ, ಉತ್ತಮನ್ನೈ உத்தமனை = ಪರಮಶ್ರೇಷ್ಠನನ್ನು (ಸರ್ವೋತ್ತಮನನ್ನು), ವರ வர = (ನನ್ನಲ್ಲಿಗೆ) ಬರುವ ಹಾಗೆ, ಕರೈಯಾಯ್ கரையாய் = ಕೂಗಿ ಕರೆಯುವ್ಯ (ಕರೆಯಬೇಕು).

ಕಾಗೆಯ ಮರಿಯೇ, ದೊಡ್ಡ ಕಾರ್ಮುಗಿಲಿನ ಹಾಗೆ ಬಣ್ಣವುಳ್ಳ, ಮಾತುಗಳಲ್ಲಿ ತುಂಬಿಕೊಂಡಿರುವ, ಶಾಶ್ವತವಾದ ಕೀರ್ತಿಯುಳ್ಳ ಸರ್ವೋತ್ತಮನನ್ನು ನನ್ನ ಬಳಿಗೆ ಬರುವಂತೆ ಕೂಗಿ ಕರೆ.

(2)

ಕಾಗೆಯು ಕೂಡ ಕರ್ಕಶವೆನ್ನುತ್ತಾರೆ. ಮರಿಯಾಗಿರುವಾಗ ಅದರ ಕೂಗಿನಲ್ಲಿಯೂ ಮಾಧುರ್ಯವನ್ನು ಕಾಣಬಹುದು. ಆದ್ದರಿಂದಲೇ ಈ ಪಾಶುರದಲ್ಲಿ ಆಳ್ವಾರರು ಕಾಗೆಯ ಮರಿಯನ್ನು ಸಂಬೋಧಿಸಿ ತಮ್ಮ ಕಲಿಕೆಗಾಗಿ ಬಳಸಿಕೊಳ್ಳುತ್ತಿದ್ದಾರೆ.

ಕಾಮುಗಿಲನ್ನು ಕಂಡಾಗ, ಅದನ್ನು ಮನದಲ್ಲಿ ನೆನೆದಾಗ ಭಕ್ತನಿಗೆ ಭಗವಂತನ ನೆನಪು ಬರುತ್ತದೆ. ಕಾರಣ ಕಾರ್ಮುಗಿಲಿನ ಬಣ್ಣ ಮತ್ತು ಅದರ ಗುಣಸ್ವಭಾವಗಳು. ಕಾರ್ಮುಗಿಲು ಔದಾರ್ಯದ ಗಣಿ. ಕಡಲಿನಿಂದ ಸಮೃದ್ಧಿಯಾಗಿ ನೀರನ್ನು ತುಂಬಿಕೊಂಡು, ಮೇಲೇರಿ, ಮೆಲ್ಲ ಮೆಲ್ಲನೆ ಸಂಚರಿಸುತ್ತಾ, ತನ್ನದಾರಿಯ ಉದ್ದಕ್ಕೂ ಆಯಾ ಸ್ಥಳಗಳಿಗೆ ಬೇಕಾಗುವ ಪ್ರಮಾಣಕ್ಕಿಂತಲೂ ಹೆಚ್ಚಾಗಿಯೇ ನೀರನ್ನು ಸುರಿಸಿ, ಎಲ್ಲವನ್ನೂ ಹರ್ಷಗೊಳಿಸುತ್ತದೆ. ಈ ಔದಾರ್ಯವನ್ನು ಭಗವಂತನ ಔದಾರ್ಯಕ್ಕೆ ಹೋಲಿಸುವುದು ವಾಡಿಕೆ. ಆದರೆ ಭಗವಂತನು ಪರಮ ಉದಾರಿ.

ಭಗವಂತನು ಮಾತುಗಳಲ್ಲಿ ತುಂಬಿಕೊಂಡಿರುವನೆಂಬ ಶಾಶ್ವತವಾದ ಕೀರ್ತಿಯುಳ್ಳವನು. ವೇದ, ಶಾಸ್ತ್ರ, ಪುರಾಣ, ಇತಿಹಾಸಗಳೆಲ್ಲವೂ ಭಗವಂತನ ಗುಣಗಾನ ಮಾಡುತ್ತಾ ಅವನ ಕೀರ್ತಿಯನ್ನು ಹರಡುತ್ತಾ ಇರುವುದರಿಂದ ಭಗವಂತನು ಅವುಗಳ ಮಾತುಗಳಲ್ಲಿ ತುಂಬಿದವನೆನ್ನಲಾಗಿದೆ.

3. கூவாய் பூங்குயிலே,
குளிர் மாரி தடுத்துகந்த,
மாவாய் கீண்ட மணிவண்ணனை வர,
கூவாய் பூங்குயிலே.

ಕೂವಾಯ್ ಪೂಙ್ಗುಯಿಲೇ,
ಕುಳಿರ್ ಮಾರಿ ತಡುತ್ತುಗನ್ದ,
ಮಾವಾಯ್ ಕೀಣ್ಡ ಮಣಿವಣ್ಣನೈ ವರ,
ಕೂವಾಯ್ ಪೂಙ್ಗುಯಿಲೇ.

ಪೂ பூ = ಸುಂದರವಾದ, ಕುಯಿಲೇ குயிலே = ಕೋಗಿಲೆಯೇ, ಕುಳಿರ್ ಮಾರಿ குளிர் மாரி = ಕೊರೆಯುವ ಮಳೆಯನ್ನು, ತಡುತ್ತು தடுத்து = ತಡೆದು, ಉಗನ್ದ உகந்த = ಹರ್ಷಿಸಿದ, ಮಾ மா = ಕುದುರೆಯ, ವಾಯ್ வாய் = ಬಾಯನ್ನು, ಕೀಣ್ಡ கீண்ட = ಸೀಳಿದ, ಮಣಿವಣ್ಣನೈ மணிவண்ணனை = ಇಂದ್ರನೀಲ ಮಣಿಯ ಬಣ್ಣದವನನ್ನು, ವರ வர = (ನನ್ನಲ್ಲಿಗೆ) ಬರುವಂತೆ, ಕೂವಾಯ್

Garani Srinivasan

ಕೂವಾಯ್ = ಕೂಗಿ ಕರೆ:

ಸುಂದರವಾದ ಕೋಗಿಲೆಯೇ, ಕರೆಯುವ ಮಳೆಯನ್ನು ತಡೆದು ರಕ್ಷಿಸಿದ, ಕುದುರೆಯ ಬಾಯನ್ನು ಸೀಳಿದ, ಇಂದ್ರನೀಲ ಮಣಿಯ (3)
ಬಣ್ಣದವನನ್ನು ನನ್ನಲ್ಲಿಗೆ ಬರುವಂತೆ ಕೂಗಿ ಕರೆ.

ಈ ಪಾಶುರದಲ್ಲಿ ಆಳ್ವಾರರು ತಮ್ಮ ಕೆಲಸಕ್ಕೆ ಕೋಗಿಲೆಯನ್ನು ಬೇಡುತ್ತಾರೆ. ಕೋಗಿಲೆಯ ಕೂಗು ಮಧುರ. ಪಂಚಮ ಸ್ವರದಲ್ಲಿ ಅದು ಕೂಗುವುದರಿಂದ, ಅದರ ಆಕರ್ಷಕವಾದ ಧ್ವನಿಯು ಭಗವಂತನನ್ನು ಮುಟ್ಟುತ್ತದೆಯೆಂದೋ ಕಾಣೆ.

ದೇವೇಂದ್ರನು ತನಗೆ ಸಲ್ಲಬೇಕಾದ ಪೂಜೆ ನಡೆಯಲಿಲ್ಲವೆಂದು ನಂದಗೋಕುಲದ ಮೇಲೆ ಕಡು ಕೋಪಗೊಂಡು, ಅದನ್ನು ನಾಶ ಮಾಡಿಬಿಡುವುದಕ್ಕಾಗಿ ನಿರಂತರವಾದ ಬಿರುಸು ಮಳೆಯನ್ನು ಏಳು ದಿನಗಳ ಕಾಲ ಸುರಿಸಿದನು. ಆಗ ಬಾಲಕೃಷ್ಣನು ಗೋವರ್ಧನಗಿರಿಯನ್ನೇ ಎತ್ತಿ, ಕೊಡೆಯಂತೆ ಹಿಡಿದು, ಅದರಡಿಯಲ್ಲಿ ಗೋವುಗಳನ್ನೂ ಗೋವಳರನ್ನೂ ರಕ್ಷಿಸಿದನು. ಇದನ್ನು ಕಂಡ ದೇವೇಂದ್ರನಿಗೆ ಅವಮಾನವಾಗಿ, ಅವನು ತನ್ನ ಐರಾವತದೊಡನೆ ಧರೆಗಿಳಿದು ಬಂದು, ಬಾಲಕೃಷ್ಣನ ಕ್ಷಮೆ ಕೋರಿ, ಅವನ ತಿರುವಡಿಗಳನ್ನು ಪೂಜಿಸಿದನು. ಕೃಷ್ಣನಿಗೆ ದಷ್ಟ ನಾಂಅಂಕು.

ಕೇಶಿ ಎಂಬ ರಾಕ್ಷಸನು ಕಂಸನಿಂದ ಪ್ರೇರಿತನಾಗಿ, ಕುದುರೆಯ ರೂಪದಲ್ಲಿ ಬಾಲಕೃಷ್ಣನನ್ನು ಕೊಲ್ಲಲು ಬಂದಾಗ, ಕೃಷ್ಣನು ಆ ಕುದುರೆ ಎರಡು ದವಡೆಗಳನ್ನು ಹಿಡಿದು, ಸೀಳಿ, ಅದನ್ನು ಕೊಂದು ಹಾಕಿದನು.

ಕೃಷ್ಣನಿಗೆ ಆಕರ್ಷಕವಾದ ಇಂದ್ರನೀಲ ಮಣಿಯ ದೇಹ ಕಾಂತಿ. ಆದ್ದರಿಂದ ಅವನು 'ಮಣಿವಣ್ಣ'.

4. கொட்டாய் பல்லிக்குட்டி!
குடமாடி யுகந்த,
மட்டார் பூங்குழல் மாதவனை வர,
கொட்டாய் பல்லிக்குட்டி.

ಕೊಟ್ಟಾಯ್ ಪಲ್ಲಿಕ್ಕುಟ್ಟಿ!
ಕುಡಮಾಡಿಯುಗನ್ದ,
ಮಟ್ಟಾರ್ ಪೂಂಗುಳಲ್ ಮಾದವನೈ ವರ,
ಕೊಟ್ಟಾಯ್ ಪಲ್ಲಿಕ್ಕುಟ್ಟಿ.

ಪಲ್ಲಿಕ್ಕುಟ್ಟಿ பல்லிக்குட்டி = ಹಲ್ಲಿಯ ಮರಿಯೇ (ಪ್ರಿಯವಾದ

ದಲ್ಲಿಯೇ), ಕುಡಮ್ ಆಡಿ (குடம் ஆடி = ಕೊಡದ ಕುಣಿತವನ್ನು ನಡೆಸಿದ ವನೂ, ಉಲಗು ಅಳನ್ದ உலகு அளந்த = ಮೂರು ಲೋಕಗಳನ್ನು ಅಳೆದವನೂ, ಮಟ್ಟು மட்டு = ಗಾನವು, ಆರ್ ஆர் = ತುಂಬಿರುವ ಪೊಂ ಪೂ = ಸುಂದರವಾದ, ಕುವಳೈ (குவளை = ಕನ್ನೈದಿಲೆ, ಮಾಧವನ್ನೈ மாதவனை = ಶ್ರೀಕೃಷ್ಣನನ್ನು (ಲಕ್ಷ್ಮೀಪತಿಯನ್ನು, ಮಾಧವನನ್ನು), ವರ வர = (ನನ್ನಲ್ಲಿಗೆ) ಬರುವಂತೆ, ಕೂವಾಯ್ கூவாய் = ಕೂಗುತ್ತಿರು (ಕೂಗಿ ಕರೆ).

ಸುಂದರವಾದ ದಲ್ಲಿಯೇ, ಕೊಡದ ಕುಣಿತವನ್ನಾಡಿದ, ಮೂರುಲೋಕ ಗಳನ್ನಳೆದ, ಗಾನದಿಂದ ತುಂಬಿರುವ ಸುಂದರವಾದ ಕನ್ನೈದಿಲೆಗಳನ್ನುಳ್ಳ (4)
ಮಾಧವನು ನನ್ನಲ್ಲಿಗೆ ಬರುವಂತೆ ಕೂಗುತ್ತಿರು (ಕೂಗಿ ಕರೆ).

ಇಲ್ಲಿ ಕೂಗುತ್ತಿರು ಎಂದರಲ್ಲಿಯೂ ಆಳ್ವಾರರು ಅಂದವನ್ನು ಅರ್ಥವನ್ನು ಕಾಣುತ್ತಾರೆನ್ನಬಹುದು. ಇಲ್ಲಿ ತನ್ನ ಪ್ರಿಯನನ್ನು ಕೂಗಿ ಕರೆಯುವುದು ತಾನೆ. ಆಳ್ವಾರರು ತಮಗೆ ಆ ಬಗೆಯ ಉಪಕಾರವನ್ನು ಮಾಡಿ ತಮ್ಮ ಪ್ರಿಯನಾದ ಮಾಧವನನ್ನು ಕೂಗಿ ಕರೆಯೆಂದು ಇಲ್ಲಿಗೆ ಕರೆಕೊಡುತ್ತಿದ್ದಾರೆ.

ಭಗವಂತನು ಬಾಲಕೃಷ್ಣನಾಗಿ ಕೊಡದ ಕುಣಿತವನ್ನು ಅದ್ಭುತರೀತಿಯನ್ನಾಗಿ ನಡೆಸಿ ತೋರಿಸಿದನು. ತ್ರಿವಿಕ್ರಮನಾಗಿ ಮೂರು ಲೋಕಗಳನ್ನು ತನ್ನ ಎರಡೇ ಹೆಜ್ಜೆಗಳಿಂದ ವ್ಯಾಪಿಸಿ ಅಳೆದುಬಿಟ್ಟನು. ಅವನು ಕೆರೆಯಲ್ಲಿ ಬೆಳೆದ ದಿವ್ಯವಾದ ಕನ್ನೈದಿಲೆಗಳನ್ನು ನೋಡಿದನೆಂದರೆ, ಅದರ ರಾಗ ಮಾಧುರ್ಯ ಎಲ್ಲರನ್ನೂ ಮುಗ್ಧಗೊಳಿಸಿ, ತನ್ನ ಕಡೆಗೆ ಆಕರ್ಷಣೆ ಹೊಂದುತ್ತಾರೆ.

5. சொல்லாய் பைங்கிளியே!
சுடராழி வலனுயர்த்த,
மல்லார் தோள் வடவேங்கடவனை வர,
சொல்லாய் பைங்கிளியே.

ಶೊಲ್ಲಾಯ್ ಪೈಙ್ಗಿಳಿಯೇ!
ಶುಡರಾೞಿ ವಲನುಯರ್ತ್ತ,
ಮಲ್ಲಾರ್ ತೋಳ್ ವಡವೇಙ್ಗಡವನ್ನೈ ವರ,
ಶೊಲ್ಲಾಯ್ ಪೈಙ್ಗಿಳಿಯೇ.

ಪೈ பை = ಹಸುರು ಬಣ್ಣದ (ಸುಂದರವಾದ), ಕಿಳಿಯೇ கிளியே =

Garani Srinivasan

ಗಿಳಿಯೇ, ಶುಡರ್ ಆಳಿ சுடர் ஆழி = ತೇಜಸ್ಸಿನಿಂದ ತುಂಬಿದ ಚಕ್ರಾಯುಧವನ್ನು, ವಲನ್ ಕೈಯನ್ = ಬಲಗೈಯಲ್ಲಿ ಧರಿಸಿದ, ಉಯರ್ತ್ತ உயர்த்த = ಪ್ರತಿಷ್ಠಿತವಾದ, ಮಲ್ மல் = ಬಲದಿಂದ, ಆರ್ ஆர் = ತುಂಬಿದ, ತೋಳ್ தோள் = ತೋಳುಗಳುಳ್ಳ, ವಡ ವೇಙ್ಗಡವನೈ வட வேங்கடவனை = ತಿರುವೇಂಕಟಗಿರಿಯಲ್ಲಿ ನೆಲೆಸಿರುವವನನ್ನು, ವರ ವಾ வரவா = (ನನ್ನಲ್ಲಿಗೆ) ಬರುವಂತೆ, ಶೊಲ್ಲಾಯ್ சொல்லாய் = ಹೇಳು.

ಹಸುರು ಗಿಳಿಯೇ, ತೇಜಸ್ಸಿನಿಂದ ತುಂಬಿದ ಚಕ್ರಾಯುಧವನ್ನು ಬಲಗೈಯಲ್ಲಿ ಧರಿಸಿದ, ಪ್ರತಿಷ್ಠಿತವಾದ ಬಲದಿಂದ ತುಂಬಿದ ತೋಳುಗಳುಳ್ಳ ತಿರುವೇಂಕಟಗಿರಿಯಲ್ಲಿ ನೆಲೆಸಿರುವವನನ್ನು ನನ್ನಲ್ಲಿಗೆ ಬರುವಂತೆ ಹೇಳು. (5)

ಇತರ ಪಕ್ಷಿಗಳಂತೆ ಅಲ್ಲದೆ ಗಿಳಿ ಭಿನ್ನವಾದದ್ದು. ಅದು ಆಕರ್ಷಿತವಾದ ಬಣ್ಣವನ್ನುಳ್ಳದ್ದಲ್ಲದೆ, ಮುದ್ದಾಗಿ ಮಾತನಾಡಬಲ್ಲದು. ಆ ಮುದ್ದು ಮಾತುಗಳಿಂದ ತಮ್ಮ ಪ್ರಿಯನಾದ ಭಗವಂತನನ್ನು ಕೂಗಿ ಕರೆಯುವಂತೆ ಆಳ್ವಾರರು ಗಿಳಿಗೆ ಹೇಳಿಕೊಡುತ್ತಿದ್ದಾರೆ.

ಭಗವಂತನು ತನ್ನ ಆಶ್ರಿತರನ್ನು ರಕ್ಷಿಸುವುದಕ್ಕಾಗಿಯೇ ತನ್ನ ಬಲಗೈಯಲ್ಲಿ ಪ್ರಜ್ವಲಿಸುವ ಚಕ್ರಾಯುಧವನ್ನು ಹಿಡಿದಿದ್ದಾನೆ. ತಿರುವೇಂಕಟಗಿರಿಯ ಶಿಖರದಲ್ಲಿ ಸದಾ ಸಿದ್ಧನಾಗಿ ನಿಂತಿದ್ದಾನೆ. ಬಲಿಷ್ಠವಾದ ತೋಳುಗಳನ್ನುಳ್ಳವನು ಸ್ವಾಮಿ.

6. கோழி கூவென்னுமால்,
தோழி நானென் செய்கேன்?,
ஆழி வண்ணர் வரும் பொழுதாயிற்று,
கோழி கூவென்னுமால்.

ಕೋಳಿ ಕೂವೆನ್ನುಮಾಲ್,
ತೋಳಿ ನಾನೆನ್ ಶೆಯ್‌ಗೇನ್?
ಆಳಿ ವಣ್ಣರ್ ವರುಮ್ ಪೊಳುದಾಯಿಱ್ಱು,
ಕೋಳಿ ಕೂವೆನ್ನುಮಾಲ್.

ಕೋಳಿ கோழி = ಕೋಳಿಯು, ಕೂ ಎನ್ನುಮಾಲ್ கூ என்னும் ஆல் = ಕೂ ಎನ್ನುತ್ತದೆ, ಅಯ್ಯೋ. ತೋಳಿ தோழி = ಗೆಳತಿಯೇ, ನಾನ್ நான் = ನಾನು, ಎನ್ ಶೆಯ್‌ಗೇನ್ என் செய்கேன் = ಏನು

Garani Srinivasan

ಮಾಡಲಿ? ಆೞಿವಣ್ಣಾ ஆழிவண்ணா = ಕಡಲನ ಬಣ್ಣದವರು, ವರುಮಾ வரும் = ಬರುವ, ಪ್ರೊೞುದಾಯಿತ್ತು பொழுதாயிற்று = ಹೊತ್ತಾಯಿತು; ಕೋೞಿ ಕೂ ಎನ್ನುಮಾಲ್.

ಗೆಳತಿಯೇ, ಕೋಗಿಲೆಯು 'ಕೂ' ಎನ್ನುತ್ತಿದೆಯಲ್ಲ! ಕಡಲನ ಬಣ್ಣ (6)
ದವರು ಬರುವ ವೇಳೆಯಾಯಿತು. ನಾನೇನು ಮಾಡಲಿ?

ಇದುವರೆಗೆ ಭಕ್ತನು ತನ್ನ ಪ್ರಿಯನಾದ ಭಗವಂತನನ್ನು ತನ್ನ ಬಳಿಗೆ ಬರುವಂತೆ ಕೂಗಿ ಕರೆಯುವುದು ಬೇರೆ ಬೇರೆ ಪದ್ಯಗಳಿಗೆ ಹೇಳಿಕೊಂಡನಷ್ಟೆ. ಅವುಗಳನ್ನು ಬೇಡಿದನಷ್ಟೆ. ಭಗವಂತನಿಗೆ ಕರೆಯುತ್ತಿರುವಂತೆಯೂ ಅದರಂತೆ ಭಗವಂತನು ಕೋಳಿ ಕೂಗುವ ವೇಳೆಗೆ ಅವನ (ಭಕ್ತನ) ಬಳಿಗೆ ಬರುವುದಾಗಿ ಮಾತುಕೊಟ್ಟಿರುವಂತೆಯೂ ಅರ್ಥವಾಗುವಂತೆ ಇಲ್ಲಿ ಕಂಡು ಬರುತ್ತದೆ. ಅಲ್ಲದೆ, ತನ್ನ ಮಾತಿನ ಮೇರೆಗೆ ಭಗವಂತನು ಬಂದುಬಿಟ್ಟರೆ, ಅವನನ್ನು ಬರಮಾಡಿಕೊಳ್ಳುವುದಕ್ಕೆ ಭಕ್ತನು ಏನು ಮಾಡಬೇಕೆಂಬ ತಿಳಿಯದೆ ಪೇಚಾಡುವುದು ಇಲ್ಲಿದೆ.

ಭಗವಂತನಲ್ಲಿ ಪ್ರಣಾಯಿಯಾದವಳು (ಆಳ್ವಾರರು, ಭಕ್ತನು), ತನ್ನ ದಾಸಿಗೆ ಹೇಳುತ್ತಾಳೆ: ಸಖೀ, ಆಳವಾದ ಕಡಲನ ಬಣ್ಣದವನು (ಪ್ರಿಯನಾದ ಕೃಷ್ಣನು) ಬರುವ ವೇಳೆಯಾಯಿತಲ್ಲ! ಅಗೋ ಕೋಳಿ ಕೂಗುತ್ತಿದೆ! ನಾನೇನು ಮಾಡಲಿ? ಸ್ವಾಮಿಯು ಬಂದು ನನ್ನ ನಿದ್ರೆಯನ್ನು ಕಂಡು ನನ್ನೊಡನೆ ಕೂಡುವನೋ ಕೋಪಗೊಂಡು ಹೊರಟುಹೋಗುವನೋ ಕಾಣೆನಲ್ಲ!

7. காமற்கென் கடவேன்?
கருமாமுகில் வண்ணற் கல்லால்,
பூமேலுங் கணை கோத்துப்புகுந்தெய்ய,
காமற்கென் கடவேன்?

ಕಾಮರ್ಕೆನ್ ಕಡವೇನ್?
ಕರುಮಾಮುಗಿಲ್ ವಣ್ಣರ್ಕಲ್ಲಾಲ್,
ಪೂಮೇಲ್ಙ್ ಕಣೈ ಕೋತ್ತುಪ್ಪುಗುನ್ದೆಯ್ಯ,
ಕಾಮರ್ಕೆನ್ ಕಡವೇನ್?

ಕಾಮರ್ಕು காமற்கு = ಕಾಮದೇವನಿಗೆ, ಎನ್ என் = ಏನು, ಕಡವೇನ್ கடவேன் = ಕರ್ತವ್ಯ (ನನ್ನ ಬಳಿ)? ಕರುಮಾಮುಗಿಲ್ ವಣ್ಣರ್ಕು ಅಲ್ಲಾಲ್ கருமாமுகில் வண்ணற்கு அல்லால் = ದೊಡ್ಡ ಕಾರ್ಮುಗಿಲನ ಬಣ್ಣದವನಿಗೆ ಹೊರತಾಗಿ?

ಮೇಲ್‌ಮೇಲ್ = ನನ್ನ ಮೇಲೆ, ಪೂ ಪೂ = ಹೂಗಳ, ಪಿಣ್ಣೈಯ್ದ ಐಂಗ
ಣೈ = ಐದು ಬಾಣಗಳನ್ನು, ತೊಟ್ಟು ಕೊತ್ತು = ತೊಡಿಸಿ, ಪುಲ
ನ್ಪುಗುನ್ದು = ಒಳಗೆ ಸೇರಿಕೊಂಡು, ಎಯ್ಯಗಾಯ್ = ಪ್ರಯೋಗಿ
ಸಲು, ಕಾಮನುಕ್ಕು ಎನ್ ಕಡವ್ವೆ? ಪಿನ್ ಎಣ್ = ಯಾವ ಕಾರಣ
ಕ್ಕಾಗಿ?

ಕಾಮದೇವನಿಗೆ ಏನು ಕೆಲಸ? ಏತಕ್ಕೆ? ದೊಡ್ಡ ಕಾಯಗಳನ್ನ ಬಣ್ಣದವನಿಗಲ್ಲದೆ? ಹೂಗಳ ಐದು ಬಾಣಗಳನ್ನು (ತನ್ನ ಬಿಲ್ಲಿಗೆ) ತೊಡಿಸಿ ಅವುಗಳೊಳಗೆ ಸೇರಿಕೊಂಡು ನನ್ನ ಮೇಲೆ ಪ್ರಯೋಗಿ (7)
ಸಲು, ಕಾಮದೇವನಿಗೆ ಏನು ಕೆಲಸ? ಏತಕ್ಕಾಗಿ?

ಭಗವಂತನೊಡನೆ ತಾನು ಸೇರಲಿಲ್ಲವಲ್ಲ ಎಂದು ವೃದ್ಧೆ ಭಕ್ತನಿ ಚಿಂತಿಸುತ್ತಿದೆ. ವಿರಹಗಳಂತೆ ಸಂಕಟಪಡುತ್ತಾನೆ.

ಆಳ್ವಾರರು ಹೇಳುತ್ತಾರೆ: ಗೆಳತೀ, ದೊಡ್ಡ ಕಾವಯಿಗಳನ್ನ ಬಣ್ಣದವನಿಗಲ್ಲದೆ (ಶ್ರೀಕೃಷ್ಣನಿಗಲ್ಲದೆ) ನನ್ನನ್ನು ಹಂಚಿಸುವುದಕ್ಕೆ ಬೇರೆಯಾರಿಗೂ ಅಧಿಕಾರವಿಲ್ಲ ಎಂದು ನಾನು ಭಾವಿಸುತ್ತಿರುವಾಗ, ಈ ಕಾಮದೇವನು ಹೂಗಳ ಐದು ಬಾಣಗಳನ್ನು ತನ್ನ ಬಿಲ್ಲಿಗೆ ಜೋಡಿಸಿ, ನನ್ನ ಮೇಲೆ ಪ್ರಯೋಗಿಸಿ, ಅವುಗಳ ಮೂಲಕ ನನ್ನ ಒಳಹೊಕ್ಕು ಹಂಚಿಸುತ್ತಾನಲ್ಲ! ನನ್ನ ವಿಷಯದಲ್ಲಿ ಅವನಿಗೇನು ಕೆಲಸ? ಏತಕ್ಕಾಗಿ ಅವನು ನನ್ನನ್ನು ಹಂಚಿಸುವುದು?

8. இங்கே போதுங்கொலோ?
இனவேல் நெடுங்கண் களிப்ப,
கொங்கார் சோலைக் குடந்தைக் கிடந்தமால்,
இங்கே போதுங்கொலோ?

ಇಙ್ಗೇ ಪೋದುಙ್ಗೊಲೋ?
ಇನವೇಲ್ ನೆಡುಙ್ಗಣ್ ಕಳಿಪ್ಪ,
ಕೊಙ್ಗಾರ್ ಶೋಲೈಕ್ಕುಡನ್ದೈಕ್ಕಿಡನ್ದಮಾಲ್,
ಇಙ್ಗೇ ಪೋದುಙ್ಗೊಲೋ?

ಇಙ್ಗೇ இங்கே = ಈ ಸ್ಥಳದಲ್ಲಿಯೇ, ಪೋದುಮ್ ಕೊಲೋ போதும் கொலோ = ಬಾರನು ಅಲ್ಲವೇ? ಇನಮ் இனம் = (ಪರಸ್ಪರ) ಹೊಂದಿಕೊಳ್ಳುವಂಥ, ವೇಲ್ வேல் = ವೇಲಾಯುಧದಂತೆ ಇರುವ, ನೆಡು நெடு = ವಿಶಾಲವಾದ, ಕಣ್ கண் = (ನನ್ನ) ಕಣ್ಣುಗಳು,

Garani Srinivasan

ಕಳಿಪ್ಪ களிப்ப = ಮೋಹಗೊಂಡಿರಲು. ಕೊಙ್ಗು ஆர் கொங்கு
ஆர் = ಪರಿಮಳ ತುಂಬಿರುವ, ಶೋಲೈ சோலை = ತೋಪ್ಪುಗಳ,
ಕುಡನ್ದೈ குடந்தை = ಕುಂಭಕೋಣದಲ್ಲಿ, ಕಿಡನ್ದ கிடந்த = ನೆಲೆ
ಸಿರುವ, ಮಾಲ್ மால் = ಸರ್ವೇಶ್ವರನಿಗೆ, ಇಙ್ಗೇ இங்கே =
ಇಲ್ಲಿಯೇ, ಪೋದುಮಾ ಕೊಲೋ போதும் கொலோ =
ಸಾಕಲ್ಲವೇ?

ಇಲ್ಲಿಯೇ ಸಾಕಲ್ಲವೇ? ಪರಸ್ಪರ ಹೊಂದಿಕೊಳ್ಳುವಂಥ (ಒಪ್ಪು ವಂಥ) ವೇಲಾಯುಧದಂತೆ ವಿಶಾಲವಾಗಿರುವ (ನನ್ನ) ಕಣ್ಣುಗಳು ಮೋಹಗೊಂಡಿರಲು, ಪರಿಮಳ ತುಂಬಿದ ತೋಪ್ಪುಗಳ ಕುಂಭಕೋಣ (8)
ದಲ್ಲಿ ನೆಲಸಿರುವ ಸರ್ವೇಶ್ವರನಿಗೆ ಇಲ್ಲಿಯೇ ಸಾಕಲ್ಲವೇ?

ಭಕ್ತನು ಭಗವಂತನನ್ನು ಹುಡುಕುತ್ತಾ ಸ್ವಾಮಿಯು ನೆಲೆಸಿರುವ ದಿವ್ಯಕ್ಷೇತ್ರಕ್ಕೆ ಹೋಗಿ, ಕಣ್ಣಾರ ಸಂದರ್ಶಿಸಿ, ಸ್ವಾಮಿಯನ್ನು ಒಲಿಸಿ ಕೊಳ್ಳುವುದು ಒಂದು ಮಾರ್ಗ. ಭಕ್ತನ ಅಶಕ್ತಿಯನ್ನು ಮನಗಂಡು ಕೃಪಾಳುವಾದ ಭಗವಂತನು ಅವನಿಗೆ ಕಷ್ಟಕೊಡದಂತೆ ತಾನೇ ಅವನಿರುವ ಸ್ಥಳಕ್ಕೆ ಹೋಗಿ, ಅವನ ಕಣ್ಣುಗಳನ್ನು ತಣಿಸುವುದು ಮತ್ತೊಂದು ಮಾರ್ಗ. ಎರಡೂ ಸಾಧ್ಯವೇ! ಆಳ್ವಾರರು ಇಲ್ಲಿ ಎರಡನೆಯ ಮಾರ್ಗವನ್ನು ಆಶಿಸಿ ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಗೆಳತಿ, ನನ್ನ ಪ್ರಿಯನಾದ ಭಗವಂತನು ನಿತ್ಯವಾಸ ಮಾಡುವ ಕ್ಷೇತ್ರವಾದ ಪರಿಮಳ ತುಂಬಿರುವ ತೋಪ್ಪುಗಳಿಂದ ಸುತ್ತುವರಿದಿರುವ ಕುಂಭಕೋಣಕ್ಕೆ ನಾನು ಹೋಗಿ ಸ್ವಾಮಿಯನ್ನು ಕಣ್ಣಾರ ಕಾಣುವುದು ಸಾಧ್ಯವೇ ಇಲ್ಲ. ಅದಕ್ಕೆ ಬದಲಾಗಿ, ಪರಸ್ಪರ ಒಪ್ಪುವಂಥ, ವೇಲಾಯುಧದಂತೆ ವಿಶಾಲವಾದ ನನ್ನ ಎರಡು ಕಣ್ಣುಗಳು ವ್ಯಾಮೋಹಗೊಂಡಿರಲು, ಆ ಸ್ವಾಮಿಯೇ ತಾನಾಗಿ ಇಲ್ಲಿಗೆ, ನನ್ನ ಬಳಿಗೆ, ಬಂದು ನನ್ನೊಡನೆ ಕೂಡಿ ನನ್ನನ್ನು ತಣಿಸುವುದೂ ಸಾಧ್ಯವೇ ಅಲ್ಲವೇ?

9. இன்னாரென் றறியேன்,
அன்னே யாழியொடும்,
பொன்னார் சார்ங்கமுடைய வடிகளை,
இன்னாரென் றறியேன்.

ಇನ್ನಾರೆನ್ ಅಱಿಯೇನ್,
ಅನ್ನೇ ಯಾೞಿಯೊಡುಮ್,
ಪೊನ್ನಾರ್ ಶಾರ್ಙ್ಗಮುಡೈಯ ವಡಿಗಳೈ,

Garani Srinivasan

ಇನ್ನಾರೆನ್ಱಱಿಯೇನ್.

ಇನ್ನಾರ್ இன்னார் = ಇವರು ಇಂಥವರು, ಎನ್ಱು என்று = ಎಂದು, ಅಱಿಯೇನ್ அறியேன் = ಅರಿಯೆನು, ಅನ್ನೇ அன்னே = ಹಂಸದಂಥವಳೇ (ಅಮ್ಮಾ), ಆಳಿಯೊಡುಮ್ ஆழியொடும் = ಚಕ್ರಾಯುಧವನ್ನು, ಪೊನ್ ಆರ್ பொன் ஆர் = ಸೊಬಗು ತುಂಬಿದ, ಶಾರ್ಙ್ಗಮ್ சார்ங்கம் = ಶಾರ್ಙ್ಗವೆಂಬ ಬಿಲ್ಲನ್ನು, ಉಡೈಯ உடைய = ಉಳ್ಳ, ಅಡಿಗಳೈ அடிகளை = ಸ್ವಾಮಿಯನ್ನು (ತಿರುವಡಿಗಳನ್ನು), ಇನ್ನಾರ್ ಎನ್ಱು ಅಱಿಯೇನ್.

ಅಮ್ಮಾ ಹಂಸದಂಥವಳೇ, ಇವರು ಇಂಥವರು ಎಂದು ಅರಿಯೆನು. ಚಕ್ರಾಯುಧವನ್ನೂ ಸೊಬಗು ತುಂಬಿದ (ಚಿನ್ನದಂಥ) ಶಾರ್ಙ್ಗವೆಂಬ ಬಿಲ್ಲನ್ನೂ ಉಳ್ಳ ತಿರುವಡಿಗಳನ್ನು (ಸ್ವಾಮಿಯನ್ನು) ಇಂಥವರೆಂದು ಅರಿಯೆ (9)

ಭಗವಂತನು ಯಾರು, ಎಂಥವನು, ಅವನ ಹೆಸರೇನು, ಎಂದು ಮುಂತಾಗಿ ಸುಲಭವಾಗಿ ತಿಳಿಯಲು ಸಾಧ್ಯವೇ? ನಾಮ ರೂಪಗಳಿಂದ ಅತೀತನೂ ಅವನೇ. ಸಕಲ ಸದ್ಗುಣ ಪರಿಪೂರ್ಣನೂ, ಸರ್ವೇಶ್ವರನೂ, ಸರ್ವಜ್ಞನೂ, ಸರ್ವಶಕ್ತನೂ, ಸರ್ವವ್ಯಾಪಿಯೂ, ಉತ್ತಮೋತ್ತಮನೂ, ಆದ್ಯಂತರಹಿತನೂ, ನಿತ್ಯಯೌವನ ಸುಂದರನೂ, ಸಾವಿರ ನಾಮಗಳಿಂದ ಮೆರೆಯುವವನೂ, ದಿವ್ಯಕ್ಷೇತ್ರಗಳಲ್ಲಿ ನೆಲಸಿರುವವನೂ, ಸರ್ವಾಂತರ್ಯಾಮಿಯಾಗಿರುವವನೂ, ಸರ್ವರಕ್ಷಕನೂ ಇತ್ಯಾದಿ ಇತ್ಯಾದಿಯಾಗಿ ವಿವರಿಸಲ್ಪಟ್ಟವನು ಭಗವಂತ. ಎಷ್ಟು ಬಗೆಯಾಗಿ ವರ್ಣಿಸಿ ಹೇಳಬಹುದಾದರೂ ಅವುಗಳೆಲ್ಲವೂ ಭಗವಂತನನ್ನು ನಿರ್ದಿಷ್ಟವಾಗಿ ಅರಿಯಲೇ, ಇಂಥವನೇ, ಎಂದು ಹೇಳುವುದಕ್ಕೆ ಕಂಡುಕೊಳ್ಳುವುದಕ್ಕೆ ಸುಲಭವಲ್ಲವೆನ್ನಬಹುದು.

ಆಳ್ವಾರರು ಹೇಳುತ್ತಾರೆ: ಗೆಳತಿ, ನನ್ನ ಪ್ರಿಯನಾದ ಭಗವಂತನನ್ನು ಯಾರೆಂದು, ಹೇಗಿರುವನೆಂದು, ಹೇಗೆ ವರ್ಣಿಸಲಿ? ಅವನನ್ನು ಕುರಿತು ವರ್ಣಿಸಲು ನನಗೆ ತಿಳಿಯದು. ಅವನ ಒಂದು ಕೈಯಲ್ಲಿ ಚಕ್ರಾಯುಧವೂ, ಮತ್ತೊಂದು ಕೈಯಲ್ಲಿ ಶಾರ್ಙ್ಗವೆಂಬ ಚಿನ್ನದಂಥ ಬಿಲ್ಲೂ ಇವೆ. ಅತಿರಥನೂ ಆಶ್ರಿತರಕ್ಷಕನಾಗಿಯೇ. ನನಗೆ ನನ್ನ ಸ್ವಾಮಿಯು ಇಂಥವನೇ ಎಂದು ನಿರ್ದಿಷ್ಟವಾಗಿ ಹೇಳಲು ತಿಳಿಯುವುದಿಲ್ಲ.

10. தொண்டீர் பாடுமினோ,

சுரும்பார் பொழில் மங்கையர் கோன்,

ஒண்டார் வேற்கலியன் ஒலிமாலைகள்,
தொண்டர் பாடுமினே.

ಕೊಣ್ಡಲ್ ಪಾಡುಮಿನೋ,
ಕುರುಮ್ಬಾರ್ ಪೊಟಿಲ್ ಮಙ್ಗೈಯರ್ ಕೋನ್,
ಒಣ್ಡಾರ್ ವೇಲ್ ಕಲಿಯನೊಲಿಮಾಲೈಗಳ್
ಕೊಣ್ಡಲ್ ಪಾಡುಮಿನೋ.

ಕೊಣ್ಡಲ್ தொண்டர் = ಭಕ್ತರೇ, ಪಾಡುಮಿನೋ பாடுமினே = ಹಾಡಿರಿ, ಕುರುಮ್ಬು அறும்பு = ದುಂಬಿಗಳು, ಆರ್ ஆர் = ತುಂಬಿರುವ, ಪೊಟಿಲ್ பொழில் = ತೋಟಗಳ, ಮಙ್ಗೈಯರ್ ಕೋನ್ மங்கையர் கோன் = ತಿರುಮಂಗೈನಾಡಿನ ಜನರಿಗೆ ಒಡೆಯನಾದ, ಒಣ್ಡಾರ್ ஒண் தார் = ಶ್ರೇಷ್ಠವಾದ ಹಾರವನ್ನು ಧರಿಸಿರುವವನಾದ, ವೇಲ್ வேல் = ವೇಲಾಯುಧವನ್ನು ಧರಿಸಿದ, ಕಲಿಯನ್ கலியன் = ಕಲಿಯನು, ಒಲಿಮಾಲೈಗಳ್ ஒலிமாலைகள் = ಹೇಳಿದ ಪಾಶುರಮಾಲೆಗಳನ್ನು, ಕೊಣ್ಡಲ್ ಪಾಡುಮಿನೋ தொண்டர் பாடுமினே = ಭಕ್ತರೇ ಹಾಡಿರಿ.

ದುಂಬಿಗಳು ತುಂಬಿರುವ ತೋಟಗಳ ತಿರುಮಂಗೈನಾಡಿನ ಜನರ ಒಡೆಯನಾದ, ಶ್ರೇಷ್ಠವಾದ ಹಾರವನ್ನು ಧರಿಸಿದ, ವೇಲಾಯುಧಧಾರಿಯಾದ ಕಲಿಯನು ಹೇಳಿದ ಪಾಶುರಗಳ ಮಾಲೆಯನ್ನು ಭಕ್ತರೇ ಹಾಡಿರಿ. (10)

ಈ ತಿರುಮೊಳಿಗೆ, ಹತ್ತನೆಯ ದಶಕಕ್ಕೂ ಇದು ಕಡೆಯ ಪಾಶುರ. ಇದರಲ್ಲಿ ಹೇಳಿರುವ ವಿಷಯವೆಂದರೆ— "ಭಕ್ತರೇ ಹಾಡಿರಿ" ಎಂಬುದು. ಭಗವಂತನ ಗುಣಸ್ವಭಾವಾದಿಗಳನ್ನು ನಿದರ್ಶನಗಳ ಜತೆಯಲ್ಲಿ, ಬಗೆಬಗೆಯ ಭಕ್ತಿಭಾವನೆಗಳಿಂದ, ಭಗವಂತ ಕರುಣಾ ಕಟಾಕ್ಷವನ್ನು ಕೋರಿ, ಸ್ವಾಮಿಯ ಸಾನ್ನಿಧ್ಯವನ್ನೂ ಅವನ ತಿರುವಡಿಗಳ ಎಡೆಬಿಡದ ಸೇವೆಯನ್ನೂ ಕೋರಿ, ಸರಳವಾದ ಭಾಷೆಯಲ್ಲಿ (ಶೈಲಿಯಲ್ಲಿ) ರಚಿಸಿ ಹಾಡಿರುವ ಭಕ್ತಿಪೂರ್ಣವಾದ ಈ ಪಾಶುರಗಳನ್ನು ಭಕ್ತರು ಹಾಡಬೇಕು. ಅವುಗಳನ್ನು ಅರ್ಥವತ್ತಾಗಿ ಗ್ರಹಿಸಬೇಕು. ಅವುಗಳಲ್ಲಿ ತೋರಿಸಿರುವ ಮಾರ್ಗದಲ್ಲಿ ನಡೆದು ಉದ್ಧಾರ ಹೊಂದಲು ಯತ್ನಿಸಬೇಕು. ಇದರಿಂದ ಭಗವಂತನ ಕೃಪೆಗೆ ಪೂರ್ಣಾನುಗ್ರಹಕ್ಕೂ ಭಕ್ತನು ಪಾತ್ರನಾಗುತ್ತಾನೆಂಬುದು ಇದರಲ್ಲಿ ಕಂಡುಬರುವ ಭರವಸೆಯ ಧ್ವನಿ.

Garani Srinivasan

ಇದನ್ನು ರಚಿಸಿ, ಹಾಡಿ, ಭಕ್ತರಿಗೆ ಕೃಪೆಮಾಡುವವನು ಭಕ್ತಿ ಗ್ರಾಹಿಯಾದ, ಸೌಭಾಗ್ಯದಿಂದ ಮೆರೆಯುವ ತಿರುಮಂಗೈನಾಡಿನ ಜನರಿಗೆ ಒಡೆಯನಾದ, ಭಗವತ್ಪ್ರಸಾದದಿಂದ ನೀಳವಾದ ದ್ರಾವಿಡ ಮಾಲೆಯನ್ನು ಧರಿಸಿರುವ, ವೇಲಾಯುಧಧಾರಿಯಾದ ಕಲಿಯನು (ತಿರುಮಂಗೈ ಆಳ್ವಾರರು). ಪರಮಭಕ್ತನಾಗಿ, ಭಗವಂತನಿಗೆ ಆತ್ಮೀಯನಾಗಿ, ಕಲಿಯನು ಈ ಪಾಶುರಗಳನ್ನು ರಚಿಸಿ ಹಾಡಿರುವುದು ತನ್ನ ಆತ್ಮೋನ್ನತಿಯ ಜೊತೆಗೆ, ಜನತೆಯ ಎಲ್ಲ ಭಕ್ತರ ಉದ್ಧಾರಕ್ಕಾಗಿ. ಆದ್ದರಿಂದಲೇ ಎಲ್ಲ ಭಕ್ತರನ್ನು "ಭಕ್ತರೇ ಹಾಡಿರಿ" ಎಂದು ಕಲಿಯನು ಆದರದಿಂದ ಕರೆ ಕೊಡುತ್ತಿದ್ದಾನೆ. ಭಕ್ತಿಯ ಈ ಪಾಶುರಗಳನ್ನು ಹಾಡುತ್ತಾ, ಸುಖಿ ಭಕ್ತರ ಜ್ಞಾನವನ್ನು ಪಡೆದವರಾಗಿ, ಎಲ್ಲ ಭಕ್ತರೂ ಉಜ್ಜೀವನಗೊಳ್ಳಬೇಕು ಎಂಬುದೇ ಈ ತಿರುಮೊಳಿಯ ವಿಲಕ್ಷಣತೆ!

ಅಡಿಯನಡೆ: அடிவரவு:— ತಿರುತ್ತಾಯ್ திருத்தாய், ಕೊಟ್ಟಾಯ್ ಕಲ್ಯಾಣಾಯ್ கரையாய், ಕೂವಾಯ್ காவாய், ಕೋಲೊ கோழி, கொட்டாய், ಸೊಲ್ಲಾಯ್ சொல்லாய், ಇನ್ನೂರ್ இங்கே, இன்னூர் இன்னூர், ಕಾಮಱ್ಕು காமற்கு, ಇಙ್ಗೇ இங்கே, ಇನ್ನೂರ್ இன்னூர், ಕೂನ್ಱು ಕುன்றமொன் ಕೊಂಡರ್ தொண்டர், (ಪೆರಿಯ ತಿರುಮೊಳಿ று)

2.4.79

ಹತ್ತನೆಯ ದಶಕ ಮುಗಿಯಿತು.

Garani Srinivasan